2 Applicants must be Matriculates and should state their age and nationality and if they know Canarese also send along with their applications, copies of testimonials and a certificate from any graduate in Medicine as to physical fitness and age.

3. Selected candidates will have to execute covenants on a five rupee Mysore Government stamp paper to serve the State for 7 (seven) years, after qualifying as Hospital Assistants.

4. A scholarship of Rs. 9/— per mensem for the first year and Rs. 10/— for the succeeding three years will be given with supply of books, school fees, etc.

S. V. RAMASWAMY IYENGAR, M. C., M. D.
Personal Assistant,
For Offg. Senior Surgeon, Mysore Govt.

ಒಳದೇಶದ ವೃತ್ತಾಂತ.

ಮೈಸೂರ್ ಗೆಜೆಟಿ ಸಂಗ್ರಹ.

ವರ್ತಮಾನ ಸಂಗ್ರಹ.

ಬಿಲ್ಲ; ಅಂದರೆ ಪ್ರತಿ ವರ್ಷವೂ ಉಳುವುದಿಲ್ಲ. ಭೂಮಿಯು ಗಟ್ಟಿಯಾದ ಕಾಲದಲ್ಲಿ ಉಳಬೇಕಾಗುವುದು.

ಆಳವಾಗಿ ಉಳುವುದಕ್ಕೆ ಗ್ರಾಮಾಂತರಗಳಲ್ಲಿ ಈಗ ಉಪಯೋಗಿಸುತ್ತಿರುವ ನೇಗಿಲುಗಳಿಗಿಂತಲೂ ಉತ್ತಮ ತರವಾದ ನೇಗಿಲುಗಳು ಬೇಕು. ನಾಡು ನೇಗಿಲುಗಳು ಕ್ರಯದಲ್ಲಿ ಸುಲಭವಾಗಿದ್ದಾಗ್ಯೂ ಅವುಗಳಿಂದ ಆಗುವ ಉಪಯೋಗವು ಅಷ್ಟೇನೂ ಫಲದಾಯಕವಾದುದಲ್ಲ. ನೂತನ ತರವಾದ ನೇಗಿಲು ಮೊಟ್ಟಮೊದಲು ಬೆಲೆಯುಳ್ಳುದಾದರೂ ಅದರಿಂದ ನೆಲ ಪೊಳ್ಳಾಗುವ ಆಳವಾದ ಉಳುಮೆಯು ಬೇಸಾಯದ ಅಂತ್ಯದಲ್ಲಿ ಬಹಳ ಲಾಭಕರವಾಗಿ ಕಂಡುಬರುವುದು. ಆದುದರಿಂದ ಅದಕ್ಕೆ ಮೊದಲು ತಗಲುವ ದುಡ್ಡು ಕಡೆಯಲ್ಲಿ ಬಹಳ ಸುಲಭವಾಗಿಯೇ ಪರಿಣಮಿಸುವುದು. ಯಾವ ನೇಗಿಲನ್ನು ತೆಗೆದುಕೊಂಡರೂ ಅದು ಎತ್ತುಗಳಿಗೆ ಶ್ರಮವಿಲ್ಲದೆ ಉಳುವವನು ನಿಶ್ಚಯಬಲವನ್ನು ಪ್ರಯೋಗಿಸುವ ಅವಶ್ಯಕತೆಯೂ ಇಲ್ಲದೆ, ಸುಲಭವಾಗಿ ಭೂಮಿಯನ್ನು ಉಳತಕ್ಕದ್ದಾಗಿರಬೇಕು. ಮತ್ತು ಆಳವಾಗಿಯೂ ಉಳಬೇಕು. ನಮ್ಮ ರೈತರು ಒಂದೆರಡು ಜತೆ ಎತ್ತುಗಳನ್ನು ಮಾತ್ರ ಇಟ್ಟುಕೊಂಡಿರುವರು; ಇವುಗಳ ಶಕ್ತಿ ಕಡಿಮೆಯಾದುದರಿಂದ ತಯಾರಾಗಿದ್ದ ಭಾರವಾದ ಇಂಗ್ಲೀಷ್ ನೇಗಿಲುಗಳನ್ನು ಎಳೆಯಲು ಆಗುವುದಿಲ್ಲ. ಮತ್ತು ಭೂಮಿಯು ಗಡಸಾಗಿದ್ದರೆ ಕೊಂಡದ್ದೂ ಮತ್ತಷ್ಟು ಬೆಟ್ಟವಾಗುವುದು. ಇದನ್ನೆಲ್ಲಾ ಪರೀಕ್ಷಿಸಿ ನೋಡಿ ಕೋಲಾರದಲ್ಲಿ ಕಸಬಿನ ಬಾರಕಾಲೆಯನ್ನು ಇಟ್ಟು ನಡೆಸುತ್ತಿರುವ ರೆವರೆಂಡ್ ಮಿ॥ ಉಸ್ಟರ್ ಸಾಹೇಬರು ಈ ದೇಶದ ಅವಶ್ಯಕತೆಗಳಿಗೆ ಅನುಕೂಲಿಸುವ ಹಾಗೆ ನೇಗಿಲುಗಳನ್ನು ತಯಾರುಮಾಡಿ ಮಾರುತ್ತಿರುವರು. ಇವುಗಳ ಕ್ರಯವೂ ಅಷ್ಟೇನೂ ದುಬಾರಿಯಲ್ಲ. ಆದುದರಿಂದ ನಮ್ಮ ರೈತರು ಅಂತಹ ನೇಗಿಲುಗಳನ್ನು ಕೊಂಡು ಕೊಂಡು ಉಪಯೋಗಿಸುವುದು ಯುಕ್ತವಾಗಿದೆ. ನಾಡು ನೇಗಿಲಿನಿಂದ ಉಳುವುದಕ್ಕೆ ೪—೧೦ ದಿನಗಳು ಹಿಡಿಯುವುದು; ಇಂತಹ ಒಳ್ಳೆಯ ನೇಗಿಲಿನಿಂದ ಉತ್ತರೆ ೪ ದಿನಗಳಲ್ಲಿ ಇನ್ನೂ ಹೆಚ್ಚು ಉಳುಮೆಯು ನೆರವೇರುವುದು.

ಒಳ್ಳೆಯ ನೇಗಿಲಿನಿಂದ ಉಳುವುದು ವ್ಯವಸಾಯಕ್ರಮದಲ್ಲಿ ಮೊದಲನೆಯ ಕೆಲಸವಾಗಿದೆ. ಸಂಪೂರ್ಣವಾಗಿ ಉಳುವುದು ಎರಡನೆಯ ಕೆಲಸ. ಉಳುವುದರಲ್ಲಿ ಅರ್ಧಾಂತರ ಮಾಡುವುದರಿಂದ ಬಹಳ ನಷ್ಟಕ್ಕೆ ಕಾರಣವಾಗುವುದು. ರೈತರು ತಮ್ಮ ಹೊಲವನ್ನು ಸಂಪೂರ್ಣವಾಗಿ ಉತ್ತು ಹದ ಮಾಡಿ ಮಳೆ ಬೀಳುವುದಕ್ಕೋಸ್ಕರ ಎದುರುನೋಡುತ್ತಿದ್ದರೆ ಆ ಹೊಲದಮೇಲೆ ಬೀಳುವ ಪ್ರತಿ ಮಳೆಯೂ ಆ ರೈತನಿಗೆ ಹಣವನ್ನು ಸಂಪಾದಿಸಿಕೊಡುವುದು. ಮಳೆ ಬೀಳುವ ಸಮಯಕ್ಕೆ ಹೊಲವನ್ನು ಚೆನ್ನಾಗಿ ಉತ್ತು ಸಿದ್ಧಮಾಡಿದ್ದರೆ ಮಳೆ ಬಿದ್ದಾಗ ನೀರೆಲ್ಲವೂ ಭೂಮಿಯೊಳಗೆ ಹಿಂಗಿ ಭೂಮಿಯಲ್ಲಿ ತೇವ ನಿಲ್ಲುವುದು. ಹೊಲವನ್ನು ಅರ್ಧಾಂತರವಾಗಿ ಉತ್ತುಬಿಟ್ಟಿದ್ದರೆ ನೀರು ನಿಲ್ಲುವುದಕ್ಕೆ ಅವಕಾಶವಿರುವುದಿಲ್ಲ. ನೀರೆಲ್ಲ ಹರಿದುಹೋಗಿ ಹಳ್ಳ ಸೇರಿಹೋಗುವುದಕ್ಕೆ ಕಾರಣವಾಗುವುದು. ಮಳೆಯ ನೀರೆಲ್ಲವೂ ನೆಲದಲ್ಲಿಯೇ ಉಳಿಯುವಂತೆ ಹೊಲವನ್ನು ಚೆನ್ನಾಗಿ ಉತ್ತು ಹದಮಾಡಿ ಇಟ್ಟಿದ್ದರೆ ಬೆಳೆಯನ್ನು ಸುಲಭವಾಗಿಯೂ, ಹೆಚ್ಚಾಗಿಯೂ ಪಡೆಯಬಹುದು. ಬಿತ್ತನೆ ಮಾಡುವುದಕ್ಕೂ ಬೆಳೆಯುವುದಕ್ಕೂ ಅವಕಾಶವಾಗುತ್ತದೆ. ಕೆರೆಯ ತೂಬನ್ನು ಮುಚ್ಚದೆ ನೀರು ಬಿಟ್ಟಿದ್ದರೆ ನೀರೆಲ್ಲಾ ಹಾಳಾಗಿಹೋಯಿತೆಂದು ರೈತರು ಸಿಟ್ಟಾಗುತ್ತಾರೆ. ಆದರೆ ತಮ್ಮ ಭೂಮಿಯನ್ನು ಸರಿಯಾಗಿ ಉಳದೆ ಇರೋಣವಾದ ಮಳೆ ನೀರು ಹರಿದುಹೋಗಲು ಅವಕಾಶ ಕೊಟ್ಟರೆ ಅದಕ್ಕೆ ಚಿಂತಿಸುವುದಿಲ್ಲವಲ್ಲ! ಈ ವಿಷಯದಲ್ಲಿ ಕೂಡ ಅವರು ಹೆಚ್ಚಾಗಿ ಗಮನಿಸಬೇಕು. ಹೊಲದಲ್ಲಿ ಬೆಳೆಯೂ ಇಲ್ಲದೆ ಹೊಲದ ಮೇಲೆ ಮಳೆಯು ಬೀಳಬೇಕಾದುದು ಅವಶ್ಯಕವಿಲ್ಲ. ಹೊಲದ ಮೇಲೆ ಬಿದ್ದ ಮಳೆಯ ನೀರು ಎಷ್ಟುಮಟ್ಟಿಗೆ ಆ ಜಮೀನಿನಲ್ಲಿ ನಿಂತು ಇಂಗುತ್ತದೆಯೋ ಅದರಿಂದಲೇ ಆ ಜಮೀನಿನ ಫಲವತ್ತಾದುದು. ಅಥವಾ ಇಲ್ಲವೆಂಬುದು ಅಂದಾಜು ಮಾಡುವುದಕ್ಕೆ ಕಾರಣವಾಗುವುದು. ಆದಕಾರಣ ಎಷ್ಟು ಮಳೆಯು ಬಿದ್ದರೂ ಸರಿಯೆ, ಆ ಮಳೆಯ ನೀರೆಲ್ಲವೂ ಜಮೀನಿನಲ್ಲಿಯೇ ತಂಗುವಂತೆ ಆ ಭೂಮಿಯನ್ನು ನೂತನ ತರವಾದ ನೇಗಿಲಿನಿಂದ ಆಳವಾಗಿಯೂ, ಸಂಪೂರ್ಣವಾಗಿಯೂ ಉಳುಮೆ ಮಾಡಬೇಕೆಂಬುದನ್ನು ರೈತರು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು.

ಪ್ರತಿಯೊಬ್ಬ ರೈತನೂ ತನ್ನ ಜಮೀನನ್ನು ೧೦ ದಿನ ೧೫ ದಿನಗಳಿಗೆ ಒಂದಾವರ್ತಿ ಸೂಕ್ಷ್ಮವಾಗಿ ನೋಡಬೇಕು. ಕಳೆ ಬೆಳೆಯು ಕಾಣಿಸಿಕೊಂಡ ಕೂಡಲೆ ಕಿತ್ತುಹಾಕಬೇಕು. ಕಳೆಯನ್ನು ಬೆಳೆಯಗೊಡದೆ ಪ್ರತಿಸಲವೂ ಉಳುಮೆ ಮಾಡಿ ಬೀಜವನ್ನು ಬಿತ್ತುವುದಕ್ಕೆ ಮುಂಚೆ ಭೂಮಿಯ ಹದವನ್ನು ನೋಡಿಕೊಳ್ಳಬೇಕು. ಮಳೆ ಬೀಳುವುದಕ್ಕೆ ಮುಂಚೆಯೇ ಭೂಮಿಯನ್ನು ಹದಮಾಡಿಟ್ಟುಕೊಂಡಿದ್ದರೆ ಮಳೆ ಬಿದ್ದ ಕೂಡಲೆ ಬಿತ್ತಲು ಅನುಕೂಲವಾಗುವುದು. ಜಮೀನಿನಲ್ಲಿ ಬಿತ್ತು ಹಾಕಲು ಅನುಕೂಲವಾಗುವಂತೆ ಮಾಡದಿದ್ದರೆ ಬೆಳೆಯು

ಇನ್ನೂ ಇದೆ.

ಯಾಗಿ ಬೇರುಗಳು ಪ್ರವೇಶಕ್ಕೆ ಇಳಿದುಹೋಗಲು ಬಹಳ ಅನುಕೂಲವಾಗುವುದು.

ಸಂಪೂರ್ಣವಾಗಿ ಉಳುವುದು ಎಂದರೆ ಆಳವಾಗಿ ಉಳುವುದು ಒಂದೇ ಅಲ್ಲ. ಉಳುವುದರಿಂದ ಹೆಂಟೆಯಾಗಿ ಎದ್ದ ಮಣ್ಣನ್ನು ಪುಡಿಪುಡಿಯಾಗಿ ಮಾಡುವುದೂ ಸಹ ಅದಕ್ಕೆ ಅಂಗವಾಗಿಟ್ಟುಕೊಳ್ಳಬೇಕು. ಹೆಂಟೆ ಮಣ್ಣನ್ನು ಪುಡಿಮಾಡುವುದಕ್ಕೆ ನೇಗಿಲು ಅಷ್ಟು ಪ್ರಯೋಜನಕಾರಿಯಲ್ಲವು. ಇದಕ್ಕೆ ಕುಂಟೆಯು ಬಹಳ ಪ್ರಯೋಜನಕಾರಿಯು. ಮಣ್ಣನ್ನು ಪುಡಿಮಾಡುವುದು ನಿಷ್ಪ್ರಯೋಜಕವಾದ ಕೆಲಸವೆಂದು ಅನೇಕ ರೈತರು ತಿಳಿದುಕೊಂಡಿದ್ದಾರೆ. ಮತ್ತು ಕೂಲಿ ಕೆಲಸದವರು ಸಹ ಈ ಕೆಲಸವನ್ನು ಮಾಡಿಸುವುದಕ್ಕೆ ಹಿಂತೆಗೆಯುತ್ತಾರೆ. ಇದಕ್ಕೋಸ್ಕರ ರೈತರು ವೆಚ್ಚ ಮಾಡುವ ಹಣಕ್ಕೆ ಚಕ್ರಬಡ್ಡಿಯ ಪ್ರಕಾರ ಹಣವು ಉತ್ಪತ್ತಿಯಾಗುವುದೆಂಬ ಅಂಶವು ಅವರಿಗೆ ತಿಳಿಯದೆ ಇರುವುದು ಶೋಚನೀಯವಾಗಿದೆ. ೧೦ ರೂಪಾಯಿಗೆ ಒಂದು ಕುಂಟೆಯು ಸಿಕ್ಕುತ್ತದೆ. ಇದನ್ನು ಸರಿಯಾಗಿ ಉಪಯೋಗಿಸಿದರೆ ಮಣ್ಣನ್ನು ಪುಡಿ ಮಾಡುವುದರಲ್ಲಿಯೂ ಮತ್ತು ಕಳೆಯನ್ನು ಕಿತ್ತುಹಾಕುವುದರಲ್ಲಿಯೂ ವರ್ಷಕ್ಕೆ ೪ ರಿಂದ ೧೦ ರೂ ಗಳು ಮಿಗುತ್ತದೆ. ಮಣ್ಣನ್ನು ಪುಡಿಮಾಡುವುದು ಬಹಳ ಅವಶ್ಯಕವಾದುದು. ಏಕೆಂದರೆ ಭೂಮಿಯಲ್ಲಿ ತೇವವು ನಿಲ್ಲುವುದು ಬಹಳವಾಗಿ ಸಹಾಯಮಾಡುತ್ತದೆ. ಮತ್ತು ಗಿಡಗಳ ಬೇರುಗಳು ಚೆನ್ನಾಗಿ ಊರಿ ಪುಷ್ಟಿಕರವಾಗಿ ಬೆಳೆದು ಸಸಿಗಳಿಗೆ ಸಾರವನ್ನು ಕೊಡುವುದಕ್ಕೆ ಬಹಳ ಅನುಕೂಲವಾಗುತ್ತದೆ. ಈ ಪ್ರಕಾರವಾಗಿ ಭೂಮಿಯನ್ನು ಉಳುಮೆಮಾಡಿ ಅದರಿಂದ ಉಂಟಾಗುವ ಪ್ರಯೋಜನಗಳನ್ನು ಪ್ರದರ್ಶಿಸುವುದಕ್ಕೂ ಬುದ್ಧಿವಂತರೂ, ವಿದ್ಯಾವಂತರೂ ಮತ್ತು ಬಾಹುಶಕ್ತಿಯುಳ್ಳವರೂ ಆದ ಜಮೀನುದಾರರುಗಳ ಕರ್ತವ್ಯವಾಗಿರುವುದು. ಮೊದಲು ಮಾಡುವ ಪ್ರಯತ್ನಗಳು ಪ್ರೋತ್ಸಾಹಕರವಾಗಿ ಕಾಣದೆ ಇರಬಹುದು. ಆದರೆ ಪದೇ ಪದೇ ಪ್ರಯತ್ನಗಳನ್ನು ಮಾಡುತ್ತಾ ಬಂದರೆ ಪ್ರಯೋಜನವು ಕಂಡುಬರುವುದರಲ್ಲಿ ಸಂಶಯವಿಲ್ಲ. ಒಂದು ಸಾವಿರ ಅಥವಾ ಐದು ಸಾವಿರ ಜನರಿಗೆ ಸುಖ ಭೋಜನವನ್ನು ಮಾಡಿಸುವುದು ಪುಣ್ಯ ಕೆಲಸವೇ ಸರಿ. ಆದರೆ ನಮ್ಮ ನೆರೆಹೊರೆಯವರ ಹೊಲಗಳು ಬೆಳೆ ಫಲವತ್ತಾದುವುಗಳನ್ನಾಗಿ ಮಾಡಿಕೊಳ್ಳುವ ಬಗೆಯನ್ನು ಅವರಿಗೆ ತೋರಿಸಿಕೊಟ್ಟು ಅವರಿಗೆ ಪ್ರಯೋಜನಕರವನ್ನುಂಟುಮಾಡುವ ಕೆಲಸವನ್ನು ಕೈಗೊಳ್ಳುವುದು ಇನ್ನೂ ಅತಿಶಯವಾದ ಪುಣ್ಯ ಕೆಲಸವಾಗಿರುವುದು.

ಕೆ. ಗೆ.

ವರ್ತಮಾನ ವ್ಯವಹಾರ.

ಕೋಲ್ಹಾಪುರದ ಸ್ವಾಮಿಗಳು ಚಿತ್ರದುರ್ಗದ ಶ್ರೀಮಜ್ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದ ಸಂದರ್ಶನದ ಸಮಾಚಾರವು

(ಕಳಿಸಲಾದ ಲೇಖ)

ಚಿತ್ರದುರ್ಗದಿಂದ ಹೊರಟಿರುವ ಪತ್ರಿಕೆಗಳವರು ಮೇ ೨೦ ನೇ ತಾರೀಖು ರಾತ್ರಿ ಉತ್ಸವಪತ್ರಿಕೆ ಪೂರ್ವಕವಾಗಿ ಮತ್ತು ಮಠದ ಜನರು ವಿಶೇಷವಾಗಿ ಸೇರಿ, ಮುರುಘರಾಜೇಂದ್ರರು ಇವರಿಗೋಸ್ಕರ ಪುಷ್ಕರಿಣಿಯಿಂದ ಗೋಪುರಗಳನ್ನು ಸ್ಥಾಪಿಸುವುದರಲ್ಲಿ ಅವುಗಳ ಅಲಂಕಾರ ಮತ್ತು ರಾತ್ರಿಯ ದೀಪಾಲಂಕಾರವನ್ನೂ ಕೊಟ್ಟಿದ್ದಾರೆ. ಮತ್ತು ತಮ್ಮ ಇಂಗ್ಲೀಷು ಪಾಠಶಾಲೆಯವರ ಹಾಡುಗಳನ್ನು ಅಲಂಕರಿಸಿ ಅವರಿಗೆ ದೇಶದ ಕೌಶಲ್ಯಗಳನ್ನು ಉಂಟುಮಾಡಿಕೊಟ್ಟಿದ್ದಾರೆ.

ಮೆರವಣಿಗೆಯ ಸಂಭ್ರಮವು ಪ್ರಾರಂಭವು ಆದಕೂಡಲೆ ಹೊರಗಿನ ಯಾವತ್ತೂ ಜನಗಳು ಶ್ರೀ ಜಗದ್ಗುರು ಸ್ವಾಮಿಗಳವರಿಗೆ ವಂದಿಸಿ, ಸರಕಾರಿ ಅಧಿಕಾರಿಗಳೂ, ಶ್ರೀಮನ್ ಮಹಾರಾಜರವರ ಸೇವಕರೂ, ಶ್ರೀಮನ್ ದಿವಾನ್ ಸಾಹೇಬರೂ ಮೊದಲಾದವರು ತಾಂಬೂಲ ಪುಷ್ಪಹಾರಾದಿಗಳನ್ನು ಸ್ವೀಕರಿಸಿ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು.

ಬೆಳಗಾಂ ಜಿಲ್ಲಾ ಚಿಕ್ಕೋಡಿ ತಾಲೂಕು ಕೆಂಬಾವಿ ಶ್ರೀ ಮಂಜಾಗುರುಸ್ವಾಮಿ ಈ ಡಿಸ್ಟ್ರಿಕ್ಟಿನಲ್ಲಿ ಸಾಹುಕಾರರಲ್ಲಿ ೧ ನೇ ಜವಳಿಗಾರಿಯ ಇರಾಣ ಮಲ್ಲಪ್ಪ ಅಣ್ಣಾ ಕಂತ್ರಿ ಇವರು ಶ್ರೀಗಳವರ ಸಂದರ್ಶನಕ್ಕೆ ಬಂತ್ರುದಿನ ತಮ್ಮ ಸ್ವಗ್ರಾಮದ ಕಡೆಗೆ ದಯಮಾಡಿಸಿ ತಮ್ಮಿಂದ ಹೊಡಲ್ಪಡುವ ದೇವಸತ್ಕಾರ ನಾದಪ್ರಧಾನವನ್ನು ಸ್ವೀಕರಿಸುವ ತಮ್ಮನ್ನು ಧನ್ಯರನ್ನಾಗಿ ಮಾಡಬೇಕೆಂದು ಬೇಡಿಕೊಂಡಿದ್ದರಿಂದ ಅದಕ್ಕೆ ಶ್ರೀಗಳವರು ಮನ್ನಿಸಿ ಕೆಂಬಾವಿಗೆ ದಯಮಾಡಿಸಿದ್ದರು. ಇದೇ ತಿಂಗಳ ೨೦ ನೇ ತಾರೀಖಿನಲ್ಲಿ ಕೆಂಬಾವಿಯ ಪುರವನ್ನು ಬಿಟ್ಟು ಕಾಗಿ ಧರ್ಮಶಾಲೆ ಮಾರ್ಗವಾಗಿ ಶ್ರೀಗಳವರ ಸವಾರಿಯು ಹೊರಟಿತು. ಶ್ರೀಮಾನ್ ಯಾವರಾಜೀವರು ಆಶ್ವಾಲಂಕಾರ ಮಾಡಿ (೪೦) ಜನ ಸಂದಣಿ ಸಮಾಗಮ ಸಹಿತ ನಾಲ್ಕು ಪತ್ರಿಕೆಗಳೊಡನೆ ದಯಮಾಡಿಸಲು, ಶ್ರೀಜಗದ್ಗುರು ಸ್ವಾಮಿಗಳವರು ಮಠದ ಬಳಿಗೆ ಹೋಗಿ ಮುಂದೆ ಇಳಿದ್ದರು ಮೊದಲಾದವರಿಗೆ...

ಇನ್ನೂ ಇದೆ.

ಮುಂದಕ್ಕೆ ಕರೆದು ಬಹು ಪ್ರೀತಿಯಿಂದ ಮಾತಿನಿಂದ ಅಪ್ಪಣೆ ಕೊಡಿಸಿದ್ದೇನೆಂದರೆ — ತಾವು ಬಹುದೂರ ದಯಮಾಡಿಸಿ ಪರಿ, ರಾಜಧಾನಿಗೆ ಹಿಂದಕ್ಕೆ ತೆರಳಿರಿ ಎಂದು ಆಶೀರ್ವಾದವನ್ನು ಮಾಡಿದುದಲ್ಲದೆ, ಶ್ರೀಮನ್ ಯುವರಾಜರೇ! ಈ ಸನ್ನಿವೇಶವನ್ನು ಹೊಂದಿದ ನಿಮ್ಮ ತಂದೆ ಶಾಹು ಛತ್ರಪತಿ ಮಹಾರಾಜರವರೂ ನೀವೂ ಸಹ ನಿಷ್ಪಕ್ಷಪಾತದಿಂದ ರಾಜ್ಯಪರಿಪಾಲನವನ್ನು ಮಾಡುವುದರಿಂದಲೂ ಎಲ್ಲ ಪ್ರಜೆಗಳನ್ನೂ ಸಮದೃಷ್ಟಿಯಿಂದ ಕಾಣುವುದರಿಂದಲೂ ನಿಮ್ಮ ಆಳುವಿಕೆಯು ಚಿರಕಾಲವಿರಲೆಂದೂ ನಿಮ್ಮತನ್ನ ಅಂಗ್ಲೇಯ ಸಾರ್ವಭೌಮ ಸರಕಾರದವರು ಸದಾ ಗೌರವದಿಂದ ಕಾಪಾಡಲೆಂದೂ ನಿಮಗೂ ಮತ್ತು ನಿಮ್ಮ ರಾಜವಂಶದವರೆಲ್ಲರಿಗೂ ಶ್ರೀ ಜಗದೀಶನು ಆಯುರಾರೋಗ್ಯ ಭಾಗ್ಯಸಂಪತ್ತುಗಳನ್ನು ಇದಕ್ಕೂ ಉನ್ನತವಾಗಿ ಕೊಟ್ಟು ಕಾಪಾಡಲಿ" ಎಂದು ಆಶೀರ್ವಾದವನ್ನು ಮಾಡಿದನಂತರ ಶ್ರೀ ಜಗದ್ಗುರುಗಳವರ ಸವಾರಿಯು ಮಧ್ಯಾಹ್ನದಲ್ಲಿ ಮುಜಾಹ್ದರ್ ಮಾಡಿ ಕಾಗಲ್ ಪಟ್ಟಣದ ಮಾರ್ಗವಾಗಿ ಕೃಷ್ಣಾ ಗ್ರಾಮವನ್ನು ಕುರಿತು ಮುಂದಕ್ಕೆ ಸಾಗಿದರು. ಆಮೇಲೆ ಯುವರಾಜರವರು ತಮ್ಮ ಪರಿವಾರ ಸಮೇತವಾಗಿ ರಾಜಧಾನಿಗೆ ಹಿಂದಕ್ಕೆ ತೆರಳಿದರು.

ಶ್ರೀ ಜಗದ್ಗುರುಗಳವರ ಸವಾರಿಯು ಈ ದಿವಸ ಕೃಷ್ಣಾ ಗ್ರಾಮಕ್ಕೆ ದಯಮಾಡಿಸಿ ಅಷ್ಟಪಾಲಕಿ, ಪಂಚಕಳಸ, ಮೊಹರಬಾಲ, ಮಕರತೋರಣ, ಮೊದಲಾದ ರಾಜ್ಯಬಿರುದಾವಳಿಗಳಿಂದ ಉತ್ಸವದೊಡನೆ ಮಿ॥ ಶ್ರೀಮಂತರಾದ ಕಿಂತ್ರಿ ಮಲ್ಲಪ್ಪಣ್ಣನವರ ಸ್ವಂತ ಗೃಹಕ್ಕೆ ದಯಮಾಡಿಸಿತು. ನಿತ್ಯದಲ್ಲಿಯೂ ೩-೪ ಸಹಸ್ರ ಜನಗಳಿಗೆ ೩-೪ ದಿನಗಳವರೆಗೂ ಪಕ್ವಾನ್ನ ಭೋಜನದಿಂದ ಸಂತರ್ಪಣೆಯನ್ನು ಮಾಡಿಸಿ ಮಿ॥ ಮಲ್ಲಪ್ಪಣ್ಣನವರು ತಮ್ಮ ಸ್ವಂತ ಖರ್ಚಿನಿಂದ ಎಲ್ಲರನ್ನೂ ತೃಪ್ತಿಪಡಿಸಿದರು. ಇಲ್ಲಿಗೆ ನಿಡಸೂಸಿ, ಅಥಣಿ, ಬೆಳಗಾಂ ಈ ಮಠಗಳ ಶ್ರೀಗಳವರು ತಮ್ಮ ತಮ್ಮ ಪರಿವಾರಗಳ ಸಮೇತ ಇನ್ನೂ ಮುಂತಾದ ಮಹಾಜನಗಳು ದಯಮಾಡಿಸಿದ್ದರು. ಇದನ್ನು ನೋಡುವುದಕ್ಕೆ ಸಾಕ್ಷಾತ್ ಭೂಕೈಲಾಸವೇ ಎಂದು ತೋರುತಿತ್ತು. ಎಲ್ಲಾ ಮಠಗಳವರಿಗೂ ಅವರವರ ಪರಿವಾರದವರಿಗೂ ಸಹಾ ಸದರಿ ಮಿ॥ ಮಲ್ಲಪ್ಪಣ್ಣನವರು ಉಡುಗೆರೆಗಳನ್ನು ಕೊಟ್ಟರು. ಕೊಲ್ಹಾಪುರದಲ್ಲಿ ಈಗ ಕಟ್ಟಲ್ಪಡುವ ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಮಠದಲ್ಲಿ ತಮ್ಮ ಅಣ್ಣಂದಿರಾದ ಕೈಲಾಸವಾಸಿ ಅಪ್ಪಣ್ಣಪ್ಪನವರ ಸ್ಮರಣಾರ್ಥವಾಗಿ ಒಂದು ಭವ್ಯವಾದ ಸಭಾ ಮಂದಿರವನ್ನು ಕಟ್ಟಿಸಲು ಬೇಕಾಗುವ ಹೊಸಿಲುಗಳನ್ನು ಒಪ್ಪಿಸಲು ಭಕ್ತಿಪೂರ್ವಕವಾಗಿ ಶ್ರೀ ಜಗದ್ಗುರುಗಳವರಿಗೆ ಮಿ॥ ಮಲ್ಲಪ್ಪಣ್ಣನವರು ಸಾಷ್ಟಾಂಗ ಹಾಕಿರುತ್ತಾರೆ. ಇವರು ಭಕ್ತಿವಂತರಾಗಿಯೂ ಸಮ್ಮ ವೀರಶೈವ ಜನಾಂಗದವರಲ್ಲಿ ಒಂದನೇ ಸಾಹುಕಾರರಾಗಿಯೂ, ಅನೇಕ ಗುಣಪೂರ್ಣರಾಗಿಯೂ, ನಿರಗರ್ವ ಶಿರೋಮಣಿಗಳಾಗಿಯೂ ಇದ್ದಾರೆ.

ಸರ್ವ ಪ್ರತ್ಯಕ್ಷದರ್ಶಿ

ಸಂಘದ ಸಂಗತಿ ಬಹುಮಾನವು.

ಶ್ರೀ ಪಂ. ಕನಕಪ್ಪ ರಾವರವರ ಡಿ॥ ಎಮ್ ಇನ್ಸ್‌ಪೆಕ್ಟರ್ ಇವರ ಬಳಿ ಬಿಜಾಪುರದ ಮತ್ತು ಕಳಿಸಿಕೊಟ್ಟವರಿಗೆ ೨೦೦ ರೂ ಗಳಲ್ಲಿ ೨-೩ ತಿಂಗಳು ವಿಜಾಪುರ ಜಿಲ್ಹಾ ಸಭೆಯಿಂದ ಹಂಚಲ್ಪಡುವುದೆಂದು ೧೯೧೧ ನೇ ಜನವರಿ ತಿಂಗಳಲ್ಲಿ ಒಂದು ಪ್ರಕಟನ ಪತ್ರಿಕೆಯು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟದ್ದು ತಮ್ಮ ವಾಚಕರ ನೆನಪಿನಲ್ಲಿರಬಹುದು. ಆ ಸಂಬಂಧ ಕೆಲ ಮಹನೀಯರು ತಮಗೆ ಗೊತ್ತಿದ್ದ ಅನೇಕ ಸಂಗತಿಗಳನ್ನು ಬರೆದು ನಮ್ಮ ಕಡೆಗೆ ಈಗ ಕಳುಹಿಸಿರುವರು. ಆದಾಗ್ಯೂ ಇನ್ನೂ ಕೈಲಾಸವಾಸಿಗಳ ಬಗ್ಗೆ ಹೆಚ್ಚಿಗೆ ಮಾಹಿತಿಯನ್ನು ಸಂಗ್ರಹಿಸುವುದು ಅತ್ಯವಶ್ಯವಿದೆ. ಅದರಿಂದ ಅವರ ಗುಣಗಳು, ಆಚಾರಗಳು, ಅಭ್ಯಾಸ, ವಿದ್ವತ್ತು ಮೊದಲಾದವುಗಳನ್ನು ನಿರ್ದೋಷಿತಕ್ಕ ಸಂಗತಿಗಳು ಯಾರಿಗಾದರೂ ಗೊತ್ತಿದ್ದಲ್ಲಿ ಅವುಗಳನ್ನು ಅವರು ನಮಗೆ ಬರೆದು ತಿಳುಹಿಸತಕ್ಕದ್ದು. ಇವೆಲ್ಲ ಸಂಗತಿಗಳು ಆ ದಿವಂಗತರಾದವರ, ಮಿತ್ರರು, ಅವರಿಂದ ಉಪಕಾರಹೊಂದಿದವರು ಇವರೇ ಮೊದಲಾದವರಿಗೆ ತಿಳಿಯುವ ಸಂಭವವು ಹೆಚ್ಚಾಗುಂಟು. ಅವರು ಅವುಗಳನ್ನೆಲ್ಲ ನಮಗೆ ಬರೆದು ತಿಳಿಸಿದರೆ, ನಾವು ಅವರಿಗೆ ಬಹಳ ಆಭಾರಿ ಆಗುವೆವು. ಮತ್ತು ಆ ಪ್ರಕಾರ ಯಾರು ಬೆಚ್ಚಗೆ ಮಾಹಿತಿಯನ್ನು ದೊರಕಿಸಿ ಕೊಡುವರೋ ಅವರಿಗೆ ತಕ್ಕ ಬಹುಮಾನಗಳು ಕೊಡಲ್ಪಡುವವು. ಪ್ರತಿಯೊಬ್ಬರೂ ತಮ್ಮ ಲೇಖನಗಳನ್ನು ಇದೇ ಡಿಸೆಂಬರದ ಒಳಗಾಗಿ ನಮ್ಮ ಕಡೆಗೆ ಕಳಿಸತಕ್ಕದ್ದು. ಬಹುಮಾನಗಳು ೧೯೧೧ ಜನವರಿ ಅಂತ್ಯದೊಳಗಾಗಿ ಹಂಚಲ್ಪಡುವವು.

ಕೆ. ಗು. ಹಳಕಟ್ಟಿ ಬಿ. ಎ., ಎಲ್‌ಎಲ್. ಬಿ., ಸೆಕ್ರೆಟರಿ

ವಿಜಾಪುರದ ವಿದ್ಯಾವರ್ಧಕ ಜಿಲ್ಹಾ ಸಭಾ

ತಾ॥ ೨೦.

ಊದಬತ್ತಿಗಳು.

16

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೫-೦-೦; ೩-೦-೦; ೨-೯-೦, ೧-೪-೦; ಕಸ್ತೂರಿ ಬಿಲ್ಲೆ ತೊಲಾ ೧ ಕ್ಕೆ ೧-೦-೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೮ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೪ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಕಾರಿ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦-೧೦-೦
ಪರವಾದಿಗಜಾಂಕುಶತಾರಾವಳಿ	೦-೪-೦
ಚಾರುಶೀಲೆ ಚರಿತ್ರೆ	೦-೫-೦
ಕರಬ್ರಾಂತಿನ್ನು	೦-೩-೦
ಸಟೀಕಕರ್ನಾಟಕಶಬ್ದಮಂಜರಿ	೦-೩-೦
ಸಟೀಕನಂದೀವ್ರತ	೦-೩-೦
ಸಟೀಕ ವಿವಾಹವಿಧಿ	೦-೬-೦
ವ್ರತಪಂಚಕ	೦-೨-೦
ವಿವೇಕಮಂಜರಿ	೦-೨-೦
ಪುಷ್ಪಾಂಜಲಿವಿದ್ಯಾ (ಮುಕ್ತಿಸಾಧನ.)	೦-೨-೦
ಗುರುಶಂಕರನೇಶ್ವರಶತಕಂ	೦-೧-೦

ಅಂಚೆ ವೆಚ್ಚ ಬೇರೆ.

ನೋಟೀಸು

ಜಾತಕ ಸುಧಾನಿಧಿ ಮಂಜರಿ.

8

ಅಯ್ಯಾ ಲೋಕಬಾಂಧವರೆ! ವಿನಯಪೂರ್ವಕವಾಗಿ ಶೃತಪಡಿಸುವದೇನಂದರೆ— ಈ ಸಮಸ್ತ ಭರತಖಂಡದಲ್ಲಿ ಅನೇಕಪಂಡಿತರು ಜ್ಯೋತಿಷಶಾಸ್ತ್ರ ಪ್ರಯೋಗವಂ ಮಾಡಿ ಮರ್ಮವನ್ನು ತಿಳಿಸಲಾರರೆ ಒಬ್ಬಾದರೂ ಪ್ರತ್ಯಕ್ಷಫಲಾನುಭವಕ್ಕೆ ಬರುವಂತ ಗ್ರಂಥವನ್ನು ಯಾರೂ ರಚಿಸಲಿಲ್ಲ, ಆದ್ದರಿಂದಲೇ ನಾನು ಅನೇಕ ಪುರಾತನ ಪ್ರಾಚೀನ ಗ್ರಂಥಗಳನ್ನು ಪರಿಶೋಧನೆಮಾಡಿ ಅಲ್ಪವಿದ್ಯರಿಗೂ ಕೂಡ ಮುಂಬರುವ ಭೂತಭವಿಷ್ಯದ್ವರ್ತಮಾನಗಳನ್ನು ತಿಳಿಯುವಂತೆ ಕನ್ನಡಟೀಕಾ ತಾತ್ಪರ್ಯದೊಂದಿಗೆ ರಚಿಸಿ ಇರುತ್ತೇನೆ. ಸದರಿ ಗ್ರಂಥದಲ್ಲಿ ಇರುವ ವಿಷಯವೇನಂದರೆ—ಯುಗಭೇದಪಾಪಲಗ್ನವಿಚಾರ, ಮಾರಪ್ರಮಾಣವಿಚಾರ, ಸಂಧೀಹಲಗ್ನನಿವೃತ್ತಿವಿಚಾರ, ನಕ್ಷತ್ರಗಣನವಿಚಾರ, ಗ್ರಹೋಚ್ಚನೀಚವಿಷಯ, ರಾಜಲಕ್ಷಣಯೋಗ, ಭೋಗಿಯೋಗ, ಕೀರ್ತಿಯೋಗ, ಮರಣಾಂತ್ಯಸೌಖ್ಯಯೋಗ ರತ್ನಲಾಭಯೋಗ ಸುವರ್ಣಪಾತ್ರಭೋಜನಯೋಗ ಕುಬೇರಯೋಗ ತ್ರಿಲಕ್ಷಾಂತರಕೋಟ್ಯಧೀಶ್ವರಯೋಗ ಋಣಯೋಗ ಭಿಕ್ಷಾನ್ನಭಕ್ಷಣಯೋಗ ಲೋಭಿಯೋಗ ಅಂಧಕಯೋಗ ಮೂಕಯೋಗ ಗಣಿತಶಾಸ್ತ್ರಯೋಗ ತರ್ಕಶಾಸ್ತ್ರಯೋಗ ವ್ಯಾಕರಣಶಾಸ್ತ್ರಯೋಗ ಷಟ್ಶಾಸ್ತ್ರಯೋಗ ವೇದಶಾಸ್ತ್ರಯೋಗ ಭ್ರಾತೃವೃದ್ಧಿಯೋಗ ಭ್ರಾತೃಜಾರಯೋಗ ಮಾರಜಾತಕಯೋಗ ಕ್ಷೇತ್ರಲಾಭಯೋಗ ಕೃಷಿಲಾಭಯೋಗ ರಾಜಯೋಗ ಪುತ್ರವೃದ್ಧಿಯೋಗ ಏಕಪುತ್ರಯೋಗ ದ್ವಾದಶಪುತ್ರಯೋಗ ಪುತ್ರಹೀನಯೋಗ ಶತ್ರುಯೋಗ ಶತ್ರುಹೀನಯೋಗ ಏಕಕಳತ್ರಯೋಗ ಕಳತ್ರ ಜಾರಯೋಗ ದ್ವಿಕಳತ್ರಯೋಗ ತ್ರಿಕಳತ್ರಯೋಗ ಸಪ್ತಕಳತ್ರಯೋಗ ದ್ವಾದಶದಾರಯೋಗ ಶತಕಳತ್ರಯೋಗ ದ್ವಿಶತಕಳತ್ರಯೋಗ ದೀರ್ಘಾಯುರ್ಯೋಗ ಮಧ್ಯಮಾಯುರ್ಯೋಗ ಅಲ್ಪಾಯುರ್ಯೋಗ ಮೃತ್ಯುಯೋಗ ಧನವ್ಯಯಯೋಗ ತನುಭಾವ ವಿಚಾರ ಧನಭಾವವಿಚಾರ ತೃತೀಯಭಾವ ವಿಚಾರ ಚತುರ್ಥಭಾವವಿಚಾರ ಪಂಚಮಭಾವವಿಚಾರ ಷಷ್ಠಮಭಾವ ವಿಚಾರ ಸಪ್ತಮಭಾವ ವಿಚಾರ ಅಷ್ಟಮಭಾವ ವಿಚಾರ ನವಮಭಾವ ವಿಚಾರ ದಶಮಭಾವವಿಚಾರ ಏಕಾದಶಭಾವ ವಿಚಾರ ದ್ವಾದಶಭಾವ ವಿಚಾರ, ಮೇಷಾದಿಯಾಗಿ ಮೀನದವರೆಗೂ ೧೨ ಲಗ್ನಗಳ ಫಲವನ್ನು ಇದಲ್ಲದೆ ಇನ್ನೂ ಅನೇಕ ವಿಷಯಗಳನ್ನು ಈ ನೋಟೀಸಿನಲ್ಲಿ ಬರೆದು ತೋರಿಸಲು ಸಾಧ್ಯವಲ್ಲವೆಂದು ಸದರಿ ಗ್ರಂಥದಲ್ಲಿ ಇರುವ ವಿಷಯವನು ಸ್ವಲ್ಪಮಟ್ಟಿಗೆ ಸೂಚಿಸಿರುತ್ತೇನೆ.

ಜಾತಕಸುಧಾನಿಧಿಮಂಜರಿ ಗ್ರಂಥ ೧ ಕ್ಕೆ ೧-೮-೦.

ನವಗ್ರಹಗಳ ದಂಡಕವು ವಿಸ್ತಾರವಾಗಿ ಛಾಪಾಗಿರುತ್ತದೆ. ಕ್ರಯ ೧ಕ್ಕೆ ೩-೦-೦.

ಅಥವಾ ಪರಾಕಾಪೆ ಸ್ಟಾಂಪುಗಳನ್ನು ಕಳುಹಿದವರಿಗೆ ಕಳುಹಿಸುತ್ತೇವೆ.

ನಮ್ಮ ವಿಳಾಸ :—

[illegible] ಗಣೇಶನಗುಡಿ ಪೋ [illegible]

ಮುಳದ ಶಿವ್ಯಾಂತಿ ಮಲ್ಲಿಕಾರ್ಜುನ

11

ಶರೀರಸುಖಕ್ಕೆ ಹೊಸ ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು.

ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲು ಸೆಳೆತ, ಸಂಧಿವಾತ, ಕಟಿವಾತ, ತಲೆಶೂಲೆ, ಅರತಲೆ ಶೂಲೆ, ಬೆನ್ನಿನ ನೋವು ಸೊಂಟದ ಅಶಕ್ತಿ, ನಿದ್ರಾನಾಶ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಬಾಧೆ, ತ್ವಚೆಯ ವಿಕಾರ, ಕಣ್ಣುಗಳ ಕರ್ಣ, ಜ್ವರ, ಉದರವಾತ, ಕಲಿಜದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವ, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಾಧಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಷ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರಕ್ಕೆ ವ್ಯಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಹಾಕಿಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧-೨-೦ ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧-೨-೦. ಪೋಸ್ಟ್ ಖರ್ಚು ೦-೩-೦ ಒಮ್ಮೆಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಬಿಟ್ಟಿ ಕಳುಹಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಬಿಟ್ಟಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಾಧಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿದೆ. ಮೈಯ ಹೆಚ್ಚುಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವುದು ಅಗತ್ಯವು. ೬ ವರ್ಷದ ಕೆಳಗಿನ ಚಿಕ್ಕಮಕ್ಕಳಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿರುಪಾಕ್ಷ ಮಹಾದೇವ ಪ್ರಕರ, ಮರ್ಚಂಟ್.

ಪೋಸ್ಟ್ ಬಿಳಗಿ, ಉತ್ತರ ಕನ್ನಡ ಜಿಲ್ಲಾ,

Post Bilgi, North Kanara District

ಭಾಗ್ಯದ ಪಂಡಿತ ಚೆಲುವ ಪಂಡಿತರ ಔಷಧಗಳು.

12

ಲೋಕಾಮೃತದ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಚಿನ್ನ, ಬೆಳ್ಳಿ, ಮುತ್ತು, ಪ್ರವಾಳ, ಕಸ್ತೂರಿ ಮೊದಲಾದ ಬೆಲೆಯುಳ್ಳ ವಸ್ತುಗಳಿಂದ ತಯಾರಿಸಿದೆ. ಸನ್ನಿ, ಜ್ವರ, ಮೊದಲಾದ



ರೋಗಗಳ ಸೋಂಕು ಮೈ ಕಾಲು ಕೊರೆತ (ವಾತ), ಮೈನಡುಕ, ವಾತಗಳ ಬಾಧೆ, ಅಜೀರ್ಣ, ಅಗ್ನಿಮಾಂದ್ಯ, ಹೊಟ್ಟೆನೋವು, ಕೆಮ್ಮು, ದಗಡಿ, ಸನ್ನಿ, ಬೇಧಿ, ಇನ್ನೂ ಅನೇಕ ರೋಗಗಳಿಗೆ ಕೆಲಕ್ಷಣದಲ್ಲಿ ಖಂಡಿತವಾಗಿ ಗುಣಮಾಡುತ್ತದೆ. [illegible] ಉಪಯೋಗಿಸುತ್ತಿದ್ದರೆ [illegible] ನರಗಳಿಗೆ ಬಲವನ್ನು ಕೊಟ್ಟು, ರಕ್ತದಲ್ಲಿನ ದೋಷವನ್ನು ತೆಗೆದು ಶುದ್ಧವಾದ ವೃದ್ಧಿ ಪಡಿಸುತ್ತದೆ. ಸ್ತ್ರೀಯರ [illegible], ಮಕ್ಕಳ ಎಳವು, ಜ್ವರ, ಕೆಮ್ಮು, [illegible] ಗಳನ್ನು ಗುಣಮಾಡುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ರೋಗದ ಸೋಂಕಿಗೆ ಗುರಿಯಾಗುವುದಿಲ್ಲ. [illegible] ೨೦ ಮಾತ್ರೆಗಳುಳ್ಳ ಡಬ್ಬಿಗೆ ೬ ಆಣೆ, ೪ ಡಬ್ಬಿಗೆ ೧ ರೂಪಾಯಿ, ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೮ ಆಣೆ.

೨. ಭಾಸ್ಕರ ಜ್ವರಕ ರಸಾಯನ—ಪಿತ್ತವೃದ್ಧಿ ಪಿತ್ತದಿಂದುಂಟಾದ ಮನೋವಿಕಾರವು, ಭ್ರಾಂತಿ, ತಲೆ ತಿರುಗುವಿಕೆ, ಬಾಯಿ ನೀರು, ಎದೆಯುರಿ, ಹುಳಿತೇಗು, ಅರೋಚಕ, ಎದೆಯುಬ್ಬಸ, ಮೈ ಕೈ ಭಾರ, ಮೈ ಜಡತೆ, ಬೆಚ್ಚಿಬೀಳುವಿಕೆ, ನಿತ್ರಾಣ, ಬಾಯಿ ಕಹಿ ಅಥವಾ ಹುಳಿ, ರುಚಿ ಮೊದಲಾದ ಪಿತ್ತವಿಕಾರವನ್ನೆಲ್ಲಾ ಗುಣಪಡಿಸುತ್ತದೆ. ಡಬ್ಬಿ ೧ ಕ್ಕೆ ಟಪಾಲ್ ಖರ್ಚು ಸೇರಿ ರೂ. ೧-೩-೦.

೩. ದಂತಮಂಜನ ಚೂರ್ಣ—ಬಾಯಿ ದುರ್ಗಂಧ ಬರುವುದು, ಹಲ್ಲುಗಳಲ್ಲಾಡುವುದು, ಹಲ್ಲುನೋವು, ಹಲ್ಲುಗಳ ಪಾಚಿ, ಇಗುರಿನಿಂದ ಕೀವು ಸೋರುವುದು, ಹಲ್ಲುಗಳ ಸಂದಿನಿಂದ ರಕ್ತ ಕೀವು ಸೋರುವುದು, ಬಾಯಿಹುಣ್ಣು, ಕ್ರಿಮಿಯಂತ ಶೂಲೆ, ತಣ್ಣೀರು ಗಾಳಿ ಇವುಗಳಿಗೆ ಹಲ್ಲು ಜುಮ್ಮೆನ್ನುವುದು— ಇವೆಲ್ಲಾ ಗುಣವಾಗುತ್ತವೆ. ಕ್ರಯ ಚಿಕ್ಕ ಡಬ್ಬಿ ೧ ಕ್ಕೆ ೨ ಆಣೆ.

೪. ಪ್ಲೇಗಿನ ಔಷಧ—ಪ್ಲೇಗಿಗೆ ಔಷಧವು ಇಲ್ಲವೆಂದು ಇದುವರೆಗೆ ಈ [illegible]. ಕೆಲವು ಕೆಯಾಗಿಯೂ ಬಾಗಿಲೂ [illegible] ಪ್ಲೇಗಿನ [illegible] ಗಳನ್ನು ಗುಣಮಾಡುವ ಔಷಧವು ಇದೊಂದೇ. [illegible] ಒಂದೇ ಒಂದು ಸಲ [illegible] ಮಾತ್ರ ನಮ್ಮ ಬಳಿಯಲ್ಲಿದೆ. [illegible] ತರಿಸಿ ನೋಡಿ, ಅನುಭವಿಸಿ, ಔಷಧಿ ಸಂಗಡಲೇ ಇರುತ್ತದೆ. [illegible]—ಪ್ಲೇಗಿನ ಔಷಧ ಸೀಸೆ ೧ ಕ್ಕೆ ರೂ. ೧ [illegible] ಮೊದಲಾದವಕ್ಕೆ ಸವರ [illegible]

ವಿಳಾಸ: [illegible]

ಕೈಸ್ವಯಮಾಪವರೆ ಅನ್ನು ಕರಿಮೆ ಕ್ರಯಗಳಿಗೆ ದೊರೆಯುವಾರವು.

ಒಳ್ಳೆ ಸಮಯ! ಸುಲಭ ಕ್ರಯ!! ಬಿಡಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

ಒಂದು ರೂ. 2-8-0 ಮಾತ್ರ! ಎರಡು ರೂ. 3-೪-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ದಾರಣೆಗಳಿಗೆ ಬರಿರಿ.

1. ರಾಸ್ಕೊಪಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಇದು ನೋಡುವವರಿಕ್ಕೆ ಬಹಳ ರಮಣೀಯವಾಗಿಯೂ, ಬಹಳ ಗಟ್ಟಿತರವಾಗಿಯೂ, ಅನೇಕ ಸಂವತ್ಸರಗಳವರೆಗೂ ಬಾಳಿಕೆ ಬರುವ ದಾಗಿಯೂ, ಕಾಲವನ್ನು ಸರಿಯಾಗಿ ತೋರಿಸತಕ್ಕದ್ದಾಗಿಯೂ ಇರು ತ್ತದೆ. ಇದು ಎಂದೆಂದಿಗೂ ಕಪ್ಪಾಗದಂತಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿರುತ್ತದೆ ಇದರ ಚಕ್ರಗಳಲ್ಲಿ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ ಇದರ ಹಿಂಭಾಗದಲ್ಲಿ ಪಳೂಕ ಗ್ಲಾಸು ತೋರಿಸು ಸಹಾ ಇರುತ್ತದೆ ಇತರ ಕಂಪೆನಿಯವರು ಇದಕ್ಕೆ ಕಡಿಮೆ ತರದವುಗಳನ್ನು ರೂ 2-8-0 ರೂ. ೩-8-0 ಈ ಕ್ರಯಗಳಿಗೆ ವಿಕ್ರಯಿಸುವರು. ಮೋಸಹೋಗದೇ ಬಿರಿ ನಮ್ಮಲ್ಲಿ ತರಿಸಿಕೊಂಡರೆ ತಮಗೆ ಬಹಳ ತೃಪ್ತಿಯಾಗಿಯೂ, ಸಂತೋಷಕರವಾಗಿಯೂ ಇರುತ್ತದೆಂಬುವದಕ್ಕೆ ಸಂದೇಹವೇ ಇಲ್ಲವು

ಕ್ರಯ ರೂ. 2-8-0 ವಿ ಪಿ ಪಿ. ಚಾರ್ಜು 0-4-0

2. ಟೈಮ್‌ರೆಗ್ಯುಲೇಟರ್ ಲೀವರ್ ಜೂವೆಲ್ಡು ವಾಚ್.

ಇದು ಎಲ್ಲಾ ದೇಶಗಳಲ್ಲಿಯೂ ಬಹಳ ಪ್ರಸಿದ್ಧವಾದ ಗಡಿಯಾ ರವು ಇದು ರಾಸ್ಕೊಪು ವಾಚಿಗಿಂತಲೂ ಹೆಚ್ಚು ರಮಣೀಯವಾ ಗಿಯೂ, ಹೆಚ್ಚು ಗಟ್ಟಿತರವಾಗಿಯೂ, ಇದು ಕಾಲವನ್ನು ಸರಿ ಯಾಗಿ ತೋರಿಸುವುದರಲ್ಲಿ ಬಹಳ ಪ್ರಬಲವಾದದ್ದಾಗಿಯೂ ಇರು ತ್ತದೆ ಇದು ಆಯುಃಪರಿಮಿತಿ ಇಲ್ಲದ್ದು. ಇದು ಸಹಾ ಒಳ್ಳೇ ನಿಕ್ಕಲ್ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು. ಇದರ ಚಕ್ರಗಳಲ್ಲಿಯೂ ಕೆಂಪುಗಳು ಕೆತ್ತಲ್ಪಟ್ಟಿರುತ್ತವೆ. ಪಳೂಕ ಗ್ಲಾಸು ತೋರಿಸು ಸಹಾ ಇರುತ್ತವೆ.



ಕ್ರಯ ರೂ. 3-8-0 ವಿ. ಪಿ. ಪಿ. ಛಾರ್ಜು ರೂ. 0-4-0

3. ಲೇಡೀಸ್ ಸಿಲ್ವರ್ ವಾಚ್.



ಇದು ಬಹಳ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿದ್ದು ಇದರ ಹಿಂಭಾಗದಲ್ಲಿ ಚಿತ್ರವಿಚಿತ್ರವಾದ ಕೆಲಸಗಳಿಂದ ಮಾಡಲ್ಪಟ್ಟಿರುವದು. ಇಷ್ಟು ಕಡಿಮೆ ಕ್ರಯಕ್ಕೆ ಇಷ್ಟು ಉತ್ತಮವಾದದ್ದು ಯಾರಿಂದಲೂ ವಿಕ್ರಯಿ ಸಲ್ಪಟ್ಟಿಲ್ಲವು ಇದು ಕಾಲವನ್ನು ಸರಿಯಾಗಿ ತೋರಿಸುವದಲ್ಲದೆ ಬಾಳಿಕೆ ಬರುವದಾಗಿದೆ ಇದನ್ನು ಕೈಯಲ್ಲಿ ಕಟ್ಟುವ ವಾಚಿನಂತೆಯೂ ಉಪಯೋ ಗಿಸಬಹುದು.

ಕ್ರಯ ರೂ 6-0-0 ವಿ. ಪಿ. ಪಿ ಛಾರ್ಜು ರೂ. 0 6-0.

ಅಮ್ಮೋನಿಯಾ ಸಿಲ್ವರು ಗಡಿಯಾರದ ಸರಪಣಿ.

ಈ ಗಡಿಯಾರದ ಸರಪಣಿ ಹಸನಾದ ಬೆಳ್ಳಿಯಿಂದ ಮಾಡಲ್ಪಟ್ಟಿರುವಂತೆ ಇರುತ್ತದೆ. ಶುದ್ಧ ಬೆ ಳ್ಳಿಯಿಂದ ಮಾಡಲ್ಪಟ್ಟಿದ್ದಕ್ಕೂ ಇದಕ್ಕೂ ಸ್ವಲ್ಪವೂ ವ್ಯತ್ಯಾಸವಿಲ್ಲವು. ಇದು ನೋಡುವದಕ್ಕೆ ಬಹಳ ರಮಣೀಯವಾಗಿಯೂ, ಶುದ್ಧವಾಗಿಯೂ ಇರುತ್ತದೆ.

ಕ್ರಯ ರೂ 0 8-0 ವಿ ಪಿ. ಪಿ ಚಾರ್ಜು ರೂ 0-೩-0

ಬಹುಮಾನ! ಬಹುಮಾನ!! ಬಹುಮಾನ!!!

ನಮ್ಮಲ್ಲಿ ಬೇಕಾದ ಸಮಯದಲ್ಲಿ ಒಂದು ಡಜನ್ ಗಡಿಯಾರಗಳನ್ನು ಒಂದೇಸಾರಿ ತರಿಸಿಕೊಳ್ಳತಕ್ಕವ ರಿಗೆ ಒಂದು ಗಡಿಯಾರವನ್ನು ಹೆಚ್ಚಿಗೆ ಬಹುಮಾನವಾಗಿ ಕಳುಹಿಸುವೆವು.

ಸ್ಪೆಷಲ್ ಛಾರ್ಜು ಇನಾಮು— ಒಂದೇ ಸಮಯಗಳಲ್ಲಿ ಆರು ಗಡಿಯಾರಗಳನ್ನು ಒಂದೇ ಸಾರಿ ತರಿಸಿಕೊಳ್ಳತಕ್ಕವರಿಗೆ ವಿ. ಪಿ. ಪಿ. ಛಾರ್ಜು ಇಲ್ಲದಂತೆ ಕಳುಹಿಸುವೆವು

ಸೂಚನೆ —ಒಂದು ದಜನು ಗಡಿಯಾರಗಳನ್ನು ತರಿಸಿಕೊಳ್ಳತಕ್ಕವರು ಅಡ್ವಾನ್ಸಾಗಿ ರೂ 1-0-0 (ಒಂದು ರೂಪಾಯಿಯನ್ನು) ಮುಂಚಿಯಾಗ್ಗೆ ಕಳುಹಿಸಬೇಕು ಆರು ಗಡಿಯಾರಗಳನ್ನು ತರಿಸಿ ಕೊಳ್ಳತಕ್ಕವರು 0-8 0 (ಎಂಟಾಣೆ) ಪೋಸ್ಟೇಜು ಸ್ಟಾಂಪುಗಳನ್ನು ಕಳುಹಿಸಬೇಕು. ಇಲ್ಲ ದಿದ್ದರೆ ಖಂಡಿತವಾಗಿ ಕಳುಹಿಸಲ್ಪಡಲಾರದು.

ವಿಳಾಸ:—ಟಿ. ಸಿ. ನಾಗಲಿಂಗಪ್ಪ ಅಂಡ್ ಕಂಪನಿ,

ನಂಬರ್ ೫೦ ಲಿಂಗಣ್ಣನ ಬೀದಿ, ವಾಲ್‌ಟಾಕ್ಸ್ ರೋಡು ಮದರಾಸು

ಉತ್ತಮ ಗ್ರಂಥಗಳು.

21

ಶಿವತತ್ವಸಾರ— ಬೆಲೆ ವಿ ಪಿ. ಯಿಂದ ೧-೬ — ಸಂಸ್ಕೃತವ್ಯಾಖ್ಯಾನಸಹಿತವೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪಸ್ವಲ್ಪ ಗಳನ್ನು ಬಿಡಿಸಿರುತ್ತವೆ ವಿಷ್ಯಾರ್ಥಿಗಳಿಗೆ ಪೂರ್ತಿ ಅರ್ಥ ತಿಳಿಯಲ್ಪಡುತ್ತದೆ.

ವೀರಶೈವ ಮತ್ಸ್ಯಖಂಡನ— ಬೆಲೆ ವಿ ಪಿ ಯಿಂದ ೪ ಆಣೆ. ಇದರಲ್ಲಿ ಅದ್ವೈತ ವಿಶಿಷ್ಟಾದ್ವೈತ, ಪಂಚಾ ಚಾರ ವಿಚಾರ, ಧರ್ಮಗಳ ವಿಷಯಗಳು ಪ್ರತಿಪಾದಿಸಲ್ಪಟ್ಟಿರುತ್ತವೆ. ವಾರ್ಧಿಕ ಷಟ್ಪದಿಗಳಾಗಿವೆ.

ವೇದಸಂಜೀವಿನಿ— ಬೆಲೆ ವಿ ಪಿ. ಯಿಂದ ೧೧ ಆಣೆ. ಶ್ರುತ್ಯರ್ಥಸಂಗ್ರಹ. ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಪುಣ್ಯಪುರುಷ— ಬೆಲೆ ವಿ. ಪಿ. ಯಿಂದ ೪ ಆಣೆ ಶಿವಭಕ್ತರ ಕಥೆಗಳು ಕನ್ನಡದಲ್ಲಿ ಸುಲಭವಾಗಿವೆ.

ಬಸವಲಿಂಗ ೩೫ ಮೈಸೂರು.

« ಅಗಸ್ತ್ಯ ವಿಚಾರ. »

ಬೆಲೆ ೬॥ ಆಣೆ. ವಿ ಪಿ. ಯಿಂದ ೭ ಆಣೆ

ಈ ಪುಸ್ತಕವನ್ನು ಸರ್ವರೂ ಸ ಗ್ರಹಿಸಿ ಅಗಸ್ತ್ಯವಾ ಗಿ ವಿಚಾರಿಸತಕ್ಕದ್ದಾಗಿರುವದರಿಂದಲೇ « ಅಗಸ್ತ್ಯವಿಚಾರ » ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ ಶಾಸ್ತ್ರಸಮ್ಮತವಾ ಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶ ದೇಳ್ಗೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇದುವರೆಗೆ ೩೦ ಬಂದಿ ರುತ್ತವೆ. ವಿಶೇಷ ವರ್ಣಿಸುವುದೇನು! ಗ್ರಂಥ ಪ್ರಿಂಟಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ವಿಕ್ರಯಗಿರುವವು ಅಪೇಕ್ಷಿಗಳವರು ತೀವ್ರ ತರಿಸಿಕೊಂಡು ಆನಂದಪಡಿಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ —ವೀರಬದ್ರಪ್ಪಾ ಅರುಟಿರಳನ,

ಪೋಸ್ಟ್-ಬಾಗೇವಾಡಿ, ಡಿ॥ ಬೆಳಗಾಂವ.

ಉತ್ತಮ ಗ್ರಂಥಗಳು.

12

ಬಸವರಾಜವಿಜಯಂ— ಬೆಲೆ ವಿ ಪಿ. ಯಿಂದ ೧-೪-೦. ಬಾಲಕರು ಕೂಡ ಸುಲಭವಾಗಿ ಓದಿಕೊಳ್ಳುವಂತೆ ಬಸವ ಪುರಾಣದ ಕಥೆಗಳೆಲ್ಲಾ ಸಾಂಗವಾಗಿ ಇದರಲ್ಲಿ ವಚನರೂಪ ವಾಗಿ ಬರೆಯಲ್ಪಟ್ಟಿವೆ.

ಚೆನ್ನಬಸವೇಶವಿಜಯಂ— ೧-೮-೦. ಇದು ವಚನ ರೂಪವಾಗಿ ಬರೆಯಲ್ಪಟ್ಟಿರುವ ಚೆನ್ನಬಸವಪುರಾಣ.

ವೀರಶೈವಧರ್ಮಶಿರೋಮಣಿ— ೧-೨-೦. ಸವ್ಯಾಖ್ಯಾನ ಮತವಿಷಯವು ವಿಶದವಾಗಿ ಹೇಳಲ್ಪಟ್ಟಿದೆ.

ಪಂಡಿತಾರಾಧ್ಯಚರಿತ್ರಂ— (ನವೀನಪ್ರಕರಣ) ೧-೨-೦ ಕರ್ನಾಟಕ ತಾತ್ಪರ್ಯದಿಂದ ಕೂಡಿದೆ. ಚತುರಾಚಾರ್ಯರಲ್ಲಿ ಒಬ್ಬರ ಚರಿತೆ ಮತವಿಷಯವೂ ಪುರಾತನಕಥೆಗಳೂ ಸೇರಿವೆ

ಸೌಂದರ ಪುರಾಣ ೧-೩-೦ ಲಲಿತವಾದ ಕವಿತೆ ಸೌಂದರನಂಬ್ಯಣ್ಣನ ಕಥೆಯನ್ನು ಸಾಂಗವಾಗಿ ಹೇಳುವ ಅನೇಕ ಉಪಕಥೆಗಳುಳ್ಳ ಗ್ರಂಥ

ತತ್ತ್ವಪ್ರಕಾಶಿಕಾ— ೬ ಆಣೆ. ತಾತ್ಪರ್ಯಸಮೇತವಾ ಗಿದೆ. ಸಿದ್ಧಾಂತಾನುಸಾರವಾಗಿ ೩೬ ತತ್ತ್ವಗಳ ವಿಭಜನೆ ಮಾಡಲ್ಪಟ್ಟಿದೆ

ಸ್ತುತಿಮುಕ್ತಾವಳಿ— ೩ ಆಣೆ. ಪಾಲ್ಕುರಿಕೆಸೋಮಾ ರಾಧ್ಯರಿಂದ ರಚಿತವಾದ ಬಸವೋದ್ದರಪುರಾಣದ ಗದ್ಯಗ ಳು ಪಟ್ಟಮಹಾರ್ಯಾವರಣದ ರಗಳೆಗಳೂ ಇವೆ.

ಸಟೀಕ ಲಿಂಗಾರ್ಚನವಿಧಿ— ೧೦ ಆಣೆ. ಪ್ರಾಣಾಯಾಮ ನ್ಯಾಸಾದಿ ವಿಶೇಷ ವಿಷಯಾರ್ಥಿಕವಾಗಿದೆ.

ರಕ್ಷಾಶತಕಂ— (ಹರಿಷ್ವೆರರಚಿತಂ) ೨ ಆಣೆ.

ಶಂಕರಸಮರ್ಗರದ— ೧ ಆಣೆ

ಎಸ್. ಆರ್. ಕರಿಬಸವಶಾಸ್ತ್ರಿ,

ಗ್ರಂಥಪ್ರಸಾರಕ ಮಂಡಳಿ, ಮೈಸೂರು.

೧೯೧೧ನೇ ಇಸವಿ ಜನವರಿ ತಾ॥ ೩೦ರಿಂದ ೧೯೧೧ನೇ ಪೆಬ್ರವರಿ ತಾ॥ ೨ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೨ ನೇ ವಿರೋಧಿಕೃತು ಸಂವತ್ಸರದ ಪುಷ್ಯ ಬ॥ ಅಮಾವಾಸ್ಯೆ ಯಿಂದ ಮಾಘ ಶು॥ ಪಂಚಮಿವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಿಥುನ ತೇದಿ
26	ಸೋಮ	ಅ	31-41	ಪೂ	13 29	12
27	ಮಂಗಳ	ಪಾ	25-51	ಶ್ರ	9 20	13
28[1]	ಬುಧ	ಬಿ	20-25	ಧನಿ	5-49	14
29	ಗುರು	ತ	14-22	ಶ	2-4	15
30	ಶುಕ್ರ	ಚ	10 13	ಪೂ	56-49	16
1	ಶನಿ	ಪಂ	6-31	ಉ	55-48	17
2	ಭಾನು	ಷ	2 49	ಅ	55 54	18

(1) ನೇಜನಸಂವದಿನದಲ್ಲಿ ಮಾಘಸ್ನಾನೋತ್ಸವ. (2) ದೇಶರಾಜಿಲಿಯರವರ ಕುಮಾರರ ವರ್ಧಂತಿ.

ಮೈಸೂರು ... ವಿದ್ಯಾದಿಹಾತ್ಸವರ್ಯರವರಿಂದ ಸ್ಟಾರ್ ಪ್ರೆ... ಸಲ್ಪಟ್ಟಿತು.

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾರಾ ಪರಮಧಿಗತರಾಜಮಂಡಲಹಿತೈಷಾ ಘನಪಥಕೃತಾವತಾರಾ ಪಕ್ಷ್ಯಜ್ಜನ ಪ್ರವೃತ್ತಿಬೋಧಕಾ [illegible]
ಶ್ರೀಮತ್ತ್ರ್ಯಷ್ಟ್ರನೃಪಾಲಸತ್ತ್ವಸಕಲಾಶೋಲಂಸುಧೀವರ್ಧನ । ಸ್ತ್ರೋಮಾಖ್ಯಮ್ಮದನೀ ನಾಶಕವಿತಸಾದ್ಭಾಗ್ಯಾಲಸಾಖಿಂವಂ ।
ಸೀಮಾತೀತಯಶಃಪ್ರಭಾಷವಿಪುಲಂ ಸದ್ವೃತ್ತಮಾಲಾಕುಲಂ । ಸ್ತೋಮಂಪೆತ್ತಿಶೀಯಾ ಸಮಾಪ್ರೊರಿಗೆ [illegible] ॥

ಪುಟ ೨೮] ಮೈಸೂರ್ ಸ್ಟಾರ್ ಸೆ' ೧೯೧೦ ನೇ ಇಸವಿ ಮಾರ್ಚಿ ತಾರೀಖು ೭ ನೇ ಸೋಮವಾರ [ಸಂಚಿಕೆ ೨೮

ಮೈಸೂರು ಸ್ಟಾರ್ ಚಂದಾನಿರ್ಣಯ

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ [illegible] ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ [illegible] ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚ [illegible] ಕಳಗೆ ಕಂಡಂತೆ ಕೊಡಬೇಕಾಗುವುದು

ಅಂಚೆಯ ವೆಚ್ಚ

೧ ಪ್ರತಿಗೆ ೧ ವರ್ಷಕ್ಕೆ ೦—೧೮—೦

೨ ರಿಂದ ೮ ವರೆಗೆ ೧—೧೦—೦

[illegible]ರಂತೆ ಮೇಲೆಪಟ್ಟಿನಾಲ್ಕುಪತ್ರಿಕೆಗೂ ೧—೧೦—೧ ಯಂತೆ

ಪ್ರಕಟಣೆಯ ದರ.

ಕಾಲಂ ಕಾಲವಿಗ್ಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೨ ಆಣೆ; ಎರಡನೇ ಆವೃತ್ತಿ ಮುಂದೆ ಪಟ್ಟಿ ೧ ಕ್ಕೆ ೧ ಆಣೆ. ಕಾಲುಕಾಲಮಿಗ್ಗಿಂತಲೂ [illegible] ಪ್ರಕಟನೆಗಳನ್ನು ೮ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ [illegible]ಗುಣವಾಗಿ ದರವು ಬೀಳುವುದು.

ಸುಲಭಕ್ರಯ! ಪಾತೆರಿಮಾಲ್ !! ಬಿಡಬೇಡಿರಿ!!!

ಭರತಖಂಡದ ಅನೇಕ ಮಹಾರಾಜರುಗಳಿಂದ

ಬಹುಮಾನವನ್ನು ಪಡೆದ ಊದುಬತ್ತಿಗಳು.

	ರೂ.		ರೂ.
ಅಂಬರ್‌ಬತ್ತಿ ಸೇ ೧ಕ್ಕೆ	೩	ಕಸ್ತೂರಿ ಬಿಲ್ಲೆ ತೊ ೧ಕ್ಕೆ	೨
ಅಂಬರ್‌ಬತ್ತಿ ಸೇ ೧ಕ್ಕೆ	೪	ಜವಾಜಿ ಬಿಲ್ಲೆ ತೊ ೧ಕ್ಕೆ	೧
ಕಸ್ತೂರಿ ಬತ್ತಿ ಸೇ ೧ಕ್ಕೆ	೨	ಅರಗಜಾ ತೊ ದಬ್ಬಿ ೧ಕ್ಕೆ	।
ನಾಗ ಬತ್ತಿ ಸೇ ೧ಕ್ಕೆ	೧	ಕಸ್ತೂರಿ ಮಾತ್ರೆ ಸಿ ೧ಕ್ಕೆ	।
ಗುಲಾಬ್ ಬತ್ತಿ ಸೇ ೧ಕ್ಕೆ	॥	ಸುರಂಗ ಸೆಂಟ್ ಸಿ ೧ಕ್ಕೆ	೧
[illegible] ಸೇ ೧ಕ್ಕೆ	೧	ಸ್ವದೇಶಿ ಫೌ[illegible] ೧ಕ್ಕೆ	।
[illegible] ತೊ ೧ಕ್ಕೆ	೧	ಪಚ್ಚಕರ್ಪೂರ ತೊ ೧ಕ್ಕೆ	॥।

ಇವುಗಳಲ್ಲದೆ ಇನ್ನೂ ಅನೇಕವಿಧವಾದ ಅತ್ತರುಗಳೂ, ಊದುಬತ್ತಿಗಳೂ, ತಲೆಗೆಹಚ್ಚುವ ಎಣ್ಣೆಗಳೂ ದೊರೆಯುವುವು. ವ್ಯಾಪಾರಸ್ಥರಿಗೆ ಅನುಕೂಲವಾದ ಕಮೀಷನ್ ದೊರೆಯುತ್ತೆ. ಇಷ್ಟು ಸುಲಭಕ್ರಯಕ್ಕೆ ಇನ್ನೆಲ್ಲೂ ದೊರೆಯದು.

ಎಂ. ಆರ್. ಸುಬ್ಬಾಚೆಟ್ಟಪ್ಪ,
ಕೃಷ್ಣರಾಜಮೊಹಲ್ಲಾ, ಮೈಸೂರು.

೩೦ ಕಥೆಗಳು. ಸಚಿತ್ರ. ೩೧೦ ಪುಟಗಳು.

ಶುಕಸಪ್ತತಿ ಕಥೆಗಳು.

(೧) ಧರ್ಮ, ಕರ್ಮ, ಸತ್ಯ, ಅಹಿಂಸೆ, ಮನಸ್ಥೈರ್ಯ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರ ಜ್ಞಾನವನ್ನು ಬೋಧಿಸುತ್ತದೆ (೨) ಜ್ಞಾನ, ಧ್ಯಾನ, ಮೋಕ್ಷ ಮುಂತಾದ ವೇದಾಂತ ರಹಸ್ಯಗಳನ್ನು ತೋರಿಸುವುದು (೩) ಸ್ತ್ರೀ ಜಾತಿವೃತ್ತಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ನೀತಿನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕ ಬಾಲಿಕೆಯರೂ ಅವಶ್ಯವಾಗಿ ಓದಬೇಕಾದ ಗ್ರಂಥ. (೪) ಸಕಲಮಹರ್ಷಿಗಳು ವೇದಶಾಸ್ತ್ರ ಸಮ್ಮತವಾಗಿ ಬೋಧಿಸಿದ ಸಕಲಶಾಸ್ತ್ರಗಳ ವಿಷಯವನ್ನು ಸಂಗ್ರಹವಾಗಿ ಉಳ್ಳದ್ದು. (೫) ಮೃದುಮಧುರ ವಾಕ್ಯ [illegible] ಸ್ವರಭಾಲಂಕೃತ ವಾಗಿರುವದು. (೬) ಚಿತ್ರಗ[illegible] ಕಥೆಗೆ ತಕ್ಕ ಚಿತ್ರಪಟಗಳಿಂದ ಕೂಡಿ[illegible] ಸಚಿತ್ರ. (೭) [illegible] [illegible]

ತ್ತದೆ (೪) ಅಕ್ಕಿಯ ಕೆಪ್ಪಿ[illegible] ಭಾವನಕ್ಷೆ ಬಹಳ ಇಷ್ಟವಾಗಿರುತ್ತದೆ. ಕ್ರಯ ಪ್ರತಿ ೧ ಕ್ಕೆ ರೂ ೧—೦ ಅಂಚೆ ಹಾಸಲು ಬೇರೆ.

ಪುಸ್ತಕಗಳು, ಊದುಬತ್ತಿ, ಗಂಧದಎಣ್ಣೆ ಮುಂತಾದ ಸುಗಂಧದ್ರವ್ಯಗಳು; ಪ್ಲೇಗು, ಕಾಲರಾ ಮುಂತಾದ ಜಾಡ್ಯ ವ್ಯಾಧಿಗಳಿಗೆ ಮುಖ್ಯ ಔಷಧಗಳು; ಭಗವನ್ ಚಿತ್ರಪಟಗಳು; ಮೊದಲಾದ ಸಾಮಾನುಗಳು ನಮ್ಮಲ್ಲಿ ದೊರೆಯುತ್ತವೆ.

ಕ್ಯಾಟಲಾಗು (ಪಟ್ಟಿ) ಬರೆದರೆ ಉಚಿತವಾಗಿ ಕಳುಹಿಸುತ್ತೇವೆ.

ವಿಳಾಸ—ವಿಜಯಕೇಸರಿ ಕಂಪನಿ,
ಗಂಗಕೊಂಡ ಸಿಟಿ

ಪಂಡಿತ ಎಲ್. ಗಣಪತಿ ಐಯರ

ಓರಿಯೆಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
47 ಮೈಸೂರು

ಸರ್ವರೋಗ ಮಾತ್ರೆ—೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ [illegible]

ಜ್ವರದಮಾತ್ರೆ—ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ನಿಶ್ಚಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦—೬—೦, ೨೫ ಮಾತ್ರೆ ಸೀಸೆ ೦—೧೨—೦.

ಆರೋಗ್ಯಪ್ರಭಾಕರ—ಈ ಔಷಧವನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲೆಗೊಳ್ಳುವುದು. ಇದು ಅನ್ಯ[illegible] ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ—ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಬಳ್ಳ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸಾಮಾನ್ಯ ೫೦ ಸಲಕ್ಕೆ ಆಗುವ ಔಷಧ ದಬ್ಬಿ ೦—೩—೦ ದೊಡ್ಡ ೧ ಕ್ಕೆ ೦—೧೨—೦.

ಪಚ್ಚಕರ್ಪೂರದಮಾತ್ರೆ—ಇದರಿಂದ ಗರ್ಭವೇದನೆಯು ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ ೧೦ ಮಾತ್ರೆ ಸೀಸೆ ೦—೬—೦

ಅರ್ಶೋರೋಗಹರ ರಸಾಯನ—ಮೂಲವ್ಯಾಧಿ ಹೋಗಲಾಡಿಸುವ ಸಂಜೀವಿನಿ. ವೇರಿನ ದಬ್ಬಿ ೧—೧೨—೦

ಶ್ರೀಖಂಡಲೇಹ್ಯ—ವೀರ್ಯವೃದ್ಧಿಗಳಿಗೆ ಬಹು ವಿಶ್ವಾಸಾರ್ಹವಾದ ಔಷಧಿ. ಸೇರಿನ ದಬ್ಬಿ ೪—೦—೦. ೧೦ ದಿನಗಳ ಔಷಧಿ ೨—೦—೦

ಸಾರಿಬೂದಿ ಮಾತ್ರೆ—೧೦ ಮಾತ್ರೆಗಳನ್ನು ಸೇವಿಸುವುದರಿಂದ ೨—೩ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೫ ಮಾತ್ರೆ ಸೀಸೆ ೦—೬—೦.

ಮಲಶೋಧನ ವಟಿಕಾ—ರಾತ್ರಿ, ಮಲಗುವಾಗ ೧ ಕೊಟ್ಟರೆ ಬೆಳಗ್ಗೆ ಶಿಕ್ಷೆಯಿಲ್ಲದೆ [illegible] ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೪—೦

ಕಸ್ತೂರಿಮಾತ್ರೆ—ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦೦ ಮಾತ್ರೆ ಸೀಸೆ ೦—೮—೦.

ಪುರುಷ ಸಂಜೀವಿನಿ—೩೦ ಮಾತ್ರೆ ಸೀಸೆ ೨—೦—೦

ಕಾಲರಾ ಮಾತ್ರೆ—೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ—೩೦ ಮಾತ್ರೆ ಸೀಸೆ ೦—೪—೦

ಅಜೀರ್ಣಾರಿಮಾತ್ರೆ—೪೦ ಮಾತ್ರೆ ಸೀಸೆ ೦—೪—೦

ದಂತಶುದ್ಧಿ ಚೂರ್ಣ—ದಬ್ಬಿ ೧ಕ್ಕೆ ೦—೨—೦

ನಮ್ಮಲ್ಲಿ ಈ ಮೇಲ್ಕಂಡ ಔಷಧಗಳೇ ಅಲ್ಲದೆ ಎಲ್ಲಾ ರೋಗಗಳಿಗೂ ಆಯುರ್ವೇದ ಮತ್ತು ಇಂಗ್ಲೀಷು ಔಷಧಗಳು ಸುಲಭಕ್ರಯಕ್ಕೆ ದೊರಕುವುವು. [illegible]

ಇತ್ಯಾದಿಪಟ್ಟಿಯನ್ನು ನೋಡಿರಿ

ಇಲ್ಲಿ ತೋರಿಸಿದೆ ವಿಶೇಷ ರೂಪಗಳು!

೦ ಕಾಶೀವಿಶ್ವೇಶ್ವರನ ಪಟ.

KASHI VISHWESHWAR S.N.J. & CO BENARES CITY.

ಅಗ್ಗವಾದ ಸಾಮಾನುಗಳು—ದೇಶಾಭಿಮಾನಿಗಳೇ ಗಮನಿಸಿರಿ!

[illegible] ಪ್ರಸಿದ್ಧರೆಂದರೂ [illegible] ಕಾಶೀಪಟ್ಟಣ

[illegible] ಇರುವದು ಬಹಳ [illegible] ಅದಕ್ಕೆ [illegible]!

[illegible] ಬಿಡಬೇಡಿರಿ!!

[illegible]

ನಮ್ಮ ವಿಳಾಸ—

[illegible]

ಸ್ತ್ರೀ ಸಾಂ ದ್ರಿಕಾ ಷ ಟಿ ಕ ಯು

(ಹಿಂದಿನ ವಾರದ ಶೇಷ.)

ಪದ್ಮಿನೀ ಜಾತಿ: ಈ ಜಾತಿಯ ಸ್ತ್ರೀಯರ ಚಾತುರ್ವರ್ಣ್ಯ ಲಕ್ಷಣವು ಸಹಜವಾಗಿರುವುದು, ಜನರು ಹೇಳುವರು. ಬ್ರಾಹ್ಮಣಜಾತಿಸ್ತ್ರೀ ಅಕ್ಷರಜ್ಞಾನವೆಂತಲೆ ಒಳ್ಳೇ ಸ್ವಭಾವವು, ಶುದ್ಧ ವ್ಯಾಪಾರವು, ಶಾಂತಿಯಿಂದೊಡಗೂಡಿ, ಲಕ್ಷಣಗಳಾಗಿ ಒಳ್ಳೇ ಮನಸ್ಸು ಸ್ವಯಂಯುಕ್ತಗಳಾಗಿ, ಜೇನುಗಂಧವುಳ್ಳ ಗಿಡಯೋಗ್ಯವಾದ ಬಲವು, ವ್ಯಾಪಾರಗಳು, ಶುಭ್ರವರ್ಣವು, ಕೆಂಪುವರ್ಣವು, ಹೊಳೆಯುತ್ತಿರುವ ಪಿಂಗಳವರ್ಣವು ಸಹ ಉಳ್ಳವಳಾಗಿ, ಸ್ನಾನಮೊದಲಾದವುಗಳಲ್ಲಿ ಆಸಕ್ತಿ, ಮನಸ್ಸು ಅರಳುವ ಇವುಗಳೊಡನೆ ಸಮಾನವಾದ ವಾಸನೆಯುಳ್ಳವಳಾಗಿ, ಪುಷ್ಪಮಾಲಿಕೆಗಳಲ್ಲಿಯೂ, ಸುಗಂಧದಲ್ಲಿಯೂ, ಆಸ್ಥಾನದಲ್ಲಿಯೂ ಆಸಕ್ತಿಯುಳ್ಳ ಸ್ತ್ರೀಗಳು ಬ್ರಾಹ್ಮಣಜಾತಿಸ್ತ್ರೀಗಳು. ಬಹು ಪ್ರೀತಿಯು, ತೇಜಸ್ಸು, ಧೈರ್ಯವು ಸಹಿಸಲಾರದ, ಕೋಪವು, ಶೌರ್ಯವು, ಮಹಾಧೈರ್ಯವು, ಕ್ರೂರವಾದ ಸ್ವಭಾವವು, ಸ್ಥೂಲವಾದ ಶರೀರವು, ಯುದ್ಧಕ್ಕೆ ಯೋಗ್ಯವಾದ ಬಲವು, ವ್ಯಾಪಾರಗಳು, ಲಕ್ಷಣಗಳು ಕೂಡಿ ಉಗ್ರವಾಗಿ, ಕೆಂಪು ನೀಲ ಮೊದಲಾದ ಚಿತ್ರವರ್ಣದಿಂದೊಡಗೂಡಿ, ಸ್ನಾನಾದಿಗಳಲ್ಲಿ ಪುಷ್ಪಗಳೊಡನೆ ಸಮಾನವಾದ ಒಳ್ಳೇವಾಸನೆಯುಳ್ಳವಳಾಗಿ, ಮಲ್ಲಿಗೆ ಹೂವಿನಂತೆಯೂ ವೈಡೂರ್ಯದಂತೆಯೂ ನೇತ್ರಪ್ರಭೆಯುಳ್ಳವಳಾಗಿ, ವ್ಯಕ್ತವಾದ ಅಂಗಗಳಿಂದೊಡಗೂಡಿ ಕಷ್ಟವನ್ನು ಸಹಿಸುವ ಸ್ತ್ರೀಗಳು ಕ್ಷತ್ರಿಯಜಾತಿಸ್ತ್ರೀಗಳೆನಿಸುವರು. ಸ್ಥಿರವಾದ ಸ್ವಭಾವವು, ಎರಡು ಸಹಿಸಲಾರದವು, ನಾಲ್ಕು ಬಗೆಯ ಬಲಗಳಲ್ಲಿ ಶ್ರಮಪಡುತ್ತ, ಸಂತಾಪವನ್ನು ಹೊಂದದೆ, ಸೌಖ್ಯದಲ್ಲಿಯೂ ಧರ್ಮವನ್ನು ಬಿಡದೆ, ಮಧ್ಯಮವೇಗವುಳ್ಳವಳಾಗಿ, ಕ್ರೌಂಚಪಕ್ಷಿಯ ರಕ್ತದಂತೆ ಶುಭ್ರವರ್ಣದೊಡನೆ ಕೂಡಿರುವ ಕೆಂಪುವರ್ಣವುಳ್ಳವಳಾಗಿ, ತಳಿರುಗಳಿಂ ತಿರುವ ಕಾಂತಿಯಿಂದೊಡಗೂಡಿ, ಬಲವಾದದ್ದರಲ್ಲಿ ಅತ್ಯಾಸಕ್ತಿಯು ಸ್ನಾನಾದಿಗಳಲ್ಲಿ ಆಸಕ್ತಿಗಳು, ಇವುಗಳೊಡನೆ ಸಮಾನವಾದವಾಸನೆ ಉಳ್ಳವಳಾಗಿ, ರಾಜ್ಯಪರರಿಗೆ ಯೋಗ್ಯವಾದ ವಾಸನೆಯುಳ್ಳವಳಾಗಿ, ಜಿತೇಂದ್ರಿಯರಾಗಿರುವ ಸ್ತ್ರೀಗಳು ವೈಶ್ಯಜಾತಿಸ್ತ್ರೀಗಳು. ಅಸಂಬದ್ಧ ವ್ಯಾಪಾರವು, ದುರ್ಲಕ್ಷಣಗಳು, ದುರ್ಗುಣಗಳು, ಇತರ ಜಾತಿಸ್ತ್ರೀಗಳಿಂದ ಚೆನ್ನಾಗಿ ಮಿಶ್ರವಾದರೆ ಹುಲ್ಲು ನೀರುಗಳಲ್ಲಿ ಆಸಕ್ತಿಯುಳ್ಳವಳಾಗಿ, ಲಕ್ಷ್ಮೀಸುವರ್ಣವನ್ನು ಪಡೆದು ಬಿಡುತ್ತ, ಮಾಡಿಯೂ ಬಿಡದಿರುವ ಮರದಂತೆ ಧ್ವನಿಯುಳ್ಳವಳಾಗಿ, ಸ್ನಾನಾದಿಗಳಲ್ಲಿ ಆಸಕ್ತಿ ಗೂಡಿರುವ ವಾಸನೆಯುಳ್ಳವಳಾಗಿ, ಪಿಶಾಚಗಳಿಗೆ ಯೋಗ್ಯವಾದ ಬಲವುಳ್ಳ ಅಧಮಸ್ತ್ರೀಗಳು ಶೂದ್ರಜಾತಿಸ್ತ್ರೀಗಳು. ಈ ರೀತಿಯಾಗಿ ಅಶ್ವಜಾತಿ ಲಕ್ಷಣಗಳಿಂ ತಿಳಿದ ಪ್ರಕಾರ ಸ್ತ್ರೀಯರ ಲಕ್ಷಣಗಳಲ್ಲಿ ಜಾತಿಗಳಿಂ ಪ್ರತಿಬಿಂಬಿಸಿ, ಪ್ರತ್ಯೇಕವಾಗಿ ಆಯಾಯ ಜಾತಿಗಳ ಸ್ತ್ರೀಗಳು ಕಟ್ಟಬೇಕು. ಎಲೈ ರಾಜನೆ! ಇನ್ನುಮೇಲೆ ಸ್ತ್ರೀಗಳ ಪ್ರಕೃತಿಯ ಲಕ್ಷಣವನ್ನು ಹೇಳುವೆನು. ಸೃಷ್ಟಿಕರ್ತನ ತಂತ್ರದಲ್ಲಿ, ಪಂಚಭೂತಾದಿಗಳಲ್ಲಿಯೂ ಸಾತ್ವಿಕವಾದ, ರಾಜಸವಾದ, ತಾಮಸವಾದ ತರಗ ಮೊದಲಾದ ಆಹಾರದಿಂದ ಉದರದಲ್ಲಿರುವ ವಾತಪಿತ್ತಶ್ಲೇಷ್ಮಗಳು ಆಧಿಕವಾದ ವಾತದ ಪ್ರಕೃತಿಯಿಂದೊಡಗೂಡಿರುವುದು. ಈ ರೀತಿಯಿಂ ಪ್ರಕೃತಿ ಪ್ರಕೃತಿಗಳು ವಾತಪ್ರಕೃತಿಯೆನಿಸಿಕೊಳ್ಳುವುವು. ಈ ಸ್ತ್ರೀಯರಿಗೆ ಕಠಿಣವಾದ ದೇಹವು, ದುರಾಸೆಯಾದ ಬಲವು, ವಿಕಾರವು, ಚಾಂಚಲ್ಯವು, ಅಸ್ಥಿರವು, ಅನುಚಿತಗಳಾಗಿ ಸರ್ವಕಾಲದಲ್ಲಿಯೂ ಜಾಗರೂಕತೆ, ನಿದ್ರೆಯಿಲ್ಲದಿರುವಿಕೆ ಇರುವುವು. ಪಿತ್ತಪ್ರಕೃತಿಯವರು ಹೇಗೆಂದರೆ, ಪಾರ್ಶ್ವಗಳಿಂದ ಕೂಡಿರುವುದಲ್ಲದೆ, ಪಿತ್ತದಿಂದ ಕೂಡಿದ ರಕ್ತದ ಬಣ್ಣದ ಹಾಗೆ ಇರುವ ಕಣ್ಣುಗಳು ಅತ್ಯಂತ ತೀಕ್ಷ್ಣವಾಗಿಯೂ, ಅತ್ಯಂತ ಸ್ವಲ್ಪವಾದ ಕೂದಲುಳ್ಳವರಾಗಿಯೂ, ಸ್ತ್ರೀಗಳ ಪಿತ್ತಪ್ರಕೃತಿಯವರ ಕೆಂಪಾದ ದೇಹಗಳಲ್ಲಿ ಜನಿಸಿದ ಕಾಂತಿಗಳು ಪಿತ್ತಪ್ರಕೃತಿಗಳೆಂದು ಹೇಳಲ್ಪಡುವುವು. ಈ ಸ್ತ್ರೀಯರಿಗೆ ತೀಕ್ಷ್ಣವಾದ ಸ್ವಭಾವವು, ಕೋಪವು, ಬಲದಲ್ಲಿ ಅತ್ಯಂತ ಪ್ರೀತಿಯು, ಕೆಂಪಾದ ಉಗುರುಗಳು, ಕೆಂಪುವರ್ಣವು, ಒಳ್ಳೇ ಬುದ್ಧಿಯುಳ್ಳವರಾಗಿ, ಅಧಿಕವಾಗಿ ಹುಳ್ಳಗಿನ ಪದಾರ್ಥಗಳಲ್ಲಿ ಆಸಕ್ತಿ, ಅತ್ಯಂತ ಶೀತದ ಹೆದರಿಕೆ ಇರುವುವು. ಶ್ಲೇಷ್ಮಪ್ರಕೃತಿಯವರು ಹೇಗೆಂದರೆ, ಇಂದ್ರನೀಲಮಣಿಯಂತೆ ಬಲವಾದ ಹೊಳಪಿನಿಂದೊಡಗೂಡಿ, ಸರ್ವಾಂಗಗಳೂ ಗಿರುವುವು. ಈ ಸ್ತ್ರೀಯರಿಗೆ ಬಲವಾದ ಸ್ವಭಾವವು, ದೃಢವಾದ ಶರೀರವುಳ್ಳವರಾಗಿ, ಧೈರ್ಯಶಾಲಿಗಳಾಗಿ, ಬಿಳಿದಾದ ಬಲವು, ಸ್ಥಿರವಾದ ಬುದ್ಧಿಯುಳ್ಳವರಾಗಿ, ಸ್ನೇಹಿಗಳಾಗಿ, ಮನೋಹರವಾದ ಗಂಭೀರವಾದ ಧ್ವನಿಯಿಂದೊಡಗೂಡಿ ರುವುವು. ಸ್ತ್ರೀಗಳ ಲಕ್ಷಣಗಳನ್ನು ತಿಳಿದುದರಿಂದ ಲಕ್ಷಣಸ್ತ್ರೀಯರು, ಶರೀರವು, ಕೋಮಲವಾದ ಅಂಗಗಳು, ಮಹಾಗುಣಗಳು, ಪುರುಷರ ಮನಸ್ಸಿಗೆ ವಾತಸ್ವಭಾವಗಳು, ಸ್ವರವು, ಈ ೩ ಬಗೆಯ ೧೮ ಪ್ರಕಾರವಾಗಿ ಹೇಳಿ ಅಂಗಗಳನ್ನು ವಿಭಾಗಿಸಿ ಇವುಗಳ ಶರೀರದಲ್ಲಿ ಸ್ಥಾನ ... (ಮುಂದಿನ)

ವಾದಳವಾಗಿಯೂ ಶರೀರ ಲಕ್ಷಣವು ಹೇಳಲ್ಪಡುವುದು. ಅದೆಂತೆನೆ– ತುಟಿಗಳು ಎಲ್ಲಾ ಕಡೆಯಲ್ಲಿಯೂ ಅತ್ಯಂತ ಕೆಂಪಾಗಿದ್ದರೂ, ಚರ್ಮಗಳು ಶ್ರೇಷ್ಠಗಳಾಗಿ, ಮೃದುಗಳಾಗಿ ಸುಶಬ್ದಗಳಿಲ್ಲದೇ ಇದ್ದರೂ, ನಾಲಿಗೆಯು ಕೆಂಪಾಗಿ ಸೂಕ್ಷ್ಮವಾಗಿ ಕೃಶವಾಗಿದ್ದರೂ, ದವಡೆಗಳು ರಕ್ತವರ್ಣವಾಗಿ ಬಹಳ ಉದ್ದವಾಗಿ ವಿಸ್ತಾರವಾಗದಿದ್ದರೂ, ದಂತಗಳು ಸಮವಾಗಿ, ನುಣುಪಾಗಿ, ಮಿಂಚುತ, ಗಟ್ಟಿಯಾಗಿ ದೊಡ್ಡದಾಗಿದ್ದರೂ, ಕಣ್ಣುಹೊಳೆಯುತ್ತ, ಮೃದುವಾದ ರೆಪ್ಪೆಗಳಿಂ ಕೂಡಿ ವಿಸ್ತಾರವಾಗಿ, ಜೇನುತುಪ್ಪದಂತೆ ಪಿಂಗಳವರ್ಣವಾಗಿ ಪ್ರಸನ್ನವಾಗಿ, ಶಿಪಿಂಜಲವೆಂಬ ಪಕ್ಷಿಯ ಕಣ್ಣುಗಳಂತೆಯೂ, ಹುಲ್ಲೆಗಳ ಕಣ್ಣುಗಳಂತೆಯೂ, ಟಿಟ್ಟಿಭಪಕ್ಷಿಗಳ ಕಣ್ಣುಗಳಂತೆಯೂ ಇರುವುದಾದರೂ, ಲಲಾಟವು ಒಳ್ಳೇ ಸುಳಿಯು ಹೊಂದಾಗಿ ವಿಶಾಲವಾಗಿದ್ದರೂ, (ಸಶೇಷ.)

ಮೈಸೂರು ಸಂಸ್ಥಾನದ ಆಯಾ ವಿದ್ಯಾಭ್ಯಾಸದ ಸ್ಥಿತಿ

(ಕಳೆದವಾರದ ಶೇಷ.)

ವ್ಯವಸಾಯದ ಪಾಠಶಾಲೆ

ನಮ್ಮ ಸಂಸ್ಥಾನದಲ್ಲಿ ವ್ಯವಸಾಯದ ಪಾಠಶಾಲೆಯು ಬೇರೆ ಇಲ್ಲದಿದ್ದರೂ ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯ ವಿಷಯವನ್ನು ಒಳಗೆ ಚೆನ್ನಾಗಿ ಹೇಳಿಕೊಡುವರು. ಮೈಸೂರು ಲೋವರ್ ಸೆಕೆಂಡರಿಗೆ ಹೋಗುವ ವಿದ್ಯಾರ್ಥಿಗಳು ವ್ಯವಸಾಯವನ್ನು ಐಚ್ಛಿಕಭಾಷೆಯನ್ನಾಗಿ ತೆಗೆದುಕೊಳ್ಳಬಹುದು. ಹೆಬ್ಬಾಳದ ಪಾಠಶಾಲೆಗೆ ಸಂಬಂಧಿಸಿದ ತೋಟದ (ಪ್ರೈವೇಟ್)ಲ್ಲಿ ನಮ್ಮ ದೇಶದ ತರಕಾರಿ, ಭತ್ತ, ರಾಗಿ ಮೊದಲಾದುವು ಬೆಳೆಯುವದನ್ನು ಹೇಳಿಕೊಡುವರು. ಈ ವ್ಯವಸಾಯದ ವಿಷಯವು ಅಭಿವೃದ್ಧಿಗೆ ಬರಲು ಒಕ್ಕಲಿಗರ ಸಂಘವು ಪ್ರಯತ್ನಿಸುತ್ತಿರುವುದು. ಇದರ ಫಲವು ನಿರೀಕ್ಷಣೀಯವಾದುದಾಗಿರುವುದು.

ಕೈಗಾರಿಕೆಯನ್ನು ಚಿಕ್ಕ ಬಾಲಕರಬುದ್ಧಿಯು ಮತ್ತಿನ್ನು ಸೂಕ್ಷ್ಮವಾಗಲೂ, ಈಗ "ಸ್ಲೋಯ್ಡ್" ಎಂಬ ಒಂದು ವಿಧವಾದ ಕ್ರಮವನ್ನು ಪ್ರಾರಂಭಿಸಿರುವರು. ಪ್ರತಿ ಹೈಸ್ಕೂಲ್ ವಿದ್ಯಾರ್ಥಿಯೂ ವಾರಕ್ಕೊಮ್ಮೆ ೩ ಗಂಟೆಕಾಲ ಈ ಕೆಲಸವನ್ನು ಮಾಡಬೇಕು. ಇದನ್ನು ಉಪಾಧ್ಯಾಯರಿಗೆ ಕಲಿಸಲು ಬೆಂಗಳೂರು, ಚನ್ನಪಟ್ಟಣ ಮೊದಲಾದ ಸ್ಥಳಗಳಲ್ಲಿ ಪಾಠಶಾಲೆಗಳು ಏರ್ಪಟ್ಟಿವೆ.

ಇಂಜನೀರು ಪಾಠಶಾಲೆ

ಈ ಪಾಠಶಾಲೆಯು ಮೈಸೂರಿನಲ್ಲಿ ಸ್ಥಾಪಿತವಾಗಿದೆ. ಈ ಪಾಠಶಾಲೆಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾದವರನ್ನೂ ಉತ್ತೀರ್ಣರಾಗದವರನ್ನೂ ತೆಗೆದುಕೊಳ್ಳುತ್ತಾರೆ. ಎರಡುವರ್ಷ ಕಾಲದಲ್ಲಿಯೇ ವಿದ್ಯಾರ್ಥಿಗಳನ್ನು ತರಬೇತು ಮಾಡುತ್ತಾರೆ. ಬುದ್ಧಿವಂತರಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವು ಕೊಡಲ್ಪಡುತ್ತದೆ. ಕಟ್ಟಡ, ಸೇತುವೆ ಮುಂತಾದುವುಗಳ ಕಟ್ಟುವಿಕೆಯನ್ನು ಕಲಿಸುತ್ತಾರೆ. ಶ್ರೀರಂಗಪಟ್ಟಣ, ಮಾರಿಕಣಿವೆ, ಮೊದಲಾದ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡುಹೋಗಿ, ಅಲ್ಲಿನ ಕೆಲಸಗಳನ್ನು ತೋರಿಸಿ, ಅದರಂತೆ ಕಟ್ಟಲು ಹೇಳಿಕೊಟ್ಟು ಅವರ ಬುದ್ಧಿಶಕ್ತಿಯನ್ನು ಬೆಳೆಸುವುದಲ್ಲದೆ ಕೆಲಸಗಾರರನ್ನಾಗಿಯೂ ಮಾಡುವರು.

ವ್ಯಾಪಾರಕ್ಕೆ ಸಹಾಯಕವಾದ ವಿದ್ಯೆಯನ್ನು ಬೋಧಿಸುವ

ಪಾಠಶಾಲೆಗಳು

ಈ ವಿಧವಾದ ಪಾಠಶಾಲೆಗಳು ಮೈಸೂರಿನಲ್ಲಿ ಎರಡು ಇರುವುವು. ಬೆಂಗಳೂರಿನಲ್ಲಿ ಅನೇಕವಾಗಿವೆ. ಮೈಸೂರಿನಲ್ಲಿ ಸಿಟಿಜನ್ ಕಾಮರ್ಷಿಯಲ್ ಇನ್ಸ್ಟಿಟ್ಯೂಟ್ ಎಂಬ ಒಂದು ಪಾಠಶಾಲೆಯುಂಟು. ಮಹಾರಾಜಾಸ್ ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಮಿಸ್ಟರ್ ನವರ ಸಹಾಯದಿಂದ ಒಂದು ಪಾಠಶಾಲೆಯೂ ಇರುವುವು. ಈ ಪಾಠಶಾಲೆಗಳಲ್ಲಿ ವ್ಯಾಪಾರಕ್ಕೆ ಅನುಕೂಲವಾದ ಟೈಪ್ ರೈಟಿಂಗ್, ಷಾರ್ಟ್‌ಹ್ಯಾಂಡ್, ಲೆಕ್ಕ ಬರೆಯುವುದು ಮೊದಲಾದುವನ್ನು ಹೇಳಿಕೊಡುವರು.

ಸಂಗೀತ ಪಾಠಶಾಲೆ.

ಸ್ತ್ರೀಯರ ಪಾಠಶಾಲೆಗಳಲ್ಲಿ, ಅನಾಥಾಲಯದಲ್ಲಿ, ... ಹೇಳಿಕೊಡುವರು. ಕುರುಡರಿಗೆ ಓದುವುದನ್ನು ಬರೆಯುವುದನ್ನು ಹೇಳಿಕೊಡುವರು. ಅವರಿಗೆ ಸಂಗೀತ, ಪಿಟೀಲ್ ಬಾರಿಸುವುದು, ಮೃದಂಗ ಬಾರಿಸುವುದು ಮೊದಲಾದುವನ್ನು ಹೇಳಿಕೊಡುವರು. ಇವರನ್ನೂ ಕಲಿಯುವುದಲ್ಲದೆ ಕೈ ಕೆಲಸಗಳು, ಚಾಪೆ, ಬುಟ್ಟಿ ಹೆಣೆಯುವುದು ಮೊದಲಾದುವನ್ನು ಹೇಳಿಕೊಡುವರು. ಕುರುಡರು ಕಿವುಡರು ಯಾರ ಅಧೀನದಲ್ಲಿಯೂ ಇರದೆ ಸ್ವಾತಂತ್ರ್ಯವಾಗಿ ಜೀವನವನ್ನು ಸುಲಭವಾಗಿ ನಡೆಸಲು ಮಾರ್ಗವನ್ನು ತೋರಿಸಿಕೊಡುವರು. ಈ ಪಾಠಶಾಲೆಯನ್ನು ದಿಗಂಬರ ಬ್ರಾಹ್ಮಣರಾದವರು ನಡೆಸುವುದರಲ್ಲಿ ... ನಿಯಮಿಸಿ, ಸಂಸ್ಥಾನದವರು ಸಹಾಯ ಮಾಡಿ ... ಮೊದಲಾದವರ

ನೆಲಗಳಿಂದ ವಿದ್ಯಾಭ್ಯಾಸಕ್ಕೆ ೧೯೦೯–೧೦ ನೇ ವರ್ಷದಲ್ಲಿ ಸಂಸ್ಥಾನವು ವೇತನರೂಪವಾಗಿ ೩೪,೦೦೦ ರೂ ಗಳನ್ನು ವ್ಯಯ ಮಾಡಿತು. ಇದರಲ್ಲಿ ೧೯,೦೦೦ ರೂಪಾಯಿಯು, ಅವಿಷ್ಕಾರಕರು ಯೂರೋಪು ಮೊದಲಾದ ಪರದೇಶಗಳಲ್ಲಿ ಎಲೆಕ್ಟ್ರಿಕ್ ಇಂಜನೀರ್, ಮೊದಲಾದುವನ್ನು ಕಲಿಯುವವರಿಗೂ ಉಳಿದ ೧೫,೦೦೦ ರೂಪಾಯಿಗಳಲ್ಲಿ ಅರ್ಧಪಾಲು ಆಯಾ ಕಲೆಗಳನ್ನು ಕಲಿಯುವವರಿಗೂ, ಉಳಿದ ಪಾಲು ವೈದ್ಯರು ದೇಶದಲ್ಲಲ್ಲದೆ, ಬೊಂಬಾಯಿ, ಮದರಾಸು ಮೊದಲಾದ ಪ್ರಾಂತ್ಯಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಕೊಡಲ್ಪಟ್ಟಿತು. ೧೯೧೦–೧೧ ರಲ್ಲಿ ಇದಕ್ಕಿಂತ ಹೆಚ್ಚು ಹಣವನ್ನು ವ್ಯಯಮಾಡಿರುವರೆಂಬ ಸಂಬಂಧ ಇದೆ. ಮೈಸೂರು ಸಂಸ್ಥಾನವು ಪ್ರತಿ ವರ್ಷವೂ ಆಯಾ ವಿದ್ಯಾಭ್ಯಾಸಕ್ಕಾಗಿ ೩೪,೦೦೦ ರೂ. ಗಳನ್ನು ಖರ್ಚು ಮಾಡುವುದು. ಈ ವ್ಯಯವು ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಮಾಡುವ ವೆಚ್ಚದಲ್ಲಿ ಹದಿನಾರರಲ್ಲಿ ಒಂದುಭಾಗವಾಗಿದೆ. ನಾವು ದೂರವಾಗಿ ಆಲೋಚಿಸಿದರೆ ಪ್ರಜೆಗಳಿಂದಲೇ ಈ ವಿದ್ಯಾಭ್ಯಾಸವನ್ನು ಮತ್ತಿಷ್ಟು ಅಭಿವೃದ್ಧಿಗೆ ತರುವರೆಂಬ ನಂಬಿಗೆಯು ನಮಗೆ ಸಂಪೂರ್ಣವಾಗಿರುವುದು. ಸರ್ಕಾರದವರೂ ಈ ವಿಷಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿರುವರೆಂಬುದು ಈಚೆಗೆ ಪ್ರಾರಂಭವಾಗಿರುವ ಸಂಪತ್ತನ್ನು ಅಭಿವೃದ್ಧಿ ಮಾಡುವ ಸಭೆ (ಎಕನಾಮಿಕ್ ಕಾನ್ಫರೆನ್ಸ್) ಯಿಂದ ವ್ಯಕ್ತವಾಗುವುದು.

ವಸ್ತು ಪ್ರದರ್ಶನ

ವ್ಯವಸಾಯ ಕೈಗಾರಿಕೆಗಳ ವಸ್ತುಪ್ರದರ್ಶನವು ಪ್ರತಿವರುಷವೂ ನಡೆಯುತ್ತಲಿರುವುದು. ಈ ಪ್ರದರ್ಶನದಿಂದ ಸಂಸ್ಥಾನದಲ್ಲಿ ಕೈಗಾರಿಕೆಯು ವರ್ಷವರ್ಷವೂ ಎಷ್ಟುರಮಟ್ಟಿಗೆ ಅಭಿವೃದ್ಧಿಗೆ ಬರುತ್ತಲಿದೆ ಯೆಂಬುದು ತಿಳಿಯುವುದು. ಪ್ರದರ್ಶನದಲ್ಲಿ ಅನೇಕ ರೈತರು ಉತ್ತಮ ಬಿತ್ತ ತೀರಿಸಿ ಉತ್ತಮವಾದ ಬೆಳೆ ತೋರಿಸಿದವರಿಗೆ ಬಹುಮಾನ ಸಿಗುವುದು. ಮಣ್ಣು ಕೆಲಸದವರೂ ತಮ್ಮ ಕೈಕೆಲಸದ ಚಮತ್ಕೃತಿಯನ್ನು ತೋರ್ಪಡಿಸುವರು. ಬುದ್ಧಿವಂತನಾದವನಿಗೆ ಬಹುಮಾನ ಸಿಗುವುದು.

ಹನುಮಂತ.

ಅವಧಾನ

ಪ್ರತಿ ಮನುಷ್ಯನಲ್ಲಿಯೂ ಜನ್ಮಿಸಿದಾಗಲೇ ಹಲವು ಶಕ್ತಿಗಳು ಗೂಢವಾಗಿ ಬೀಜರೂಪದಿಂದಿರುವುವು. ಅವು ಅಭ್ಯಾಸ ಬಲದಿಂದ ಕ್ರಮಕ್ರಮವಾಗಿ ಬಳೆಯಬೇಕಾಗಿರುವುವು. ಇಂತಹ ಶಕ್ತಿಗಳಲ್ಲಿ ಅವಧಾನವೂ ಒಂದು ಶಕ್ತಿಯಾಗಿದೆ. ಈ ಶಕ್ತಿಯು ಮನುಷ್ಯರಲ್ಲಿ ಇಲ್ಲದಿದ್ದರೆ ಪ್ರಪಂಚದ ಜ್ಞಾನವೂ ತನ್ನ ಜ್ಞಾನವೂ ಸಹ ಸರಿಯಾಗಿ ತಿಳಿಯದೆ ತಾವು ಜನ್ಮಿಸಿರುವುದೇ ವ್ಯರ್ಥವಾದಂತಾಗುವುದು. ಆದಕಾರಣ ಅಷ್ಟು ಮುಖ್ಯವಾದ ಅವಧಾನದ ವಿಷಯದಲ್ಲಿ ಪ್ರತಿಯೊಬ್ಬನೂ ವಿಚಾರ ಮಾಡುವುದು ಅತ್ಯಾವಶ್ಯಕವೆನಿಸುವುದಲ್ಲವೆ?

ಅವಧಾನದ ವಿಷಯವನ್ನು ವಿಚಾರ ಮಾಡಬೇಕಾದರೆ ಅದರ ಸ್ವಭಾವವನ್ನೂ, ಅವಶ್ಯಕತೆಯನ್ನೂ, ಅದರಿಂದ ಆಗುವ ಲಾಭಾಲಾಭ ವಿಚಾರಗಳನ್ನೂ ನಾವು ವಿಮರ್ಶಿಸಿ ನೋಡಬೇಕು. "ಅವಧಾನವೆಂದರೇನು?" ಎಂಬುದನ್ನು ತಿಳಿದುಕೊಂಡರಲ್ಲದೆ ಅದರ ವಿಷಯವಾಗಿ ಮುಂದುವರಿವುದು ಚೆನ್ನಲ್ಲ.

ಅವಧಾನವೆಂದರೆ ಬುದ್ಧಿ ಶಕ್ತಿಯನ್ನೇ ಜೀವನಕ್ಕೆ ಬೇಕಾಗುವ ಇಂದ್ರಿಯಗಳನ್ನೆಲ್ಲಾ ಏಕಕಾಲದಲ್ಲಿ ಉದ್ದೇಶ ವಿಷಯದಲ್ಲಿಯೇ ನಿಲ್ಲಿಸುವುದಾಗಿದೆ. ಹೇಗೆಂದರೆ—ಯಾವುದಾದರೊಂದು ವಿಷಯದ ಜ್ಞಾನವು ನಮಗೆ ಆಗಬೇಕಾದರೆ ನಮಗೆ ಬುದ್ಧಿಯ ಸಹಾಯವೇ ಬೇಕಾಗಿದೆ. ಬುದ್ಧಿಯು ಸರಿಯಾಗಿದ್ದರೊರತು ನಮಗೇನೂ ತಿಳಿಯುವುದಿಲ್ಲ. ಮುಖ್ಯನಿಗೆ ಬುದ್ಧಿ ವಿಪರ್ಯಾಸ ಒದಗಿರುವುದರಿಂದಲೇ ಅವನಿಗೆ ಬುದ್ಧಿಶೂನ್ಯತೆಯೊದಗಿ ಸ್ವಭಾವಕ್ಕೆ ವಿಪರೀತವಾಗಿ ವರ್ತಿಸುತ್ತಿರುವನು. ಆ ಬುದ್ಧಿಶಕ್ತಿಯು ಉತ್ತೇಜಕವಾಗಬೇಕಾದರೆ ಉದ್ದೇಶಿಸಿದ ವಸ್ತುವನ್ನು ತಕ್ಕಂತೆ ಕಣ್ಣು, ಕಿವಿ, ಮೂಗು, ಬಾಯಿ, ಮನಸ್ಸು ಮುಂತಾದುವುಗಳಿಂದ ಪರೀಕ್ಷಿಸಲೇಬೇಕು. ಆದರೆ ಒಂದೇ ಒಂದು ಕಾಲದಲ್ಲಿ ಒಂದೊಂದು ಇಂದ್ರಿಯವನ್ನು ಉಪಯೋಗಿಸುವುದರಿಂದ ವಿಷಯಜ್ಞಾನವು ದೃಢವಾಗಲಾರದು. ಯಾವ ವಿಷಯಕ್ಕೆ ಎಷ್ಟು ಇಂದ್ರಿಯಗಳು ಅವಶ್ಯಕವೋ ಅಷ್ಟನ್ನು ಏಕಕಾಲದಲ್ಲಿ ಆ ವಸ್ತುವಿನಲ್ಲಿ ನಿಲ್ಲಿಸಬೇಕು. ಎಂದರೆ—ಪಾಠಶಾಲೆಯಲ್ಲಿ ಭೂಪಟವನ್ನು ಕಣ್ಣಿನಿಂದ ನೋಡಿದ ಕೆಲವು ಕಾಲದ ಮೇಲೆ ಅದಕ್ಕೆ ಸಂಬಂಧಿಸಿದ ವಿವರಣೆಯನ್ನು ಉಪಾಧ್ಯಾಯರು ಗಟ್ಟಿಯಾಗಿ ಓದಿದಷ್ಟರಲ್ಲಿ ಒಳ್ಳೆ ತಿಳಿವಳಿಕೆ ಯಾರಿಗೂ ಉಂಟಾಗದು. ಪ್ರಯೋಜನವಿರುವುದಿಲ್ಲ. ಆದುದರಿಂದಲೇ ಉದ್ದೇಶ ವಿಷಯದಲ್ಲಿ ... ಇಂದ್ರಿಯಗಳನ್ನು ಉಪಯೋಗಿಸಬೇಕು.

ಮಗುವು ಹುಟ್ಟಿದಾಗ ಕಣ್ಣುಬಿಡುವುದಕ್ಕೂ ಅದಕ್ಕೆ ಶಕ್ತಿಗೆ ಅದ್ಭುತವಾದ ಪ್ರಪಂಚವು ಕಾಣುವುದು. ಮನುಷ್ಯರು ಕಾಣುವರು, ಕ್ರಮಕ್ರಮವಾಗಿ ಬಗೆಬಗೆಯ ವಸ್ತುಗಳೂ ಧ್ವನಿಗಳೂ, ಬಂಧುಗಳೂ ಪರಿಚಯವಾಗಲೆಲ್ಲವೂ ಅದಕ್ಕೆ ತಕ್ಕ ವಿಷಯಗಳಾಗುವುವು. ಕೇವಲ ಆಯಾ ವಿಷಯಗಳನ್ನು ಆಯಾ ಇಂದ್ರಿಯಗಳಿಂದಲೇ ತಿಳಿದುಕೊಳ್ಳಬೇಕಾಗಿದೆ. ಧ್ವನಿಯನ್ನು ತಿಳಿದುಕೊಳ್ಳುವ ಶಕ್ತಿಯು ಕಿವಿಗೆ ಇರುವುದೇ ಹೊರತು ಬಾಯಿಗಿರುವುದಿಲ್ಲ. ನೋಡುವ ಶಕ್ತಿಯು ಕಣ್ಣಿಗಿರುವುದೇ ಹೊರತು ಮೂಗಿಗೆ ಇಲ್ಲ. ಆದುದರಿಂದ ಯಾವ ವಿಷಯಕ್ಕೆ ಯಾವ ಇಂದ್ರಿಯವು ಅವಶ್ಯಕವೋ ಅದನ್ನು ಆ ವಿಷಯದಲ್ಲಿಯೇ ಚೆನ್ನಾಗಿ ಉಪಯೋಗಿಸುವುದು ಸಹಜವಾಗಿದೆ. ಮಗುವಿಗೆ ಇಂತಹ ಶಕ್ತಿಗಳು ಬಾಲ್ಯದಿಂದಿರುವುದರಿಂದಲೇ ಕ್ರಮಕ್ರಮವಾಗಿ ಲೋಕದ ವಿಷಯವನ್ನೆಲ್ಲಾ ತಕ್ಕಂತೆ ತಿಳಿಯಲು ಸಾಮರ್ಥ್ಯವನ್ನು ಪಡೆಯುವುದು. ಇಂತಹ ಶಕ್ತಿಯು ಅಭ್ಯಾಸಗೊಳಿಸದಿದ್ದರೆ ಕ್ರಮಕ್ರಮವಾಗಿ ಕುಂಠಿತವಾಗಿ "ಆ ಶಕ್ತಿಯೇ ಇಲ್ಲವೋ?" ಎನ್ನುವಂತೆ ಆಗಿ ಬಿಡಬಹುದು. ಆದುದರಿಂದ ಅವಧಾನವನ್ನು ತಕ್ಕಂತೆ ಬೆಳೆಸಬೇಕಾದುದು ಅತ್ಯಾವಶ್ಯಕವಾಗಿರುವುದು.

ಅವಧಾನವು ಮನುಷ್ಯನಿಗೆ ಎಂತೆಂತಹ ಫಲವನ್ನು ತರಬಹುದೆಂಬುದನ್ನು ಸ್ವಲ್ಪ ವಿಚಾರಮಾಡಿದರೆ "ಉದ್ದೇಶಿಸಿದ ಕಾರ್ಯವು ಕೈಗೂಡುವುದಕ್ಕೆ ಅವಧಾನವು ಅವಶ್ಯಕವಾಗಿರುವುದು" ಎಂಬ ತತ್ವಾರ್ಥವು ದೊರೆಯುವುದು. ಹೇಗೆಂದರೆ:— ಒಂದು ಗ್ರಂಥವನ್ನು ಓದುವುದಕ್ಕೆ ಉದ್ದೇಶಿಸಿದ ಮಾತ್ರದಿಂದಲೇ ಆ ಗ್ರಂಥದ ಸಂಪೂರ್ಣಜ್ಞಾನವು ದೊರೆಯುವುದಿಲ್ಲ. ಅದನ್ನು ತೆರೆದು, ಕಣ್ಣಿನಿಂದ ಚೆನ್ನಾಗಿ ನೋಡಬೇಕು. ಮನಸ್ಸನ್ನು ಅದರಲ್ಲಿಯೇ ನಿಲ್ಲಿಸಬೇಕು. ಅವಶ್ಯಕವಾದರೆ ಬಾಯಿಂದಲೂ ಹೇಳಬೇಕು. ಹೀಗೆ ಏಕಕಾಲದಲ್ಲಿ ತಕ್ಕ ಇಂದ್ರಿಯಗಳನ್ನು ಉಪಯೋಗಿಸಿದರೆ, ಓದಿದ ವಿಷಯವು ದೃಢವಾಗಿ ಬೇಕಾದಾಗ ಜ್ಞಾಪಕಕ್ಕೆ ಬರುವುದು. ಇದರಲ್ಲಿ ಸಂದೇಹವಿಲ್ಲ. ಹೀಗೆ ಮಾಡಿದರೆ ಆ ಪುಸ್ತಕದಿಂದ ಉಂಟಾಗಬಹುದಾದ ಫಲವನ್ನೆಲ್ಲಾ ಅವರು ನಿಜವಾಗಿಯೇ ಪಡೆದಂತಾಗುವುದು. ಹಾಗಿಲ್ಲದೆ ಕೈಯಲ್ಲಿ ಪುಸ್ತಕವನ್ನು ತೆರೆದಿಟ್ಟುಕೊಂಡು ನೆರೆಮನೆಯಲ್ಲಿ ಯಾರಾದರೂ ಸಂಗೀತವನ್ನು ಹಾಡುತ್ತಿದ್ದರೆ ಅದನ್ನು ಕೇಳುತ್ತಾ, ಒಂದು ಗಂಧದ ಬಿಲ್ಲೆಯನ್ನು ಮೂಸಿನೋಡುತ್ತಾ, ಬಾಯಿಂದ ಏನಾದರೂ ತಿಂಡಿಯನ್ನು ತಿನ್ನುತ್ತಾ ೩-೪ ಗಂಟೆಗಳ ವರೆವಿಗೂ ಒಂದು ಪುಟವನ್ನೇ ನೋಡುತ್ತಿದ್ದರೂ, ಒಂದು ಪಂಕ್ತಿಯಾದರೂ ಅರ್ಥವಾಗದೆ ಇರುವುದು ಸಹಜವಲ್ಲವೆ? ಆದುದರಿಂದಲೇ ಯಾವ ಕೆಲಸಕ್ಕೆ ಯಾವ ಇಂದ್ರಿಯಗಳು ಅವಶ್ಯಕವೋ ಆ ಕೆಲಸಕ್ಕೆ ಆ ಇಂದ್ರಿಯಗಳನ್ನು ಉಪಯೋಗಿಸಬೇಕೇ ಹೊರತು ಇತರಕಡೆಗೆ ಮನವನ್ನು ಕೊಡಬಾರದು. ಅವಧಾನವಿಲ್ಲದೆ ನೂರಾರುಬಾರಿ ಓದುವುದಕ್ಕಿಂತಲೂ, ಅವಧಾನದಿಂದ ಒಂದೇಬಾರಿ ಓದಿದರೆ ಎಷ್ಟೋ ಪ್ರಯೋಜನವಾಗುವುದು. ಅವಧಾನವು ವಿದ್ಯಾಭ್ಯಾಸಕ್ಕೆ ಮಾತ್ರವೇ ಪ್ರಯೋಜನವೆಂದಲ್ಲ. ಎಲ್ಲರಿಗೂ, ಎಲ್ಲಾ ಕೆಲಸಗಳಿಗೂ ಅವಶ್ಯಕವೆ. ಒಬ್ಬ ನ್ಯಾಯಾಧಿಪತಿಯು ತನ್ನ ಮನೆಯ ಗೃಹಕೃತ್ಯದ ಆಲೋಚನೆಯನ್ನು ಮಾಡುತ್ತಾ ನ್ಯಾಯದ ತೀರ್ಪನ್ನು ಬರೆಯಲಾರಂಭಿಸಿದರೆ, ಅವನ ನ್ಯಾಯವು ಸಮಂಜಸವಾಗುವುದಿಲ್ಲ. ಗೃಹಿಣಿಯು ಅಡಿಗೆಯನ್ನು ಮಾಡುತ್ತಿರುವಾಗ ಅದರ ಮೇಲೆ ಗಮನವನ್ನಿಡದೆ, ಕೈತಪ್ಪಳೆಗಳಿಂದ ಸಂಗೀತವನ್ನು ಹಾಡುತ್ತಾ ಕುಳಿತರೂ, ಇಲ್ಲವೆ ರಂಗವಲ್ಲಿ ಮೊದಲಾದ ಚಿತ್ರಗಳನ್ನು ಬರೆಯುತ್ತಾ ಕುಳಿತರೂ, ಇಲ್ಲವೆ ನೆರೆಮನೆಯ ಗೃಹಿಣಿಯೊಡನೆ ಸಂಭಾಷಿಸುತ್ತಾ ಕುಳಿತರೂ ಆ ಅಡಿಗೆಯು ನೆಟ್ಟಗಾಗುವುದಿಲ್ಲ. ಆದುದರಿಂದ ಉದ್ದೇಶಿಸಿದ ಕೆಲಸದಲ್ಲಿಯೇ ಅವಧಾನವಿದ್ದರೆ ಆ ಕೆಲಸವು ಕೆಡುವುದಿಲ್ಲ.

ಅವಧಾನವು ಕಾಲವನ್ನು ಒದಗಿಸಿಕೊಡುವುದು.

ಪ್ರತಿಯೊಂದು ಕೆಲಸದಲ್ಲಿಯೂ ಅವಧಾನವನ್ನಿಡುವುದರಿಂದ ಆ ಕೆಲಸವು ಕೈಗೂಡಿ ಮುಂದಣ ಕೆಲಸಗಳಿಗೆ ಕಾಲವು ದೊರೆಯುವುದು. ಅರ್ಧಾರ್ಧ ಕಾರ್ಯಗಳಿಂದ ಮನಸ್ಸು ತೃಪ್ತಿಗೊಳ್ಳದೆ ಕಳವಳಗೊಂಡು "ಅಯ್ಯೋ! ಕಾಲವು ಕಳೆದುಹೋಯಿತಲ್ಲಾ! ಮುಂದೆ ಸಮಯವು ದೊರೆಯುವಂತಿಲ್ಲವಲ್ಲಾ!" ಎಂದು ಪಶ್ಚಾತ್ತಾಪಪಡುತ್ತ, ಯಾವ ಕೆಲಸದ ಫಲವೂ ಕೈಸೇರದೆಹೋಗುವುದು. ಅವಧಾನದಿಂದ ಕಾರ್ಯಗಳು ಬೇಗನೇ ಕೈಗೂಡುವುದರಿಂದ ಹೆಚ್ಚು ಹೆಚ್ಚು ಕೆಲಸಗಳನ್ನು ಮಾಡಲು ಮನಸ್ಸು ಉತ್ಸಾಹಗೊಂಡು ಸಮಯಾವಕಾಶವನ್ನು ಹೆಚ್ಚಾಗಿ ಒದಗಿಸಿ ಕೊಡುವುದು. ಕಳೆದ ಕಾಲದ ಒಂದು ನಿಮಿಷವನ್ನಾದರೂ ಹಿಂತಿರುಗಿಸಲು ಯಾರಿಗೂ ಶಕ್ತಿಯಿಲ್ಲದುದರಿಂದ ಅವಧಾನವಿಲ್ಲದ ಕೆಲಸಗಳಿಗೆ ಕೊಟ್ಟ ಕಾಲವೆಲ್ಲಾ ವ್ಯರ್ಥವಾಗಿ ಮನುಷ್ಯನನ್ನು ವ್ಯರ್ಥಗೊಳಿಸಿದಂತಾಗುವುದು. ಆದುದರಿಂದ ಅವಧಾನವಿರುವವನು [illegible]ಗುವುದರಲ್ಲಿ ಸಂಶಯವಿಲ್ಲ.

(ಸಶೇಷ)

ಗ್ರಾಮಾಭಿವೃದ್ಧಿ

ಶ್ರೀ ರಾಮಚಂದ್ರರಾಯರು ಮೊನ್ನೆ ದಿನ [illegible] ಮನೆಯ ಮುಂದಿದ್ದ [illegible] ಒಂದು ಕಲ್ಲುಬೆಂಚಿನ ಮೇಲೆ ಕುಳಿತುಕೊಂಡು ಯಾವುದೋ ಒಂದು ಗೃಹಕೃತ್ಯವನ್ನು ಆಲೋಚಿಸುತ್ತಿದ್ದರು. ಅಸ್ತಮಯಿಸುತ್ತಿದ್ದ ಸೂರ್ಯನ ಕಿರಣಗಳು ವೃಕ್ಷಗಳ ಮೇಲೂ ಪ್ರಾಸಾದಗಳ ಮೇಲೂ ಸ್ವರ್ಣಕಾಂತಿಯನ್ನು ಅಭಿಷೇಕಿಸುತ್ತಿದ್ದುವು. ಬೀಸುತ್ತಿದ್ದ ಮಂದಮಾರುತವು ಸುಗಂಧಯುಕ್ತವಾಗಿದ್ದರೂ, ಶೀತಲವಾಗಿದ್ದ[illegible] ಅಷ್ಟು [illegible] ದಿನವೆಲ್ಲವನ್ನೂ ಪ್ರಾರ್ಥಿಸಿಕೊಂಡು ಬಂದು ತಮ್ಮ ತಮ್ಮ ಗೂಡುಗಳನ್ನು ಸೇರುತ್ತಿದ್ದ ಪಕ್ಷಿಗಳ ಮಧುರವಾದ ಗಾನವು ಆಹ್ಲಾದಕರವಾಗಿದ್ದಿತು. ಅಷ್ಟರಲ್ಲೇ "ಏನು ರಾಯರೆ! ಏಕಾಂತವಾಗಿ ಕುಳಿತುಕೊಳ್ಳೋಣವಾಯಿತೇ?" ಎಂಬ ಒಂದು ಶಬ್ದವು ಕೇಳಿಸಿತು. ರಾಮಚಂದ್ರರಾಯರು ತಲೆಯೆತ್ತಿ ನೋಡಿ, "ಭಟ್ಟರಿಗೆ, ನಮಸ್ಕಾರ, ದಯಮಾಡಿ, ಕುಳಿತುಕೊಳ್ಳಿರಿ" ಎಂದು ತಮ್ಮ ಪಕ್ಕದಲ್ಲಿ ಸ್ಥಳವನ್ನು ತೋರಿಸಿದರು.

ಭಟ್ಟರು— ಏನೇನು. ರಾಯರೇನೋ ಬಹಳ ಚಿಂತನೆ ಮಾಡುತ್ತಿದ್ದಹಾಗಿತ್ತು?

ರಾಮರಾಯರು— ನನ್ನ [illegible] ಇಲ್ಲ ಭಟ್ಟರೆ [illegible] ತಮಗೆ ತಿಳಿದ ಹಾಗೆ ನನ್ನ ಮನೆಗೆ ನಾಳೆ ಬಂಧುಗಳು ಬರುವವರು. [illegible] ವರುಷಗಳು ತುಂಬುತ್ತವೆ. [illegible] ನ ಕಿರುಬಾವಿ [illegible] ಮನೆಗೆಲ್ಲ ಇರುವ [illegible] ಸಾಗುವುದು ಹೇಗೋ ಎಂದರೆ, ಪಿಡ್ಡಿ [illegible] ಗಳು ಸರಿಬರುವುದಿಲ್ಲ. [illegible] ಹೇಳುವವರು ಕಷ್ಟಕರವಾಗಿರುತ್ತಾನೆ [illegible]

ಭಟ್ಟರು— ಏನೇನು ನಿಮ್ಮ ಮನೆ ಹಿಂದಲ ಹಿತ್ತಿಲಲ್ಲಿ ಗುವ ಎಷ್ಟೋ [illegible] ನಿಮ್ಮ [illegible] ಒಳ್ಳೇ ತಕ್ಕ ವರನಲ್ಲವೆ?

ರಾ— ಅಯ್ಯೋ, ಅಂತಹ ಅನುಕೂಲವಿದ್ದರೆ ನಾನೇಕೆ ಇಷ್ಟು ಕಷ್ಟಪಡಬೇಕು? ನಮ್ಮೆಲ್ಲರಿಗೂ ಮನಸ್ಸೇನೋ ಒಪ್ಪಿದೆ. ಆದರೆ ಅವರದು ಭಾಗವತಸಂಪ್ರದಾಯವಂತೆ ನಮ್ಮ ಮನೆ ಹೆಂಗುಸರು ಆಗದು ಎಂದು ಹೇಳುತ್ತಾರೆ ಇದಕ್ಕೆ ನೀವೇನು ಹೇಳುತ್ತೀರಿ?

ಭ— ನನ್ನ ಅಭಿಪ್ರಾಯವನ್ನು ಕೇಳುತ್ತೀರಾ? ನಾನೇನೋ ಒಪ್ಪುತ್ತೇನೆ. ಶಾಸ್ತ್ರವಿರುದ್ಧವೇನೂ ಕಾಣುವುದಿಲ್ಲ ಯಾವ ಶಾಸ್ತ್ರದಲ್ಲೂ ಈ ಸಂಪ್ರದಾಯ ವಿಷಯವೇ ಹೇಳಿಲ್ಲ ಹಾಗೆಲ್ಲಾ ನೋಡಿದರೆ ಎಷ್ಟೋ ಮದುವೆಗಳು ಹೋಗಿ ಬಿಡುತ್ತಾರೆ.

ರಾ— ಹಾಗಾದರೆ, ನಿಮ್ಮ ಮನೆಯಲ್ಲಿ ನಿಮ್ಮ ಹುಡುಗಿಯನ್ನೇಕೆ ಆ ಮದುವೆಗೆ ಕೊಟ್ಟು ಏರ್ಪಡಿಸಿದಿರಿ? ನಿಮ್ಮ ಮನೆಯಲ್ಲಿ ವಿದ್ಯಾರ್ಥಿಯಾಗಿದ್ದ [illegible] ಹೋಗಿದ್ದ [illegible] ಕೆಲ್ಲ?

ಭ— (ನಕ್ಕು) ರಾಯರೆ! ನನಗೆ ತಿಳಿಯದ [illegible] ನಾವು 'ಭಟ್ಟರು' ಎನ್ನಿಸಿಕೊಂಡಿರುವುದರಿಂದ ಶಾಸ್ತ್ರದಲ್ಲಿ ಹೀಗೆಂದರೂ ಹೇಳಿದರೆ, ನಾವು ಆಚಾರವನ್ನು ಅತಿಕ್ರಮಿಸಿ ನಡೆಯುವುದಕ್ಕಾಗುವುದಿಲ್ಲ ಅದರಿಂದ ನಾವು ಹೇಗಾದರೂ ನಮ್ಮ ಮಾತನ್ನು ನಮ್ಮ ಮನೆಯ ಹೆಂಗಸರು ಕೇಳಿಕೊಡುವವರಲ್ಲ. ನಿಮ್ಮ ಮನೆಯಲ್ಲಾದರೋ ಹೆಂಗಸರು ವಿದ್ಯಾವತಿಯರು. ನಿಮಗೇನು ಬಾಧಕ?

ರಾ— ನಾವು ಹಾಗೆ ಮಾಡಿದರೆ ನೀವು ನಮ್ಮನ್ನು ಜಾತಿಯಲ್ಲಿಟ್ಟಿರುತ್ತೀರಾ?

ಭ— ಶ್ರದ್ಧೆಯಿಂದ ನಡೆದು ಮಾಡಿದರೆ ಹೇಳುವವರೇ ಇಲ್ಲ. ನಾವು ನಿಮ್ಮನ್ನೆಲ್ಲಾ ಬಿಟ್ಟು ಹೊಟ್ಟೆಗೆ ಏನು ತಿನ್ನಬೇಕು?

ರಾ— ಹಾಗಲ್ಲ ಭಟ್ಟರೆ [illegible] ನಮ್ಮ ಧರ್ಮ [illegible] ಹೇಳುವವರು. [illegible] ಗವಿಯಾಗಿದ್ದು, ಮನಸ್ಸಿಗೆ ಸ್ವಸ್ಥವಾಗಿದೆಯೆಂದು. [illegible] ದರೆ ದೇಶಾಚಾರ ಮೊದಲಾದ ವ್ಯವಸ್ಥೆಗಳನ್ನು [illegible] ಸಂಬಂಧ ಬೆಳೆಸುವುದರಲ್ಲಿ ಪರ್ಯಾಲೋಚನೆಮಾಡಬೇಕು. ನಮ್ಮ ಹೊಟ್ಟೆಯಲ್ಲಿ ಹುಟ್ಟಿದ ಹೆಣ್ಣು ಮಕ್ಕಳನ್ನು ಅನಾಥರಿಗೆ ಕೊಟ್ಟು ಆ ಹೆಣ್ಣುಮಕ್ಕಳ [illegible] ವೆಂಬ ಅಭ್ಯಾಸಕ್ಕೆ ವಿಷವನ್ನು [illegible] ವಲ್ಲವೆ?

ಭ— ನೀವು ಹೇಳುವುದೇನೋ ಒಪ್ಪತಕ್ಕದ್ದೇ. ಆ [illegible] ಬಲವಾದ ಕಾರಣಗಳನ್ನು ನಿಮ್ಮಂಥವರು ಮಾಡಿದರೆ [illegible] ನಮ್ಮನ್ನು ಕೇಳುವವರ್ಯಾರು?

ರಾ— [illegible] ನಿಮ್ಮ [illegible] ಮಾಡಿದರೆ ಸರಿ [illegible] ವಿವಾಹವನ್ನು ಅಗ್ನಿ ಮಾಡುತ್ತೇನೆ.

ಭ— ನಾವು ಏನೋ ಮಾಡಿ [illegible] ನೀವು ಬೇ[illegible]

ಶ್ರೀ   [illegible]

ಕೆ.   [illegible]

[illegible] ಸ್ನೇಹ [illegible] ಬರಲಿ [illegible]

ರಾ— ಅದೇನೋ [illegible] ನಮ್ಮ ಹೆಂಗಸರಿಗೆ [illegible] ಮಾಡಿ ಅವರು ನೀವು ಹೇಳಿದಂತೆ ಕೇಳುವಂತೆ ಮಾಡಿದ್ದೀರಿ. ಅದರಿಂದ ನಾನೇನೂ ಹೇಳಿದರೂ ಅವರು ಕೇಳುವುದಿಲ್ಲ.

ಭ— ಹಾಗಾದರೆ ನಿಮ್ಮ ಮನೆ ಹೆಂಗಸರು ವಿದ್ಯಾವತಿಯರಲ್ಲವೇ

ರಾ— [illegible] ಮಾಡಿದರೆ ವಿದ್ಯಾವತಿಯರೆಂದು ನೀವು ತಿಳಿದಿರುವಂತೆ ಕಾಣಿಸುತ್ತದೆ. [illegible] ಮಾಡಿದ್ದರಿಂದ [illegible] ಕೇಳುತ್ತಿದೆ [illegible] ಗಳನ್ನು ವಿಶೇಷವಾಗಿ ಮಾಡಿದರೆ [illegible] ಗಂಡಸರು ಪರೀಕ್ಷೆಗಳಲ್ಲಿ [illegible] ಅವರಿಗೂ ಸಹ, ತಮಗೆ ಸರಿ [illegible] ಮಾರ್ಗದಲ್ಲಿ [illegible] ನಡೆಯಬೇಕೆಂಬುದು [illegible]

ಭ— ಹಾಗಾದರೆ, ನಾವು [illegible] ಮಾಡಿಕೊಂಡಿದ್ದೇವೆ?

ರಾ— [illegible]

[illegible]

ವಿಶ್ವ— ಅಲ್ ರೈಟ್, ನನಗೇನು ಅವಸರವಿಲ್ಲಾ. [illegible] ಅನ್ನ ಮಾಡಿದ್ದೀರೋ?

ಪ್ರ— [illegible] ನಾನು [illegible] ತೆಗೆದುಕೊಂಡು [illegible]

ವಿಶ್ವ— [illegible] ಗಳನ್ನು ಕಡಿಮೆ [illegible]

[illegible]

ವಿಶ್ವ— [illegible]

ಪ್ರ— [illegible] ಸರ್ಕಾರದವ[illegible]

ವಿಶ್ವ— [illegible]

ಪ್ರ— [illegible]

[illegible]

ಮೈಸೂರ್ ಸ್ಟಾರ್.

೧೯೧೮ನೇ ಇಸವಿ ಮಾರ್ಚಿ ತಾ|| ೭ ನೇ ಸೋಮವಾರ

ನೂತನಶಕ್ತಿ ಪ್ರಾದುರ್ಭಾವ.

ಹಿಂದೂದೇಶದ ಚರಿತ್ರೆಯನ್ನು ಓದಿದರೆ ಬಹಳ ಶತಮಾನಗಳಿಂದಲೂ ಯುದ್ಧಪ್ರಸಕ್ತಿ ಇಲ್ಲದಿರುವುದೇ ಮುಖ್ಯವಾದ ಅಂಶವಾಗಿ ಕಂಡುಬರುವುದು. ಮೊಗಲ್ ಚಕ್ರವರ್ತಿಯಾದ ಔರಂಗಜೇಬನ ಅಂತ್ಯಕಾಲದಲ್ಲಿ ಪ್ರಾರಂಭಿಸಿ ಸುಮಾರು ಕ್ರಿ. ಶ. ೧೮೫೮ ರಲ್ಲಿ ಪರಿಸಮಾಪ್ತಿಗೊಂಡ ಒಂದೂವರೆ ಶತಮಾನದಲ್ಲಿ ನಡೆದ ಭಯಂಕರಗಳಾದ ಯುದ್ಧಗಳನ್ನೂ, ಆ ಕಾಲದಲ್ಲಿ ದೇಶದಲ್ಲಿದ್ದ ಅರಾಜಕತ್ವವನ್ನೂ, ಪ್ರಜಾಪೀಡೆಯನ್ನೂ ಓದಿ, ಬಳಿಕ ಕಾಲದಲ್ಲಿ ಅಂದರೆ ಈ ಹಿಂದೂದೇಶದ ಸರ್ವಾಧಿಕಾರವನ್ನು ಕಂಪೆನಿಯವರು ಇಂಗ್ಲೆಂಡು ಮಹಾರಾಣಿಯವರಿಗೆ ವಹಿಸಿದಂದಿನಿಂದ ಈ ದೇಶದಲ್ಲಿ ನೆಲಸಿರುವ ಶಾಂತಿ ಮತ್ತು ಸುಭಿಕ್ಷಗಳನ್ನೂ, ಜನರಲ್ಲಿ ವೃದ್ಧಿಗೊಳ್ಳುತ್ತಿರುವ ಸೌಹಾರ್ದಭಾವವನ್ನೂ ಓದಿದರೆ ಹಿಂದಣ ಕಾಲಕ್ಕೂ ಈಗಿನ ಕಾಲಕ್ಕೂ ಇರುವ ವ್ಯತ್ಯಾಸವು ಸ್ಪಷ್ಟವಾಗುವುದು. ಹೀಗೆ ಸಮಾಧಾನಸ್ಥಿತಿಯು ನೆಲೆಗೊಂಡುದರಿಂದಲೇ ನಮ್ಮವರು ಕೃಷಿ, ವಾಣಿಜ್ಯಾದಿಗಳಿಗೂ, ವಿದ್ಯಾಭಿವೃದ್ಧಿಗೂ ವಿಶೇಷಗಮನ ಕೊಡಲು ಶಕ್ಯವಾಯಿತು. ಇಂಡಿಯಾ ಸರಕಾರದವರೂ ನಾನಾಪ್ರಕಾರದಲ್ಲೂ ಜನರಿಗೆ ಹಿತವಾದ ಕಾರ್ಯಗಳಲ್ಲಿ ಪ್ರೋತ್ಸಾಹವನ್ನು ಕೊಡುತ್ತಾ ಬಂದಿರುವುದರಿಂದ ಆಸೇತುಹಿಮಾಚಲಾಂತವಾಗಿ ಅಖಂಡವಾಗಿಯೂ, ವಿಶಾಲವಾಗಿಯೂ ಪ್ರಸರಿಸಿರುವ ಈ ಭರತಖಂಡದಲ್ಲಿ ವಾಸಿಸುವ ಪ್ರಜಾಕೋಟಿಗಳಲ್ಲಿ ದೇಶವಾತ್ಸಲ್ಯವೂ, ಏಕವಾಕ್ಯತೆಯೂ ಅಂಕುರಿಸಲು ಆರಂಭವಾಯಿತು. ಬ್ರಿಟಿಷರ ಧರ್ಮಪ್ರಭುತ್ವವಿಲ್ಲದಿದ್ದರೆ ಭಿನ್ನ ಮತಾಚಾರಗಳಿಂದಲೂ, ಅಜ್ಞಾನಾಂಧಕಾರದಿಂದಲೂ ನಾನಾ ಗುಂಪುಗಳಾಗಿ ಒಡೆದು ಹೋಗಿದ್ದ ಈ ನಮ್ಮ ದೇಶೀಯರಲ್ಲಿ ನಾವೆಲ್ಲರೂ ಒಂದು ಜನಾಂಗಕ್ಕೆ ಸೇರಿದವರೆಂಬ ಭಾವವು ಹೇಗೆ ತಾನೆ ಹುಟ್ಟಲಾಗುತ್ತಿದ್ದಿತು? ಹೀಗೆ ಇಂಗ್ಲೀಷಿನವರು ತಾವು ಹಾಕಿರುವ ಸಸಿಯನ್ನು ತಾವೇ ಹಾಳುಮಾಡುವರೆಂದು ಹೇಳಲಾದೀತೋ? ಎಂದಿಗೂ ಇಲ್ಲ. ನಾವು ನಮ್ಮ ಯೋಗ್ಯತಾಸ್ಥಿತಿಯನ್ನು ವೃದ್ಧಿಪಡಿಸಿಕೊಂಡಹಾಗೆಲ್ಲಾ ನಾವೂ ಸಹ ರಾಜಕಾರ್ಯನಿರ್ವಹಣದಲ್ಲಿ ಸೇರುವುದಕ್ಕೆ ಹೊಸ ಹೊಸದಾದ ಅವಕಾಶಗಳನ್ನು ಅವರು ಕಲ್ಪಿಸಿಕೊಟ್ಟಿರುವರು; ಈಗಲೂ ಕೊಡಲು ಸಿದ್ಧರಾಗಿರುವರು. ಇದನ್ನೆಲ್ಲಾ ಮರೆತು ನಾವು ಅವರಿಗೆ ದ್ರೋಹವನ್ನು ಬಯಸಿದರೆ ಜಗದೀಶನು ನಮ್ಮನ್ನು ಮೆಚ್ಚುವನೇ? ಕ್ಷಮಿಸುವನೇ? ಹೀಗಿರುವಾಗ ಈ ದೇಶದ ಜನರ ಮನೋವೃತ್ತಿಯು ಪ್ರಕೃತಕಾಲದಲ್ಲಿ ಯಾವ ಕಡೆಯೋ ನೋಡೋಣ.

ಇಂಡಿಯಾ ಸರಕಾರದವರು ನಮಗೆ ನಿರ್ಮಿಸಿಕೊಟ್ಟಿರುವ ವಿದ್ಯಾನಿಲಯಗಳ ಮೂಲಕವಾಗಿಯೂ, ದೇಶಾಟನೆಗೆ ಅವರು ಕಲ್ಪಿಸಿಕೊಟ್ಟಿರುವ ಮಾರ್ಗಸೌಲಭ್ಯದಿಂದಲೂ ನಮ್ಮಲ್ಲಿ ಅನೇಕರಿಗೆ ಕಣ್ಣು ಬಂದಂತಾಗಿದೆ. ಲೋಕದಲ್ಲಿ ವಿವಿಧ ಪದಾರ್ಥಗಳನ್ನುಂಟುಮಾಡುವುದಕ್ಕೆ ಎಂಥ ವಿವೇಕವು ಹುಟ್ಟುವುದು? ಅವರಂತೆಯೇ ನಾವೇಕೆ ಶಕ್ತರಾಗಬಾರದು, ದೇಶವಾತ್ಸಲ್ಯವೆಂದರೇನು? ಸ್ವಾತಂತ್ರ್ಯವೆಂದರೇನು? ಎಂಬ ವಿಷಯಗಳನ್ನು ಕುರಿತು ಆಲೋಚಿಸಿ, ಸ್ವಲ್ಪ ಅಲ್ಪಸ್ವಲ್ಪವಾಗಿ ತಿಳಿದುಕೊಳ್ಳುತ್ತಿದ್ದಾರೆ. ಇಂಥವರಲ್ಲಿ ಕೆಲವರಿಗೆ ಇನ್ನೂ ಪರಿಪಕ್ವವು ಸಾಕಷ್ಟು ಬಂದಿರದಾಗಿದೆ. ಸಾಧಾರಣವಾಗಿ ಒಬ್ಬನು ಒಂದು ಆ ಯುವಕನನ್ನು ಬಾಲ್ಯದಲ್ಲಿ ಹೋಗಗೊಡದೆ, ಗೃಹದಿಂದ ಆದರಿಂದ ತನ್ನ ಕೈಯನ್ನು ಕತ್ತರಿಸಿಕೊಳ್ಳುವನು ಇಲ್ಲದಿದ್ದರೆ ಮೋಸದಿಂದಲೇ ಹೋಗುವ ಕೆಲಸವನ್ನು ಕಲಿಸುವನು. ಇದೇರೀತಿಯಲ್ಲಿ ವಿವೇಕಶೂನ್ಯರಾದ ಮತ್ತು ಕೇವಲ ಉತ್ಸಾಹಶಾಲಿಗಳಾದ ಕೆಲವರು, ತಾವು ಮಾಡುತ್ತಿರುವುದೇನು? ಇದರಿಂದ ದೇಶಕ್ಕೆ ಹಿತವಾದೀತೆ? ಇಲ್ಲವೆ? ಎಂಬುದನ್ನು ಸಹ ಆಲೋಚಿಸದೆ ಕಾರ್ಯಸಾಧನೆಗೆ ಹೊರಟು ಅನೇಕ ಅನರ್ಥಗಳನ್ನುಂಟುಮಾಡಿರುವರು! ಅಲ್ಲದೆ ಹಿಂದೂಗಳು ದುಷ್ಪ್ರೇರಣೆಗಳಿಂದ ಅವರುಗಳನ್ನು ತಿರುಗಿ ಪ್ರಯತ್ನಿಸುತ್ತಿರುವರು. ಇಂಥವರ ಜಾಡಿನಲ್ಲಿ ಸೇರುವವರಾರು? ಜೀವನ ಸ್ವಭಾವದಿಂದ ಗರ್ವಿತರಾದ ಯುವಕರು, ಈಗ ತಮ್ಮ ದೇಶಕ್ಕಾಗಿಯೂ, ತಮ್ಮ ಪರರಿಗಾಗಿಯೂ, ತಮ್ಮ ಶಕ್ತಿಯನ್ನು ಸಹಾಯವನ್ನು ಮಾಡಿ ಜನ್ಮಸಾರ್ಥಕವನ್ನು ಹೊಂದಿಕೊಳ್ಳಬೇಕೆಂಬ ಅಭಿಪ್ರಾಯವು ಎಲ್ಲೆಲ್ಲಿಯೂ ಹರಡಿಕೊಂಡಿರುವುದು. ವಿದ್ಯಾರ್ಥಿಗಳಾದ ಯುವಕರುಗಳಲ್ಲಿ ಸ್ವಭಾವವಾದ ಸಾಮರ್ಥ್ಯವೂ ಇಲ್ಲದೆ ದೇಶಸೇವೆಯ ಹೆಸರಿನಿಂದ ಅವರು ಪರಕೀಯರ ಕಾರ್ಯಗಳನ್ನಾದರೂ ಮಾಡಲು ಸಿದ್ಧರಾಗಿರುವರು. ಇಂತಹ ನಿರ್ದಾಕ್ಷಿಣ್ಯವಾದ ಶಕ್ತಿ ಪರಾಕ್ರಮಗಳನ್ನು ಅವಿವೇಕಿಗಳಾದ ಕೆಲವರು ನಿಂದ್ಯವಾದ, ಮತ್ತು ಘಾತುಕರವಾದ ಕಾರ್ಯಗಳಲ್ಲುಪಯೋಗಿಸಿ ತಾವೂ ಕೆಟ್ಟು, ತಮ್ಮನ್ನು ನಂಬಿದ ಯುವಕರನ್ನೂ ಕೆಡಿಸಿ, ದೇಶಕ್ಕೆ ಅಹಿತವನ್ನು ಬರಿಸುತ್ತಿರುವರು. ಆದುದರಿಂದ ದೇಶಹಿತೈಷಿಗಳಾದವರೆಲ್ಲರೂ ಸೇರಿ ಯುವಕರಲ್ಲಿಯೂ, ಇತರರಲ್ಲಿಯೂ ದೇಶವಾತ್ಸಲ್ಯರೂಪವಾಗಿ ಉಕ್ಕಿಬರುತ್ತಿರುವ ಈ ನೂತನಶಕ್ತಿ ಪರಾಕ್ರಮಗಳನ್ನು ಸದ್ವಿನಿಯೋಗಮಾಡಲು ತಕ್ಕ ಉಪಾಯಗಳನ್ನು ಕಲ್ಪಿಸಿಕೊಡುವುದು ಅತ್ಯಂತಾವಶ್ಯಕವಾಗಿರುವುದಲ್ಲದೆ ಹೇಗೆ ಮಾಡಬೇಕೆಂಬುದನ್ನು ಆಯಾ ಸಮಯ ಸಂದರ್ಭಗಳನ್ನನುಸರಿಸಿ ಗೊತ್ತುಮಾಡಬೇಕಾಗಿದೆ.

ನಮ್ಮ ಹಿಂದೂದೇಶಾಭಿಮಾನಿಗಳಲ್ಲೊಬ್ಬರಾದ ಮತ್ತು ಬ್ರಹ್ಮಜ್ಞಾನಸಮಾಜದ ಅಧ್ಯಕ್ಷರಾದ ಶ್ರೀಮತಿ ಆನಿಬೆಸೆಂಟಮ್ಮನವರು ಈ ವಿಷಯವನ್ನು ಕುರಿತು ಆಲೋಚಿಸಿ "ಭಾರತಪುತ್ರಮಂಡಲಿ" ಎಂಬ ಒಂದು ಕೂಟವನ್ನು ಏರ್ಪಡಿಸಿರುವರು. ಯುವಕರು ಇದರಲ್ಲಿ ಸೇರಿ ಕೆಲವ ಮಾಡಕೊಡಗಿದರೆ ದೇಶಕ್ಕೆ ಶ್ರೇಯಸ್ಸುಂಟಾಗುವುದು ಮತ್ತು ಅನರ್ಥಗಳು ಕಡಿಮೆಯಾಗುವುವು. ಪಾರಮಾರ್ಥಿಕ ಕಾರ್ಯಗಳಲ್ಲಿ ಯಾವಾಗಲೂ ಅಗ್ರಭಾಗವನ್ನು ವಹಿಸಲು ಸಿದ್ಧರಾಗಿರುವ ನಮ್ಮ ಶ್ರೀಮನ್ಮಹಾರಾಜರು ಈ ಕೂಟಕ್ಕೆ ಪ್ರೋತ್ಸಾಹಕರಾಗಿಯೂ, ಅಭಿಮಾನಿಗಳಾಗಿಯೂ ಇರುವರ ಆದುದರಿಂದ ನಮ್ಮ ದೇಶದ ಯುವಕರು ಈ ಕೂಟಕ್ಕೆ ಸೇರಿಯೋ ಅಥವಾ ಮತ್ತಾವುದಾದರೂ ಒಂದು ನಿರ್ದುಷ್ಟವಾದ ಮಾರ್ಗವಾಗಿಯೋ ತಮ್ಮ ಉತ್ಸಾಹ, ಶಕ್ತಿ, ಬುದ್ಧಿ ಮೊದಲಾದವುಗಳನ್ನು ವಿನಿಯೋಗಿಸುವಂತೆ ಸರ್ವರೂ ಪ್ರಯತ್ನಪಡಬೇಕಾಗಿ ಕೋರುತ್ತೇವೆ.

ಇಂಗ್ಲೀಷು ಭಾಷಾಭಿವೃದ್ಧಿಯು

ಈಗ ನಮ್ಮ ದೇಶದ ಸ್ಥಿತಿಯಲ್ಲಿ ವಿದ್ಯಾಭ್ಯಾಸವೆಂದರೆ ಇಂಗ್ಲೀಷು ಭಾಷಾಜ್ಞಾನವನ್ನು ಸಂಪಾದಿಸಿಕೊಂಡು ತನ್ಮೂಲಕ ಸರಕಾರದಲ್ಲಿಯೋ ಶ್ರೀಮಂತರಲ್ಲಿಯೋ ಒಂದು ಉದ್ಯೋಗಕ್ಕೆ ಸೇರಿ ಜೀವನೋಪಾಯವನ್ನು ಕಲ್ಪಿಸಿಕೊಳ್ಳುವುದೆಂದು ಅರ್ಥವಾಗುವುದು. ಎದಕ್ಕೆ ಸರಿಯಾಗಿ ಸರಕಾರದಲ್ಲಿ ಮುಖ್ಯವಾದ ಕಾಗದ ಪತ್ರಗಳೆಲ್ಲವೂ ಇಂಗ್ಲೀಷು ಭಾಷೆಯಲ್ಲಿರುವುದರಿಂದ ದೊಡ್ಡ ಅಧಿಕಾರಗಳಿಗೆ ಬರಬೇಕೆಂದಿರುವವರು ಆ ಭಾಷಾ ಪರಿಚಯವನ್ನು ಮಾಡಿಕೊಂಡಿರಬೇಕಾದುದು ಅತ್ಯಾವಶ್ಯಕವಾಗಿರುವುದು. ಈ ದೇಶಕ್ಕೂ, ಪಾಶ್ಚಾತ್ಯದೇಶಗಳಿಗೂ ವ್ಯಾಪಾರವು ವಿಶೇಷವಾಗಿರುವುದರಿಂದ ಈ ಭಾಷೆಗೆ ಮತ್ತಷ್ಟು ಪ್ರಾಶಸ್ತ್ಯವು ಬಂದಿರುವುದು. ಆದುದರಿಂದ ಗೌರವಕ್ಕೂ, ಪ್ರಯೋಜನಕ್ಕೂ ಆಶ್ರಯವಾಗಿರುವ ಈ ಭಾಷಾಭ್ಯಾಸವನ್ನು ಎಲ್ಲರೂ ಮಾಡತಕ್ಕದ್ದೇ ಆಗಿರುವುದು. ಆದರೆ ಅನೇಕರು ಕೇವಲ ಜೀವನೋಪಾಯಕ್ಕಾಗಿ ಇದನ್ನು ಅಭ್ಯಾಸ ಮಾಡುತ್ತಿರುವುದರಿಂದ ನಮ್ಮ ದೇಶಕ್ಕೆ ಹಲವು ಅನರ್ಥಗಳು ಪ್ರಾಪ್ತವಾಗಿರುವುವು. ಅದು ಹೇಗೆಂದರೆ,—

ಒಂದನೆಯದಾಗಿ— ಸಂಸ್ಕೃತ, ಕನ್ನಡ ಮೊದಲಾದ ನಮ್ಮ ದೇಶಭಾಷೆಗಳೂ ಹೀನಸ್ಥಿತಿಗೆ ಬಂದಿರುವುವು. ನಮ್ಮ ವೇದವಿದ್ಯೆಗಳೂ, ಧರ್ಮಶಾಸ್ತ್ರಗಳೂ, ಪುರಾಣೇತಿಹಾಸಗಳೂ, ಮುಖ್ಯವಾಗಿ ನಮ್ಮ ಪೂರ್ವಿಕರ ಗ್ರಾಂಥಿಕ ಕೆಲಸಗಳು ನಮ್ಮ ದೇಶಕ್ಕೆ ಕೀರ್ತಿಯನ್ನೂ, ಗೌರವವನ್ನೂ ತಂದಕ್ಕೆ ಅಂತಹ ಶಿಲ್ಪಶಾಸ್ತ್ರವೇ ಮೊದಲಾದ ಸಮಸ್ತ ಶಾಸ್ತ್ರಗಳೂ ನಮಗೆ ಮರೆತುಹೋಗುವ ಸ್ಥಿತಿಯು ಪ್ರಾಪ್ತವಾಗಿರುವುದು. ನಮ್ಮ ಮತವಂತೂ ಬಹಳ ದುರ್ಬಲವಾಗುತ್ತಾ ಬಂದಿದೆ. ಈಗ ಉಳಿದಿರುವುದು ನಾಮಮಾತ್ರವಾಗಿರುವುದು. ನಮ್ಮ ಸ್ಥಿತಿಯು ಸಾರವಾದ ಕಾಳನ್ನು ಬಿಟ್ಟು ಹೊಟ್ಟನ್ನು ಹಿಡಿದ ಕೈಹನ ಸ್ಥಿತಿಗೆ ಸಮನಾಗಿರುವುದು. ಹೇಗಾದರೂ ಚೈತನ್ಯವಿರುವಂತೆ ಈ ದೇಶಕ್ಕೆ ನಮ್ಮ ಮತವು ಚೈತನ್ಯಸ್ವರೂಪವಾಗಿರುವುದು. ಈಗ ನಮ್ಮ ಕಾಲದಲ್ಲಿ ನಮ್ಮ ಮತವಿಷಯಗಳನ್ನು ಅನ್ಯಭಾಷಾಮೂಲಕವಾಗಿ ತಿಳಿಯಬೇಕಾದ ದುರವಸ್ಥೆಯು ಪ್ರಾಪ್ತವಾಗಿರುವುದು.

ಎರಡನೆಯದಾಗಿ— ಇಂಗ್ಲೀಷುಭಾಷೆಯನ್ನು ಅಲ್ಪಸ್ವಲ್ಪವಾಗಿ ಅಭ್ಯಾಸಮಾಡುವುದರಿಂದ ಸೃಷ್ಟಿಗೊಂಡಿರುವಾದ ಈ ಸ್ವರೂಪ ಸಾಧನ ನಂಬಿಕೆಗೆ ಒಂದು ಕೊಂಡುಹೋಗುವುದು. ಆ ಭಾಷೆಯಲ್ಲಿ ಬರೆಯಲ್ಪಟ್ಟ ಭೌತಿಕಶಾಸ್ತ್ರವೇ ಮೊದಲಾದ ಅನೇಕಶಾಸ್ತ್ರಗಳಲ್ಲಿ ಇದುವರೆಗೂ ಉದ್ದೇಶಿಸಲ್ಪಡುತ್ತಿದ್ದ ಅಭಿಪ್ರಾಯಗಳೇ ಇಂತಹ ನಾಸ್ತಿಕವಾದಕ್ಕೆ ಆಧಾರವಾಗಿರುವುವು. ಆದರೆ ಈಚಿನ ಗ್ರಂಥಗಳಲ್ಲಿಯೂ, ಪೂರ್ವದ ತತ್ವಜ್ಞಾನಿಗಳೂ, ಮತದೋಷಕರೂ ವಿರಚಿಸಿದ ವಿಜ್ಞಾನಶಾಸ್ತ್ರವೇ ಮೊದಲಾದ ಗ್ರಂಥಗಳಲ್ಲಿಯೂ ಸೇರಿಸಿದೆ. ಇದಕ್ಕೆ ಸಿದ್ಧಾಂತ ಗಳು ಅನೇಕವಾಗಿರುವುವು. ನಮ್ಮವರು ಪಾಶ್ಚಾತ್ಯರ ಶಾಸ್ತ್ರಗ್ರಂಥಗಳನ್ನೇ ವಿಶೇಷವಾಗಿ ಓದುತ್ತಾ ಬಂದುದರಿಂದ ದೈವಭಕ್ತಿಯು ಕಡಿಮೆಯಾಗಲು ಸಹಕಾರಿಯಾಗುವುದು. ಪಾಶ್ಚಾತ್ಯರ ಶಾಸ್ತ್ರಗಳಲ್ಲಿ ನಮ್ಮವರು ಪಂಡಿತರಾದ ಮಾತ್ರಕ್ಕೆ ಸಾಧ್ಯಾಸಾಧ್ಯಗಳನ್ನು ಗಣಿಸದೆ ಪ್ರತಿಯೊಂದಕ್ಕೂ ಕಾರಣವನ್ನು ತಿಳಿಯಬೇಕೆಂಬ ಒಂದು ಭ್ರಾಂತಿಯು ಅವರನ್ನು ಹಿಡಿಯುವುದು. ಇಷ್ಟು ಮಾತ್ರವಲ್ಲದೆ ಕೆಲ ಜನರು—ನಮಗೆ ಯಾವುದಕ್ಕೆ ಕಾರಣವು ಗೊತ್ತಾಗುತ್ತದೆಯೋ ಅದೇ ಸರಿಯಾದುದು, ಸತ್ಯವಾದುದು; ಕಾರಣವನ್ನು ಹೇಳಲಾಗದುದು ಮಿಥ್ಯ—ಎಂದು ನಂಬುವವರಾಗಿರುತ್ತಾರೆ. ಆದರೆ ನಮ್ಮ ಪೂರ್ವಿಕರಿಗೆ ಗುರುಭಕ್ತಿಯು ಪರಿಪೂರ್ಣವಾಗಿದ್ದುದರಿಂದ, ಅವರ ವಾಕ್ಯದಲ್ಲಿ ಅಪನಂಬಿಕೆಗೆ ಅವಕಾಶವೇ ಅವರಿಗಿರಲಿಲ್ಲ. ಈಗಲಾದರೋ ಚಿಕ್ಕವರು ತಮ್ಮ ಹಿರಿಯರನ್ನು ಕುರಿತು ಇದಕ್ಕೆ ಕಾರಣವೇನು, ಅದಕ್ಕೆ ಕಾರಣವೇನು ಎಂದು ಪ್ರಶ್ನೆ ಮಾಡುತ್ತಾರೆ. ನಮ್ಮ ಮಹರ್ಷಿಗಳು ತಮಗಿದ್ದ ಲೋಕಾಂತರ ಜ್ಞಾನಬಲದಿಂದ ನಮಗೆ ಹೇಳಿಕೊಟ್ಟಿರುವ ಅಂಶಗಳಿಗೆ ಕಾರಣವನ್ನು ತಿಳಿಯಲು ಅಲ್ಪಬುದ್ಧಿಗಳಿಗೆ ಸಾಧ್ಯವಿಲ್ಲದುದರಿಂದ ಹುಡುಗರ ಪ್ರಶ್ನೆಗೆ ದೊಡ್ಡವರು ಸದುತ್ತರವನ್ನು ಕೊಡಲಾಗದಿರುವರು. ಇದರಿಂದಲೂ ಮತ್ತು ಆಂಗ್ಲೇಯರ ಶಾಸ್ತ್ರಗಳೆಲ್ಲಾ ಪ್ರಪಂಚವು ಬರು ಬರುತ್ತಾ ಉತ್ಕೃಷ್ಟ ಸ್ಥಿತಿಗೆ ಬರುತ್ತಿರುವುದೆಂದು ಹೇಳುತ್ತಿರುವುದರಿಂದಲೂ ನಮ್ಮ ಹಿರಿಯರಿಗಿಂತಲೂ ನಾವೇ ದೊಡ್ಡವರೆಂಬ ದುರಭಿಪ್ರಾಯವು ನಮ್ಮ ಹುಡುಗರಿಗೆ ಬಂದಿರುವುದು. ಆದುದರಿಂದಲೇ ಅವಿವೇಕಿಗಳಾದ ಅನೇಕವಂದಿ ಜನರವರು ತಮ್ಮ ಗುರುಹಿರಿಯರ ಮಾತಿನಲ್ಲಿ ಶ್ರದ್ಧಾಭಕ್ತಿಗಳನ್ನಿಡದ ಅಕಾರ್ಯಪ್ರವರ್ತಕರಾಗಿ ದೇಶದ ಕೆಲವು ಭಾಗಗಳಲ್ಲಿ ಅನಾಯಕಸ್ಥಿತಿಗೆ ಕಾರಣಭೂತರಾಗಿರುವರು.

ಹೀಗೆಲ್ಲಾ ಇರುವುದರಿಂದ ಆಂಗ್ಲೇಯ ಭಾಷೆಯನ್ನೇ ಅಭ್ಯಾಸಿಸಬಾರದೆಂದು ನಾವು ವಾದಿಸುತ್ತೇವೆಂದು ತಿಳಿಯಕೂಡದು. ಆಂಗ್ಲೇಯ ಭಾಷೆಯು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಹರಡಿಕೊಂಡಿರುವುದರಿಂದ ಸಮುದ್ರಕ್ಕೆ ನದಿಗಳು ಬಂದು ಸೇರುವಂತೆ ಸಮಸ್ತದೇಶಗಳ ಸಾರತರವಾದ ವಿಷಯಗಳು ಈ ಭಾಷೆಯಲ್ಲಿ ಅಡಗಿಕೊಂಡಿರುವುವು. ಭಿನ್ನ ದೇಶಸ್ಥರು ತಮ್ಮ ಅಭಿಪ್ರಾಯಗಳನ್ನೂ, ಭಾವಗಳನ್ನೂ ಪರಸ್ಪರ ತಿಳಿಯಪಡಿಸಲು, ಸಹಾಯಕವಾಗಿ ಇದು ಜನಾಂಗಗಳಲ್ಲಿ ಮೈತ್ರೀಭಾವವನ್ನು ವೃದ್ಧಿಗೊಳಿಸುವುದಕ್ಕೆ ಅತ್ಯಂತ ಸಹಾಯಕವಾದ ಸಲಕರಣವಾಗಿದೆ. ಆದಾಗ್ಯೂ ನಮ್ಮ ದೇಶೀಯರು ಈ ಭಾಷೆಯನ್ನು ಕಲಿಯುವಾಗ ನಾವು ಮೇಲೆ ವಿವರಿಸಿದ ದೋಷಗಳು ತಲೆದೋರದಂತೆ ತಕ್ಕ ಜಾಗರೂಕತೆಯಿಂದಿರುವುದು ಅತ್ಯಂತಾವಶ್ಯಕವಾಗಿದೆ.

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಸುರುಮ ರಾಜೇಂದ್ರ ಮಹಾಸ್ವಾಮಿಗಳ ಪಂಚಕಲಶಯುಕ್ತವಾದ ಅಷ್ಟಪಾಲಕಿಯುತ್ಸವವು ವ್ಯಾಸವತೋಪು ಸಮೇತವಾದ ಪಂಚಧ್ವಜ, ಮಕರತೋರಣ, ಹಗಲುದೀವಟಿಗೆ, ಶ್ವೇತಛತ್ರ, ಮೇಚಾಮರ ಮೊದಲಾದ ಸಮಸ್ತ ಬಿರುದುಗಳೊಡನೆ ದೊಡ್ಡ ಹಿಂಡ್ಗನಪಲ್ಲಿ ಕಳೆದ ಜನ ತಾ|| ೭೦ ನೇ ಶುಕ್ರವಾರ ಬೆಳಿಗ್ಗೆ ೭ ಗಂಟೆಯಿಂದ ೧೬ ಗಂಟೆಯವರೆಗೆ ಅತಿ ವಿಜೃಂಭಣೆಯಿಂದ ನೆರವೇರಿತು. ಈ ಉತ್ಸವದಲ್ಲಿ ಪ್ರಾಯಶಃ ೧೫,೦೦೦ ಜನರು ಸೇರಿದ್ದರು. ಇವರಲ್ಲಿ ನಾನಾ ಜಾತಿಯವರಿದ್ದು ಫಲಪುಷ್ಪಾದಿಗಳನ್ನು ಪದೇಪದೇ ಅರ್ಪಿಸುವುದರ ಮೂಲಕ ತಮ್ಮ ಸಂತೋಷವನ್ನು ಪ್ರದರ್ಶನಪಡಿಸಿದರು.

ಒಳದೇಶದವೃತ್ತಾಂತ.

ನಂಜನಗೂಡಿನಲ್ಲಿ ಪ್ಲೇಗು ರೋಗವು ಪ್ರಾಬಲ್ಯವಾಗಿ ದಿನ ಒಂದು ಮರಣಗಳಾದುವೆಂದು ಕೇಳುತ್ತೇವೆ.

ದಿವಾನರು ತಮ್ಮ ಪರಿವಾರದೊಡನೆ ನೆನ್ನೆಯ ಬೆಳಿಗ್ಗೆ ಮೇಲುಕೋಟೆಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು.

ಜಿ ಮತ್ತು ರೀ ಸೆಕ್ರೆಟರಿ ಮಿ|| ಬಾಲಸುಂದರಂ ಅಯ್ಯರ್ ರವರು ಕಳೆದ ತಾ|| ೭ ರಲ್ಲಿ ತಮ್ಮ ಕುಮಾರ್ತೆಯ ವಿವಾಹವನ್ನು ಮತ್ತು ಕುಮಾರನ ಉಪನಯನವನ್ನೂ ವಿಜೃಂಭಣೆಯಿಂದ ಮಾಡಿದರು.

ಅಫಿಷಿಯೇಟಿಂಗ್ ಸೀನಿಯರ್ ಸರ್ಜನರಾದ ಡಾ|| ಪಿ. ಎಸ್. ಅಚ್ಯುತರಾಯರು ಕಳೆದ ತಾ|| ೫ ರಲ್ಲಿ ರಾಜಧಾನಿಗೆ ದಯಮಾಡಿಸಿದ್ದು, ತಾ|| ೬ ರಲ್ಲಿ ಹಿಂತಿರುಗಿ ಬೆಂಗಳೂರಿಗೆ ಪ್ರಯಾಣಮಾಡಿದರು.

"ರೆವಿನ್ಯೂ ಸರ್ವೆ ಶೆಟ್ಲ್‌ಮೆಂಟ್ ಸೂಪರಿಂಟೆಂಡೆಂಟ್ ಮಿ|| ಕೆ. ರಾಮಸ್ವಾಮಯ್ಯಂಗಾರ್, ಎಂ. ಎ., ಯವರು ಮತ್ತು ಶ್ರೀ ಸೆಕ್ರೆಟರಿಯಟ್ ಸೀನಿಯರ್ ಸೂಪರಿಂಟೆಂಡೆಂಟ್" ಮಿ|| ... ಗರ್ ರವರು ಕಳೆದ ತಾ|| ೬ ರ [illegible] ವೃತ್ತರಾದರು.

ತಿಪಟೂರು ತಾ॥ ನೊಣವಿನಕೆರೆಯಲ್ಲಿ ವಶಿಷ್ಠ ಪುಟ್ಟಸ್ವಾಮಿಯ ಕಳೆದ ವಿವಾಹದಲ್ಲಿ ಅಸಿಡಾಬಿಟ್ಟಿನವರು ... ಬೇಕ್‌ಕೋರ್ಟ್ ನಿವರ್ಸು ವಿಚಾರಣೆ ... ಪ್ರಾಥಮಿಕವಾದ ... ವಿಧಿಸಿದರು.

ರಾಜಧಾನಿಯಲ್ಲಿ ಈ ತಿಂಗಳಿಂದ ಮುಂದಕ್ಕೆ ಮನೆ, ಅಂಗಡಿ, ನೀರು, ದೀಪ ಇವುಗಳ ಮೇಲಿನ ತೆರಿಗೆಗಳನ್ನು ೧ ನೆಯ ... ಎರಡು ವೇಳೆ ಎತ್ತಬೇಕೆಂದು ಗೊತ್ತಾಗಿದೆ. ಇದರಿಂದ ಬಡಜನರಿಗೆ ಕೊಂಚ ಸೌಲಭ್ಯವುಂಟಾಗುತ್ತ ಬಹುದು.

ತ್ಯಾಮಗೊಂಡ್ಲುವಿನಲ್ಲಿ ಚಿಕ್ಕನರಸಿ ಎಂಬುವವರು ತನ್ನ ಮಗನಿಗೆ ೩ ವರ್ಷದ ಬಾಲೆಯನ್ನು ವಿವಾಹಮಾಡಿಕೊಂಡುದಕ್ಕಾಗಿ ಅವನನ್ನು ಪೊಲೀಸಿನವರು ... ಹಿಡಿದು ... ನ್ಯಾಯಸ್ಥಾನದಲ್ಲಿ ವಿಚಾರಣೆಗೆ ಗುರಿಮಾಡಿರುವರು.

ಕಳೆದ ಜೂನ್ ತಾ॥ ೨೧ ರಲ್ಲಿ ರಾವ್ ಬಹದ್ದೂರ್ ರಾಜಕಾರ್ಯಪ್ರಸಕ್ತ ಎ ರಂಗಸ್ವಾಮಿ ಅಯ್ಯಂಗಾರರು ಉದ್ಯೋಗದಿಂದ ನಿವೃತ್ತರಾದರು. ಮೊದಲನೇ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಚೆಟ್ಟಿಯರು ಆ ದಿವಸವೇ ಮೈಸೂರಿಂದ ತಂತಿಮೂಲಕ ಬಂದ ಅಪ್ಪಣೆಯ ಮೇರೆಗೆ ರೇ॥ ಕೆ॥ ರವರ ಉದ್ಯೋಗದ ಛಾರ್ಜನ್ನು ವಹಿಸಿಕೊಂಡರು.

ಮ॥ ಪಿ ಸಂಪತ್ತಯ್ಯಂಗಾರ್, ಎಂ ಎ, ರವರು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಭೂಗರ್ಭಶಾಸ್ತ್ರ (ಪ್ರೊ) ಫೆಸರಾಗಿಯೂ, ತುಮಕೂರು ಹೈಸ್ಕೂಲು ಹೆಡ್ಮಾಸ್ತರಾಗಿದ್ದ ಮ॥ ಪಿ. ಸುಬ್ರಹ್ಮಣ್ಯ ಅಯ್ಯರ್ ಬಿ ಎ, ರವರು ಬೆಂಗಳೂರು ಹೈಸ್ಕೂಲು ಹೆಡ್ಮಾಸ್ತರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಕೋಲಾರದ ಫಿ ... ಸೇರಿದ ಮುರಿಕೊಪ್ಪದಲ್ಲಿ ಕಳೆದ ತಾ॥ ... ರಲ್ಲಿ ಒಬ್ಬ ವಿಶ್ವೇಶ್ವರನು ತನ್ನ ಸ್ನೇಹಿತನ ಮನೆಗೆ ಹೋಗಿ ಒಂದು ಬಟ್ಟಲು ನೀರನ್ನು ... ನಿಂದ ಒಂದು ಕಾಗದದ ಪೊಟ್ಟಣವನ್ನು ತೆಗೆದು ಅದರೊಳಗಿದ್ದ ಪುಡಿಯನ್ನು ನೀರಿನೊಳಗೆ ಹಾಕಿ ಕುಡಿದು ಕೊಂಚಹೊತ್ತಿನಲ್ಲೇ ಪ್ರಾಣವನ್ನು ಬಿಟ್ಟನು.

ನಂಜನಗೂಡು ಸಬ್ ಡಿವಿಜನ್ ಆ॥ ಕಮಿಷನರಾದ ಮ॥ ಸುಂದರರಾಜಯ್ಯಂಗಾರರು ಈ ತಿಂಗಳಿಂದ ಉದ್ಯೋಗದಿಂದ ನಿವೃತ್ತರಾಗಲು ಸರ್ಕಾರದವರ ಅಪ್ಪಣೆಯಾಗಿರುವುದು, ಸಾಗರ ಸಬ್ ಡಿವಿಜನ್, ಆ॥ ಕಮಿಷನರಾದ ಮ॥ ಎಲ್. ಕೃಷ್ಣಸ್ವಾಮಿಯರು ಈ ತಾ॥ ೩ ರಲ್ಲಿ ಮ॥ ಅಯ್ಯಂಗಾರರಿಂದ ಅಧಿಕಾರವನ್ನು ವಹಿಸಿಕೊಳ್ಳುವುದಾಗಿ ಗೊತ್ತಿಯುತ್ತೇವೆ.

ಮೈಸೂರು ದೇಶದಲ್ಲಿ ೧೯೧೫ ನೇ ಸಾಲಿನಲ್ಲಿ ಸುಮಾರು ೧೬,೫೫೬ ದನಗಳು ಮೃತಪಟ್ಟಿದ್ದುವು. ಆದರೆ ೧೯೧೪ ರಲ್ಲಿ ೫೫,೪೫೫ ದನಗಳು ಮಾತ್ರ ಸತ್ತಿರುವುವು. ಹಿಂದಿ ವರ್ಷದ ದುಷ್ಟಬಾಧೆಗಳಿಂದ ಈ ವರುಷ ... ದನಗಳು ಹೆಚ್ಚಾಗಿದ್ದರೂ, ಒಟ್ಟು ಮರಣದಲ್ಲಿ ಹೋದವರೆಂದು ... ಕಡಿಮೆಯಾಗಿರುವುದು ಸಂತೋಷಕರವಾಗಿದೆ. ಮೈಸೂರು ಡಿಸ್ಟ್ರಿಕ್ಟಿನಲ್ಲಿ ೧೯೧೫ ರಲ್ಲಿ ೧೯೨೦ ಇದ್ದವು ೧೯೧೪ ರಲ್ಲಿ ... ಇದ್ದವು.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಔಷಧಿಗಳು ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲ್ಲದೆ ಕೊಡಬೇಕು. ಇಷ್ಟಪಟ್ಟವರು ಬೇಗನೆ ವಿಳಾಸಕ್ಕೆ ಬರೆಯಿರಿ

೧೯೧೧ನೇ ಇಸವಿ ಸೆಪ್ಟಂಬರ್ ತಾ|| ೧೧ ರಿಂದ ೧೯೧೧ನೇ ಸೆಪ್ಟಂಬರ್ ತಾ|| ೧೭ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೇ ವಿರೋಧಿಕೃತು ಸಂವತ್ಸರದ ಭಾದ್ರಪದ ಬ|| ಚೌತಿಯಿಂದ ಭಾದ್ರಪದ ಬ|| ಅಮಾವಾಸ್ಯೆವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕನ್ಯಾ ಶ್ರಾವಣ
11	[1] ಸೋಮ	ತ	36 27	ರೇ	29 56	26
12	ಮಂಗಳ	ಚ	29-52	ಕೃ	28 14	27
13	[2] ಬುಧ	ಪಂ	25-1[illegible]	ಭ	25-3[illegible]	28
14	[4] ಗುರು	ಷ	20- 9	ಕೃ	22-15	29
15	ಶುಕ್ರ	ಸ	14-30	ರೋ	18-29	30
1[illegible]	ಶನಿ	ಅ	8 -38	ಮೃ	14-25	31
1[illegible]	ಭಾನು	ನ	2-5	ಆರ್ದ್ರ	10-54	1

(1) ಭರಣೀಶ್ರಾದ್ಧ, ಸಂಕಟಹರಚತುರ್ಥಿ (2) ಬಲರಾಮಜಯಂತೀ, ಮಹಾಲಯ ಮಧ್ಯಾಷ್ಟಮೀ ಕಪಿಲಾಷಷ್ಠಿ, (3) ಕಾಲಾಷ್ಟಮೀ, ವ್ಯತೀಪಾತ.

ಮೈಸೂರು ಸ್ಟಾರ್ ... ಪ್ರೆಸ್ಸಿನಲ್ಲಿ ಮುದ್ರಿಸಿದ

REGISTERED NO. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

[illegible]

ಸಂಪುಟ ೨೮.] ಮೈಸೂರ್ ಸ್ಟಾರ್ ೧೯೧೧ ನೇ ಇಸವಿ ಸೆಪ್ಟಂಬರ್ ತಾರೀಖು ೧೮ ನೇ ಸೋಮವಾರ. [ಸಂಚಿಕೆ ೩೮

೩೦ ಕಥೆಗಳು. ಸಚಿತ್ರ. ೪೧೦ ಪುಟಗಳು.

ಕಲಿಸದ್ಭತ್ತಿ ಕಥೆಗಳು.

16

(೧) ಧರ್ಮ, ಕರ್ಮ, ಸತ್ಯ, ಆಚಾರ, ಬ್ರಹ್ಮಚರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರಗಳನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಯರ ಪಾತಿವ್ರತ್ಯಧರ್ಮ, [illegible] ಲೋಕಾನುಭವ, ವಿವಿಧನೀತಿ ಮುಂತಾದವನ್ನು ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಿಕೆಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರ [illegible] ಸಕಲಶಕ್ತಿಗಳ ಸಂಗ್ರಹವಾಗಿದೆ. (೫) ಸುಂದರವಾದ ವಾಕ್ಯಬಂಧದಿಂದ ಅಲಂಕೃತವಾಗಿರುವದು. (೬) ಚಿತ್ರ ಕಥಾ [illegible] ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಸಣ್ಣಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಕ್ಕೆ ಚಿತ್ರಗಳನ್ನು ಇಟ್ಟಿರುತ್ತದೆ. ಪ್ರತಿ ೧ಕ್ಕೆ ರೂ. ೧-೪-೦ ಅಂಚೆಕೂಲಿ ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದೆಣ್ಣೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರ ಪಟಗಳು; ದೊರೆಯುತ್ತವೆ. (ಪಟ್ಟಿ) ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ:—ವಿಜಯಕೇಸರಿ ಕಂಪನಿ, ಬೆಂಗಳೂರು ಸಿಟಿ.

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು

22

ಲೋಕಕಾಮಾಕ್ಷಿರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಧನುರ್ವಾತ, ಜ್ವರ, ಹೊಟ್ಟೆಶೂಲೆ

ಸಂದುಗಳ ನೋವು ಹೆಚ್ಚು ಕಾಲದ ಕೆಮ್ಮು (ದಮ್ಮು), ಮೈನಡುಕ, [illegible] ಅಗ್ನಿಮಾಂದ್ಯ, [illegible], ಬೆಸ್ತ್ರಾಯ, ಸೆಗಣಿ, ಸನ್ನಿ, [illegible], ಇನ್ನೂ ಅನೇಕ ರೋಗಗಳಿಗೆ ಕೂಡಲೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಲಿನೊಡನೆ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತೆ. ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯೌವನಕಾಲದಲ್ಲಿಯೂ [illegible], ನರಗಳ ಬಲಹೀನತೆಯನ್ನು [illegible] ರಕ್ತದಲ್ಲಿರುವ ದೋಷವನ್ನು ತೆಗೆದು ಶುದ್ಧಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟಿನ ಶೂಲೆ, ಸುಸ್ತಿನ ಎಳವು, ಜ್ವರ, [illegible], ಕೃಶತ್ವಗಳನ್ನು ಗುಣಪಡಿಸುತ್ತೆ. [illegible] ಸುತ್ತಿರುವವರು ಖಂಡಿತವಾಗಿ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ. [illegible] ೩೦ ಮಾತ್ರೆಗಳುಳ್ಳ ಡಪ್ಪಿಗೆ ೮ ಆಣೆ; ೫ ಡಪ್ಪಿಗೆ ೧ ರೂಪಾಯಿ [illegible] ವರೆಗೆ ಪೋಸ್ಟೇಜು ೪ ಆಣೆ

೫. ಪ್ಲೇಗಿನೌಷಧ—ಪ್ಲೇಗಿಗೆ ಔಷಧವು [illegible] ಅನುಭೋಗಿಸಿದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನು [illegible] ಗುಣಪಡಿಸುವ ಔಷಧವು ಇದೊಂದೇ ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿ [illegible] ದುಲ್ಲ. ತರಿಸಿ ನೋಡಿ, ಅನುಭವಸಹಿತ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಸೀಸೆ ೧ಕ್ಕೆ ರೂ. [illegible] ಗೆಲ್ಲ ಮೊದಲಾದವಕ್ಕೆ ಸಪರೇಟ ಚಬ್ಬಿ ೧ಕ್ಕೆ ಆ. ೪. ವರದರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರೆಲ್ಲರಿಗೂ [illegible] ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮಾನ್ಯ [illegible], [illegible]

[illegible]

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸಿದ್ಧೌಷಧವಾದುದು ಕೊಟ್ಟವರಿಗೆಲ್ಲರಿಗೂ [illegible].

(ಸೈ) [illegible]

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನಮ್ಮ ವಿಳಾಸ:—ಶ್ರೀ ಸೀತಾರಾಮ [illegible],

[illegible]

4

ಉತ್ತಮ ಗ್ರಂಥಗಳು.

ಶಿವಸ್ತುತಿರತ್ನಾವಳಿ—ಬೆಲೆ ವಿ. ಪಿ. ೭ ಆಣೆ. ಇದು ಉತ್ತಮವಾದ ಸ್ತೋತ್ರ. [illegible]

ಶರಣಮಾರ್ಗಪ್ರಕಾಶಿಕೆ—ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿ [illegible] ವಿಧ ವಿಧ ಸಿದ್ಧಾಂತಗಳನ್ನು. ವೇದಾಂತಿಗಳಿಗೂ, ಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವ—ಬೆಲೆ ವಿ. ಪಿ. ೧-೪-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟೀಕಿನಿಂದಲೂ [illegible] ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ [illegible] ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಯಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತ—ಬೆಲೆ ವಿ. ಪಿ. ೮ ಆಣೆ. ಇದರಲ್ಲಿ ಅದ್ವೈತವರಣವಾಮ [illegible] ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ—ಬೆಲೆ ವಿ. ಪಿ. ೧೬ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತ

ಪುರುಷರೂ [illegible] ಬೆಂಗಳೂರು.

[illegible]

3 ಎಲ್ಲರಿಗೂ ಬೇಕಾದ ಪುಸ್ತಕಗಳು.

(೧) ಪದಾರ್ಥ ಚಿಂತಾಮಣಿ ೦-೩-೦ ದಿವ್ಯ ಪದಾರ್ಥಗಳು ಪ್ರಸಿದ್ಧವಾದ ಪದಾರ್ಥ ರಾಜ್ಯದ ವಿಷಯ [illegible] ವಿನೋದಕರವಾದ ಬಹು ಉತ್ತಮೋಪಯೋಗಿಗಳೂ, ಸುಂದರವಾದ ಚಿತ್ರ [illegible], ಅಲ್ಲದೆ ಮನೆ [illegible], ಪದ್ಧತಿ, [illegible], ಮನೆ, ಮದುವೆ, ನಾಟಕ, ನೃತ್ಯ, [illegible], ಗಾಯನ, [illegible], ಪ್ರೋಟ್, ಕ್ರಿಕೆಟ್, [illegible], ವ್ಯಾಪಾರ, [illegible], ಆ [illegible] ಬಗ್ಗೆ, [illegible] ಸಿದ್ಧವಾಗಿ ಕೊಟ್ಟಿದೆ.

(೨) [illegible] (ನಾವೆಲ್) [illegible] ಕಾಲ [illegible] ಗೆ [illegible] ವರ್ಣಿಸಿದೆ

(೩) [illegible] ಕಥೆಗಳು ೧-೧೧-೦ [illegible] ತಿಳಿಸುವದು [illegible] ಅತ್ಯಾವಶ್ಯಕ [illegible] ರೂ ಕೊಟ್ಟಿದ್ದಾರೆ.

(೪) [illegible]

[illegible]

ಸಾಮುದ್ರಿಕ ಶಾಸ್ತ್ರ ಪರಿಚಯ

(ಕಳೆದ ಸಂಚಿಕೆಯಿಂದ ಮುಂದೆ.)

ಕಿರಿದಾದ ಬೆನ್ನು, ಸೊಂಟಗಳು, ಕಟಿಪ್ರದೇಶ, ಜಘನ, ಪಾರ್ಶ್ವ ಕಾಲುಗಳೊಳಗೆ ಗಟ್ಟಿಯಾದ ಅಂಗಗಳು, ದಪ್ಪವಾದ ಬೆನ್ನಿನ ಕೆಳಭಾಗದಲ್ಲಿ ಥಳಥಳಿಸುವ, ಗಟ್ಟಿಯಾದ ತೊಡೆಗಳು, ಸ್ವಚ್ಛವಾಗಿರುವ ಶುಭ್ರವಾದ ರೋಮಗಳುಳ್ಳ ಭಾಗವುಳ್ಳ ಕೆಂಪಾದ ದಪ್ಪವಾದ ತುಟಿಗಳು [illegible] ಗುದಸ್ಥಾನವು, [illegible] ಹಿಂಭಾಗದಲ್ಲಿ ತಗ್ಗಾಗಿರುವ ಅಂಗಗಳು, ವಿಸ್ತಾರವಾದ ಎದೆಯು, ದಪ್ಪವಾದ ಹಸ್ತಗಳು, ದೃಢವಾದ ಪಾದಗಳು ಉಳ್ಳ ಕೆಂಪಾದ ಉಗುರುಗಳೆಂದೂ ತಿಳಿಯಬೇಕು. ಮೇಲ್ಭಾಗದಲ್ಲಿ ಉನ್ನತಗಳಾದ ಅವಯವಗಳು, ಹಿಂಭಾಗದಲ್ಲಿ ವಿಶಾಲವೂ ಉದ್ದವಾದ ಕಿವಿಯು, ತುಟಿಗಳು ಕಟಿಪ್ರದೇಶ ಭಾಗವು, ಹೀನವಾದ ವರ್ಣವು, ಸ್ವಲ್ಪವಾದ ಪರಾಕ್ರಮವು, ದಪ್ಪವಾದ ಹೊಟ್ಟೆಯು, ಪಾದಗಳು, ಬಾಲಗಳು ಉಳ್ಳವಾಗಿರುವ ಅಶ್ವಗಳು [illegible] ಹುಟ್ಟಿದುವೆಂದರಿಯುವುದು. ಮುಂಭಾಗದಲ್ಲಿ ನೋಡುವುದಕ್ಕೆ ಮನೋಹರಗಳಾಗಿ, ಸಣ್ಣವಾದ ಕೂದಲು, ಅವಯವಗಳು, ಪಾದಗಳು, ದೃಢವಾದ ರೋಮಗಳು, ದವಡೆಗಳುಳ್ಳವಾಗಿ, ಸ್ಥೂಲವಾದ ವೃಷಣಗಳು, ಹಿಂಭಾಗದಲ್ಲಿ ವಿಸ್ತಾರವು, [illegible] ಕೆಂಪಾದ [illegible] ಕಾಣಿಸುತ್ತವೆ. [illegible] ಮುಂದಿನ [illegible] ಸ್ಥೂಲವಾದ ಬಾಲವು, [illegible] ಗಳು, ಚಿಕ್ಕದಾದ [illegible] ವಿಸ್ತಾರವಾದ [illegible] ದಪ್ಪವಾದ [illegible] ದೇಶದಲ್ಲಿ ಹುಟ್ಟಿದುವೆಂದರಿಯುವುದು. [illegible] ಕಳು, ಹ್ರಸ್ವವಾದ [illegible] ದೀರ್ಘಗಳಾದ ಕಿವಿಗಳು, ವಿಸ್ತಾರವಾದ [illegible] ವಿಕಾರವಾದ [illegible] ಹಸ್ತಗಳು, ಕ್ರೂರವಾದ ಬಾಲವು, [illegible] ಸ್ಥೂಲವಾದ [illegible] ದೇಶದಲ್ಲಿ ಹುಟ್ಟಿದುವುಗಳು [illegible] ಅಂಗಗಳು, ಹಿಂಭಾಗದಲ್ಲಿ ಹ್ರಸ್ವವಾದ ಅಂಗಗಳು, ಸ್ವಲ್ಪವಾದ [illegible] ದೇಶದಲ್ಲಿ ಹುಟ್ಟಿದುವುಗಳು ದೀರ್ಘವಾದ ಮುಖವು, ದಪ್ಪವಾದ [illegible] ಗಳು [illegible] ಸ್ವಲ್ಪವಾದ [illegible] ಗಳು, ಕಟ್ಟು ಕಟಿಯುಳ್ಳ [illegible] ಅಶ್ವಗಳು [illegible] ಮುಖ, ಕಿವಿಗಳು, ವಿಸ್ತಾರವಾದ [illegible] ಮೊಣಕಾಲಿನವರೆಗಿನ ರೋಮವು [illegible] ಅಶ್ವಗಳು [illegible] ಉತ್ಪನ್ನವಾಗಿ [illegible] ವಿಕಾರವು [illegible] ಅಶ್ವಗಳು [illegible] ಅಂಗಗಳ [illegible] ಲಕ್ಷಣಗಳು [illegible] ಮುಖ್ಯಗಳಾದ ಮೂವತ್ತೆರಡು ಲಕ್ಷಣಗಳ [illegible] ಅಶ್ವಗಳ ಅಂಗಗಳಲ್ಲಿ ನಾಲ್ಕು ದೀರ್ಘವಾಗಿಯೂ, ನಾಲ್ಕು ಉನ್ನತವಾಗಿಯೂ, ನಾಲ್ಕು ವಿಸ್ತಾರವಾಗಿಯೂ, ನಾಲ್ಕು ಹ್ರಸ್ವವಾಗಿಯೂ, ನಾಲ್ಕು ಶ್ವೇತವಾಗಿಯೂ, ನಾಲ್ಕು ಸ್ಥೂಲವಾಗಿಯೂ, ನಾಲ್ಕು [illegible] ಲಕ್ಷಣಗಳು [illegible] ಮುಖ, ಕುತ್ತಿಗೆ, ಬೆನ್ನು [illegible] ನಾಲ್ಕು ದೀರ್ಘಗಳೆಂದರೆ [illegible] ನಾಲ್ಕು ರಕ್ತವರ್ಣಗಳೆಂದರೆ [illegible] ನಾಲ್ಕು [illegible] ನಾಲ್ಕು [illegible] ಗಳು, [illegible] ಗಳು, ಹೇಶಗಳು, [illegible] ಕಂಠಗಳು.

ಯವ ನಾಲ್ಕು ತಗ್ಗಾಗಿರಬೇಕು. [illegible] ಸ್ವರವು, [illegible] ಗಳು, [illegible] ಗಳು, ಬಂಧಿಗಳು ಕೂಡ [illegible] ಕರ್ಣಮಧ್ಯವು, ಹೃದಯವು, ಕರ್ಣಗ್ರಂಥಿ, ಪುಚ್ಛಭಾಗವು ಕೂಡ ಪುಷ್ಟವಾಗಿರಬೇಕು. [illegible] ಮುಖ್ಯವೆಂದು ಲಕ್ಷಣಗಳು [illegible] ಸುಳಿಗಳಿಂದಲೂ, [illegible] ಯಾವ ದೇಶಗಳಲ್ಲಿ ಹುಟ್ಟಿದ [illegible] ಅಂಗವಿಭಾಗಗಳಿಂದಲೂ, [illegible] ಪರೀಕ್ಷೆಯು ಮಾಡಬೇಕು. ಉತ್ತಮ ಮಧ್ಯಮ ಅಧಮ ಭೇದಗಳು ತಿಳಿಯಲ್ಪಡತಕ್ಕವು. [illegible] ವಿದ್ವಾಂಸರು [illegible] ಸುಗಂಧವುಳ್ಳ [illegible] ಅಶ್ವಗಳ ಲಕ್ಷಣಗಳು, ಜಾತಿಭೇದಗಳು, ದೇಶವಿಭಾಗಗಳು, ಶುಭಾಶುಭಗಳು, ಸುಳಿಗಳು, ಲಕ್ಷಣಗಳ ಫಲಗಳು, ಗತಿಭೇದಗಳು ಕೂಡ ವಿಶಿಷ್ಟವಾಗಿ ನಿರೂಪಿಸಿದೆಯಷ್ಟೆ. [illegible] [illegible] ರಸಿಕ ಮನೋರಂಜಕವಾಗಿ ವಿರಚಿತವಾದರೂ [illegible] ಕವಿತ್ವ ಶಕ್ತಿಯೊಳಗೆ ಅಶ್ವಲಕ್ಷಣ ವರ್ಣನೆಯು [illegible] ಪರಿಸಮಾಪ್ತಿಯಾದುದು. (ಬರೋಡ)

ಪ್ಲೇಗ್ ರೋಗದ ಹಾವಳಿ

ಈ ರೋಗವನ್ನು ತಪ್ಪಿಸಿಕೊಳ್ಳತಕ್ಕ ಉಪಾಯವು ಉದಾಸೀನತೆಯಿಂದ ಉಂಟಾಗತಕ್ಕ ಅನರ್ಥ!

ಎಲ್ಲರೂ ಓದಿರಿ

ಸಾವಿರಕ್ಕೆ ಹೆಚ್ಚು ಜನಸಂಖ್ಯೆಯುಳ್ಳ [illegible] ಇಸವಿಯಲ್ಲಿ ಈ ರಾಜಧಾನಿಯಲ್ಲಿ ಪ್ಲೇಗ್ ರೋಗವು ಪ್ರಬಲವಾಗಿರಲಿಲ್ಲ. ಕಳೆದ ಜುಲೈ ಮಧ್ಯಭಾಗದಲ್ಲಿ ಈ ರೋಗವು ಉತ್ಪನ್ನವಾಯಿತು. [illegible] ಆಗಸ್ಟ್ ಮುಂದಿನ [illegible] ಈಗ [illegible] ಕಳೆದ ಆಗಸ್ಟ್ [illegible] ಈ ರೋಗವು ತಗಲಿ [illegible] ಜನಗಳು ಸತ್ತರು.

[illegible] ಇನಾಕ್ಯುಲೇಷನ್ ಮಾಡಿಸಿದವರು [illegible] ಜನಗಳಿಗೆ ಇನಾಕ್ಯುಲೇಷನ್ [illegible]

[illegible] ಇವರಲ್ಲಿ ಇನಾಕ್ಯುಲೇಷನ್ [illegible] ಕಳೆದ [illegible] ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ [illegible] ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದವರ [illegible] ಜನಗಳಿಗೆ ಪ್ಲೇಗು [illegible] ಸತ್ತರು.

ಇನಾಕ್ಯುಲೇಷನ್ ಆದವರ [illegible] ಜನಗಳಿಗೆ ತಗಲಿ [illegible] ಸತ್ತರು. ಈ ಅಂಕಿಗಳಿಂದ ಇನಾಕ್ಯುಲೇಷನ್ [illegible] ಪ್ಲೇಗ್ ತಗಲುವುದಕ್ಕೆ ಮತ್ತು ಹಾಗೆ [illegible] ಇನಾಕ್ಯುಲೇಷನ್ ಆದವರಲ್ಲಿ ಸಾಯುವುದರ ಅಭಾವ [illegible] ಇನಾಕ್ಯುಲೇಷನ್ ಆಗದೆ [illegible] ಜನಗಳು ಸಾಯುತ್ತಾರೆಂಬುದಾಗಿಯೂ ಗೊತ್ತಾಗುತ್ತದೆ.

(೧) [illegible] ಎಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಂಡರೆ [illegible] ಮೂರು ತಿಂಗಳವರೆಗೆ ಪ್ಲೇಗ್ ತಗಲಿ ಸತ್ತರು.

(೨) [illegible] ಒಂದು ಮನೆಯಲ್ಲಿ [illegible] ಇನಾಕ್ಯುಲೇಷನ್ ಮಾಡಿಸಿಕೊಂಡರು [illegible] ಇನಾಕ್ಯುಲೇಷನ್ ಮಾಡಿಸಿಕೊಳ್ಳದೆ ಇದ್ದ [illegible] ಪ್ಲೇಗ್ ರೋಗವನ್ನು ಹೊಂದಿ ಸತ್ತರು.

(೩) [illegible] ಒಂದು ಮನೆಯಲ್ಲಿ ಆರು ಜನಗಳು ಇನಾಕ್ಯುಲೇಷನ್ ಮಾಡಿಸಿಕೊಂಡರು. [illegible]

ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದರಿಂದ ಪ್ಲೇಗು ರೋಗಕ್ಕೆ ಜನಗಳು ಹಾನಿಯಾಗುವುದಿಲ್ಲ. ಎಲ್ಲರೂ ಇನಾಕ್ಯುಲೇಷನ್ ಮಾಡಿಸಿಕೊಳ್ಳುವುದು ಉತ್ತಮವೆಂದು ತೋರುತ್ತದೆ.

ವಿವರ	ಜನಸಂಖ್ಯೆ	ರೋಗ ತಗಲಿದವರು	ರೋಗ ತಗಲಿದವರು ನೂರಕ್ಕೆ	ಸತ್ತವರು	ಸತ್ತವರು ನೂರಕ್ಕೆ	ರೋಗ ತಗಲಿದವರಲ್ಲಿ ಸತ್ತವರು ನೂರಕ್ಕೆ
ಇನಾಕ್ಯುಲೇಷನ್ ಆದವರು	[illegible]	೮	೧	೬೮	೧	೫೨
ಇನಾಕ್ಯುಲೇಷನ್ ಆಗದವರು	[illegible]	೩೩	೨೩೩	೩೯	೩೯	೭೭೩

Mysore, 12th Sept 1911.

V. L. MANKER,
Health Officer, Mysore City.

ಗ್ರಂಥವಿಮರ್ಶೆ

ಪ್ರಹ್ಲಾದ ಚರಿತ್ರೆ

ಬೆಂಗಳೂರಿನ ಪೇಟೆಯ [illegible] ಪತ್ರಿಕೆಯಲ್ಲಿ ಪ್ರಕಟಿಸಿರುವ [illegible] ಭಾಗವತದೊಳಗಿನ ಪ್ರಹ್ಲಾದ ಚರಿತ್ರೆಯನ್ನು ಮೈಸೂರ ಮಹಾರಾಜಾ ಕಾಲೇಜಿನ ಸೀನಿಯರ್ ಕರ್ಣಾಟಕ ಪಂಡಿತರಾದ ವೇ॥ ಪಿ. ಆರ್. ಕರಿಬಸವಶಾಸ್ತ್ರಿಗಳಿಂದ ಪರಿಷ್ಕರಿಸಿ, ಅದರಿಂದ ಬರೆಯಲ್ಪಟ್ಟಿರುವ ಟಿಪ್ಪಣಿಯೊಡನೆ ಮೈಸೂರ ಹಾರ್ಡಿಂಜ್ ಬುಕ್ ಡಿಪೋ ಪ್ರೊಪ್ರೈಟರ್ ಜಿ. ಎ. ವೆಂಕಟಾಚಲಂ ಸೆಟ್ಟರು ಪ್ರಕಟಿಸಿ ಅದರ ಪ್ರತಿಯೊಂದನ್ನು ನಮ್ಮಲ್ಲಿಗೆ ಕಳುಹಿರುತ್ತಾರೆ. [illegible] ತಮ್ಮ [illegible] ಅಹಂಕಾರ [illegible] ದಿಂದ [illegible] ನಾರಾಯಣನ ಆಜ್ಞಾನುಸಾರ ಭೂಲೋಕದಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಹೆಸರುಗಳಿಂದ ರಾಕ್ಷಸರಾಗಿ ಹುಟ್ಟಿ, ವಿಶೇಷವಾಗಿ [illegible] ಮಾಡುತ್ತಿರುವಲ್ಲಿ ನಾರಾಯಣನು [illegible] ಹಿರಣ್ಯಕಶಿಪುವನ್ನು [illegible] ಕೊಂದು ಲೋಕ [illegible] ಈ ಗ್ರಂಥದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಈ ಗ್ರಂಥವನ್ನು ಓದುವುದರಿಂದ [illegible] ಈ ಗ್ರಂಥವು ಮೊದಲು ಪ್ರಕಟ [illegible] ಅಭಿಜ್ಞ [illegible] ವ್ಯಾಕರಣ ಮೊದಲಾದ [illegible] ಶಾಸ್ತ್ರಗಳ [illegible] ಕಠಿನ [illegible] ಪದ್ಯಗಳನ್ನು [illegible] ಒಂದು ಪುಸ್ತಕಕ್ಕೆ [illegible] ಪದ್ಯಗಳು [illegible] ಇದರ ಬೆಲೆ [illegible] ಹಾರ್ಡಿಂಜ್ ಬುಕ್ ಡಿಪೋಗೆ ಬರೆದು ತರಿಸಿಕೊಳ್ಳಬಹುದು.

ವಿಕ್ರಮೋರ್ವಶೀಯ ನಾಟಕ

ಕವಿಶ್ರೇಷ್ಠನಾದ ಕಾಳಿದಾಸ ಮಹಾಕವಿಯಿಂದ ಸಂಸ್ಕೃತದಲ್ಲಿ ರಚಿಸಲ್ಪಟ್ಟ ಈ ವಿಕ್ರಮೋರ್ವಶೀಯ ನಾಟಕವನ್ನು ಮೈಸೂರ ಶ್ರೀಮನ್ಮಹಾರಾಜರವರ ಆಸ್ಥಾನ ವಿದ್ವಾಂಸರಾದ [illegible] ಶಾಸ್ತ್ರಿಗಳು ಓದುವುದಕ್ಕೂ, ನಾಟಕಾಭಿನಯಕ್ಕೂ ಅನುಕೂಲಿಸುವಂತೆ ಕನ್ನಡ ಭಾಷೆಯಲ್ಲಿ ಗದ್ಯ, ಪದ್ಯ ಮತ್ತು ಹಾಡುಗಳಿಂದ ರಚಿಸಿ [illegible] ಮುದ್ರಣಮಾಡಿಸಿದ್ದ ಪ್ರತಿಗಳೆಲ್ಲವೂ ಮುಗಿದುಹೋದುದರಿಂದ ಈಗ ಎರಡನೆಯ ಮುದ್ರಣವನ್ನು ಮಾಡಿಸಿ ನಮ್ಮಲ್ಲಿಗೆ ಕಳುಹಿಸಿಕೊಟ್ಟಿರುವರು. ಈ ನಾಟಕವು ಕಾಳಿದಾಸ ಮಹಾಕವಿಯು ವಿರಚಿತವಾಗಿರುವುದರಿಂದ ಇದರ ಶ್ರೇಷ್ಠತೆಯನ್ನು ಹೇಳಬೇಕಾದುದಿಲ್ಲ. ಆಯಾ [illegible] ಶಾಸ್ತ್ರಿಗಳಾದರೂ ಅದೇ [illegible] ಕನ್ನಡದಲ್ಲೂ ತಂದಿರುವರು. ಈ ಗ್ರಂಥವು ಎಸ್. ಎ. [illegible] ತರಗತಿಗಳಿಗೆ [illegible] ಇದಲ್ಲದೆ [illegible] ಇದರ [illegible]

ಟ್ಟಿರುವಳು. ಪುರೂರವನೆಂಬ ಮಹಾರಾಜನು ಅಪ್ಸರಸ್ತ್ರೀಯಾದ ಊರ್ವಶಿಯನ್ನು ದೈತ್ಯನ ಸೆರೆಯಿಂದ ಬಿಡಿಸಿ ಅವಳನ್ನು ವರಿಸುವನು. ಊರ್ವಶಿಯು ಮನುಷ್ಯನನ್ನು ವರಿಸಿದುದಕ್ಕಾಗಿ ದೇವಲೋಕವಾಸವು ತಪ್ಪುವಂತೆ ಶಪಿಸಲ್ಪಟ್ಟು ಪುರೂರವನ ಕೂಡ ಬಂದು ವಾಸಮಾಡುತ್ತಿರುವಾಗ್ಗೆ, ತನ್ನ ಪ್ರಿಯನು ಮುನಿಕನ್ಯೆಯನ್ನು ದೃಷ್ಟಿಸಿ ನೋಡಿದನೆಂದು ಅತನ ಕೂಡ ಕಲಹಮಾಡಿಕೊಂಡು ವನಪ್ರವೇಶಮಾಡಿ ಒಂದು ಲತೆಯಾಗುವಳು. ಅನಂತರ ತನ್ನನ್ನು ಹುಡುಕಿಕೊಂಡು ಬಂದ ತನ್ನ ಪ್ರಿಯನ ಹಸ್ತಸ್ಪರ್ಶದಿಂದ ನಿಜರೂಪವನ್ನು ತಾಳಿ ರಾಜಧಾನಿಗೆ ಮಹಾರಾಜನ ಕೂಡ ಬಂದು ವಾಸಮಾಡುತ್ತಿರುವಲ್ಲಿ ಒಬ್ಬ ತಾಪಸಿಯು ಒಬ್ಬ ಯುವಕನನ್ನು ಆ ರಾಜ ದಂಪತಿಗಳಲ್ಲಿಗೆ ಕರತಂದು ವಿದ್ಯಾ ಬುದ್ಧಿ ಸಂಪನ್ನನಾದ ನಿಮ್ಮ ಕುಮಾರನನ್ನೊಪ್ಪಿಸಿಕೊಳ್ಳಬೇಕೆಂದು ಹೇಳುವಳು. ಊರ್ವಶಿಯು ತಾನು ಪುತ್ರನನ್ನು ಪಡೆದವೇಳೆ ಇಂದ್ರನಾಜ್ಞೆಯಂತೆ ದೇವಲೋಕಕ್ಕೆ ತೆರಳಬೇಕಾಗುವ್ವುದೆಂಬ ಭಯದಿಂದ ತಾನು ಹೆತ್ತ ಮಗುವನ್ನು ರಾಜನಿಗೆ ತಿಳುಹದೆ ತಾಪಸಿಯ ವಶಕ್ಕೆ ಕೊಟ್ಟಿದ್ದುದನ್ನು ಸ್ಮರಿಸಿಕೊಂಡು ರಾಜನಿಗೆ ನಿಜಸ್ಥಿತಿಯನ್ನು ತಿಳುಹಿ ದೇವಲೋಕಕ್ಕೆ ಹೊರಡಲುದ್ಯುಕ್ತೆಯಾಗುವಳು. ಪುರೂರವನು ಊರ್ವಶಿಯ ವಿಯೋಗವನ್ನು ಸಹಿಸಲಾರದೆ ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ವಾನಪ್ರಸ್ಥಾಶ್ರಮಕ್ಕೆ ಹೊರಡಬೇಕೆಂದು ಸಿದ್ಧನಾಗಿರುವಲ್ಲಿ ನಾರದರು ಬಂದು ಮುಂದೆ ದೇವದಾನವರಿಗೆ ಯುದ್ಧವಾಗುವುದು. ಆಗ್ಗೆ ನಿನ್ನ ಸಹಾಯವಾಗಬೇಕಾಗಿರುವುದರಿಂದ ನೀನು ರಾಜ್ಯವನ್ನು ಬಿಟ್ಟು ಹೋಗಬೇಕಾದುದಿಲ್ಲ. ಮತ್ತೂ ಊರ್ವಶಿಯು ನಿನ್ನ ಮರಣಾವಧಿ ನಿನ್ನ ಬಳಿಯಲ್ಲೇ ಇರುವಳೆಂದು ಹೇಳಿ ಸಮಾಧಾನಪಡಿಸಿ ಹೋಗುವನು. ಇದೇ ನಾಟಕದ ಮುಖ್ಯಾಂಶವು. ಈ ಪುಸ್ತಕವು ನುಣುಪಾದ ಕಾಗದದಮೇಲೆ ಸ್ಫುಟಾಕ್ಷರಗಳಿಂದ ಅಂದವಾಗಿ ಮುದ್ರಿಸಲ್ಪಟ್ಟಿರುತ್ತದೆ. ಇದರ ಬೆಲೆ ೮ ಆಣೆ.

ಶೆಟ್ಟಿಪಣ್ಣಂ ರಂಗಾಚಾರ್ಲುರವರ ಜೀವನಚರಿತ್ರೆ

ಮೈಸೂರ ಸಂಸ್ಥಾನದ ಶ್ರೀಮನ್ಮಹಾರಾಜ [ಮುಮ್ಮಡಿ ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರ ಕಾಲಾನಂತರ ಶ್ರೀ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ ಸಿ ಎಸ್. ಐ. ಯವರ ಬಾಲ್ಯವಯಸ್ಸಿನಲ್ಲಿ ಆಗಿನ ಗವರ್ನರ್ ಜನರಲರಾಗಿಯೂ, ಮಹಾಸ್ವಾಮಿಯವರು ಪ್ರಾಪ್ತವಯಸ್ಕರಾಗಿ ರಾಜ್ಯಭಾರವನ್ನು ವಹಿಸಿದವೇಳೆ ಕೊಂಚಕಾಲ ಮಂತ್ರಿಗಳಾಗಿಯೂ ಇದ್ದು, ಇಂಗ್ಲೆಂಡಿನಲ್ಲಿರುವಂತೆ ಭರತಖಂಡಕ್ಕೆ ಅಭೂತಪೂರ್ವವಾಗಿದ್ದ ಪ್ರಜಾಪ್ರತಿನಿಧಿಸಭೆಯ ಉತ್ಪಾದಕರೂ, ಈ ಸೀಮೆಯಲ್ಲಿ ಮೊದಲು ಲೋಕೋಪಕಾರವನ್ನೇರ್ಪಡಿಸಿದವರೂ ಆದ ಶೆಟ್ಟಿ ಪಣ್ಣಂ ರಂಗಾಚಾರ್ಲುಯವರ ಜೀವನಚರಿತ್ರೆಯನ್ನು ಮಿಃ ರಾ। ಗಿ ಎ ಜಿ. ಯವರು ಸರ್ವಗ್ರಾಹ್ಯವಾಗುವಂತೆ ಕನ್ನಡದಲ್ಲಿ ಬರೆದು ಕ್ರೌನ್ ಅಷ್ಟಪತ್ರದಾಕೃತಿಯಲ್ಲಿ ನುಣುಪಾದ ಕಾಗದದ ಮೇಲೆ ಸ್ಫುಟಾಕ್ಷರಗಳಿಂದ ಬಹು ಅಂದವಾಗಿ ಮುದ್ರಣ ಮಾಡಿಸಿ ನಮ್ಮಲ್ಲಿಗೊಂದು ಪ್ರತಿಯನ್ನು ಕಳುಹಿಸಿಕೊಟ್ಟಿರುವರು. ಮಿ॥ ರಂಗಾಚಾರ್ಲುಯವರ ಸದ್ಗುಣಗಳನ್ನು ಚೆನ್ನಾಗಿ ಪರಿಶೀಲಿಸಿದವರಾದ ಮರಿಸ್ಟಲ್ಲಪ್ಪನವರ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮಿ॥ ಎಂ ವೆಂಕಟಕೃಷ್ಣಯ್ಯನವರು ಮತ್ತೂ ರಾಯಬಹದ್ದೂರ್ ಮಿ॥ ನರಸಿಂಹಯ್ಯಂಗಾರರೂ ಈ ಗ್ರಂಥಕ್ಕೆ ಪೀಠಿಕೆಯನ್ನು ಬರೆದು ಹೆಚ್ಚು ಪ್ರಾಶಸ್ತ್ಯವನ್ನುಂಟುಮಾಡಿರುವರು. ಮೈಸೂರು ಸೀಮೆಗೆ "ಮಾದರಿಸಂಸ್ಥಾನ" ವೆಂಬ ಕೀರ್ತಿಪ್ರತಿಷ್ಠೆಯು ಬರಲು ಕಾರಣಭೂತರಾಗಿದ್ದ ಮತ್ತೂ ಪ್ರಜೆಗಳ ಸುಖಸಂಪತ್ತೇ ಮಹಾರಾಜರ ಸುಖಸಂಪತ್ತೆಂದು ಪ್ರಜೆಗಳಿಗೆ ತಿಳಿದು ಕಾರ್ಯತಃ ತೋರ್ಪಡಿಸಲು ಪ್ರಯತ್ನಿಸಿದ್ದ ಆ ಮಹಾಪುರುಷರ ಜೀವನಚರಿತ್ರೆಯನ್ನು ಈ ದೇಶೀಯರಾದ ಕನ್ನಡಿಗರು ತಿಳಿಯಲು ಮಾರ್ಗವಿಲ್ಲದಿತ್ತು. ಆದರೆ ಈಗ ಮಿಃ ರಾ। ಗಿ ಎ. ಜಿ. ಯವರು ಈ ಗ್ರಂಥವನ್ನು ಬರೆದು ಆ ಕೊರತೆಯನ್ನು ಹೋಗಲಾಡಿಸಿದುದಕ್ಕಾಗಿ ಕನ್ನಡಿಗರೆಲ್ಲರೂ ಅವರನ್ನು ವಂದಿಸುವರು. ಈ ಚರಿತ್ರೆಯನ್ನು ಅದ್ಯಂತವಾಗಿ ನೋಡಿದುದೇಯಾದರೆ ಮಿ॥ ರಂಗಾಚಾರ್ಲುಯವರು ಪರದೇಶೀಯರಾದರೂ ಈ ದೇಶೀಯರ ಪುಣ್ಯವಿಶೇಷದಿಂದ ಮೈಸೂರು ಸಂಸ್ಥಾನೋದ್ಧರಣಕ್ಕಾಗಿ ಅವತರಿಸಿದ್ದರೆಂಬುದೂ, ಅವರು ತಮ್ಮನಂತರ ಮಂತ್ರಿಪದವಿಗೆ ಬಂದ ಶ್ರೀ ಶೇಷಾದ್ರಿಯ್ಯರು ಅಧಿಕಾರವಹಿಸಿದ ಅವಧಿಯಲ್ಲಿ ಮಾಡಿದುದು ಒಂದುಭಾಗ

ಸೀಮೆಯಲ್ಲಿ ಹೊಲೆಯುವ ಯಂತ್ರದ ಮತ್ತೂ ಬೈಸಿಕಲ್ಲಿನ ಒಂದು ಕಾರ್ಖಾನೆಯಲ್ಲಿ ಬೆಂಕಿಯು ಬಿದ್ದು ಕಟ್ಟಡವು ಸುಟ್ಟುಹೋಗಿ [illegible] ಬೈಸಿಕಲ್ಲು ಒಡವೆಗಳೂ [illegible] ಹೊಲೆಯುವ ಯಂತ್ರಗಳೂ [illegible] ಗಳ ಪದಾರ್ಥ ನಷ್ಟವಾಗಿದ [illegible] ಸಲ್ಪಟ್ಟಿರುತ್ತದೆ.

ದವರಿಗಾದರೂ ಅಧಿಕಾರವನ್ನು ಕೊಡಬೇಕೆಂದು ಈಗ ಪ್ರಪಂಚದಲ್ಲಿ ವಿದ್ಯೆ, ಕೃಷಿ, ವಾಣಿಜ್ಯಾದಿಗಳಲ್ಲಿ ಮುಂದುವರಿದಿರುವ ದೇಶಗಳಂತೆ ಈ ಮೈಸೂರು ದೇಶವನ್ನು ಭವಿಷ್ಯತ್ತಿಗೆ ತರತಕ್ಕ ಸಾಮರ್ಥ್ಯವು ಅವರಿಗಿದ್ದಿತೆಂಬುದೂ, ಇಂತಹ ಮಹಾಪುರುಷರನ್ನು ಕೊಂಚ ಕಾಲಾವಧಿಯಲ್ಲೇ ಕಳೆದುಕೊಂಡುದು ಈ ದೇಶದ ದೌರ್ಭಾಗ್ಯವೆಂಬುದೂ ವ್ಯಕ್ತವಾಗುವುವು. ದೇಶೋನ್ನತಿಯ ವಿಚಾರದಲ್ಲೂ, ಅಧಿಕಾರಿಗಳ ಉಚ್ಚಸ್ಥಾನಗಳ ಹಿತವನ್ನು ಬಯಸುವುದರಲ್ಲೂ ಆ ಪ್ರಜಾಹಿತಚಿಂತಕರ ಅಭಿಪ್ರಾಯವು ಹೇಗಿದ್ದಿತೆಂಬುವುದನ್ನು ತೋರ್ಪಡಿಸುವದಕ್ಕಾಗಿ ಅವರ ಚರಿತ್ರೆಯಲ್ಲಿ ಬರೆಯಲ್ಪಟ್ಟಿರುವ ಒಂದೆರಡಂಶಗಳನ್ನು ಇಲ್ಲಿ ಕೊಟ್ಟಿರುವೆವು. ಬಿವಾನರಾದ ಮಿ॥ ಟಿ ಆನಂದರಾಯರವರು ಈ ಚರಿತ್ರೆಯ ೫೦ ಪ್ರತಿಗಳನ್ನು ಕೊಂಡುಕೊಂಡಿರುವುದು ಅವರಿಗೆ ಆ ಮಹಾಪುರುಷ ವಿಷಯದಲ್ಲಿರುವ ಪ್ರೀತಿಯನ್ನೂ, ದೇಶ್ಯಬುದ್ಧಿಯನ್ನೂ ವ್ಯಕ್ತಪಡಿಸುವುದು. ಉನ್ನತಪದವಿಗೆ ಬರಬಹುದಾದ ಸರ್ಕಾರಿಯಧಿಕಾರಿಗಳೂ, ದೊಡ್ಡದೊಡ್ಡ ವಿದ್ಯಾಪ್ರಶಸ್ತಿಯನ್ನು ಪಡೆದು ಸರ್ಕಾರಿಯುದ್ಯೋಗವನ್ನು ಸಂಪಾದಿಸಿ ಅಭಿವೃದ್ಧಿಗೆ ಬರಬೇಕೆಂಬ ಕುತೂಹಲವುಳ್ಳ ವಿದ್ಯಾರ್ಥಿಗಳೂ, ಸ್ವದೇಶಾಭಿವೃದ್ಧಿಯ ಹಿತಚಿಂತಕರಾದವರೂ ಈ ಚರಿತ್ರೆಯ ಪ್ರತಿಯೊಂದನ್ನು ಅಗತ್ಯವಾಗಿ ಸಂಗ್ರಹಿಸಬೇಕಾಗಿದೆ.

"ಯಾವ ಸಮಾಜದಲ್ಲಿ ಪ್ರೌಢವಿದ್ಯಾವಂತರು ಪ್ರಾಧಿಸುವುದಿಲ್ಲವೋ ಆ ಸಮಾಜವು ಏಳಿಗೆ ಹೊಂದಲಾರದು. ಸರಕಾರದ ಬಾಲಪಾಠಶಾಲೆಗಳು, ಬಹಳ ಪಾಠಶಾಲೆಗಳಲ್ಲಿದ್ದ ಹೋದರೆ, ಎಂದಿಗೂ ಸಂಪೂರ್ಣವಾಗಲಾರವು. ಈ ಪಾಠಶಾಲೆಗಳಿಗೆ ಎಲ್ಲಾ ತರಗತಿಯ ಜನರೂ ಬಂದು ಸೇರಿ, ಯಥಾಯೋಗ್ಯವಾದ ವಿದ್ಯಾರ್ಥಿ ಪ್ರೋತ್ಸಾಹಗಳ ಮೂಲಕ ಬುದ್ಧಿಶಾಲಿಗಳಾದ ಬಡಹುಡುಗರೂ ಆ ಪಾಠಶಾಲೆಗಳನ್ನು ಪ್ರವೇಶಿಸುವಂತಾದರೆ ಆ ಪಾಠಶಾಲೆಗಳಿಂದ ಒಬ್ಬರಿಗೆ ಮಾತ್ರವಲ್ಲದೆ ದೇಶಕ್ಕೆಲ್ಲಾ ಪ್ರಯೋಜನವುಂಟೆಂದು ಸರಕಾರದವರು ತಿಳಿದಿರುವರು."

"ಸಂಸ್ಥಾನದಲ್ಲಿ ಕೃಷಿ ಕಾರ್ಖಾನೆಗಳಲ್ಲಿರುವ ಜನರು ಅಭಿವೃದ್ಧಿ ಹೊಂದಬೇಕೆಂಬ ಅಭಿಲಾಷೆಯಿಂದ ಕೇಳಿದವರಾದರೆ, ತಮ್ಮ ತಮ್ಮ ಕೆಲಸಗಳಲ್ಲಿ ತಾವುತಾವೇ ಎಷ್ಟು ಮಾಡಬಹುದೋ ಅದನ್ನು, ಸರಕಾರದವಾಗಲಿ ಅಥವಾ ಹೊರಗಿನಿಂದ ಬಂದ ಕೆಲವರಾಗಲಿ ಮಾಡಬಹುದಾದ ಉಪಕಾರದೊಡನೆ ಹೋಲಿಸಿದರೆ ಅವು ಕ್ರಮವಾಗಿ ಆನೆ ಸ್ಥೂಲಗಳಂತೆ ಇರುವುವೆಂದು ನಾನು ಪುನಃ ಜ್ಞಾಪಕಪಡಿಸಬೇಕಾಗಿದೆ. ಸುತ್ತುಮುತ್ತಲೂ ಎಲ್ಲೆಲ್ಲಿಯೂ ಪ್ರಪಂಚವು ಆಶ್ಚರ್ಯಕರವಾದ ರೀತಿಯಲ್ಲಿ ಮುಂದು ಹೋಗುತ್ತಿರುವಾಗ ಈ ದೇಶದ ಇಪ್ಪತ್ತು ಲಕ್ಷ ಜನರು ಮಾತ್ರ ೨೦೦೦ ವರ್ಷಗಳ ಹಿಂದಿನ ತಮ್ಮ ಪೂರ್ವಿಕರ ನಡತೆಗಳನ್ನೇ ಅನುಸರಿಸುತ್ತಿರುವುದು [illegible] ಬಿಹೀನತೆಯಿಂದ, ದುರ್ಭಿಕ್ಷ ಅಥವಾ ನತ್ತವಾದಾಗಲೆಲ್ಲ [illegible] ಆಪತ್ತಿನ ನೊಡಲನೆಯು ಹುಟ್ಟುಗೇ ಮೂಲಗ [illegible] ದೀರ್ಘಕಾಲದ [illegible] ಗರು ಯೂರೋಪ್ [illegible] ವನ್ನು ಕಾರ್ಖಾನೆಗಳಲ್ಲಿ ಉಪಯೋಗಕ್ಕೆ ತಂದರು. ಈ ೭ ತಾಬ್ದದ ಆದಿಯಲ್ಲಿಯೇ ಆಗ ಇಂಡಿಯಾದೇಶವು ಇಂಗ್ಲೆಂಡಿಗೆ ಬಟ್ಟೆಗಳನ್ನು ರಫ್ತುಮಾಡುತಲಿತ್ತು. ಈಗ ಇಂಗ್ಲೆಂಡು ದೇಶವು ಯೂರೋಪಿನ ಇತರ ದೇಶಗಳೊಡನೆಯೂ ಅಮೇರಿಕದೊಡನೆಯೂ ಹೋರಾಡುತ್ತಿದ್ದರೂ, [illegible] ಯಂತ್ರಗಳಿಗೆ ಎಷ್ಟೋ ಇತರ [illegible] ದೇಶ [illegible] ಇದಕ್ಕೆ ಕಾರಣವು ಯಾರಾದರೂ ಒಬ್ಬರು ಅಕಸ್ಮಾತ್ತಾಗಿ ಮಹೋಪಾಯಗಳನ್ನು (ಅಥವಾ ಮಹಾವಿಧಾನಗಳನ್ನು) ನೂತನವಾಗಿ ಕಂಡುಹಿಡಿದುದು, ಅನೇಕ ಮಂದಿ ಜನರು ಪ್ರತಿಯೊಬ್ಬರೂ ತಾವು ಮಾಡುವ ಕೆಲಸದಲ್ಲಿ ಬುದ್ಧಿಯನ್ನುಪಯೋಗಿಸಿ, ಚಿಕ್ಕ ಚಿಕ್ಕ ವಿಷಯಗಳನ್ನು ಕಂಡು ತಿಳಿದುಕೊಂಡು, ಏನಾದರೂ ತನ್ನ ಕೆಲಸವನ್ನು ಸ್ವಲ್ಪಸ್ವಲ್ಪವಾಗಿ ಉತ್ತಮಪಡಿಸಲು ಪ್ರಯತ್ನಿಸಿದುದೇ ಅದಲ್ಲದೆ ಒಟ್ಟುಗೂಡಿ ಇಷ್ಟು ಸಂಪತ್ತಿಗೂ ಅಭ್ಯುದಯಕ್ಕೂ ಕಾರಣವಾಯಿತು.

ಈ ದೇಶದ ಜನರೂ ಅದೇ ಪ್ರಕಾರವಾಗಿ ಅಭಿವೃದ್ಧಿಯ ಮಾರ್ಗದಲ್ಲಿ ನಡೆಯಲು ತೊಡಗುವುದಾದರೆ ವಿಸ್ತಾರವಾದ ಅಭಿವೃದ್ಧಿಗೆ ಇಂಡಿಯಾ ದೇಶದ ರಾಜ್ಯಾಂತರ್ಗತವಾದ ಮೈಸೂರು ದೇಶದ್ದು ಪ್ರಶಸ್ತವಾದುದು. "ಜನಗಳನ್ನು ಅಧಿಕಾರಿವರ್ಗದ ಕಷ್ಟಕರವಾದ ಅಧೀನದಿಂದ ಬಿಡಿಸಿ, ಅವರು ಕೃಷಿಕಲಾವಾಣಿಜ್ಯಗಳಲ್ಲಿ ಮುಂಗಡ ಪಡೆದು, ಅಭಿವೃದ್ಧಿಹೊಂದುವವರಾಗಿ ಮಾಡುವುದಕ್ಕೋಸ್ಕರವಾಗಿ" ಎಂಬುದು ವಿಷಯದಲ್ಲಿ ತಮ್ಮ ಕೈಯಿಂದಾಗುವುದನ್ನು ಮಹಾರಾಜರ ಸರ್ಕಾರವು ಆಲೋಚಿಸುತ್ತಿದೆ. ಆದರೆ ಈಗ ಪ್ರಜಾಪ್ರತಿನಿಧಿ ಸಭೆಗಳ ಮತ್ತು ಸ್ಥಳಿಕರ [illegible] ಕ್ಕೆ, ಜನಾಂಗದವರ [illegible] ಮಾಡಿಸುವ ಕಾರಣ, [illegible] [ಮುಗಿಲೆ ಹೆಳಿವುದು] [illegible]

ನ್ನು ಸ್ವಪ್ರಯೋಜನದ ಮತ್ತು ಸ್ವೇಚ್ಛಾಶಕ್ತಿಯ ವಿಷಯಗಳಲ್ಲಿ ಎಚ್ಚರಿಸುವರೆಂದು ಸರ್ಕಾರವು ನಿರೀಕ್ಷಿಸುತ್ತದೆ."

"ಮೊದಲನೆಯ ಪ್ರಜಾಪ್ರತಿನಿಧಿ ಸಭೆಯಲ್ಲಿ ದುರಹಂಕಾರಿಯಾದ ಒಬ್ಬ ಅಧಿಕಾರಿಯು ಪ್ರತಿನಿಧಿಯಾದ ಒಬ್ಬ ಗೌಡನನ್ನು ಪರಿಹಾಸಮಾಡಲು, ತತ್‌ಕ್ಷಣದಲ್ಲಿಯೇ ಶ್ರೀ ರಂಗಾಚಾರ್ಯರವರು ಸಭೆಯವರೆಲ್ಲರೂ ಕೇಳುವ ಹಾಗೆ "ನಮ್ಮ ಅಧಿಕಾರಿಗಳಿಗೆ ಒಂದೊಂದು ಭಾಗದಲ್ಲಿ ಬುದ್ಧಿಯು ಓದುವುದು ಅವರಿಗೆ ಅಭ್ಯಾಸವಿರತಕ್ಕ ಕೆಲಸವನ್ನು ಅವರು ಸುಮಾರಾಗಿ ಮಾಡುವರು. ಅವರಿಗೆ ಬೇರೆ ಕೆಲಸವನ್ನು ಕೊಟ್ಟರೆ ನೀರಿನಿಂದ ಈಚೆಗೆ ತೆಗೆಯಲ್ಪಟ್ಟ ಮೀನಿನ ಅವಸ್ಥೆಗೆ ಇವರು ಬರುವರು. ನಮ್ಮಲ್ಲಿ ಬೇರೆ ಬೇರೆ ಉದ್ಯೋಗದವರಾಗಿಯೂ, ಕೃಷಿ ವಾಣಿಜ್ಯ ಮೊದಲಾದವುಗಳನ್ನು ಮಾಡತಕ್ಕವರಾಗಿಯೂ, ಆತ್ಮಾವಲಂಬಿಗಳಾಗಿಯೂ ಇರತಕ್ಕ ರೈತರೇ ಮೊದಲಾದ ಮಹಾಜನರುಗಳು ಈ ಅಧಿಕಾರಿಗಳಂತೆ ವಿಕಸಿತವಾದ ಬುದ್ಧಿಯುಳ್ಳವರಲ್ಲ. ಇವರ ಬುದ್ಧಿಯು ಸರ್ವತೋಮುಖವಾದದ್ದು" ಎಂದಾಗ ಅಪ್ಪಣೆ ಕೊಡಿಸಿದರು. ಇಂದಾವರ್ತಿ ಒಬ್ಬ ದೊಡ್ಡ ಅಧಿಕಾರಿಯು "ಪ್ರಜಾಪ್ರತಿನಿಧಿಗಳನ್ನು ಹೀಗೆ ಹೆಚ್ಚಿಸಿದರೆ ಕೊನೆಗೆ ಸರ್ಕಾರದ ಉದ್ಯೋಗಸ್ಥರೆಲ್ಲಾ ಈ ಪ್ರತಿನಿಧಿಗಳಿಗೆ ಲಂಚಕೊಡುವ ಅವಸ್ಥೆಯು ಬರುವುದು" ಎಂದು ಹೇಳಿದರು. ಅದಕ್ಕೆ ಮಿ॥ ರಂಗಾಚಾರ್ಯರವರು ಕೊಟ್ಟ ಉತ್ತರವು ಅವರ ಮಹಾನುಭಾವತೆಯನ್ನು ಪ್ರದರ್ಶನಮಾಡುವುದು. ಅವರು ಹೇಳಿದ್ದೇನೆಂದರೆ — "ಪ್ರಜೆಗಳು ಅಧಿಕಾರಿಗಳಲ್ಲಿಯೂ ಅನಿವಾರ್ಯವಾದ ಕಷ್ಟಗಳನ್ನು ಪಟ್ಟು ಸೈವಲಾರರು [illegible] ಜೀವನವನ್ನು ಗಳನ್ನು ನಿರ್ಧಾರ ಮಾಡಿ [illegible] ವನ್ನು ಕೊಟ್ಟು ವಿಶೇಷ [illegible] ಅವಕಾಶವಾಗಿ ಕೊಟ್ಟಿದ್ದಾಗ್ಯೂ ದುರಂತ್ರದಿಂದ ಅಧಿಕಾರಿಗಳು ಅದರಲ್ಲಿ ತೃಪ್ತರಾಗದೆ ಬಹುಕಾಲಗಳಿಂದ ಅನೇಕ ರೂಪಗಳಿಂದ ಅವರ ಹೃದಯದೌರ್ಬಲ್ಯ [illegible] ಕೂಡ ಶಾಸನಮಾಡಿ [illegible] ಅಧಿಕಾರಿಗಳು ಲಂಚ ಕೊಡುವ ಕಾಲವು ಬಂದ ಪಕ್ಷದಲ್ಲಿ ಅದಕ್ಕೆ ನಾನು ತುಂಬಾ ಸಂತೋಷಿಸುವೆನು."

ಮೈಸೂರ್ ಗೆಜೆಟ್ ಸಂಗ್ರಹ.

[illegible]

[illegible]

[illegible]

[illegible]

[illegible]

[illegible]

ಭಾಗಗಭೋನೋದರನರಾದ [illegible] ೧೯೧೧ ನೆಯ [illegible] ತಿಂಗಳ [illegible] [illegible]

ಮೈಸೂರ್ ಸ್ಟಾರ್

೧೯೧೮ ನೇ ಇಸವಿ ಸೆಪ್ಟಂಬರ್ ೩೦ ನೇ ಸೋಮವಾರ

ಮೈಸೂರಿನ ಸರ್ಕಾರದ ಮೇಲೆ ಮದ್ರಾಸ್ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರ ಆಕ್ಷೇಪಣೆಯು

ಭರತಖಂಡದ ಸಾರ್ವಜನಿಕ ಮಹಾಸಭೆಯಲ್ಲಾಗುವ ನಿರ್ಧಾರಗಳನ್ನು ಅನುಷ್ಠಾನಕ್ಕೆ ತರುವುದಕ್ಕಾಗಿಯೂ, ದೇಶ್ಯಭಾಷಾಸಂಬಂಧವಾದ ಇತರ ಕಾರ್ಯಗಳನ್ನು ಕುರಿತು ಆಲೋಚಿಸುವುದಕ್ಕಾಗಿಯೂ ಬಂಗಾಳ, ಬೊಂಬಾಯಿ ಮೊದಲಾದ ಪ್ರಾಂತಗಳಲ್ಲಿ ಸಭೆಗಳಿರುವಂತೆ ಮದ್ರಾಸಿನಲ್ಲಿ ಪ್ರಾಂತಿಕ ಸಮಿತಿ (ಕಾಂಗ್ರೆಸ್ ಕಮಿಟಿ) ಯು ಇರುತ್ತದೆ. ಈ ಮದ್ರಾಸ್ ಪ್ರಾಂತಿಕಸಭೆಯ ಸೆಕ್ರೆಟರಿಗಳಲ್ಲೊಬ್ಬರಾದ ಮತ್ತೂ ಆನರಬಲ್ ಗೋಖಲೆಯವರಿಂದ ಸ್ಥಾಪಿತವಾಗಿರುವ "ಭರತಖಂಡದ ದೇಶಸೇವಾ ಸಂಘ" ಕ್ಕೆ ಸೇರಿದವರಾದ ಮಿ॥ ವಿ. ಎಸ್. ಶ್ರೀನಿವಾಸ ಶಾಸ್ತ್ರಿ ಬಿ. ಎ., ಯವರು ಆಗ್ಗೆ ಎರಡುವಾರಗಳ ಹಿಂದೆ ಬೆಂಗಳೂರಿಗೆ ಬಂದು ಕೆಲ ಉಪನ್ಯಾಸಗಳನ್ನು ಮಾಡಿ ಬೆಂಗಳೂರಲ್ಲಿ ಪಾಶ್ಚಾತ್ಯ ತತ್ವವೇತ್ತೆಯಾದ ಮಿಸೆಸ್ ಬೆಸೆಂಟ್ ಎಂಬಾಕೆಯಿಂದ ಸ್ಥಾಪಿತವಾಗಿರುವ ಹಿಂದೂ ವಿವಾಹ ಸುಧಾರಣಾ ಸಭೆಯವರ ಪ್ರಾರ್ಥನೆಯಂತೆ ಒಂದುಪನ್ಯಾಸವನ್ನು ಹಿಂದೆ ದಿವಾನರಾಗಿದ್ದ ಮಿ॥ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಮಾಡಲು ಸಭೆ ಕೂಡಿದಾಗ್ಗೆ, ಅಗ್ರಾಸನಾಸೀನರಾಗಿದ್ದ ಮಿ॥ ಮಾಧವರಾಯರು "ಈ ದಿವಸ ಬೆಳಿಗ್ಗೆ ಇಲ್ಲಿ ಡಿಸ್ಟ್ರಿಕ್ಟ್ ಪೊಲೀಸ್ ಅಧಿಕಾರಿಯು ನನ್ನಲ್ಲಿಗೆ ಬಂದು ಈ ದಿವಸದುಪನ್ಯಾಸವನ್ನು ನೀವು ನಡೆಯಗೊಡಬಾರದೆಂಬುದು ಮೈಸೂರ ಸರ್ಕಾರದವರ ಅಭಿಪ್ರಾಯವಾಗಿರುತ್ತದೆ" ಎಂದು ತಿಳಿಸಿದ ಸಾರವು ಹಾಗಾಗಲೆಂದೊಪ್ಪಿ ಕಳುಹಿಸಿರುವೆನಾದಕಾರಣ, ಮಿ॥ ಶಾಸ್ತ್ರಿಯವರ ಈ ದಿವಸ ಮಾತ್ರ ದೇಶೀ-ಸರಣಿ ಉಪನ್ಯಾಸವು ನಡೆಯುವುದಿಲ್ಲವೆಂದು ಸಭಿಕರಿಗೆ ತಿಳಿಸಿದರು. ಈ ಉಪನ್ಯಾಸವನ್ನು ಕೇಳಲು ಚೀಫ್ ಕೋರ್ಟ್ ಜಡ್ಜಿಯಾದ ಮಿ॥ ಕೆ. ಎಸ್. ಚಂದ್ರಶೇಖರಯ್ಯರವರೇ ಮೊದಲಾದ ಅಧಿಕಾರಿಗಳೂ, ವಿದ್ವಾಂಸರೂ ಬಂದಿದ್ದರು. ರಾಜಕೀಯ ವಿಚಾರವಾಗಲ್ಲದೆ ಬರಿಯ ವಿವಾಹ ಸುಧಾರಣೆಯನ್ನು ಕುರಿತು ಮಿ॥ ಶಾಸ್ತ್ರಿಗಳವರು ಉಪನ್ಯಾಸವನ್ನು ಮಾಡಲು ಮೈಸೂರು ಸರ್ಕಾರದವರು ಏನೊಂದು ಕಾರಣವಿಲ್ಲದೆ ಹೀಗೆ ಆಕಸ್ಮಾತ್ತಾಗಿ ಅಡ್ಡಿಪಡಿಸಿದುದರ ಕಾರಣ ನೆರೆದಿದ್ದವರಲ್ಲಿ ಯಾರಿಗೂ ಸಮಾಧಾನಕರವಾಗಿ ತಿಳಿಯಲಿಲ್ಲ. ಉಪನ್ಯಾಸಕರಾದ ಮಿ॥ ಶಾಸ್ತ್ರಿಗಳು ಬಹು ಖಿನ್ನಮನಸ್ಕರಾಗಿ ದಿವಾನರಲ್ಲಿಗೆ ಹೋಗಿ ಹೀಗೆ ಹಠಾತ್ತಾಗಿ ಉಪನ್ಯಾಸವನ್ನು ನಿಲ್ಲಿಸಲ್ಪಟ್ಟ ಕಾರಣವೇನೆಂದು ಕೇಳಲು, ದಿವಾನರು ಸರ್ಕಾರದ ಕಾರ್ಯದರ್ಶಿಯವರನ್ನು ಕೇಳಿರೆಂದು ಹೇಳಲು, ಅದರಂತೆ ಸೆಕ್ರೆಟರಿಗಳನ್ನು ಕೇಳಲು ಅವರು ಯಾವ ಕಾರಣವನ್ನೂ ಹೇಳದಿರಲು ಮದ್ರಾಸಿಗೆ ತೆರಳಿದರು.

ನಮ್ಮ ಸರ್ಕಾರದವರು ಆದರಣೀಯರಾದ ಮಿ॥ ಶಾಸ್ತ್ರಿಗಳುಪನ್ಯಾಸವನ್ನು ತಡೆಹಿಡಿದ ವಿಚಾರದಲ್ಲಿ ಮೈಸೂರಿನ ಮತ್ತೂ ಹೊರಗಣ ವೃತ್ತಪತ್ರಿಕೆಗಳಲ್ಲಿ ಚರ್ಚೆಯು ನಡೆಯುತ್ತಿದೆ. ಮತ್ತೂ ಸಾರ್ವಜನಿಕ ಮಹಾಸಭೆಗೆ ಸಂಬಂಧಪಟ್ಟ ಮದ್ರಾಸ್ ಪ್ರಾಂತಿಕ ಸಭೆಯವರು ತಮ್ಮ ಸಭೆಯ ಸೆಕ್ರೆಟರಿಗಳಲ್ಲೊಬ್ಬರಾದ ಮಿ॥ ಶ್ರೀನಿವಾಸ ಶಾಸ್ತ್ರಿಯವರು ಬೆಂಗಳೂರಲ್ಲಿ ಉಪನ್ಯಾಸವನ್ನು ಮಾಡಲು ಮೈಸೂರು ಸರ್ಕಾರದವರು ಅಡ್ಡಿಪಡಿಸಿದ ವಿಷಯವನ್ನು ಕುರಿತು ಆಲೋಚಿಸುವುದಕ್ಕಾಗಿ ಕಳೆದ ತಾ॥ ೧೬ ರ ಸಾಯಂಕಾಲ ಮದ್ರಾಸಿನಲ್ಲಿರುವ ಮಹಾಜನ ಸಭಾಮಂದಿರದಲ್ಲಿ ಆನರಬಲ್ ಮಿ॥ ಟಿ. ವಿ. ಶೇಷಗಿರಿ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಾಗ್ಗೆ, ಆಗ್ಗೆ ಮಿ॥ ರಾ॥ ಗಳಾದ ಆನರಬಲ್ ಮಿ॥ ಎ. ಗೋವಿಂದರಾಘವಯ್ಯರ್, ಟಿ. ವಿ. ಮುದ್ದುಕೃಷ್ಣಯ್ಯರ್, ವಿ. ಮಾಸಿಲಾಮಣಿಪಿಳ್ಳೆ, ಕೆ. ಎಸ್. ಅಯ್ಯರ್, ಪಿ. ನಾಗೇಶ್ವರಂ, ಸಿ. ಪಿ. ರಾಮಸ್ವಾಮಯ್ಯರ್, ಸಿ. ಕೆ. ಸುಬ್ರಹ್ಮಣ್ಯಯ್ಯರ್, ಎ. ರಂಗಸ್ವಾಮಿ ಅಯ್ಯಂಗಾರ್, ಜಿ. ಕೋದಂಡರಾಮಯ್ಯರ್, ಜೆ. ಎ. ಸಲ್ದಾನ್ಹ ಮೊದಲಾದ ಮೆಂಬರುಗಳು ಬಂದಿದ್ದರು. ಅಲ್ಲದೆ ಓವಾಲ್ ಬಹದ್ದೂರ್ ಎಂ. ಆದಿನಾರಾಯಣಯ್ಯನವರು ಮತ್ತೂ ಗೋಂದಲೂರು ದಮೋದರ್ ಮಿ॥ ರಾಮಸ್ವಾಮಿಯವರು ಸಭೆಗೆ ಬರಲಾಗದಿದ್ದುದಕ್ಕಾಗಿ ಮೈಸೂರು ಸರ್ಕಾರದವರ ಈ ವಿಚಾರದಲ್ಲಿ ತಮಗುಂಟಾಗಿರುವ ಅಸಮಾಧಾನವನ್ನು ಬರೆದು ಕಳುಹಿದ್ದರು. ಸಭಾಧ್ಯಕ್ಷರೂ ತಮ್ಮ ಸಭೆಯ ಸೆಕ್ರೆಟರಿಗಳಲ್ಲೊಬ್ಬರಾಗಿರುವ, ಸರ್ಕಾರದಿಂದ ಬರುತ್ತಿದ್ದ ಉದ್ಯೋಗವನ್ನು ಬಿಟ್ಟು ದೇಶಸೇವೆಗಾಗಿ ತೊಡಗಿರುವ, ಪ್ರೌಢ ವಿದ್ವಾಂಸರಾಗಿಯೂ ಸರ್ಕಾರದವರ ಅಪ್ರೀತಿಗೆ ಗುರಿಯಾಗದಿರುವ ಮಿ॥ ಶ್ರೀನಿವಾಸ ಶಾಸ್ತ್ರಿಗಳವರು ವಿವಾಹ ಸುಧಾರಣೆಯ

ಸಂಬಂಧವಾಗಿ ಮೈಸೂರ ಸಂಸ್ಥಾನದ ದಿವಾನರಾಗಿದ್ದ ಮಿ॥ ವಿ. ಪಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಮಾಡಲು ಮೈಸೂರ ಸರ್ಕಾರದವರು ನಿಷ್ಕಾರಣವಾಗಿ ಅಡ್ಡಿಪಡಿಸಿರುವುದು ತಪ್ಪಾಗಿದೆ, ಅಲ್ಲದೆ ಹೀಗೆ ಅಡ್ಡಿ ಮಾಡಿದುದರ ಕಾರಣವನ್ನು ಉಪನ್ಯಾಸಕರಿಗೆ ಸಹ ತಿಳಿಸದಿದ್ದುದು ದುರಾಶ್ಚರ್ಯವೂ, ಅನ್ಯಾಯವೂ ಆಗಿರುತ್ತದೆ. ಮೈಸೂರ ಸರ್ಕಾರದವರು ತಾವು ಮಿ॥ ಶಾಸ್ತ್ರಿಗಳುಪನ್ಯಾಸವನ್ನು ನಿಲ್ಲಿಸಲು ತಮಗಿದ್ದ ಪ್ರಬಲವಾದ ಕಾರಣವನ್ನು ಈಗಲಾದರೂ ಬಹಿರಂಗಪಡಿಸಿದರೆ ಸರಿ, ಇಲ್ಲವಾದಲ್ಲಿ ಇಂಡಿಯಾ ಸರ್ಕಾರದವರು ಈ ವಿಚಾರದಲ್ಲಿ ಪ್ರವೇಶಿಸಬೇಕಾಗುತ್ತದೆ. ಉಪನ್ಯಾಸವನ್ನು ಮಾಡಲು ಜನರಿಗಿರುವ ಸ್ವಾತಂತ್ರ್ಯವನ್ನು ಮೈಸೂರ ಸರ್ಕಾರದವರು ತಪ್ಪಿಸಿರುವುದು ಸರ್ವಥಾ ಅನುಚಿತವಾದುದು ಎಂದು ಮೊದಲಾಗಿ ಚರ್ಚಿಸಿ, ಈ ವಿಚಾರದಲ್ಲಿ ತಮಗುಂಟಾಗಿರುವ ಅಸಮಾಧಾನವನ್ನೂ, ತಿರಸ್ಕಾರವನ್ನೂ ಇಂಡಿಯಾ ಸರ್ಕಾರಕ್ಕೂ, ಮೈಸೂರು ಸರ್ಕಾರಕ್ಕೂ, ಅಸೋಸಿಯೇಟೆಡ್ ಪ್ರೆಸ್ಸಿನವರಿಗೂ ತಿಳುಹತಕ್ಕದೆಂದು ನಿರ್ಧಾರವನ್ನು ಮಾಡಿದರು. ಇದೇರೀತಿ ಮದ್ರಾಸ್ ಮಹಾಜನಸಭೆಯವರೂ ತಾ॥ ೧೫ ರಲ್ಲಿ ಸಭೆ ಸೇರಿದ್ದು ಮೈಸೂರ ಸರ್ಕಾರದ ಅನ್ಯಾಯವೂ, ಸ್ವೇಚ್ಛೆಯೂ ಆದ ವರ್ತನವನ್ನು ಕುರಿತು ತಮ್ಮ ಅಸಮಾಧಾನವನ್ನೂ, ತಿರಸ್ಕಾರವನ್ನೂ ಪ್ರಕಟಿಸಿದರು.

ಬ್ರಿಟಿಷ್ ಸರ್ಕಾರದವರಿಂದ ಗಣ್ಯವಾಗಿಣಿಸಲ್ಪಟ್ಟಿರುವ ಭರತಖಂಡದ ಸಾರ್ವಜನಿಕ ಮಹಾಸಭೆಗೆ ಸೇರಿದವರಾಗಿಯೂ, ಭಾರತೀಯರ ಏಳಿಗೆಗಾಗಿ ತಮ್ಮ ತನುಮನವನ್ನು ಧಾರೆಯೆರೆದು ಹಗಲಿರುಳೂ ಪಾಟುಪಡುತ್ತ ಭಾರತೀಯರ ವಾಗ್ದೇವಿಯ ಪುಣ್ಯಮೂರ್ತಿಗಳೆಂದು ಅವರಿಂದ ಧನ್ಯವಾದಗಳನ್ನು ಹೊಂದಿಸಿಕೊಳ್ಳುತ್ತಿರುವ ಮತ್ತೂ ಭರತಖಂಡದ ಕೆಲ ಭಾಗಗಳಲ್ಲಿ ಹಬ್ಬಿರುವ ಅರಾಜಕಪ್ರವರ್ತನೆಯನ್ನು ಖಂಡಿಸಿ, ಬ್ರಿಟಿಷ್ ಸರ್ಕಾರದವರ ಮೆಚ್ಚುಗೆಗೆ ಪಾತ್ರರಾಗಿರುವ ಆನರಬಲ್ ಗೋಖಲೆಯವರು ಸ್ಥಾಪಿಸಿರುವ ದೇಶಸೇವಾ ಸಂಘಕ್ಕೆ ಸೇರಿದವರಾಗಿಯೂ, ಪ್ರೌಢ ವಿದ್ವಾಂಸರಾಗಿಯೂ, ಸರ್ಕಾರಿ ಉದ್ಯೋಗವನ್ನು ಬಿಟ್ಟು ದೇಶಸೇವಾಕಾರ್ಯ ತತ್ಪರರಾಗಿಯೂ ಇರುವ ಮಿ॥ ಶಾಸ್ತ್ರಿಗಳವರು ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾಗಿ ಭಾಷಣ ಮಾಡುವರೆಂದು ಊಹಿಸಲೂ ಸಾಧ್ಯವಿಲ್ಲವು. ಹೀಗೆ ಸರ್ಕಾರದವರ ಅಪ್ರೀತಿಗೆ ಯಾವಾಗಲೂ ಗುರಿಯಾಗದಿರುವ ಇವರ ಉಪನ್ಯಾಸವನ್ನು ನಿಲ್ಲಿಸಲು ನಮ್ಮ ಸರ್ಕಾರದವರಿಗೆ ಪ್ರಬಲವಾದ ಕಾರಣವಿದ್ದಿತೋ ತಿಳಿಯದು. ಒಂದು ವೇಳೆ ಅಂತಹ ಪ್ರಬಲತರವಾದ ಕಾರಣವಿದ್ದು ಅದನ್ನು ಬಹಿರಂಗಪಡಿಸಲಿಚ್ಛೆಯಿಲ್ಲದಿದ್ದ ಪಕ್ಷದಲ್ಲಿ ಮಿ॥ ಶಾಸ್ತ್ರಿಗಳವರಿಗಾದರೂ ಅಂತರಂಗವಾಗಿ ತಿಳಿಸಿದ್ದರೆ, ಇಷ್ಟೊಂದು ಅಸಮಾಧಾನಕ್ಕೂ, ಚರ್ಚೆಗೂ ಆಸ್ಪದವಾಗುತ್ತಿರಲಿಲ್ಲ. ಆ ಉಪನ್ಯಾಸದ ದಿವಸ ಅಧ್ಯಕ್ಷತೆಯನ್ನು ವಹಿಸಿದ್ದ ಮಿ॥ ಮಾಧವರಾಯರಿಗಾದರೂ ಪೊಲೀಸು ಅಧಿಕಾರಿಗಳು ತಮ್ಮಲ್ಲಿ ಬಂದು ಉಪನ್ಯಾಸವನ್ನು ನಡೆಯಗೊಡಬಾರದೆಂದು ತಿಳಿಸುವಾಗಲೇ, ಅಂತರಂಗವಾಗಿಯಾದರೂ ಆ ದಿವಸ ಉಪನ್ಯಾಸ ನಡೆಯುವುದಿಲ್ಲವೆಂದು ಪ್ರಕಟಪಡಿಸಲು ಹೇಳಬಹುದಾಗಿತ್ತು. ಆದರೆ ಅವರು ಆ ರೀತಿ ಮಾಡದೆ ಬೆಂಗಳೂರ ಉಪನ್ಯಾಸವನ್ನು ಕೇಳಲು ಬಂದು ಸೇರಿರುವ ಪುರಜನರಿಗೂ ಮರ್ಯಾದಸ್ಥ ಉಪನ್ಯಾಸಕರ ಪರಿಚಯವನ್ನು ಸಭಿಕರಿಗೆ ಮಾಡಿಸುತ್ತ ಸಮಯದಲ್ಲಿ ಉಪನ್ಯಾಸವು ನಡೆಯದಿರುವ ಅಪ್ಪಣೆಯನ್ನು ತಿಳಿಯಪಡಿಸಿದುದು ಅವರ ವಿದ್ಯೆಗಿರುವ ಔದಾರ್ಯಕ್ಕೆ ಸ್ವತಂತ್ರವಲ್ಲವು. ಮಿ॥ ವಿ. ಪಿ. ಮಾಧವರಾಯರಿಗೆ ಅವರ ದಿವಾನ ಉದ್ಯೋಗದ ಅವಧಿಯಲ್ಲಿ ವೃತ್ತಪತ್ರಿಕೆಗಳ ಸ್ವಾತಂತ್ರ್ಯವನ್ನು ತಪ್ಪಿಸಿದರೆಂಬ ಕೆಟ್ಟ ಹೆಸರು ಲಭ್ಯವಾಯಿತು. ಈಗ ಮಿ॥ ರಾ॥ ಆನಂದರಾಯರ ಅಧಿಕಾರದ ಕಾಲದಲ್ಲಿ ಅವರ ಹೆಸರಿಗೆ ಇದೊಂದು ಕಳಂಕವು ಪ್ರಾಪ್ತವಾದುದಕ್ಕಾಗಿ ವಿಷಾದಿಸಬೇಕಾಗಿದೆ. ನಮ್ಮ ಸರ್ಕಾರದವರು ಆ ದಿವಸದುಪನ್ಯಾಸವನ್ನು ನಿಲ್ಲಿಸಿದುದರ ಕಾರಣವನ್ನು ಈಗಲಾದರೂ ತಿಳುಹಿಸಿ, ಇಲ್ಲಿಯ ಮತ್ತೂ ಹೊರಗಣ ಜನರಲ್ಲುಂಟಾಗಿರುವ ಅಸಮಾಧಾನವನ್ನು ಹೋಗಲಾಡಿಸುವರೆಂದು ನಿರೀಕ್ಷಿಸುತ್ತೇವೆ.

ಗೊತ್ತಾದ ತೂಕವು ಮತ್ತು ಅಳತೆಯು.

ಈ ನಮ್ಮ ಮೈಸೂರ ಸೀಮೆಯಲ್ಲಿ ಇಷ್ಟೇ ರೂಪಾಯಿನ ತೂಕವು ಮತ್ತೂ ಅಳತೆಯು ಉಪಯೋಗಿಸಲ್ಪಡಬೇಕೆಂಬುದು ಸರ್ಕಾರದವರಿಂದ ಗೊತ್ತುಮಾಡಲ್ಪಟ್ಟಿಲ್ಲವಾದ್ದರಿಂದ ಕೆಲ ದುರಾಶೆಯುಳ್ಳವರು ಇತರರಿಂದ ಪದಾರ್ಥಗಳನ್ನು ಕೊಂಡುಕೊಳ್ಳುವಾಗ್ಗೆ ಹೆಚ್ಚಿನ ತೂಕದ ಬಟ್ಟುಗಳನ್ನೂ ಸೇರು ಪಾವುಗಳನ್ನೂ, ತಾವು ಇತರರಿಗೆ ಕೊಡುವಾಗ್ಗೆ ಮಾತ್ರ ಕಡಿಮೆ ತೂಕದ ಬಟ್ಟುಗಳನ್ನೂ, ಸೇರು ಪಾವುಗ

ಳನ್ನೂ ಉಪಯೋಗಿಸುವುದ-

ರಿಂದ ಜನರು ಪದಾರ್ಥಗಳನ್ನು ವರ್ತಕರಿಗೆ ಕೊಡುವಾಗಲೂ, ಅವರಿಂದ ತಾವು ತೆಗೆದುಕೊಳ್ಳುವಾಗಲೂ ಮೋಸಹೋಗಲ್ಪಡುತ್ತಿರುವುದು ಜಗತ್ಪ್ರಸಿದ್ಧವಾಗಿದೆ. ಈರೀತಿ ಜನರಿಗೆ ಮೋಸವಾಗಲವಕಾಶವಿಲ್ಲದಂತೆ ಇಷ್ಟು ರೂಪಾಯಿನ ತೂಕವನ್ನೂ, ಅಳತೆಯನ್ನೂ ಉಪಯೋಗಿಸುವಂತೆ ಗೊತ್ತುಪಡಿಸಬೇಕೆಂದು ಪ್ರಜಾಪ್ರತಿನಿಧಿಸಭೆಯಲ್ಲಿ ಮೆಂಬರುಗಳು ಬಹುಕಾಲದಿಂದಲೂ ಸರ್ಕಾರದವರನ್ನು ಪ್ರಾರ್ಥಿಸಿಕೊಂಡಿದ್ದುದರ ಮೇರೆಗೆ ಅವರಿಗೆ ದಯೆಯುಂಟಾಗಿ ಮೈಸೂರ ಸಂಸ್ಥಾನದಲ್ಲುಪಯೋಗಿಸಲ್ಪಡಬೇಕಾದ ತೂಕ ಮತ್ತೂ ಅಳತೆಯ ವಿಚಾರದಲ್ಲಿ ನಿಬಂಧನೆಗಳನ್ನು ಮಾಡಿ ಕಳೆದವಾರದ ಸರ್ಕಾರಿಯ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತಾರೆ. ಈ ನಿಬಂಧನೆಗಳ ಪ್ರಕಾರ ಗೊತ್ತಾದ ತೂಕವು ಮತ್ತೂ ಅಳತೆಯು ೧೯೧೯ ನೆಯ ಜುಲೈ ತಾ॥ ೧ ರಿಂದ ಮೈಸೂರ ಸೀಮೆಯ ಪ್ರತಿಯೊಂದು ಭಾಗದಲ್ಲೂ ಅನುಷ್ಠಾನಕ್ಕೆ ತರಲ್ಪಡತಕ್ಕವಾಗಿವೆ.

ತೂಕಕ್ಕೆ ಉಪಯೋಗಿಸಲ್ಪಡುವ ಸೇರಿನ ಬಟ್ಟು ಇಂಡಿಯಾ ಸರ್ಕಾರದ ೮೦ ರೂಪಾಯಿನ ತೂಕವೂ, ಅಳತೆಯ ಸೇರು ೧೧೮ ತೊಲ ಅಥವಾ ೭೯ ರೂಪಾಯಿನ ತೂಕದ ಶೋಧಿಸಿದ ನೀರನ್ನು ಹಿಡಿಯುವಷ್ಟು ದೊಡ್ಡದಾಗಿಯೂ ಇರಬೇಕು. ಈ ತೂಕದ ಬಟ್ಟು ಲೋಹದಲ್ಲೂ, ಮತ್ತೂ ಸೇರು ಕಂಚಿನಲ್ಲೂ ಮಾಡಲ್ಪಟ್ಟು ಸ್ಟೇಟ್ ಖಜಾನೆಯಲ್ಲಿಡಲ್ಪಡುವವು. ಇದರಂತೆಯೇ ಮತ್ತೊಂದು ಬಟ್ಟೂ ಸೇರೂ ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರವರಲ್ಲಿಟ್ಟು ೫ ವರ್ಷಗಳಿಗೊಂದಾವೃತ್ತಿಗೆ ಕಡಿಮೆಯಿಲ್ಲದಂತೆ ಹುಜೂರು ಟ್ರೆಜರಿಯಲ್ಲಿರುವ ಬಟ್ಟು ಮತ್ತೂ ಸೇರುಗಳಿಗೆ ಸರಿನೋಡಲ್ಪಟ್ಟು ಹೆಚ್ಚು ಕಡಿಮೆಯಿದ್ದಲ್ಲಿ ಸರಿಪಡಿಸಲ್ಪಡುವವು. ಮತ್ತೂ ಇವುಗಳಿಗೆ ಸರಿಯಾದ ಬಟ್ಟು ಸೇರುಗಳು ತಾಲ್ಲೂಕು ಕಚೇರಿಗಳಲ್ಲೂ, ಪೊಲೀಸು ಠಾಣಗಳಲ್ಲೂ ಇಡಲ್ಪಡುವವು. ತೂಕದಲ್ಲಿ— ತೊಲ ೧ ಕ್ಕೆ ೧೮೦ ಗ್ರೇನು ಅಥವಾ ೧ ರೂ, ಸೇರು ೧ ಕ್ಕೆ ೮೦ ತೊಲ, ಮಣ ೧ ಕ್ಕೆ ೪೦ ಸೇರು. ಬಂಗಾಳಿ ಸೇರು ೧ ಕ್ಕೆ ೮೦ ತೊಲ, ಬಂಗಾಳಿ ಮಣ ೧ ಕ್ಕೆ ೪೦ ಬಂಗಾಳಿ ಸೇರು, ಪೌಂಡು ೧ ಕ್ಕೆ ೭,೦೦೦ ಗ್ರೇನು (೩೯ ತೊಲ ಆಗುತ್ತದೆ), ಸ್ಟೋನು ಒಂದಕ್ಕೆ ೧೪ ಪೌಂಡು; ಕ್ವಾರ್ಟರ ೧ ಕ್ಕೆ ೨೮ ಪೌಂಡು, ಹಂಡ್ರೆಡ್ ವೇಟ್ ೧ ಕ್ಕೆ ೧೧೨ ಪೌಂಡು, ಟನ್ ೧ ಕ್ಕೆ ೨,೨೪೦ ಪೌಂಡು ಅಥವಾ ೨೦ ಹಂಡ್ರೆಡ್ ವೇಟ್. ಅಳತೆಯಲ್ಲಿ— ಸೇರು ೧ ಕ್ಕೆ ೧೧೮ ತೊಲ, ಇದರಲ್ಲಿ ಅಚ್ಚೇರು, ಪಾವು, ಅರ್ಧಪಾವು, ಚಟಾಕು ಉಂಟು, ಬಳ್ಳ ೧ ಕ್ಕೆ ೪ ಸೇರು, ಕೊಳಗ ೧ ಕ್ಕೆ ೮ ಸೇರು, ಪಲ್ಲ ೧ ಕ್ಕೆ ೧೦೦ ಸೇರು, ಖಂಡಿಗ ೧ ಕ್ಕೆ ೨೦ ಕೊಳಗ ಅಥವಾ ೧೬೦ ಸೇರು. ಈ ಪ್ರಕಾರದ ಉಪಯೋಗವು ಸರ್ಕಾರದವರಿಂದ ಅಂಗೀಕರಿಸಲ್ಪಟ್ಟಿದೆ.

ಬೆಂಗಳೂರ ಸೆಂಟ್ರಲ್ ಜೈಲಿನ ಸೂಪರಿಂಟೆಂಡೆಂಟರು ಸಾರ್ವಜನಿಕರ ಉಪಯೋಗಕ್ಕಾಗುವಂತಹ ತೂಕದ ಸೇರು ಅಚ್ಚೇರು ಮೊದಲಾದ ಬಟ್ಟುಗಳನ್ನೂ, ಅಳತೆಯ ಅಚ್ಚೇರು ಪಾವು ಸೇರುಗಳನ್ನೂ ಯೋಗ್ಯದರದಲ್ಲಿ ಮಾಡಿಸಿ ತಮ್ಮಲ್ಲಿರುವ ಗೊತ್ತಾದ ಬಟ್ಟು ಮತ್ತೂ ಸೇರುಗಳಿಗೆ ಸರಿಪಡಿಸಿ ಮಧ್ಯಭಾಗದಲ್ಲಿ ೧ ಎಂಬ ಅಂಕೆಯು ಚಿತ್ರವನ್ನೂ ಅದರ ಮೇಲ್ಭಾಗದಲ್ಲಿ ಮೈಸೂರು ಮತ್ತೂ ಕೆಳಭಾಗದಲ್ಲಿ ಇಸವಿ ಇವುಗಳ ಅಕ್ಷರಗಳನ್ನು ಒಳಗೊಂಡಿರುವ ಚಕ್ರಾಕಾರವಾದ ಮುದ್ರೆಯನ್ನೊತ್ತಿ ಮಾರುವರು. ಸರ್ಕಾರದಲ್ಲಿ ಮಾಡಲ್ಪಟ್ಟವುಗಳಲ್ಲದೆ ಬೇರೆಯಾದ ಬಟ್ಟು ಸೇರುಗಳನ್ನುಪಯೋಗಿಸುವವರು ೧ ರೂಪಾಯಿ ಕೋರ್ಟ್ ಫೀ ಸ್ಟ್ಯಾಂಪನ್ನು ಹಚ್ಚಿ ಒಂದು ಅರ್ಜಿಯನ್ನು ಬೆಂಗಳೂರ ಜೈಲಿನ ಸೂಪರಿಂಟೆಂಡೆಂಟರಿಗಾಗಲಿ ಅಥವಾ ಸರ್ಕಾರದಿಂದ ಗೊತ್ತಾದ ಮತ್ತಾವ ಅಧಿಕಾರಿಗಾಗಲಿ ಕೊಟ್ಟಲ್ಲಿ ಅವರು ತಮ್ಮಲ್ಲಿರುವ ಗೊತ್ತಾದ ಬಟ್ಟು ಸೇರುಗಳಿಗೆ ಸರಿಪಡಿಸಿ ಮುದ್ರೆಯನ್ನೊತ್ತಿಕೊಡುವರು. ಆದರೆ ಇದಕ್ಕಾಗಿ ಪ್ರತಿಫಲವನ್ನು ತೆಗೆದುಕೊಳ್ಳುವುದಿಲ್ಲ. ಇವರು ಹೀಗೆ ತಮ್ಮಲ್ಲಿಗೆ ಬರುವಂತಹ ಸೇರು ಬಟ್ಟುಗಳನ್ನು ಸರಿಪಡಿಸಲಾಗದಿದ್ದಲ್ಲಿ ಅವುಗಳನ್ನು ನಾಶಪಡಿಸಲಧಿಕಾರವಿರುವುದು. ಮುದ್ರೆಯನ್ನೊತ್ತಲು ಸ್ಥಳ ಸಾಲದಿರುವವುಗಳ ಹೊರತು ಬಳಸುವ ಪ್ರತಿಯೊಂದು ತೂಕದ ಮತ್ತೂ ಅಳತೆಯ ಪದಾರ್ಥಗಳ ಅಂದರೆ ಸೇರು ಅಚ್ಚೇರು ಮೊದಲಾದ ಬಟ್ಟು ಮತ್ತೂ ಸೇರುಗಳ ಮೇಲೆ ಸರ್ಕಾರದ ಮುದ್ರೆ ಇದ್ದೇ ತೀರಬೇಕು. ಹಾಗೆ ಮುದ್ರೆಯಿಲ್ಲದೆ ಹೆಚ್ಚು ಕಡಿಮೆಯಾಗಿರುವವುಗಳನ್ನು ಪೊಲೀಸು ಠಾಣದ ಅಧಿಕಾರಿಯು ತನ್ನ ಹದ್ದಿಗೆ ಸೇರಿದ ಯಾವ ಸ್ಥಳದಲ್ಲಾಗಲಿ ಉಪಯೋಗಿಸುವವರ ಬಳಿಯಿಂದ ಕಿತ್ತುಕೊಂಡು ಮ್ಯಾಜಿಸ್ಟ್ರೇಟರಲ್ಲಿ ವಿಚಾರಣೆಗೆ ಗುರಿಮಾಡಲು ಅವನಿಗೆ ಅಧಿಕಾರವಿರುವುದು.

ಇತರರ ದುಷ್ಟವ್ಯಾಪಾರಗಳಿಂದ ಜನರು ಮೋಸ ಹೋಗದಂತೆ ಸರ್ಕಾರದವರು ದಯೆಮಾಡಿ ಗೊತ್ತಾದ ತೂಕದ ಬಟ್ಟುಗಳನ್ನೂ, ಸೇರುಗಳನ್ನೂ ಉಪಯೋಗಿಸುವ ನಿಬಂಧನೆಯನ್ನು ಮಾಡಿರುತ್ತಾರೆ. ಆದರೆ ಸರ್ಕಾರ

ದ ತೂಕದ ಮತ್ತೂ ಅ

ಪದಾರ್ಥಗಳು ವರ್ತಕರಿಂದ ಉಪಯೋಗಿಸಲ್ಪಡುತ್ತವೆಯೋ ಅದನ್ನು ಪರೀಕ್ಷಿಸಲು ನೇಮಿಸಲ್ಪಡುವ ಅಧಿಕಾರಿಗಳು ಮತ್ತು ಶ್ರೀಲಂಚಕ್ಕೆ ಆ ಪದಾರ್ಥಗಳ ದೋಷಕ್ಕೆತ್ತುವನ್ನು ತಿಳಿಯಪಡಿಸಿ, ಬಹಿರಂಗಪಡಿಸಿ ಸ್ವಾರ್ಥಪರ ವರ್ತಕರನ್ನು ಶಿಕ್ಷೆಗೆ ಗುರಿಮಾಡಿ ಇತರ ವರ್ತಕರಿಗೆ ಬುದ್ಧಿಹೇಳುವುದನ್ನು ಮಾಡಿ ಸರ್ಕಾರದ ಸದುದ್ದೇಶವನ್ನು ಸಾರ್ಥಕಪಡಿಸಬೇಕಾಗಿದೆಂದು ಇಚ್ಛೈಸುತ್ತೇವೆ.

ಸ್ಥಳದೇಶದ ವೃತ್ತಾಂತ.

ದಾಸನಪುರದಲ್ಲಿ ಪ್ಲೇಗುರೋಗವಾರಂಭವಾಗಿರುವುದರಿಂದ ಜನರು ಊರನ್ನು ಬಿಟ್ಟು ಹೊರಗೆ ಗುಡಿಸಲುಗಳಲ್ಲಿ ವಾಸಿಸಲು ಉಪಕ್ರಮಿಸಿರುತ್ತಾರೆ, ಮತ್ತು ಜನರಿಗೆ ಇನಾಕ್ಯುಲೇಷನ್ ಹಾಕುವ ಕಾರ್ಯವೂ ನಡೆದಿರುತ್ತದೆ.

ಕಳೆದವಾರ ಶ್ರೀಮನ್ಮಹಾರಾಜರವರು ಮಿಸ್ಟರ್ ಸೆಕ್ರೆಟರಿ ಕರ್ನಲ್ ಜೋನ್ಸ್‌ರವರ ಕೂಡ ಬೆಂಗಳೂರ ಬಾಲಿಕಾ ಪಾಠಶಾಲೆಗೆ ದಯಮಾಡಿಸಿದ್ದು ಬಾಲಿಕೆಯರು ಓದುವುದನ್ನೂ, ಹಾಡುವುದನ್ನೂ ಪರಾಮರಿಸಿಕೊಂಡು ಬಂದರು.

ಶ್ರೀ ಇ॥ ಜನರಲ್ ಮ॥ ಬಿ. ದೇವರಾಜಅರಸಿನವರು ಕಳೆದ ತಾ॥ ೧೪ ರಲ್ಲಿ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು, ಮತ್ತು ದಸರಾಮಹೋತ್ಸವದ ನಿರ್ವಾಹಕರಾಗಿ ಇರುವುದರಿಂದ ಮುಂದೆ ರಾಜಧಾನಿಗೆ ಬರುವವರಾಗಿರುವರು.

ಕಳೆದ ತಾ॥ ೧೩ ನೆಯ ಬುಧವಾರದ ಬೆಳಿಗ್ಗೆ ಶ್ರೀಮನ್ಮಹಾರಾಜರವರು ಮೋಟಾರು ಬಂಡಿಯಲ್ಲಿ ಸೀಗೆಹಳ್ಳಿಯ ಮಾರ್ಗವಾಗಿ ಊಟಕಮಂಡಲಕ್ಕೆ ದಯಮಾಡಿಸಿದರು. ದಸರಾ ಮಹೋತ್ಸವಕ್ಕಾಗಿ ನಾಳೆ ನಾಡಿದ್ದರಲ್ಲಿ ಮಹಾಸ್ವಾಮಿಯವರ ಸವಾರಿಯು ರಾಜಧಾನಿಗೆ ಚಿತ್ತೈಸುವುದಾಗಿರುತ್ತದೆ.

ಹಾಸನ ಡಿ ಚೆಕ್ಕರಾಯಪಟ್ಟಣದ ಸಬ್‌ಡಿವಿಜನ್ ಆಫೀಸರಾದ ಮ॥ ಸಿ. ದೇವರಾಜ ಅರಸಿನವರು ತುಮಕೂರ ಡಿ ಪೋಲೀಸ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟಿರುವರು. ಅವರು ಈಗ ಅವರು ನಡೆಯುತ್ತಿರುವ ಗಂಧದ ಮರದ ಕಳ್ಳತನದ ವಿಚಾರವು ಪೂರ್ತಿಯಾದ ನಂತರ ಹೊಸ ಕೆಲಸದ ಮೇಲೆ ಬರುವವರಾಗಿರುವರು.

ರಾಜಧಾನಿಯ ಮ॥ ಎಸ್. ಸುಬ್ಬರಾವ್ ಬಿ. ಎ., ಎಂ. ಬಿ., ಸಿ. ಎಂ., ಎಂ. ಆರ್., ಸಿ. ಎಸ್., ಡಿ. ಪಿ. ಎಚ್., ರವರು ಕಳೆದ ತಾ॥ ೧೬ ರಲ್ಲಿ ಬೊಂಬಾಯಿನಿಂದ ಬೆಂಗಳೂರಿಗೆ ಒಂದು ಡಾಕ್ಟರ್ ಕ್ರಿಮಿಶಾಸ್ತ್ರ... ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಕೆಲವು ಕಾಲ ಅಲ್ಲಿ ಇದ್ದು ಕೆಲವು ಅಭ್ಯಾಸಗಳನ್ನು ಪೂರೈಸಿಕೊಂಡು ರಾಜಧಾನಿಗೆ ಬರುವವರಾಗಿರುವರು.

ಕಳೆದ ತಾ॥ ೯ ರ ಮಧ್ಯಾಹ್ನ ವೇಳೆಯಲ್ಲಿ ತಾಲೂಕಿನ ಹಳ್ಳಿಯ ಚೆಟ್ಟಿ ಮನೆಯವರು ತಮ್ಮ ಮನೆಯ ಬಾಗಿಲನ್ನು ಹಾಕಿಕೊಂಡು ಹೊಲಕ್ಕೆ ಹೋಗಿರುವಾಗ್ಗೆ ಯಾರೋ ಕಳ್ಳರು ಹಿತ್ತಲ ಬಾಗಿಲನ್ನು ತೆಗೆದು ಒಳಗೆ ಹೊಕ್ಕು ... ರೂ. ಬೆಲೆಬಾಳುವ ಪದಾರ್ಥಗಳನ್ನು ಅಪಹರಿಸಿಕೊಂಡು ಹೋದರು. ಪೋಲೀಸರು ಕಳ್ಳರನ್ನು ಹುಡುಕುತ್ತಿದ್ದಾರೆ.

ಬಂದರಿನ ಕೌನ್ಸಿಲರಾದ ಮ॥ ಕೆ. ಪಿ. ಪುಟ್ಟಣ್ಣಚೆಟ್ಟಿ ... ಕಡಲೆ ಉದ್ಯೋಗದಿಂದ ನಿವೃತ್ತಿ ಹೊಂದಲಿರುವರೆಂದು ಒಂದು ನಿರಾಧಾರವಾದ ಸುದ್ದಿಯು ಹೇಗೋ ಹುಟ್ಟಿರುವುದು. ಒಂದುವೇಳೆ ದೊಡ್ಡ ಅಧಿಕಾರಿಗಳ ಬದಲಾವಣೆಗಳೇನಾದರೂ ಆಗತಕ್ಕದ್ದಿದ್ದರೆ ದಿವಾನರು ದಸರಾ ನಂತರ ಆಗಬಹುದೇ ಹೊರತು ಈ ಮಧ್ಯೆ ಆಗುವಂತಿಲ್ಲವು.

ರಾಜಧಾನಿಯಲ್ಲಿ ಪ್ಲೇಗಿನಿಂದ ಮರಣವಾದುದು:—

ತಾರೀಖು	೧೧,	೧೨,	೧೩,	೧೪,	೧೫,	೧೬,	೧೭,
ಸಿಡಿದುದು	೩	೩	೪	೧೧	೦	೩	೮
ಸತ್ತುದು	೨	೬	೪	೪	೬	೧	೩
ಚಿಟ್ಟ ಮ.	೯	೯	೧೧	೯	೪	೪	೧೬

ತಾ॥ ೧೧-೮-೧೧ ರಿಂದ ತಾ॥ ೧೬-೯-೧೧ ವರೆಗೆ ೧೯... ಜನರು ಇನಾಕ್ಯುಲೇಷನ್ ಮಾಡಿಸಿಕೊಂಡಿರುತ್ತಾರೆ.

ದಿವಾನರವರು ರಾಜಧಾನಿಯಲ್ಲಿ ದಸರಾಮಹೋತ್ಸವಕ್ಕಾಗಿ ನಡೆಯಬೇಕಾದ ಏರ್ಪಾಡುಗಳನ್ನು ಪರಾಮರಿಸಿಕೊಂಡು ಕಳೆದ ತಾ॥ ೧೩ ರ ಬೆಳಿಗ್ಗೆ ಮೋಟಾರುಬಂಡಿಯಲ್ಲಿ ತಮ್ಮ ಸೆಕ್ರೆಟರಿಯವರೊಡನೆ ಬೆಂಗಳೂರಿಗೆ ಪ್ರಯಾಣ ಮಾಡಿದರು. ಮತ್ತೆ ಇನ್ನೊಂದೆರಡು ದಿವಸಗಳಲ್ಲಿ ತಮ್ಮ ಪರಿವಾರದೊಡನೆ ದಸರಾಮಹೋತ್ಸವದ ಪ್ರಜಾಪ್ರತಿನಿಧಿ ಸಭಾಕಾರ್ಯಕ್ಕೋಸ್ಕರ ರಾಜಧಾನಿಯಲ್ಲಿ ನಿಲ್ಲುವರು.

ಕಾವೇರಿ ನದಿಯ ಪ್ರವಾಹದಿಂದ ನಿರಾಶ್ರಿತರಾದವರ ಸಹಾಯಾರ್ಥವಾಗಿ "ರಾಜಧಾನಿಯಲ್ಲಿ ಏರ್ಪಡಿಸಲ್ಪಟ್ಟಿರುವ ಕಮಿಟಿಗೆ ಚಿತ್ರಕಲ್‌ದುರ್ಗ ಡಿಪ್ಯೂಟಿಕಮೀಷನರು ತಾ॥ ... ಸೊಂಡೆಕೊಪ್ಪದ ಸ್ಥಳಿಕ ಮುಖಂಡರ ಪರವಾಗಿ ಆ ಸ್ಥಳದ ಹೆಡ್ಮಾಸ್ಟರ್ ಮ॥ ಜಿ. ಶಿವಸ್ವಾಮಯ್ಯನವರು ಸಮ್ಮತಿಗೆ ಸೇರಿಸಿಕೊಟ್ಟಿರುವ ೧೦ ಆಣೆಗಳು ಫಂಡಿನ ಸೆಕ್ರೆಟರಿಯವರಿಗೆ ತಲುಪಿಸಲ್ಪಟ್ಟಿರುತ್ತವೆ. ಈ ಫಂಡಿಗೆ

ಸಹಾಯಮಾಡಬಯಸುವವರು ಚಂದಾ
ಗ. ಹಂ. ವೆಂಕಟ ಕೃಷ್ಣಯ್ಯನವರಿಗೆ

ತುತ್ತು ಸಂಪಾದಕರ ಎಲ್ಲಾ ಭಾಗಗಳಲ್ಲೂ ಚಂದಾಹಣವನ್ನು ಪ್ಪಡೆಯ ಪ್ರಯತ್ನವು ನಡೆದಿರುತ್ತದೆ.

ನೆನ್ನೆಯ ಗುರುವಾರದ ಬೆಳಿಗ್ಗೆ ರಾಜಧಾನಿಯ ಬಂಡಿಯು ಮಾರ್ಕೆಟ್ಟಿನಲ್ಲಿ ಕಡಲೆಕಾಯಿ ಮಾರುತ್ತಿರುವಾಗ್ಗೆ ಒಂದು ಕುದುರೆಯನ್ನು ಕಟ್ಟಿಸಿದ್ದಾಗ್ಗೆ ಅದರ ಹೊಟ್ಟೆಯಲ್ಲಿ ಶೂಲವೇದನೆಯಿಂದ ... ಮರಿಯು ಹೊರಬಿದ್ದು ... ಅದರ ಜೀವವು ಸತ್ತುಹೋಗಿದ್ದ ಮರಿಯು ಹೊರಬಿದ್ದಿತು. ಕುದುರೆಯ ಹೊಟ್ಟೆಯಲ್ಲಿ ಆನೆಯ ಮರಿಯು ಹುಟ್ಟಿದೆಯೆಂದು ಯಾರೋ ಸುದ್ದಿಯನ್ನು ಹುಟ್ಟಿಸಿರುವುದರಿಂದ ಜನರು ತಂಡತಂಡವಾಗಿ ಹೋಗಿ ಅದನ್ನು ನೋಡಿಕೊಂಡು ಬಂದರು. ಆ ಕುದುರೆಯ ಗರ್ಭದಲ್ಲಿ ಎರಡು ಮರಿಗಳು ಒಟ್ಟಾಗಿ ಕೂಡಿಕೊಂಡು ಹಾಗೆ ದಪ್ಪದಾಗಿಯೂ ಮುಖವು ವಿಕಾರವಾಗಿಯೂ ಇರುವುದಕ್ಕೆ ಕಾರಣವೆಂದು ತೋರುತ್ತದೆ. ಕೊಂಚಕಾಲದ ಹಿಂದೆ ಇದೇ ರಾಜಧಾನಿಯಲ್ಲಿ ಬೇವಣ್ಣ ರಾಯರ ಕಟ್ಟೆಯೊಳಗಡೆ ಯಾರೋ ವಿಧವೆಯು ಆಗತಾನೆ ಹೆತ್ತು ತಂದು ಬಿಸಾಡಿದ್ದ ಮಗುವಿನ ಶವವೊಂದರಲ್ಲಿ ಒಂದು ಜಿಣ್ಣು ಕತ್ತೆಯು ನಿಂತಿದ್ದುದನ್ನು ಯಾರೋ ಒಬ್ಬರು ಬೆಳಗಿನ ಝಾವದ ಕತ್ತಲೆಯಲ್ಲಿ ನೋಡಿ ವಿಚಾರ ಮಾಡದೆ ಒಂದು ಕತ್ತೆಯು ಒಂದು ಮಗುವನ್ನು ಹೆತ್ತಿರುವುದೆಂದು ಸುದ್ದಿಯನ್ನು ಹುಟ್ಟಿಸಿ ಬಿಡಲು, ಜನರು ತಡಮಾಡದೆ ಗುಂಪುಗುಂಪಾಗಿ ಮುದುಕಿಯರನ್ನು ಸೇರುವುದುಂಟೇ? ಎಂದು ಕೊಂಚವೂ ವಿಚಾರ ಮಾಡದೆ ಗುಂಪು ಕೂಡಿ ಹೋಗಿ ನೋಡಿ ಅದು ನಿಜವಲ್ಲವೆನ್ನುವುದನ್ನು ತಿಳಿದು ಎಲ್ಲರೂ ನಾಚಿಕೊಂಡರು. ಅದರಂತೆಯೇ ಈಗಲೂ ಯಾರೋ ವಿನೋದಕ್ಕಾಗಿ ಕುದುರೆಯು ಆನೆಯ ಮರಿಯನ್ನೀದಿರುವುದೆಂದು ಸುದ್ದಿಯನ್ನು ಹುಟ್ಟಿಸಿದಮಾತಕ್ಕೆ ಆಸಕ್ತರಾದವರು ಹೋಗಿ ನೋಡಿಕೊಂಡು ಬಂದರಲ್ಲ!

ಕಳೆದ ಕೆಲವು ದಿವಸ ಕಾಲದಿಂದ ರಾಜಧಾನಿಯಲ್ಲಿ ಕೊಂಚ ಮಳೆ ಬರುತ್ತಿದೆ. ಅಂದಿನಿಂದಲೂ ಪ್ರತಿದಿವಸ ಸಾಯಂಕಾಲದಲ್ಲಿ ಮೋಡವು ಕವಿದುಕೊಂಡು ಗುಡುಗುತ್ತಿದ್ದು ಹಾಗೆಯೇ ಮಾಯವಾಗುತ್ತಿದೆಯೇ ವಿನಾ ಮಳೆಯು ಬರುವುದಿಲ್ಲವು. ರಂಗನಾಥನ ಕೆಲಕಡೆ ಅಲ್ಪಸ್ವಲ್ಪ ಮಳೆ ಬೀಳುತ್ತಿರುವುದು. ಈ ವರ್ಷವೂ ಬಹು ಭಾಗದಲ್ಲಿ ಮಳೆಯಿಲ್ಲದೆ ನಿಂತಿರುವ ಪೈರು ಒಣಗುತ್ತಿರುವುದಲ್ಲದೆ ಕುಡಿಯುವ ನೀರಿಗೂ ಅಭಾವವಾಗಿದೆ. ಆಹಾರಪದಾರ್ಥಗಳ ಬೆಲೆಯಾದರೋ ನಿತ್ಯದಲ್ಲೂ ಏರುತ್ತಿರುವುದಲ್ಲದೆ ಇನ್ನು ಒಂದು ವಾರದಲ್ಲಿ ಮಳೆಯು ಬಾರದಿದ್ದಲ್ಲಿ ಅಲ್ಪ ಬೆಳೆಯೂ ಹೋಗುವುದರಿಂದ ಕ್ಷಾಮವು ಸಂಭವಿಸಬಹುದೆಂದು ಜನರು ಹೇಳುತ್ತಿದ್ದಾರೆ. ಈ ಕಷ್ಟದ ಜತೆಗೆ ಪ್ಲೇಗು ಎಲ್ಲ ಕಡೆಯೂ ಪ್ರಬಲಿಸುವ ಚಿಹ್ನೆಗಳು ತೋರುತ್ತಿರುವುದು ಜನರನ್ನು ಭಯಪಡಿಸುತ್ತಿದೆ. ಈ ರೋಗದ ಭಯದಿಂದ ಜನರು ಪ್ರತಿವರ್ಷದಲ್ಲೂ ಮನೆಯನ್ನು ಬಿಟ್ಟು ಊರಹೊರಗೆ ಗುಡಿಸಲಿನಲ್ಲಿ ವಾಸಮಾಡಿ ಪಡುವ ಕಷ್ಟಗಳನ್ನು ಸಂಪಾದಿಸಿಕೊಂಡು ಹೋಗಿರುವ ಮನೆಗಳನ್ನು ಬೀಗಹಾಕಿ ಬಿಡುವ ಪದ್ಧತಿಯನ್ನು ಜನರು ಪ್ರತಿವರ್ಷವೂ ... ಹಳ್ಳಿಗಳಿಗೆ ಹೋಗಿ ... ಇನಾಕ್ಯುಲೇಷನ್ ಮಾಡಿಸಿಕೊಳ್ಳತಕ್ಕದ್ದು ... ಈ ಇನಾಕ್ಯುಲೇಷನ್ ನಡೆಯಿಸುವುದರಿಂದ ಗುಣವಾಗುವುದು ಈ ಪತ್ರಿಕೆಯು ಬೇರೊಂದು ಕಡೆ ತಿಳಿಸಿರುವ ರಾಜಧಾನಿಯ ಮೈಸೂರು ಹೆರಾಲ್ಡ್ ಪ್ರಕಟನ ಪತ್ರಿಕೆ ಮುಂದೆ ವ್ಯಕ್ತವಾಗುತ್ತದೆ. ಅದುಕಾರಣ ಪ್ರತಿಯೊಬ್ಬರೂ ಅದನ್ನು ಗಮನಕ್ಕೆ ತರಬೇಕಾಗಿ ಅಪೇಕ್ಷಿಸುತ್ತೇವೆ. ರವಿವಾರ ಬೆಳಿಗ್ಗೆ ರಾಜಧಾನಿಯಲ್ಲಿ ಚೆನ್ನಾಗಿ ಒಂದುಹದ ಮಳೆಯಾಯಿತು.

ವರ್ತಮಾನ ಸಂಗ್ರಹ.

ಕಾಶಿಯಲ್ಲಿ ಒಂದು ಬ್ಯಾಂಕಿಗೆ ಕಳ್ಳರು ನುಗ್ಗಿ ೧೦೦೦೦ ರೂ. ಗಳನ್ನು ಅಪಹರಿಸಿಕೊಂಡು ಹೋದರು.

ದೈವ್ ಎಂಬಲ್ಲಿ ಒಂದು ನಾಟಕಶಾಲೆಯು ಬಿದ್ದುಹೋಗಿ ೧೧ ಜನರು ಸತ್ತರು, ೫೦ ಜನರಿಗೆ ಪೆಟ್ಟು ತಗಲಿತು.

ಮೈಸೂರು ಪ್ರೈವೇಟ್ ಸೆಕ್ರೆಟರಿಯವರ ಮಗ ... ಕೂನೂರಿನ ಗಂಡು ಮಗುವು ಸನ್ನಿಪಾತಜ್ವರದಿಂದ ಸ್ವರ್ಗಸ್ಥವಾಯಿತು.

ಕಳೆದ ತಾ॥ ೩ ರ ಬೆಳಿಗ್ಗೆ ಮದ್ರಾಸಿನಲ್ಲಿ ... ಲದ ಮೇಲೆಯೇ ಮಳೆಯು ಬಂದಿತು. ಈ ವರ್ಷದಲ್ಲಿ ಮಳೆಗೆ ಇಂತಹ ದೊಡ್ಡ ಮಳೆಯು ಎಂದೂ ಬಿದ್ದಿಲ್ಲವಂತೆ.

ಸ್ಪೇನ್ ರಾಜ್ಯದ ಅಕಾಸ್ಮಿಕವಾದ ... ಸಂಕಟವಾದ ಸಂಭವಿಸಿದ ಘಟನೆಯಿಂದ ... ಬರಿ ಮುರಿದುಹೋಗಿ ... ಮೈಸೂರ್ ರಾಜ್ಯದ ಜಟಕಾಬಂಡಿ ... ಎಂಬಲ್ಲಿ ಸಿಡಿಲಿನಿಂದ ಹೊಡೆದು ...

ಗುಣ ಅಂಶವಿರಬೇಕು.
ಕುಳಿತುಕೊಂಡು ಕೊಂಡಿರುವ ಅವರು
ಎಲ್ಲ ಪತ್ರಿಕೆಗಳಿಗೆ ಬಿದೆ

ಹೈದರಾಬಾದಿನ ಹೊಸ ನೈಜಾಮರವರು ತಮ್ಮ ಮಂತ್ರಿಗಳಾದ ಮಹಾರಾಜಾ ಸರ್ ಕೃಷ್ಣಪ್ರಸಾದರವರಿಗೆ ೧ ಲಕ್ಷ ರೂ. ಬೆಲೆ ಬಾಳುವ ಸುಂದರವಾದ ಮುತ್ತಿನ ಕಂಠೀಹಾರವನ್ನೂ, ಒಂದು ವಜ್ರದ ಸರವನ್ನೂ ಬಹುಮಾನವಾಗಿ ದಯಪಾಲಿಸಿರುವರು.

ಮ್ಯಾಕ್‌ಫರ್ಸನ್ ಡಿ ನ ಸೇರಿದ ಸಿಕಂದರಾಬಾದಿನಲ್ಲಿ ಒಂದೇ ಮನೆಯಲ್ಲಿ ವಾಸಮಾಡಿಕೊಂಡಿದ್ದ ಇಬ್ಬರು ಮಹಮ್ಮದೀಯ ಹೆಂಗಸರ ... ಕ್ರಿಮಿನಲ್ ವಿಚಾರದ ತೀರ್ಪಿನ ವಿಚಾರವಾಗಿ ಕಲಹವನ್ನು ಮಾಡಿದುದರ ಮೇಲೆ ಸರ್ ಡಿವಿಜನ್ ಆಫೀಸರಲ್ಲಿ ವಿಚಾರಣೆಯು ನಡೆಯುತ್ತಿದೆ.

ಭರತಖಂಡದಿಂದ ಸೀಮೆಗೆ ಕ್ರಿಕೆಟ್ ಎಂಬ ಚೆಂಡಿನಾಟದ ವನ್ನು ಆಡಲು ಹೋಗಿದ್ದವರು ಕಳೆದ ತಾ॥ ೨೫ ರಲ್ಲಿ ಬೊಂಬಾಯಿಗೆ ಬಂದರು. ಇವರು ಇಂಗ್ಲೆಂಡಿನ ಕೂಡ ಆಡಿದ ೨೩ ಆಟಗಳಲ್ಲಿ ೧೫ ರಲ್ಲಿ ಸೋತರು, ೭ ರಲ್ಲಿ ಗೆದ್ದರು, ಮತ್ತು ಎರಡರಲ್ಲಿ ಸಮನಾದರು. ಇವರು ಹೋಗಿ ಬರುವುದಕ್ಕೆ ತಗಲಿದ ಖರ್ಚು ೩೦೦೦೦ ರೂಪಾಯಿ ವ್ಯಯವಾಗಿರುತ್ತದೆ.

ಬ್ರಿಟಿಷ್ ಕೊಲಂಬಿಯಾಕ್ಕೆ ಉತ್ತರಭಾಗದಲ್ಲಿ ಆರ್ಕ್‌ಟಿಕ್ ಸಮುದ್ರದ ದಡವನ್ನು ಕಂಡುಹಿಡಿಯಲು ಹೋಗಿದ್ದ ಅಮೇರಿಕಾದ ಕೆಲವರು ಅಲ್ಲಿ ... ಒಂದು ಬಿಳಿಯಜಾತಿಯ ಜನರನ್ನು ಕಂಡುಹಿಡಿದಿದ್ದೇವೆ ಇವರ ... "ಇವರು ಬಿಳಿಯ ಜನರಂತೆಯೂ ರಂಗು ... ಇರುವುದು" ಎಂದು ಬರೆದಿದ್ದಾರೆ.

ಅಜ್ಮೀರದಲ್ಲಿ ಭರತಖಂಡದಲ್ಲೆಲ್ಲ ಎಲ್ಲಾ ೧೦೦೦ ಜನರಿಗೆ ಎಷ್ಟು ಜನರು ಸತ್ತರು ... ಬೊಂಬಾಯಿ ಪ್ರಾಂತ್ಯದಲ್ಲಿ ... ಮಧ್ಯಪ್ರಾಂತ್ಯಗಳಲ್ಲಿ ... ಮದ್ರಾಸಿನಲ್ಲಿ ... ಹೈದರಾಬಾದಿನ ಸೀಮೆಯಲ್ಲಿ ... ಮರಣವಾಗಿರುತ್ತದೆ.

ಪೆಂಡಕ್ಸಿನಿಂದ ಸಿಂಗಪುರಿಗೆ ಆಕಾಶವಿಮಾನದಲ್ಲಿ ಪ್ರೆಟ್ಟಿ ಟರ್ ಎಂಬುವರು ಅಂದೇ ... ರಲ್ಲಿ ವಿಮಾನವು ಬಿದ್ದು ... ವಿಮಾನವನ್ನು ಗಂಡಿಗೆ ಹೋಗಿ ಬಿದ್ದಿರುವುದು ...

ಬಿಹಾರದ ... ಒಬ್ಬ ಹೆಂಗಸು ... ಮನೆಗೆ ... ಹೋಗಿ ... ಕೊಲೆಯನ್ನು ಮಾಡಿರುವುದಾಗಿ ತಿಳಿದುಬಂದಿದೆ ...

ಮದ್ರಾಸಿನ ... ಎಂಬವರು ... ಮುಂಬೈ ನಗರದಲ್ಲಿ ... ೧೯೧೧ ರ ... ವರ್ಷದಲ್ಲಿ ... ಪ್ರಕಟಿಸಿರುವರು.

ಬೆಂಗಳೂರಿನಲ್ಲಿ ಬಿ. ಎ. ಪಿ. ... ಕಂಪೆನಿಯವರು ... ಆಸ್ಪತ್ರೆಯ ... ಹೊರಗೆ ... ಸಭೆಯನ್ನು ...

ಸಾತ್ವಿಲೂ ಹೊತ್ತುಕೊಂಡು ಕಲ್ಲುಗಳನ್ನೆಸೆದು ದಾಳಿಯಿಡು ವನ್ನು ಮಾಡುತ್ತಿರುವಲ್ಲಿ ಪೋಲೀಸರು ಬಂದು ಬಿಡಿಸಿಯನ್ನ ಹುಡುಕಿದರು. ಬಾಂಬಿನ್ನರ್ ಮತ್ತೂ ರಿವಾಲ್ವರ್‌ಗಳನ್ನು ಸಹ ಪೋಲೀಸರು ಸಿಪಾಯಿಗಳು ಸಹಾಯಕ್ಕೆ ಬಾರದೆ ದಂಗೆಯನ್ನಡಗಿಸಿದರು.

ಸರ್ಕಾರದಲ್ಲಿ ಸೋಸಿಯಲಿಸ್ಟ್ ಎಂಬುವ ಜನಾಂಗದ ತರ ಬಹಳ ದಿನಗಳಿಂದ ಎಲ್ಲರಿಗೂ ಸೇರಿದ್ದುದಾಗಿರುವುದೆಂದು ವಾದಿಸುವವರ ಪಕ್ಷಕ್ಕೆ ಸಂಬಂಧಪಟ್ಟ ವರ್ವಾರ್ಟ್ಸ್ ಪತ್ರಿಕೆಯಿಂದ ಇದರ ಕರ್ತೃಗಳಿಗೆ ಕಳೆದ ಜೂನ್ ತಾ॥ ೩೦ಕ್ಕೆ ಕಡೆಯಾದ ಒಂದು ವರ್ಷದಲ್ಲಿ ೧೮೪೦೦೦ ರೂಪಾಯಿಗಳ ಆದಾಯವು ಬಂದಿರುತ್ತದೆ. ಆ ಪತ್ರಿಕೆಯ ಚಂದಾದಾರರ ಸಂಖ್ಯೆಯು ೧೯೧೦ ನೇ ಇಸವಿ ತಾ॥ ೧ ರಲ್ಲಿ ೧೫೭೦೦೦ ಇದ್ದುದು ಈಗ ೧೬೩೦೦೦ ಕ್ಕೆ ಏರಿರುತ್ತದೆ. ಇದೇ ಸೋಸಿಯಾಲಿಸ್ಟ್ ಪಕ್ಷದವರಿಂದ ಹೊರಡಿಸಲ್ಪಡುತ್ತಿರುವ ಮತ್ತೊಂದು ಹಾಸ್ಯಕರವಾದ ಪತ್ರಿಕೆಯ ಚಂದಾದಾರರ ಸಂಖ್ಯೆಯು ಕಳೆದ ವರ್ಷದಲ್ಲಿ ೨೧೩೦೦೦ ಇದ್ದುದು ಈಗ ೩೦೩೦೦೦ ಇರುತ್ತದೆ. ಈ ಪತ್ರಿಕೆಯುತ್ಪನ್ನದಿಂದ ಯುದ್ಧದ ಭಂಡಿಗೆ ೩೦೦೦೦ ರೂಪಾಯಿಗಳು ಕೊಡಲ್ಪಟ್ಟಿರುತ್ತವೆ.

ಪತ್ರವ್ಯವಹಾರಕರ ಅಭಿಪ್ರಾಯಕ್ಕೆ ಪತ್ರಿಕಾಪ್ರಕಾಶಕರು ಉತ್ತರವಾದಿಗಳಲ್ಲವೆಂಬುದನ್ನು ಸಕಲರೂ ಗಮನಿಸತಕ್ಕದ್ದು. ಪ. ಪ್ರ.

ಪತ್ರವ್ಯವಹಾರ.

ಶ್ರೀಮನ್ನಿರಾಬಾದ ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರ ಅಗ್ನಿಪಾಲಕಿಯುತ್ಸವವು.

ಶ್ರೀ ಜಗದ್ಗುರುಗಳವರು ಕಲಾದ್ಗಿಯ ವೀರಶೈವ ಭಕ್ತರ ಪ್ರಾರ್ಥನೆಯಂತೆ ಕಳೆದ ತಾ॥ ೧ ರಲ್ಲಿ ಸಕಲ ಬಿರುದಾವಳಿಗಳ ಸಮೇತ ಅಗ್ನಿಪಾಲಕಿಯುತ್ಸವದಿಂದ ಕಲಾದ್ಗಿ ಪುರಪ್ರವೇಶಮಾಡಿ ಅಲ್ಲಿಯ ಭಕ್ತರು ಮಾಡಿದ ಭಿಕ್ಷೆಯನ್ನು ಸ್ವೀಕರಿಸಿಕೊಂಡು ಅಲ್ಲಿಂದ ಹೊರಟು ಕಳೆದ ತಾ॥ ೨ ರಲ್ಲಿ ಬಾಗಲಕೋಟೆಗೆ ಮಕರತೋರಣ, ಶ್ವೇತಛತ್ರ, ಹಗಲು ದೀವಟಿಗೆ, ಪೋಟಾರ್ಮಲು ಮೊದಲಾದ ಸಮಸ್ತ ಬಿರುದಾವಳಿಗಳ ಸಮೇತ ಪಂಚಕಳಶಯುಕ್ತವಾದ ಅಗ್ನಿಪಾಲಕಿಯುತ್ಸವದೊಂದಿಗೆ ದಯಮಾಡಿಸಿದರು. ಬಾಗಲಕೋಟೆಯ ವೀರಶೈವ ಮತಸ್ಥರು ಇತರ ಪ್ರಮುಖ ಜನರು ಊರ ಹೊರಗೆ ಕಾದುಕೊಂಡಿದ್ದು ಮಹಾಸ್ವಾಮಿಯವರಿಗೆ ಫಲಪುಷ್ಪ ಸಮರ್ಪಿಸಿ, ಅವರ ದರ್ಶನಾಶೀರ್ವಾದವನ್ನು ಪಡೆದು ಶ್ರೀ ಜಗದ್ಗುರುಗಳವರ ಸ್ವಾಮಿಯ ಪುರಪ್ರವೇಶಮಾಡಿ ವೀರಶೈವ ಭಕ್ತರುಗಳೆಲ್ಲರೂ ನಡೆಯುವ ಸೇವೆಯನ್ನು ಕೈಗೊಂಡು ತಮ್ಮನ್ನು ಕೃತಾರ್ಥರನ್ನಾಗಿ ಮಾಡಬೇಕೆಂದು ಬೇಡಿಕೊಂಡರು. ಊರೊಳಗೆ ಉತ್ಸವ ಬರತಕ್ಕ ಮಾರ್ಗದಲ್ಲಿ ಪ್ರತಿಯೊಂದು ಮನೆಯ ಮುಂಗಡೆ ಬಾಳೆಕಂಬಗಳಿಂದಲೂ, ತಳಿರುತೋರಣಗಳಿಂದಲೂ, ಧ್ವಜಪತಾಕೆಗಳಿಂದಲೂ, ವಿವಿಧವಾದ ಚಿತ್ರಪಟಗಳಿಂದಲೂ ಮನೋಹರವಾಗಲಂಕರಿಸಿ, ಮಹಾಸ್ವಾಮಿಯವರ ಸ್ವಾಮಿಯು ದಯಮಾಡಿಸಿದಾಗ ಬಾಳೆಕಾಯಿ ಆರತಿಯನ್ನು ಬೆಳಗಿದರು. ಈ ಮಹೋತ್ಸವವನ್ನೋಡಲು ಸ್ವಳಸ್ಥಳದಿಂದ ೫೦೦೦ ಜನರ ಮೇಲೆಯೇ ಬಂದು ನೆರೆದಿದ್ದರು. ಇಷ್ಟೊಂದು ಜನಸಮೂಹವು ಸೇರಿದ್ದರೂ ನೂಕುನುಗ್ಗಲಿಲ್ಲದಂತೆ ಪೋಲೀಸ್ ವಿಚಾರಣೆಯು ಬಹಳ ಚೆನ್ನಾಗಿ ಮಾಡಲ್ಪಟ್ಟಿತ್ತು. ಈ ಮಹೋತ್ಸವದ ಸಮಾರಂಭವು ಮುಂದೆ ವಿಶದವಾಗಿ ತಿಳಿಸಲ್ಪಡುವುದು.

ಒಬ್ಬ ಭಕ್ತ.

ಬಾಗಲಕೋಟೆ ವೀರಶೈವ ಬೋರ್ಡಿಂಗು.

ಚಿಕ್ಕವಯಸ್ಸಿನ ವಿದ್ಯಾರ್ಥಿಗಳನ್ನು ದೊಡ್ಡ ಊರುಗಳಿಗೆ ಅಭ್ಯಾಸಕ್ಕೆ ಕಳಿಸಿದರೆ ಅವರಿಗೆ ಆಗುವ ಅಡಚಣೆಯನ್ನು ಮತ್ತು ದೊಡ್ಡ ಊರುಗಳಲ್ಲಿರುವ ದುರ್ನಾದಾವಳಿಯಲ್ಲಿ ಹಾಳಾಗಿ ಶಿಕ್ಷಣದ ಆಗುವಂಥ ಕೇಡಬಾರದ ತ್ರಾಸನ್ನು ತಪ್ಪಿಸುವದಕ್ಕಾಗಿ ಬಹಳ ದಿವಸಗಳಿಂದ ಇಲ್ಲಿಯ ಕೆಲವು ಮಹನೀಯರ ಮನಸ್ಸಿನಲ್ಲಿ ಒಂದು ಬೋರ್ಡಿಂಗನ್ನು ಸ್ಥಾಪಿಸುವ ಆಲೋಚನೆಯು ನಡೆದಿತ್ತು. ಆದರೆ ಈ ಬಗೆಗೆ ಯಾರೂ ಮುಂದರಿದು ಕೈಯಲ್ಲಿ ಕೆಲಸಕಕೊಂಡಿದ್ದಿಲ್ಲ. ಶಿವಯೋಗಿ ಸಂಸ್ಥೆ ಸಾಧಕರೆನ್ನಿಸಿಕೊಳ್ಳುವವರು ಬಾಗಲಕೋಟೆಯ ಮುಖ್ಯ ಮನುಷ್ಯರುಗಳಾದ ಪಾಲಗಲ್ಲ ಶ್ರೀಗಳವರ ಸ್ವಾಮಿಯು ದಯಮಾಡಿಸಿತ್ತು. ಆಗ್ಗೆ ಸದರಿ ಸಾಹುಕಾರರುಗಳೂ ಸಾಧಕರೂ ವೀರಶೈವ ಗುತ್ತಿನದಾದ ಕಾರ್ಯದಲ್ಲಿಯೇ ನಿರತರಾಗಿರುವುದರಿಂದ ಬೋರ್ಡಿಂಗ ಬಗ್ಗೆ ಆ ಅಭ್ಯಾಸಕರ ಉತ್ಸವ ದಿವಸದ ಉತ್ಪನ್ನವನ್ನು ಕೊಡುವಿಕೆ ಇಷ್ಟು ಶ್ರೀಗಳವರಿಗೆ ಅರಿಕೆ ಮಾಡಿಕೊಂಡರು, ಅದನ್ನೆ ಪರಮಪ್ರಿಯವಾದ ... ರ ಸಾಧಕರೆಂಬುವ ಯವು ಯೋಗ್ಯವಾಗಿ ಮುಂದಕ್ಕೆ ಬಂದದ್ದರಿಂದ ಶಿವಯೋಗಮಂದಿರ ಫಂಡಿಗಾಗಿ ಬಂದ ಒಂದು ದಿವಸದ ಉತ್ಪನ್ನವನ್ನು ತೆಗೆದುಕೊಳ್ಳದೆ ಅರ್ಧರಕಮನ್ನು ಆಶೀರ್ವಾದವಾಗಿ ಕೆಂಪನಿಯವರಿಗೆ ಮರಳಿ ಕೊಟ್ಟರು. ಮತ್ತು ಅರ್ಧ ರಕಮನ್ನು ಬೋರ್ಡಿಂಗ ಸ್ಥಾಪನೆಗಾಗಿ ಮೂಲಧನವನ್ನಾಗಿ ಇಟ್ಟುಕೊಳ್ಳಲಿಕ್ಕೆ ಪೂರ್ಣ ಆಶೀರ್ವಾದದಿಂದ ಕೊಟ್ಟರು. ಶ್ರೀಗಳವರ ಉದಾರವಾದ ಕೃತಿಗೆ ನಾಟಕಕಂಪನಿಯವರು ಪೂರಾ ಸಂತೋಷಪಟ್ಟು ಬೋರ್ಡಿಂಗಸ್ಥಾಪನೆಮಾಡಿದರೆ ತಾವು ಸಂಚಾರಮಾಡಿದಲ್ಲಿ ಹೆಚ್ಚು ಲಾಭವಾದರೆ ಬೋರ್ಡಿಂಗಕ್ಕೆ ಸಹಾಯ ಮಾಡುತ್ತೇವೆಂತಾ ವಾಗ್ದಾನಮಾಡಿದರು. ಇನ್ನೊಂದು ಮಹತ್ವದ ಸಂಗತಿಯೇನಂದರೆ ಇಲ್ಲಿಯ ಪ್ರಸಿದ್ಧ ಸಾಹುಕಾರರಾದ ಗುಗವಾಡ ಚಂದ್ರಪ್ಪನವರು ಬೋರ್ಡಿಂಗದ ವಿದ್ಯಾರ್ಥಿ ಬರಲಿಂಗಾಯತ ವಿದ್ಯಾರ್ಥಿಗಳು ಕಡೆಯವರೆಗೂ ಇಂಗ್ಲೀಷ ಅಭ್ಯಾಸಮಾಡಲು ಹತ್ತುವ ಊಟವಸ್ತ್ರದ ಖರ್ಚನ್ನು ತಾವೊಬ್ಬರೇ ಕೊಡಲಿಕ್ಕೆ ಸಿದ್ಧರಾಗಿ ಆಶ್ವಿಕಾರ ಕಳೆದ ಒಂದು ವರ್ಷದಿಂದಲೂ ಈ ಉತ್ತಮ ಕೆಲಸವನ್ನು ಕೈಕೊಂಡಿದ್ದರು. ಈ ಮಹನೀಯರ ಈತರದ ಉದಾರಲಕ್ಷ್ಯವೇ ಬೋರ್ಡಿಂಗಸ್ಥಾಪನೆ ಮಾಡಲಿಕ್ಕೆ ಮೂಲಕಾರಣವಾಯಿತೆನ್ನಲಿಕ್ಕೆ ಅಡ್ಡಿಯಿಲ್ಲ, ಮತ್ತು ಬೋರ್ಡಿಂಗಿನ ಸ್ಥಾಪನೆಗಾಗಿ ಸ್ಥಳದ ಬಗ್ಗೆ ಕೆಲವರು ಆಲೋಚನೆ ಮಾಡುತ್ತಿರುವಷ್ಟರಲ್ಲಿ ಟೀಕಿನಮಠದ ಶ್ರೀಗಳವರು ತಮ್ಮ ದೊಡ್ಡಮಠವನ್ನು ಮತ್ತು ಅದರ ಉತ್ಪನ್ನವನ್ನು ವೀರಶೈವ ಬೋರ್ಡಿಂಗಿಗಾಗಿ ಕೊಟ್ಟುಬಿಡುವ ನಿಶ್ಚಯವನ್ನು ಮುಂದಾಳುಗಳಿಗೆ ತಿಳಿಸಿದರು. ಮತ್ತು ಇಷ್ಟೇ ಅಲ್ಲದೆ ತಮ್ಮ ಸದ್ವಿಚಾರದ ಕೆಲಸವನ್ನು ತೀವ್ರವೇ ಅಮಲಿನಲ್ಲಿ ತರಲಿಕ್ಕೆ ತಾ॥ ರಾ॥ ಬಸಪ್ಪ ಪಾಟೀಲ ಇವರಿಗೆ ಪೂರ್ತಿ ತಾವೂ ಸಹ ಈ ಕಾರ್ಯದಲ್ಲಿ ಮುಂದಾಳುಗಳಾಗಿ ನಿಂತರು. ಕಳೆದ ಶ್ರಾವಣ ಶುದ್ಧ ೪ ದಿವಸ ಟೀಕಿನಮಠದಲ್ಲಿ ಶ್ರೀ ಬಸವೇಶ್ವರ ವಿದ್ಯಾವರ್ಧಕವೀರಶೈವ ಮಂಡಿಯ ಕಮಿಟಿಯವರು ನೆರೆದು ರಾ॥ ರಾ॥ ಪುಟ್ಟಪ್ಪ ಅಗ್ನಿಗೂಡವಾರ ಇವರ ಅಧ್ಯಕ್ಷತೆ ಕಳೆಗೆ ಬೋರ್ಡಿಂಗನ್ನು ಸ್ಥಾಪಿಸುವ ಬಗ್ಗೆ ಸಭೆಕೂಡಿತ್ತು. ಶಾರೀರಿಕವ ನೈತಿಕಲಕ್ಷಣಗಳಲ್ಲಿ ಹಿಂದುಳಿದ ನಮ್ಮ ವೀರಶೈವ ಧರ್ಮಸ್ಥರು ದಿನೇ ದಿನೇ ಮುಂದಕ್ಕೆ ಬಂದು ತಮ್ಮ ಉತ್ಪನ್ನದ ಕೆಲವು ಅಂಶವನ್ನು ಧರ್ಮಾರ್ಥ ಕೆಲಸಕ್ಕೆ ಉಪಯೋಗಮಾಡುವುದನ್ನು ನೋಡಿದರೆ ಯಾರು ತಾನೇ ಸಂತೋಷಿಸರು?

ಸೆಕ್ರೆಟರಿ, ವೀರಶೈವ ಬೋರ್ಡಿಂಗ, ಬಾಗಲಕೋಟೆ.

ಶ್ರೀಮನ್ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರ ಸ್ವಾಮಿಯ ಉತ್ಸವವು.

ಕುಣಿಗಲ್ ತಾ॥ ಎಡೆಯೂರೆಂಬ ಗ್ರಾಮದಲ್ಲಿ ಶ್ರೀಮನ್ನಿರಂಜನ ಜಗದ್ಗುರು ತೋಂಟದಾರ್ಯ ಸಿದ್ಧಲಿಂಗೇಶ್ವರ ಮಹಾಸ್ವಾಮಿಯ ಯೋಗಸಮಾಧಿಯು ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ದೇವಾಲಯವು ಜಗತ್ಪ್ರಸಿದ್ಧವಾಗಿ ಇರುತ್ತದಷ್ಟೆ. ಈ ತೋಂಟದಾರ್ಯ ಮಹಾಸ್ವಾಮಿಗೆ ಕಳೆದ ಮಾಹೆ ತಾ॥ ೧೭ ನೆಯ ಗುರುವಾರ ದಿವಸ ಬೆಳಗಿನ ೧೧ ಗಂಟೆಯ ಲಾಗಾಯತು ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ನೆರವೇರಿದುದಿಂದ ನಡೆದುವಲ್ಲದೆ ಆ ದಿನ ಮಧ್ಯಾಹ್ನ ೨ ಗಂಟೆಗೆ ನೂರಾರು ಜನ ಶಿವಗಣಂಗಳಿಗೂ, ಇತರರಿಗೂ ಸಹ ದೇವಾಲಯದ ಹಿಂಭಾಗದಲ್ಲಿರುವ ದಾಸೋಹಮಂಟಪದಲ್ಲಿ ಸಂತರ್ಪಣೆಯು ಮಹದಾನಂದವಾಗಿ ನಡೆಸಲ್ಪಟ್ಟು ಆ ದಿನ ರಾತ್ರಿ ೯ ಗಂಟೆಯಿಂದ ಬೆಳಗಿನ ಜಾವದ ೪ ಗಂಟೆಯವರೆಗೂ ನಂದಿವಾಹನ ಉತ್ಸವವು, ಹಗಲು ಬತ್ತಿ ಬಾಣ ಬಿರುಸುಗಳಿಂದಲೂ, ವಾದ್ಯಘೋಷದಿಂದಲೂ ಮಹಾ ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಈ ಮಹಾ ಉತ್ಸವವನ್ನು ನೋಡುವುದಕ್ಕಾಗಿ ಹತ್ತಾರು ಮೈಲಿ ದೂರದಿಂದ ಸಾವಿರಾರು ಜನರು ಬಂದಿದ್ದು ಸ್ವಾಮಿಯ ಸೇವೆಯನ್ನು ಮಾಡಿ ನೇತ್ರಾನಂದವನ್ನು ಹೊಂದಿ ಮಾರನೆಯ ದಿವಸ ತಂತಮ್ಮ ಸ್ಥಳಗಳನ್ನು ಸೇರಿಕೊಂಡರು. ಇದೇ ಊರಿನ ಶಿವಪ್ಪನವರ ಮಕ್ಕಳು ಸಿದ್ಧಬಸವಪ್ಪನವರು ತಾವು ರಿಕ್ತವಾಗಿದ್ದಾಗ್ಯೂ ಸ್ವಾಮಿಸೇವಾನಿರತರಾಗಿ ಬಹುಸಾಹಯದಿಂದ ಈ ಕಾರ್ಯಕ್ಕೆ ಮುಖ್ಯಸ್ಥರಾಗಿ ನಿಂತು ನೆರವೇರಿಸಿದರು. ಈ ಕಾರ್ಯವನ್ನು ಮೇಲ್ಕಂಡ ಕಾಲದಲ್ಲಿ ಯಾವಾಗಲೂ ನಡೆಸುತ್ತಿದ್ದ ಶ್ರೀ ಪಲಾಬಾಬಾಲಸ್ವಾಮಿಗಳು ಈಗ್ಗೆ ೪ ನೆಯ ವರ್ಷದಲ್ಲಿ ಶಿವೈಕ್ಯರಾದುದರಿಂದ ಈ ಕಾರ್ಯವು ಮಧ್ಯೆ ೩ ವರ್ಷಗಳಿಂದಲೂ ಸಂತತರಾಂ ನಡೆಯದೆ ನಿಂತುಹೋಗಿತ್ತು. ಈ ರೀತಿ ನಿಂತುಹೋಗಿದ್ದ ಸ್ವಾಮಿಯ ಕಾರ್ಯವನ್ನು ಇವರು ನಡೆಸಿದುದಕ್ಕೆ ತುಂಬಾ ಸಂತೋಷಪಡಬೇಕಾಗಿರುತ್ತೆ. ಅಲ್ಲದೆ ಇದೇ ರೀತಿ ವರ್ಷೇವರ್ಷೇ ಶಕ್ತ್ಯಾನುಸಾರ ಕಾಲದಲ್ಲಿ ನಡೆಸತಕ್ಕ ಮನಸ್ಸನ್ನು ಶ್ರೀ ಸಿದ್ಧಲಿಂಗೇಶ್ವರನು ಇವರಿಗೆ ಕೊಡಬೇಕಾಗಿ ಪ್ರಾರ್ಥಿಸುವೆನು. ಪರಂತು ಈ ... ಮಾಡಿದ ಧರ್ಮಜ್ಞನಿಗೂ ಇವರಿಗೂ

ಸರ್ವಕಾರ್ಯಮಯಶೀಲನ್ನ.

ಇಷ್ವರಶ್ಯಾಭಿವೃದ್ಧಿಯನ್ನಿಯೆಂದು ನಾವು ಸರ್ವದಾ ಕೋರುತ್ತಿರುವೆವು. ಅಲ್ಲದೆ ಈ ಪ್ರಾಂತ ಮಳೆಯಿಲ್ಲದೆ ಎಲ್ಲಾ ಕಡೆ ಪೈರು ಪಚ್ಚೆಗಳೂ ಒಣಗುತ್ತಿರುವುವು. ನಿನ್ನೆ ಮೊನ್ನೆ ಮಾತ್ರ ಸಾಧಾರಣವಾಗ ಮಳೆಯಾಗಲು ಜನಗಳಿಗೆ ಸ್ವಲ್ಪ ಧೈರ್ಯವುಂಟಾಗಿರುವ್ಯದೆ. ಸಂಪೂರ್ಣವಾದ ಮಳೆಯು ಯಾವಾಗ ಬರುವುದೋ ಎಂಬ ಆಲೋಚನೆಯಿಂದ ಶ್ರೀ ಭಗವಂತನ ಧ್ಯಾನದಲ್ಲಿಯೇ ಇರುತ್ತಾರೆ. ಮತ್ತೂ ಈ ಗ್ರಾಮದಲ್ಲಿಯೂ ಇದರ ಎಡಬಲ ಗ್ರಾಮಗಳಲ್ಲಿಯೂ ಇಲಿ ಹೆಗ್ಗಣಗಳು ಹೆಚ್ಚು ಗಟ್ಟಲೆಯಾಗಿ ಸಾಯುತ್ತಾ ಇರುವುದರಿಂದ ಎಲ್ಲರೂ ಘನತರವಾದ ವ್ಯಸನಾಂಬುಧಿಯಲ್ಲಿಯೇ ಮುಳುಗಿ ಇರುವಂತಾಗಿದೆ. ಏಕೆಂದರೆ— ಕಳೆದ ಸಾಲಿನಲ್ಲಿ ಈ ಗ್ರಾಮವನ್ನು ಪ್ಲೇಗ್ ಬಾಧೆಯಿಂದ ಬಿಟ್ಟು ೫–೬ ತಿಂಗಳ ವರೆಗೂ ಸುತ್ತುಗಳಲ್ಲಿ ವಾಸಮಾಡಿ ಗ್ರಾಮಕ್ಕೆ ಬಂದು ೩–೪ ತಿಂಗಳು ತುಂಬುವುದರೊಳಗೇ ಪುನಃ ಗ್ರಾಮವನ್ನು ಬಿಡಬೇಕಾದರೆ ಪ್ರಜೆಗಳಿಗೆ ಸುಖವೂ ಇನ್ನೆಷ್ಟರಮಟ್ಟಿಗೆ ಇರುವುದೋ ವಾಚಕರೇ ಊಹಿಸಬೇಕಾಗಿದೆ. ಅಲ್ಲದೆ ದನಕರುಗಳಿಗೂ ಇದೇ ಪ್ಲೇಗ್ ಸಂಬಂಧವಾದ ಖಾಯಿಲೆಯಿಂದ ಈ ಪ್ರಾಂತದ ಗ್ರಾಮಗಳಲ್ಲಿ ಸಾವಿರಾರು ರೂಪಾಯಿಗಳ ಜಾನುವಾರುಗಳು ಪ್ಲೇಗ್ ಮಾರಿಗೆ ತುತ್ತಾದುವು. ಈ ಆಹಾರದಿಂದಲೂ ತೃಪ್ತಿಪಡದೆ ನರರ ಆಹಾರಕ್ಕೆ ಗಮನಮಾಡಿ ಇರುತ್ತಾಳೆ. ಈ ಮಹತ್ಕಷ್ಟವು ದೇವರಿಂದ ನಿವಾರಣೆಹೊಂದಬೇಕಾಗಿರುತ್ತೆಯೇ ಹೊರತು ನುತ್ತಾವ ಪ್ರಯತ್ನದಿಂದಲೂ ಅಗಲಾರದು. ಆದರೆ ಇಲ್ಲಿಗೆ ೧೨ ಮೈಲಿ ದೂರದಲ್ಲಿರುವ ಕುಣಿಗಲಿನಲ್ಲಿ ಪ್ಲೇಗ್ ಗಲಾಟೆಯು ಇರುವುದರಿಂದ ಆ ಪ್ರಾಂತದ ಜನಗಳು ಇಲ್ಲಿಗೆ ವಿಶೇಷವಾಗಿ ಬಂದು ಹೋಗುವ ಪಾಟಿಕೆಯಿರುತ್ತೆ. ಇದಕ್ಕೆ ಅವಕಾಶ ಕೊಡದಂತೆ ನಮ್ಮ ಸರ್ಕಾರದವರು ನಿಗಾಕೊಟ್ಟಾರೆಂದು ನಂಬಿರುತ್ತೇನೆ.

ಹಿತಚಿಂತಕ.

ದಾವಣಗೆರೆ.

ಕಳೆದವಾರದ್ದೇಮ.

ಲಾರ್ಡ್ ಮೆಕಾಲೆಯವರು ಒಂದು ಕಡೆಯಲ್ಲಿ ಹೇಳಿರುವಂತೆ ಸಮಾಜದ ಪ್ರತಿಯೊಂದು ವ್ಯಕ್ತಿಯು ಸುಸ್ಥಿತಿಯಲ್ಲಿರದ ವಿನಾ ಆ ಸಮಾಜವು ಉನ್ನತಾವಸ್ಥೆಯಲ್ಲಿದೆ ಎಂದು ತಿಳಿಯಲಾಗದು. ಸಮಾಜದಲ್ಲಿ ಕೆಲವರು ಸುಶಿಕ್ಷಿತರಾಗಿದ್ದರೆ, ಆ ಸಮಾಜಕ್ಕೆ ಸುಖಾವಸ್ಥೆಯು ಎಂದಿಗೂ ಬರಲಾರದು. ನಮಗೂ, ನಮ್ಮ ಕುಟುಂಬಕ್ಕೂ ಊಂಡುಗುವುದಕ್ಕೆ ಯಾವವಿಧವಾದ ಕೊರತೆಯಿಲ್ಲವೆಂದು ಸಮಾಜದ ಕಡೆಗೆ ಗಮನಿಸದಿರುವದು ಉಚಿತವಲ್ಲ. ಮನೆಯ ಒಂದು ಭಾಗಕ್ಕೆ ಬೆಂಕಿ ಬಿದ್ದರೆ ಮತ್ತೊಂದು ಭಾಗವು ನನಗೆ ಯಾವವಿಧವಾದ ಸಂಕಟವೂ ಇಲ್ಲವೆಂದು ಕುಳಿತಿರುವಷ್ಟೇ ತಮ್ಮ ಯೋಚನೆಯು ಯುಕ್ತವಾದದ್ದಾಗಿದೆ. ಶರೀರದ ಒಂದ ಭಾಗಕ್ಕೆ ಬಾಧೆಯಾಗಲು ಇತರ ಭಾಗಗಳು ಗಮನಿಸದಿದ್ದರೆ ಹೇಗೆ ಕೊನೆಗೆ ತಾವೂ ನಾಶವಾಗುತ್ತವೆಯೋ, ಅದರಂತೆಯೇ ಸಮಾಜವೆಂಬ ಶರೀರಕ್ಕೆ ಪ್ರಸ್ತುತ ಬಾಧೆಯುಂಟಾಗಿರುವಾಗ ಅವಯವ ರೂಪವಾಗಿರುವ ತಾವುಗಳೆಲ್ಲ ಗಮನಿಸಿ ತನು ಮನ ಧನಗಳಿಂದ ಸೇವಾತತ್ಪರರಾಗತಕ್ಕದ್ದು ಅತ್ಯಾವಶ್ಯಕವು. ಸಮಾಜ ಸೇವೆಗಾಗಿ ತಮ್ಮ ಸರ್ವಸ್ವವನ್ನೂ ವ್ಯಯ ಮಾಡಿರುವ ಮಹನೀಯರನ್ನು ನಾವು ತಮಗೆ ಪರಿಚಯಮಾಡಿಕೊಡುವುದೂ, ಸೂರ್ಯನನ್ನು ದೀಪಹಿಡಿದು ತೋರಿಸುವುದೂ ಸಮಾನವಾದವುಗಳಾಗಿವೆ. ಬಂಧುಗಳೇ! ಸಮಾಜದ ಹಿತಾಹಿತಗಳೇ ನಮ್ಮ ಹಿತಾಹಿತಗಳೆಂತಲೂ, ಸಮಾಜದ ಗೌರವವೇ ನಮ್ಮ ಗೌರವವೆಂತಲೂ, ಸಮಾಜಕ್ಕೆ ಬಂದ ಸಂಕಟವೇ ನಮ್ಮ ಪ್ರೀತಿಯ ಪುತ್ರನಿಗೆ ಬಂದ ಸಂಕಟವೆಂದು ಭಾವಿಸಿ ಅದಕ್ಕನುಗುಣವಾದ ಕಾರ್ಯದಲ್ಲಿ ತನು ಮನ ಧನಗಳನ್ನು ವ್ಯಯ ಮಾಡಿದ್ದರೆ ಈ ಸಮಾಜವು ಬಿಂದಿತವಾಗಿಯೂ ಉನ್ನತಸ್ಥಿತಿಗೆ ಏರಲಾರದು, ಮತ್ತು ನಾವು ಮನುಷ್ಯರಾಗಿ ಬಾಳಲಾರೆವು. ಜಗತ್ತಿನ ವಿಚಾರಕ್ರಾಂತಿಯ ಕಡೆಗೆ ಗಮನಿಸಿರಿ. ಮತಮತಾಂತರಗಳ ಪ್ರಾಬಲ್ಯವನ್ನು ನೋಡಿರಿ. ಸಮಾಜಸೇವೆಯೇ ಶಿವಸೇವೆ ಯೆಂಬುದನ್ನು ನಂಬಿರಿ. ಸಮಾಜದವರು ಕೆಳ ನಾನಾವಿಧವಾಗಿ ಬಳಲುತ್ತಿರುವಾಗ, ನಾನಾ ವಿಧವಾದ ಅವಮಾನಗಳನ್ನು ಹೊಂದುತ್ತಿರುವಾಗ, ಅವರಿಗೆ ಸಹಾಯ ಮಾಡದೆ ಬಾಗಿಲು ಹಾಕಿಕೊಂಡು ಶಿವಪೂಜೆಯನ್ನು ಮಾಡಿದರೆ ಆ ಶಿವನು ಮೆಚ್ಚುವುದಿಲ್ಲವೆಂಬುದನ್ನು ತಿಳಿದು ಸಮಾಜಸೇವೆಗೆ ಯಾರು ಕಂಕಣ ಬದ್ಧರಾಗಿರುತ್ತಾರೆಯೋ ಅವರಿಗೆ ದಯೆ ತಕ್ಕಷ್ಟು ನೀಡಬೇಕಿರಿ. ಸ್ವಾಮಿಯವರು ಇಷ್ಟು ಗೊಟ್ಟರು ಸಂಧಿಸಿದಾಗ ಹೇಗೆ ಕ್ಷೇಮಲಾಭಗಳನ್ನು ವಿಚಾರಿಸುತ್ತಾರೋ ಅದರಂತೆಯೇ ಧಾರ್ಮಿಕ ವಿಧಿಯಲ್ಲಿ ವರದಿಗತಕ್ಕ ನ್ಯೂನಾತಿರೇಕಗಳನ್ನು ತಿಳಿಸಿರಿ. ಅದನ್ನು ... ಕೊಳ್ಳುವಂತೆ ಅವರಿಗೆ ನಿರ್ಣಯಿಸಿದ ಪ್ರೇರಿಸಿ.

ಮಠ. ... ಬಾಕಿ ವ್ಯಾಖ್ಯಾನವಾಗಕಿ ...

ದಿನ ... ಆಗುತ್ತಿದೆ. ... ಕೆಳಗೆ ...

ಬರತಕ್ಕ ಸಂಸ್ಥಾನದ ಪಟ್ಟಣದ ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಸರಿಯಾದ ವಿದ್ಯೆಯನ್ನು ಹೇಳಿಸುವ ವಿಷಯಕ್ಕೆ ತಮ್ಮ ದೃಷ್ಟಿಯನ್ನು ಇಡಬೇಕು. ಮಕ್ಕಳಿಗೆ ಸರಿಯಾದ ವಿದ್ಯೆಯು ಬರಬೇಕು. ಮುಂದೆ ಬರುವ ಪ್ರತಿಯೊಬ್ಬನೂ ವಿದ್ಯಾವಂತನಾಗಿದ್ದರೆ ಸಮಾಜಕ್ಕೆ ಅಭಿವೃದ್ಧಿಯಾಗುವುದು. ಉಪನ್ಯಾಸಗಳಲ್ಲಿ ಹೇಳಿದ ವಿಷಯಗಳನ್ನು ತಿಳಿದುಕೊಳ್ಳುವುದು ಬಹಳ ಅವಶ್ಯಕ.

ಲಲರ ಕರ್ತವ್ಯವಲ್ಲವೇ? ಅವರು ಎಂತಹ ಅನಾಚಾರದಿಂದ ವರ್ತಿಸಿದರೂ ಅವರ ಕಡೆಗೆ ಗಮನಿಸದೆ ಕೇವಲ ನಿಮ್ಮ ಹಣಕ್ಕಾಗಿ ಅವರನ್ನು ಕಾದಿಟ್ಟುಕೊಳ್ಳುವುದು ನಿಮಗೆ ಯುಕ್ತವಾಗಿ ತೋರುತ್ತದೆಯೇ? ಈ ಪ್ರಕಾರ ಪ್ರತಿಯೊಬ್ಬರಲ್ಲಿ ಕಾರ್ಯಗಳು ತಲೆದೋರಿದರೆ ಹೇಗೆ ಉಗೇ ಬಂದಿಯಲ್ಲಿರತಕ್ಕ ಪ್ರತಿಯೊಂದು ಪೆಟ್ಟಿಗೆಯವರು ತಮ್ಮ ತಮ್ಮ ಪೆಟ್ಟಿಗೆಯ ಬಾಗಿಲನ್ನು ಹಾಕಿಕೊಂಡರೆ ನಿರಾಯಾಸವಾಗಿ ಕಾರ್ಯವು ಆಗುತ್ತದೆಯೋ ಅದರಂತೆಯೇ ನಿರಾಯಾಸದಿಂದ ಸಮಾಜೋನ್ನತಿಯಾಗಲು ಅಭ್ಯಂತರವಿಲ್ಲ. ಮುಖ್ಯವಾಗಿ ಈ ವಿಧಿಗಳನ್ನೆಲ್ಲಾ ಕೇಳಿ ಇಲ್ಲಿಯೇ ಬಿಡದೆ ತಾವು ಆಚರಿಸಬೇಕೆಂಬುದಾಗಿ ಬೇಡಿಕೊಳ್ಳುತ್ತೇನೆ. ಈ ಪ್ರಕಾರ ಅನೇಕ ದೃಷ್ಟಾಂತರಗಳಿಂದಲೂ, ಶಾಸ್ತ್ರಾಧಾರಗಳಿಂದಲೂ ಜನಗಳಲ್ಲಿ ಬಿಂಬಿಸುವಂತೆ ಉಪನ್ಯಾಸಮಾಡಿದನಂತರ ಮ॥ ರಾ॥ ಹೊಸ ಚೆನ್ನಬಸಪ್ಪನವರ ಗುರುಶಾಂತಪ್ಪನವರು ಇದೇ ವಿಷಯವನ್ನು ಪುಷ್ಟೀಕರಿಸಿ ಸಕಲರೂ ಆಚರಣೆಯಲ್ಲಿ ತರಬೇಕೆಂದು ಚೆನ್ನಾಗಿ ಬೋಧಿಸಿದರು. ಅನಂತರ ಮ॥ ರಾ॥ ಹರ್ಡೀಕರ್ ಮಧುಲಿಂಗಪ್ಪನವರು ಪ್ಲೇಗಿನ ಗಲಾಟೆ ಇದ್ದಾಗ್ಯೂ ಇಷ್ಟು ಜನಗಳು ಸೇರಿದ್ದಕ್ಕಾಗಿ ಸಭಿಕರಿಗೆ ವಂದಿಸಿ ಉತ್ತರೋತ್ತರ ಇಂತಹ ಕಾರ್ಯಗಳಿಗೆ ಪ್ರೋತ್ಸಾಹ ಕೊಡುತ್ತಿರಬೇಕೆಂದು ಅರಿಕೆ ಮಾಡಿಕೊಂಡರು. ಅನಂತರ ಅಧ್ಯಕ್ಷರು ನಾಲ್ಕು ಸೋಮವಾರಗಳಲ್ಲಿಯೂ ಜರುಗಿದ ವಿಷಯಗಳ ಸಾರಾಂಶವನ್ನು ಸಭಿಕರಿಗೆ ಬೋಧಿಸಿ ಇದರಂತೆ ನೀವುಗಳೆಲ್ಲ ಆಚರಿಸಬೇಕೆಂಬುದಕ್ಕಾಗಿ ಈ ನಾಲ್ಕು ಉಪನ್ಯಾಸಗಳನ್ನೂ ಮುದ್ರಿಸಿ ಪುಸ್ತಕರೂಪದಿಂದ ಪ್ರಕಟಿಸಲ್ಪಡುತ್ತೆ. ಆ ಪುಸ್ತಕಗಳನ್ನಿಟ್ಟುಕೊಂಡು ಮುಖ್ಯವಾಗಿ "ನುಡಿದಂತೆ ನಡಿ, ಇದೇ ಜನ್ಮದ ಕಡಿ." ಎಂಬುದನ್ನು ಗಮನದಲ್ಲಿಟ್ಟುಕೊಂಡು ಸದಾಚಾರಸಂಪನ್ನರಾಗಿರೆಂದು ಅಪ್ಪಣೆ ಕೊಡಿಸಿದರು. ಆಗ ಸಭೆಯು ವಿಸರ್ಜಿಸಲ್ಪಟ್ಟು ಶ್ರೀ ಚಕ್ರೇಶ್ವರ ದೇವಸ್ಥಾನಕ್ಕೆ ಸಕಲರು ಶಿವಭಜನೆಯನ್ನು ಕೇಳಲು ತೆರಳಿದರು.

ಪ್ರತ್ಯಕ್ಷದರ್ಶಿ.

ಸೂಚನೆ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅಕ್ಷರಗಳಿಂದ ಬರೆಯಬೇಕು.)

ಅಂಜೀರಾಕರ್ಷಮಧು:— ಇದರ ಸೇವನದಿಂದ ವೀರ್ಯದೋಷನ ಉಷ್ಣತೆಯು ಹೋಗಿ ಧಾತು ಪೌಷ್ಟಿಕವಾಗುತ್ತದೆ. ಮತ್ತು ಕಾಮೇಚ್ಛೆಯು ಹೆಚ್ಚಾಗಿ ಸಂತತಿ ಪ್ರಾಪಣಕ್ಕೆ ಯೋಗ್ಯವಾದ ಧಾತುವಾಗುತ್ತದೆ. ಕಳವೃಥುವಿಂದ ಅಥವಾ ಯಾವದಾದರೊಂದು ಕಾರಣದಿಂದ ನರದೌರ್ಬಲ್ಯ ನಪುಂಸಕತ್ವವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣಗಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧—೧೦—೦ ರೂ. ೨ ಬಾ, ೨—೧೦—೦ ರೂ. ೩ ಬಾ, ೩—೧೨—೦ ರೂ. ಒಮ್ಮೆಗಲೆ ೧ ಡಜನ್ ಬಾಟ್ಲಿ ತರಿಸುವವರಿಗೆ ೧೫ ರೂ. ಹೊರತೆ ೩ ಬಾಟ್ಲಿ ಇನಾಮು ಟ. ಖ. ಬೇರೆ.

ಪಂಚಾಂಗಚೂರ್ಣವು:— ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಉಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧॥ ರೂ. ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಟ. ಖ. ಬೇರೆ.

ಮಲಮ:— ಇದರಿಂದ ಹಳೇ ಗಜಕರ್ಣ, ಇಸಬು, ತುರಿ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೩ ಆಣೆ. ೩ ಡಬ್ಬಿಗೆ ೧ ಡಬ್ಬಿ ಇನಾಮು ಟ. ಖ. ಬೇರೆ.

"ಪಾಚಕ."

("ಪಚನಸಹಾಯದ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆ ಉಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕ್ರಯ ೧ ಡ. ೪ ಆಣೆ. ಟ. ಖ. ಬೇರೆ.

"ಮಧು ಕಂಪನಿ"

ಪ್ರೊ ಪ್ರೈಟರ. (ಇಂಡಿಯಾ)

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೨—೦
ಪರಮಾದಿಗಳಶಾಂಕರೋಕ್ತಾವಳಿ	೦—೪—೦
ಚಾರುಶೀಲೆ ಚರಿತ್ರೆ	೦—೫—೦
ಕೆಲಸ್ಯಾಂಡನ್ನು	೦—೫—೧
ಸಟೀಕಕರ್ನಾಟಕಶಬ್ದಮಂಜರಿ	೦—೮—೦
ಸಟೀಕಸಂಧ್ಯಾವ್ರತ	೦—೮—೦
ಸಟೀಕ ವಿವಾಹವಿಧಿ	೦—೬—೦
ವ್ರತಪಂಚಕ	೦—೨—೦
ವಿವೇಕಮಂಜರಿ	೦—೨—೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ.)	೦—೨—೦
ಗುರುಶಂಕರೇಶ್ವರಶತಕಂ	೦—೧—೦

ಅಂಚೆ ವೆಚ್ಚ ಬೇರೆ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ಕ್ಕೆ ೧ ರೂಪಾಯಿಯಂತೆ ಚಂದಾ ಹೇಳುವುದಲ್ಲದೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

ಅಂಚೆಯ ವೆಚ್ಚ.

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦

೨ ರಿಂದ ೪ ರವರೆಗೆ ೧—೧೦—೦

ಇದರಂತೆ ಮುಂದೆ ಪ್ರತಿನಾಲ್ಕು ಪತ್ರಿಕೆಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ತಿ ೧ ಕ್ಕೆ ೧॥ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಆಗ್ಗೆ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

ಉಪಬತ್ತಿಗಳು.

28

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧೨—೦—೦ ೫—೦—೦; ೩—೦—೦; ೭—೪—೦; ೧—೮—೦; ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧—೦—೦; ಪಸಿ ಗಂಧ ತೊಲಾ ೧ಕ್ಕೆ ೧೨ ಆಣೆ; ದಶಾಂಗ ಪೊಟ್ಟಣ ೧ ಕ್ಕೆ ೪ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೪ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು

ಟಿ. ಎಲ್. ಉಪಾಧ್ಯಾಯ,

ಮೈಸೂರು, ಸುಗಂಧಶಾಲಿ.

ಸ್ವದೇಶ! (ಸತ್ಯವೇ ಜಯತೆ) ಸ್ವದೇಶಿ!

12 ಗುಣವಾಗದಿದ್ದರೆ ಹಣವಾಪಸ.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ ಗರ್ಭಿಣಿ ಟಾಕಿ ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ಥದ ಬೊಬ್ಬೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೬೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೩೦ ಗುಳಿಗೆಗಳಿಗೆ ೧ ರೂ. ಒಟ್ಟಿಲೆ ೬೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ನಗದಿ ಕೊಡುವೆವು. ಟ. ಖ. ೪ ಆಣೆ ಬೇರೆ, ಅನುಭವಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು. ವಿಳಾಸ—

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,

ಪೋಸ್ಟ್ ಬನವಾಸಿ, ಜಿಲ್ಲ ಉತ್ತರಕನಡಾ.

28 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತುವ್ಯ ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ ಮನುಷ್ಯನ ರಕ್ತವು ಹಗಲೂ ಇರಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಮೇಲೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು ಹಿತಕರ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ಸಿದ್ಧಾಂತದಂತೆ ಅನೇಕ ಧಾತುಗಳ ಮಿಶ್ರಣದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸರ್ವರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು —ಅಶಕ್ತಿ, ಅಜೀರ್ಣ, ಕೈಕಾಲುಸೆಳತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಕೆಮ್ಮು ಮತ್ತು ಜೊಂಪದ ಅಶಕ್ತಿ, ನಿದ್ರಾನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೆದುಳಿನ ಜಾಡ್ಯ, ದೃಷ್ಟಿದೋಷ ವಿಕಾರ, ಕಣ್ಣು ಗಜಕರ್ಣ, ಜ್ವರ, ಉದರವಾತ, ಕಿವಿಯ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯು ಹೋಗುವುದು ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುವಹಾಗೆ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರ ರಕ್ತಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಂವಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧—೦—೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧—೦—೦. ಪೋಸ್ಟ್ ಖರ್ಚು ೦—೪—೦. ಒಮ್ಮೆಗಲೆ ೬ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಪುಕಟ ಕಳುಹಿಸುವೆವು. ಒಮ್ಮೆಗಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಪುಕಟಾಗಿ ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಯೋಗಿಸಿ ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಹೇಳಿದ ಎರಡು ತಿಂಗಳೊಳಗೆ ಗುಣ ಕಾಣುವುದು. ಜೀರ್ಣಪ್ರಕೃತಿಯುಳ್ಳವರು ಹೇಳಿದ ೨ ತಿಂಗಳಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೬ ವರ್ಷದ ಕೆಳಗಿನ ಚಿಕ್ಕ ವಯಸ್ಸಿನವರಿಗೆ ರಾತ್ರಿ ಮಾತ್ರ ಉಪಯೋಗಿಸುತ್ತಿದ್ದರೆ ಬೇಕಾದ ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಣಿಗಾಂವಕರ, ಪ ಜಾವ್,

ಕಾರವಾರ ಜಿಲ್ಲಾ,

orth Ka .. ra .. ra

"ಅಗಸ್ತ್ಯ ವಿಚಾರ."

15

ಬೆಲೆ ೪|| ಆಣೆ. ವಿ. ಪಿ. ಯಿಂದ ೬ ಆಣೆ.

ಈ ಪುಸ್ತಕವನ್ನು ಸರ್ವರೂ ಸಂಗ್ರಹಿಸಿ ಅಗತ್ಯವಾಗಿ ವಿಚಾರಿಸತಕ್ಕದ್ದಾಗಿರುವುದರಿಂದಲೇ "ಅಗಸ್ತ್ಯವಿಚಾರ" ವೆಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಶಾಸ್ತ್ರಸಮ್ಮತವಾಗಿರುವುದರಿಂದ ಪ್ರಸಿದ್ಧರಾದ ಶಾಸ್ತ್ರಜ್ಞರೂ, ಸ್ವದೇಶ ಸೇವೆಗೆ ಸಹಾಯಕರಾಗಿರುವುದರಿಂದ ಸ್ವದೇಶಭಕ್ತರೂ ಮೆಚ್ಚಿ ಕೊಟ್ಟ ಸರ್ಟಿಫಿಕೇಟ್‌ಗಳು ಇರುವರೆಗೆ ೩೦ ಬಾರಿ ಬಂತ್ತಾಸೆ. ವಿಶೇಷ ಹೇಳಬೇಕಾದ್ದೇನು! ಗ್ರಂಥ ಪ್ರಕಟವಾಗಿ ಇನ್ನೂ ೨ ತಿಂಗಳಿಲ್ಲವಾದರೂ ಈಗಾಗಲೇ ೩೦೦ ಪ್ರತಿಗಳು ಖರ್ಚಾಗಿರುವುದು ಅಪೇಕ್ಷೆಗಾರರು ಬೇಗ ತರಿಸಿಕೊಂಡು ಆನಂದಪಡೆಯಿರಿ. ಪತ್ರವ್ಯವಹಾರವನ್ನು ಕನ್ನಡದಿಂದಲೇ ಮಾಡಬೇಕು.

ಪತ್ತಾ—ವೀರಬಸಪ್ಪ ಆನುಜರಳನ, ಪೋಸ್ಟ್—ಬಾಗೇವಾಡಿ, ಡಿ|| ಬೆಳಗಾಂವ.

20 ಆಲಸ್ಯಮಾಡಿದರೆ ಇಷ್ಟು ಕಡಿಮೆ ಕ್ರಯಗಳಿಗೆ ದೊರೆಯಲಾರವು.

ಒಳ್ಳೇ ಸಮಯ! ಸುಲಭ ಕ್ರಯ!! ಬೇಗಬೇಡಿರಿ!!!

ಪ್ರತಿ ವಾಚಿಗೆ ೫ ವರುಷಗಳು ಗ್ಯಾರಂಟಿ ಕೊಡುವೆವು.

೧ ನೇದು ರೂ 2-8-0 ಮಾತ್ರ! ೨ನೇದು ರೂ. 3-8-0 ಮಾತ್ರ!! ೩ನೇದು ರೂ. 6-0-0 ಮಾತ್ರ!!!

ವ್ಯಾಪಾರಸ್ಥರಿಗೆ ಕೊಡುವ ದಾರಣೆಗಳಿಗೆ ಬರೆರಿ.

1. ರಾಸ್ಕೋಪಸಿಸ್ಟಂ ಪೇಟೆಂಟ್ ಲೀವರ್ ಜೂವೆಲ್ಡ್ ವಾಚ್.



ಧಾರವಾಡದ ಕರ್ನಾಟಕವೃತ್ತಪತ್ರಿಕೆಯು ಅನಾಯಾಚಿತಪ್ರಸಂಗವು.

(ಭಾಗ ೨)

ಕಳೆದ ಸೆಪ್ಟಂಬರ್ ತಾ|| ೧೩ ರಲ್ಲಿ ನಗರದಲ್ಲಿ ಮೈಸೂರ ಶ್ರೀಮನ್ಮಹಾರಾಜರು ಶ್ರೀಕೃಷ್ಣರಾಜೇಂದ್ರಮಹಾಸ್ವಾಮಿಗಳ ಅಡ್ಡಪಲ್ಲಕಿಯುತ್ಸವವನ್ನು ಅಲ್ಲಿಯ ಸ್ವಾಮಿಗಳು ನಡೆಸಿದ್ದು ಮತ್ತು ಕೆಲ ಮಂದಿ ಪತ್ರಿಕೆಗಳು ಹೇಳುವಂತೆ ಸರ್ಕಾರದವರ ಅಪ್ಪಣೆಯನ್ನು ಉಲ್ಲಂಘಿಸಿ ನಡೆಸಿದ್ದರೆಂಬ ವಿಷಯವನ್ನು ಕುರಿತು ಬರೆಯುತ್ತಿದ್ದರೆ? ಮತ್ತು ತಾ|| ೧೬ ರಲ್ಲಿ ಡಿಸ್ಟ್ರಿಕ್ಟ್ ಕಲೆಕ್ಟರು, ಅಮಲ್ದಾರರು ಮುಂತಾದ ಅಧಿಕಾರಿಗಳು ಹೋದ ವಿಷಯವನ್ನೂ, ಅವರ ಪ್ರತ್ಯಕ್ಷ ದಲ್ಲಿ ನಡೆದ ಸಂಗತಿಗಳನ್ನೂ ಕುರಿತು ಸರ್ಕಾರದವರ ಅಪ್ಪಣೆಯು ಗೊತ್ತಾಗಿ ಹೋದರೂ ತಾ|| ೧೬, ೧೭ ರಲ್ಲಿ ಅಡ್ಡಪಲ್ಲಕಿಯ ಉತ್ಸವವು ನಡೆಯಿತೆಂದೂ, ಹೊಸತಾದ ಕೆಲವು ಗ್ರಂಥಗಳಲ್ಲಿ ವಿವರ ವಾಗಿ ಬರೆದಿರುವುದನ್ನು ನೋಡಿ ಈ ಪತ್ರಿಕೆ ಯವರು ಕೆಲವು ಪ್ರಸಂಗಗಳನ್ನು ಪ್ರಕಟಿಸಿದ್ದಾರೆ ವಿಷಯವು ಕಂಡುಬಂದಿತು. ಆ ಪತ್ರಿಕೆಯವರು ಹೇಳುವಂತೆ ನಡೆದ ಸಂಗತಿಗಳು ಸತ್ಯವಾದರೆ ಆಶ್ಚರ್ಯಕರವಾಗಿ ಶೃಂಗೇರಿ ಸ್ವಾಮಿಗಳವರ ಅಡ್ಡಪಲ್ಲಕಿ ಉತ್ಸವವನ್ನು ನಡೆಸುವುದಕ್ಕೆ ಮೈಸೂರು ಸರ್ಕಾರದವರ ಅಪ್ಪಣೆಯನ್ನು ಪಡೆದು, ಅದರಂತೆ ನಡೆಸಬೇಕಾಗಿದ್ದಿತೆಂದು ಸಂದರ್ಭದಿಂದಲೇ ಗೊತ್ತಾಗುವುದರಿಂದ ಅವರು ಮೈಸೂರು ಸರ್ಕಾರದ ಅಧಿಕಾರಿಗಳಾಗಿರುವುದಿಲ್ಲವೆ, ಶೃಂಗೇರಿ ಸ್ವಾಮಿಗಳು ತಮ್ಮ ಅಧಿಕಾರವನ್ನು ತಿಳಿಯದೆ ಹೋಗುವರೆ ಎಂಬ ಸಂಶಯವು ಉಂಟಾಗುತ್ತದೆ. ತಮ್ಮ ಮಠದ ಅಡ್ಡಪಲ್ಲಕಿಯ ಉತ್ಸವವು ನಡೆಯುವು ದರಿಂದ ತಮ್ಮ ಮತಸ್ಥರಿಗೆ, ಅಥವಾ ತಮ್ಮ ಗುರುಗಳಿಗೆ ಗೌರವ ಹೆಚ್ಚುವದೆಂದು ತಿಳಿದಿರುವರು. ಅವರು ಅದನ್ನು ಇಲ್ಲ ದಿರುವಾಗ ತಮ್ಮ ಗುರುವಿನ ಗೌರವವು ಕಡಿಮೆ ಆದಂತೆ ತಿಳಿದು ಮನಸ್ಸಿನಲ್ಲಿ ವ್ಯಸನಪಡುವುದು ಸಹಜವು ಇದನ್ನು ಕುರಿತು ... ಸಂದರ್ಭದಲ್ಲಿ ಮೇಲ

ಯವರ ಉತ್ಸವದ ಸಂಬಂಧವಾಗಿ ಸರ್ಕಾರದ ಪ್ರಕಾ ರವು ಮುಂತಾದುದು ಪತ್ರಿಕೆಯ ಗ್ರಹಿಕೆ ಸ್ಥಿರವಾಗಿದೆ. ಹಳ್ಳಿಯನಿಸಿಕೊಂಡ ಮುಂತಾದ ಬ್ರಾಹ್ಮಣರಿಗಿರುವ ಅತಿಮಿಲವಾದ ಭ್ರಾತೃಭಾವವೂ, ದೀರ್ಘದರ್ಶಿತ್ವವೂ, ಉದಾರಗುಣವೂ ದೇಶ ಕ್ಕೆಲ್ಲಾ ಗೊತ್ತಿರುವಂತೆ ಶೃಂಗೇರಿಯ ಬ್ರಾಹ್ಮಣ ರಿಗಿಲ್ಲವಾದುದರಿಂದ ಎಲ್ಲಾ ತಿಳಿದಿದ್ದೂ ತೀರದು. ಶೃಂ ಗೇರಿಯಲ್ಲಿ ನಡೆದ ಗದ್ದಲದ ಸಂಬಂಧವಾಗಿ ಸರ್ಕಾ ರದ ವಿಚಾರಣೆಯು ನಡೆಯುತ್ತದೆಂದು ಕೇಳುತ್ತೇವಾದುದ ರಿಂದ, ಅದರ ಫಲಿತಾಂಶವು ಗೊತ್ತಾಗುವವರೆಗೂ ಯಾವ ಗ ಪ್ರಸ್ತಾಪಿಸಬೇಕಿಲ್ಲವಾಗಿದೆ.

ಪ್ರಕೃತದಲ್ಲಿ ಲಿಂಗಾಯತರ ಮತ್ತು ಬ್ರಾಹ್ಮಣರ ಮಧ್ಯೆ ಹುಟ್ಟಿರುವ ಮತಸಂಬಂಧವಾದ ಅಡ್ಡಪಲ್ಲಕಿ, ಶಿರಸಂಗಿಯ ನ್ಯಾಯ ಮತ್ತು ನ್ಯಾಯವಿಚಾರಣೆ ಈ ಮೂರು ವಿಚಾರಗಳು ಕಾರಣವಾಗಿವೆ. ಇವುಗಳೆಲ್ಲ ಒಂದನೆಯದಾದ ಅಡ್ಡಪಲ್ಲಕಿ ಯ ವಿಷಯವು ಅಪ್ರಸ್ತುತವಾದ ಅಡ್ಡಪಲ್ಲಕಿಯ ಬಿರುದನ್ನು ಅನಾದಿಯಾಗಿ ವರ್ಷಗಳಿಂದ ನಿರಾತಂಕವಾಗಿ ಅನುಭವಿಸುತ್ತಿರುವ ಶ್ರೀ ಶೃಂಗೇರಿಸ್ವಾಮಿಗಳಿಗೂ, ಮೈಸೂರ ದ ಶ್ರೀ ಕೃಷ್ಣರಾಜಒಡೆಯರವರ ಕಾಲದಿಂದ ಈ ಬಿರುದು ತಮಗೂ ಉಂಟೆಂದು ವಾದಮಾಡುತ್ತಿರುವ ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳಿಗೂ ಸಂಬಂಧಿಸಿದುದಾಗಿದೆ. ಎರಡನೆ ಯದಾದ ಶಿರಸಂಗಿಯ ನ್ಯಾಯ ವಿಷಯವು ಸಾರ್ವಜನಿಕ ವಾಗಿರದೆ ವ್ಯಕ್ತಿಸಂಬಂಧವಾಗಿದೆ. ಮೂರನೆಯದಾದ ವ್ಯಾ ಸನ ಕೋರಿಕೆ ವಿಷಯವು ನಿಜವಾಗಿ ಬ್ರಾಹ್ಮಣರಿಗೆ ಅವ ಮಾನವಾಗುವಂತಹದು. ಎಂದು ಕರ್ನಾಟಕ ವೃತ್ತಪತ್ರಿ ಕೆಯು ಹೇಳುತ್ತಿದ್ದರೆ, ಅಡ್ಡಪಲ್ಲಕಿಯ ಬಿರುದನ್ನು ಕೊ ಡುವುದು ಅಥವಾ ಕಸಿದುಕೊಳ್ಳುವುದು ಕರ್ನಾಟಕದಲ್ಲಿ ಅನ್ಯ ಧರ್ಮರಕ್ಷಕರಾದ ಮೈಸೂರ ಸರ್ಕಾರದ ಅಧೀನವಾಗಿರು ತ್ತದೆ. ಆದುದರಿಂದ ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗ ಳು ತಾವು ಮೈಸೂರ ಸೀಮೆಯಲ್ಲಿ ಕಳೆದುಕೊಂಡಿರುವ ಬಿರು ದಿನ ಹಕ್ಕನ್ನು ಮೈಸೂರ ಸರ್ಕಾರದವರಿಂದಲೇ ಪಡೆದು ಕೊಳ್ಳುವುದು ಉಚಿತವಾಗಿರುತ್ತದೆ. ಎಂದು ಮೊದಲಾಗಿ ಹಿ ತೋಪದೇಶವನ್ನು ಮಾಡಿರುತ್ತದೆ. ಆದರೆ ಪಂಚಕಳಶವು ಳ್ಳಂಥ ಅಡ್ಡಪಲ್ಲಕಿ ಮೊದಲಾದ ಬಿರುದಾವಳಿಗಳು ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಅ ನೂಚಾನವಾಗಿ ನಡೆದುಬಂದುದಲ್ಲದೆ, ಈಚೆಗೆ ಕೈ|| ಶ್ರೀ ಮು ಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರವರ ಕಾಲ ದಲ್ಲಿ ಸಂಪಾದಿಸಲ್ಪಟ್ಟದ್ದಲ್ಲವೆಂಬುದನ್ನು ಮೈಸೂರ ಸರ್ಕಾ ರದಿಂದ ಹುಟ್ಟಿರುವ ಅನೇಕ ನಿರೂಪ, ರಹದಾರಿ ಮೊದಲಾ ದ ಕಾಗದಪತ್ರಗಳ ಆಧಾರದಿಂದ ಹಿಂದೆ ಸ್ಟಾರ್ ಪತ್ರಿಕೆ ಯಲ್ಲಿ ಪ್ರತಿಪಾದಿಸಲ್ಪಟ್ಟಿದ್ದಾಗ್ಯೂ, ಅದನ್ನು ಈ ಕರ್ನಾಟಕ ವೃತ್ತಪತ್ರಿಕೆಯು ಸ್ವೀಕರಿಸದೆ ಅಸೂಯೆಯಿಂ ದ ಮನಸೋಇಚ್ಛೆ ಪಕ್ಷಬುದ್ಧಿಗೆ ತಿರುಗಿರುವುದು ಅಲ್ಲದೆ ಸರ್ವರ ಆರೋಪಿಸುತ್ತಿರುವುದರಿಂದ, ಕೈ|| ಮುಮ್ಮಡಿ ಶ್ರೀ ಕೃಷ್ಣರಾ ಜ ಒಡೆಯರವರಿಂದ ಕೊಡಲ್ಪಟ್ಟಿರುವ ನಿರೂಪಗಳಲ್ಲೊಂದ ನ್ನು ಅದರ ಜ್ಞಾಪಕಾರ್ಥವಾಗಿ ಇಲ್ಲಿ ಕೊಟ್ಟಿರುತ್ತೇವೆ.—

ರುಜು ಕಾಯಿ ಮೊಹರಿನಲ್ಲಿ	ಶ್ರೀಚಾಮರಾಜಒಡೆಯರ ತನುಜ ಶ್ರೀಕೃಷ್ಣರಾಜಒಡೆಯರು	ಎಂದು ದೇವನಾಗರಿ ಯಲ್ಲಿದೆ

ಕೃಷ್ಣರಾಜಒಡೆಯರವರು.

ಯುವಸಂವತ್ಸರದ ಪುಷ್ಯ ಶು|| ೧೩ ಸ್ಥಿರವಾರದಲ್ಲು ಶ್ರೀಮತು ಚಿತ್ರಕಲ್ ದುರ್ಗದ ಸೀಮೆ ಗುಡಿಗಳ ಅಮಲ್ದಾರರಿಗೆ ಬರೆಸಿ ಕಳುಹಿಸಿದ ನಿರೂಪ ಅದಾಗಿ— ಚಿ ನ್ಮೂಲಾದ್ರಿ ಪ್ರಭುಲಿಂಗ ಸಿಂಹಾಸನದ ಮಠದ ಮುರಿಗಾ ರಾಜೇಂದ್ರಸ್ವಾಮಿಗಳು ತಮ್ಮ ಸಕಲ ವಿನಿಯೋಗಸಹಿತ ವಾಗಿ ಮಾಮೂಲ್ ಪ್ರಕಾರ ತಮ್ಮ ಶಿಷ್ಯರಲ್ಲಿ ಭಿಕ್ಷೆಗೆ ಹೋಗು ವಲ್ಲಿ ಬರುವಲ್ಲಿ ಶೃಂಗೇರಿ ಮಠಕ್ಕೆ ಸಲ್ಲತಕ್ಕ ಮಾಮೂಲ್ ಸಕಲ ವಿನಿಯೋಗ ಯಾವುದು ಇದೆಯೋ ಅದೇ ಪ್ರಕಾರ ಇವರಿಗೂ ನಡೆಯಲಿ. ಅದಕ್ಕೆ ಕೆಲವರು ತಂಟೆ ತಕರಾರು ಮಾಡಿದರೆ ಅಂಥವರ ಮಾತು ಕೇಳಕೊಂಡು ತಿರುಗಿಸದಿಂದ ತುಂಟಿಮಾಡದೆ ಮಾಮೂಲ್ ಮೇರೆ ಸಂ ಚಾರವನ್ನು ಮಾಡಿಸುವಲ್ಲಿ ಪರಕತ್ತು ಮಾಡದಂತೆ ರಾಜೀತಿ ಮಾ ಡುವುದು. ತಾ|| ೧೩ ನೆಯ ಮಾಘ ಬಹುಳ ಶಕೆ ೧೭೫೬ ನೇ ಇಸವಿ ಇಂದು, ಮುಡಿ ಮೈಸೂರು ಕುಮಾರ್. ಶ್ರೀಕೃಷ್ಣ ಎಂದು ಕನ್ನಡದಲ್ಲಿ ಇದೆ.

ಕರ್ನಾಟಕ ವೃತ್ತಪತ್ರಿಕೆಯು ಹೇಳುವಂತೆ ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳಿಗೆ ಶ್ರೀ ಶೃಂಗೇರಿ ಸ್ವಾಮಿಗಳಿಗಿರತಕ್ಕ ಬಿರುದುಗಳು ಕೈ|| ಕೃಷ್ಣ ರಾಜ ಒಡೆಯರವರ ಕಾಲದಲ್ಲಿ ಹೊಸದಾಗಿ ಕೊಡಲ್ಪಟ್ಟಿದ್ದಲ್ಲಿ, "ಮಾಮೂಲು" ಎಂಬ ಶಬ್ದ ವು ಆ ನಿರೂಪದಲ್ಲಿ ಉಪಯೋಗಿಸಲ್ಪಡುತ್ತಿದ್ದಿತೆ? ಮತ್ತೂ ಈ ಮಾಮೂಲು ಶಬ್ದಕ್ಕೆ ಅನೂಚಾನವಾಗಿ ನಡೆದುಬಂದ ದ್ದೆಂಬುದು ಸಕಲಕೋಶಕಾರರಿಗಾದ ಈ ವೃತ್ತಪತ್ರಿಕಾ ಕರ್ತರು ಅರ್ಥಮಾಡುತ್ತದೆ? ತಮ್ಮ ಶೃಂಗೇರಿ ಗುರು ಗಳ. ... ಮೊದಲಾಗಿ ಇದ್ದವು

ದುದೆಂದು ಹೇಳಿದೇ ಹೇಳುತ್ತಿದ್ದಲ್ಲವೆ? ಶ್ರೀ ಚಿತ್ರಕಲ್ ದುರ್ಗ ದ ಸ್ವಾಮಿಗಳಿಗೆ ಅನೂಚಾನವಾಗಿ ನಡೆದುಬಂದ ಪಂಚಕಲ ಶ ಯುಕ್ತವಾದ ಅಡ್ಡಪಲ್ಲಕಿಯ ಬಿರುದಿನ ಮರ್ಯಾದೆಯ ನ್ನು ಕೈ|| ಕೃಷ್ಣ ರಾಜಒಡೆಯರ ಕಾಲದಲ್ಲಿ ನಿರ್ದಿಷ್ಟವಾಗಿ ನಡೆಯಿಸಿಕೊಟ್ಟು ಈಚೆಗೆ ತಪ್ಪಿಸಿದುದರ ನ್ಯಾಯಾನ್ಯಾಯ ಭಾಗವನ್ನು ಕುರಿತು ಈ ಸ್ಟಾರ್ ಪತ್ರಿಕೆಯ ಹಿಂದಿನ ಸಂಚಿ ಕೆಗಳಲ್ಲಿ ಬರೆದಿದ್ದರೂ, ಪುನಃ ಪ್ರಸ್ತಾಪಿಸುವುದು ಈ ಪತ್ರಿಕಾ ವಾಚಕರ ಸ್ಮೃತಿಯಲ್ಲಿರುವುದರಿಂದ, ಪುನಃ ಪುನಃ ಪ್ರಸ್ತಾಪಿ ಸಲ್ಪಡಬೇಕಾದಾವಶ್ಯಕತೆಯು ಕಂಡುಬರಲಿಲ್ಲವು.

ಅಡ್ಡಪಲ್ಲಕಿಯ ಬಿರುದನ್ನು ಕೊಡುವುದು ಅಥವಾ ಕೆ ಡಿಸಿಕೊಳ್ಳುವುದು ಮೈಸೂರ ಸರ್ಕಾರದ ಅಧೀನವಾಗಿರುವು ದರಿಂದ ಈ ಹಕ್ಕನ್ನು ಅವರಿಂದ ಪಡೆದು ಸಕಲ ಕಡೆಗೂ ನಿ ರ್ದಿಷ್ಟವಾಗಿ ಸಂಚರಿಸಬಹುದೆಂದು ವೃತ್ತಪತ್ರಿಕೆಯು ಹೇಳು ವುದರಿಂದಲೇ, ಈ ಬಿರುದಿನ ಮರ್ಯಾದೆಯನ್ನು ಕೊಡುವ ಹಕ್ಕು ಇತರರಿಗಿಲ್ಲವೆಂದು ಹೇಳಿದಂತಾಯಿತು. ಹಾಗಿರುವ ಪಕ್ಷದಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳು ರಾಜಧಾನಿಗೆ ದಯ ಮಾಡಿಸಿದಾಗಲೂ, ಅಲ್ಲಿಂದ ಹೊರಡುವಾಗಲೂ ೨೧ ಗುಂಡು ಹಾರಿಸಲ್ಪಡುವ ರಾಜಮರ್ಯಾದೆಯನ್ನು ಮೈಸೂರ ಸರ್ಕಾರದವರಿಂದ ಪಡೆದುಕೊಂಡಿದ್ದಾಗ್ಯೂ, ಬ್ರಿಟಿಷ್ ಸರ್ಕಾ ರದವರು ಏಕೆ ನಡೆಯಿಸಿಕೊಡುವುದಿಲ್ಲವು? ಮತ್ತೂ ಮೈಸೂ ರ ಮಹಾರಾಜರವರ ಕುಲಗುರುಗಳಾದ ಶ್ರೀ ಪರಕಾಲಸ್ವಾ ಮಿಗಳಿಗೆ ಪಂಚಕಲಶಯುಕ್ತವಾದ ಪಲ್ಲಕಿ, ಶ್ವೇತಛತ್ರ ಮೊ ದಲಾದ ಸಕಲ ರಾಜ ಬಿರುದುಗಳ ಮತ್ತು ೨೧ ಗುಂಡುಗ ಳ ಮರ್ಯಾದೆಯು ಮೈಸೂರ ಸೀಮೆಯಲ್ಲಿ ನಡೆಯಿಸಲ್ಪಡು ತ್ತಿದ್ದಾಗ್ಯೂ, ಈ ಸೀಮೆಯ ಹೊರಗೆ ಏಕೆ ನಡೆಸಲ್ಪಡುವುದಿಲ್ಲ ವು? ಆದ್ದರಿಂದ ಈ ಸ್ವಾಮಿಗಳಿಗೆ ಮೈಸೂರ ಸೀಮೆಯಲ್ಲಿ ನಡೆಯುವ ಮರ್ಯಾದೆಯು ವೃತ್ತಪತ್ರಿಕೆಯು ಹೇಳುವ ಪ್ರಕಾ ರ ಬ್ರಿಟಿಷ್ ಸೀಮೆಗಳಲ್ಲೂ ನಿರಾತಂಕವಾಗಿ ನಡೆಯಿಸಲ್ಪಡು ತ್ತದೆಂಬ ಭಾಗವನ್ನು ತಿಳಿಯದೆ ಇರಬಹುದು. ಆದುದ ರಿಂದ ನಮ್ಮ ಈ ವೃತ್ತಪತ್ರಿಕಾಕರ್ತರಾದರೂ ಈ ರಹಸ್ಯ ವನ್ನು ಸ್ವಾಮಿಗಳಿಗೆ ತಿಳಿಸಿ ಕೊಟ್ಟು ಅವರುಗಳಿಗಿರುವ ಕೊರತೆಯ ಭಾಗವನ್ನು ಪರಿಹರಿಸಿಕೊಡಬಹುದಲ್ಲವೆ? ವೃ ತ್ತಪತ್ರಿಕಾಕರ್ತರು ಹಾಗೆ ಈ ಕಾರ್ಯವನ್ನು ಸಾಧಿಸಿ ಕೊ ಡುವುದಾದರೆ, ಶ್ರೀ ಚಿತ್ರಕಲ್ ದುರ್ಗದ ಸ್ವಾಮಿಗಳೂ ತಮ್ಮ ಅಡ್ಡಪಲ್ಲಕಿಯ ಬಿರುದಿನ ಹಕ್ಕನ್ನು ಮೈಸೂರ ಸರ್ಕಾರ ದವರಿಂದ ಪಡೆದುಕೊಂಡ ಮೇಲೆ ಬ್ರಿಟಿಷ್ ಸೀಮೆಯಲ್ಲೂ ಅಡ್ಡಪಲ್ಲಕಿಯಲ್ಲಿ ಕುಳಿತು ಮೆರೆಯುವ ಪ್ರಯತ್ನವನ್ನು ಮಾಡಬಾರದೆಂದು ನಾವಾದರೂ ಹೇಳಬಹುದು. ವ್ಯಾಸನ ಕೋರಿಕೆ ನ್ಯಾಯವು ಸರ್ಕಾರದಿಂದ ಕೊನೆಗಂಡಂತೆ, ಶಿ ರಸಂಗಿಯ ವ್ಯಾಜ್ಯವೂ ಹೈಕೋರ್ಟು ಅಥವಾ ಪ್ರಿವಿ ಕೌನ್ಸಿಲಿನಿಂದ ಮುಗಿಯುವುದು. ಇದೇ ಪ್ರಕಾರ ಅಡ್ಡ ಪಲ್ಲಕಿಯ ನಿರ್ಣಯವನ್ನೂ ಒಂದಾವೃತ್ತಿ ಮಾಡಿಕೊ ಳ್ಳುವುದು ಪ್ರಶಸ್ತವಾಗಿರುತ್ತದೆ. ಎಂದು ವೃತ್ತಪತ್ರಿಕೆಯು ಸೂಚಿಸಿರುತ್ತದೆ. ಆದರೆ ಮುಖ್ಯ ಸ್ಥಾಯಿಯರುವ ಮೂರು ಸ್ಥಾನ ಮಠಕ್ಕೆ ಹೊಸಬರನ್ನು ಅಧಿಕಾರಿಗಳಾಗಿ ಮಾಡ ತಕ್ಕ ಕಾಲದಲ್ಲಿ ಅವರನ್ನು ಅಡ್ಡಪಲ್ಲಕಿಯಲ್ಲಿ ಕುಳ್ಳಿರಿಸಿ ಉ ತ್ಸವಮಾಡುವ ಪದ್ಧತಿಯು ಅನೂಚಾನವಾಗಿ ನಡೆದುಕೊಂ ಡು ಬಂದಿರುವ ಪ್ರಕಾರ, ಈಗಿನ ಶ್ರೀಗಳವರ ಹಿಂದಿದ್ದವರಿ ಗೆ ಅಧಿಕಾರಪಟ್ಟವಾಗತಕ್ಕ ಕಾಲದಲ್ಲಿ ಅಡ್ಡಪಲ್ಲಕಿಯುತ್ಸವವ ನ್ನು ನಡೆಸಬಾರದುದರಿಂದಲೇ, ಶ್ರೀ ಕೂಡಲಿ ಶೃಂಗೇರಿ ಸ್ವಾ ಮಿಗಳು ತಮ್ಮ ವಿನಾ ಮತ್ತಾರಿಗೂ ಅಡ್ಡಪಲ್ಲಕಿಯಲ್ಲಿ ಕುಳಿ ತು ಮೆರೆಯುವ ಅಧಿಕಾರವಿರುವುದಿಲ್ಲವೆಂದು ಬೊಂಬಾಯಿ ಹೈಕೋರ್ಟು ಮತ್ತು ಪ್ರಿವಿ ಕೌನ್ಸಿಲ್ ಗಳ ವರೆಗೂ ವಿವಾದವನ್ನು ಹೂಡಿದರಾದರೂ ಜಯಶೀಲ ರಾಗಲಿಲ್ಲ ಮತ್ತು ಈಗಿರುವ ಶ್ರೀ ಗುರುಸಿದ್ಧಸ್ವಾಮಿಗಳಿಗೆ ಅಧಿಕಾರವಾಗತಕ್ಕ ಕಾಲದಲ್ಲಿ ಅಡ್ಡಪಲ್ಲಕಿಯ ಉತ್ಸವಕ್ಕೆ ಧಾರವಾಡದ ಕಲೆಕ್ಟರ ಅಪ್ಪಣೆಯನ್ನು ಕೇಳಿದಾಗಲೂ ಇ ದೇ ಕೂಡಲಿಯ ಸ್ವಾಮಿಗಳು ಆಕ್ಷೇಪಣೆಯನ್ನು ಕೊಡಲಾಗಿ ಅದು ಬಹು ವಿಚಾರಿಸಲ್ಪಟ್ಟು ನಿಷ್ಫಲವಾಯಿತು. ಹೀ ಗೆ ಕೋರ್ಟಿನ ಮೂಲಕ ಕಾರ್ಯಸಿದ್ಧಿಗೆ ಪ್ರಯತ್ನ ಪಟ್ಟವ ರಿಗೆ ವಿರುದ್ಧವಾಗಿ ಪರಿಣಮಿಸಿದ್ದರೂ, ಕೋರ್ಟಿನ ಸಂಬಂಧವು ಈ ವೃತ್ತಪತ್ರಿಕಾಕರ್ತರಿಗೆ ವಿದಿತವಿರುವುದಕ್ಕಾಗಿ ಆಶ್ಚರ್ಯ ಪಡಬೇಕಾಗಿದೆ.

ಬರತಕ್ಕಂಥ ಸಾರ್ವಜನಿಕ ಮಹಾಸಭಾಧ್ಯಕ್ಷತೆಯು

ಬರುವ ಡಿಸೆಂಬರ್ ತಿಂಗಳಲ್ಲಿ ಕಲಕತ್ತಾನಗರದಲ್ಲಿ ನಡೆಯುವ ಸಾರ್ವಜನಿಕ ಮಹಾಸಭೆಯ ಅಧ್ಯಕ್ಷತೆಯನ್ನು ವಹಿಸಬೇ ಕೆಂದು ಸೀಮೆಯಲ್ಲಿರುವ ಪಾರ್ಲಿಮೆಂಟ್ ಸಭಾಸದರಾ ದ ಮಿ|| ರಾಮ್ಸೇ ಮೆಕ್ ಡೊನಾಲ್ಡ್ ಯವರನ್ನು ಪ್ರಾರ್ಥಿ ಸಿರುವಲ್ಲಿ ಅವರು ಯಾವುದೋ ಅನಿವಾರ್ಯದಾದುದರಿಂದ ಬರಲಿಕ್ಕಾಗುವುದಿಲ್ಲವೆಂದು ತಿಳಿಸಿದ್ದರಿಂದ ಮತ್ತೊಬ್ಬರ ವಿಷಯ ವನ್ನು ಆಲೋಚಿಸುವ ವಿಚಾರದಲ್ಲಿ ಕಾಂಗ್ರೆ

ಗಳು ನಡೆದು ಕಡೆಗೆ ಭರತಖಂಡದ ಎಲ್ಲಾ ಕಾಂಗ್ರೆಸ್ ಕಮಿಟಿಯವರು ಕಳೆದ ತಾ॥ ೨೮ ರಲ್ಲಿ ಪ್ರಯಾಗದಲ್ಲಿ ಸಭೆ ಸೇರಿದ್ದು, ಬ್ಯಾರಿಸ್ಟರ್ ಪಂ॥ ಪಂಡಿತ ವಿಶ್ವನಾಥರಾಯರು ದಾರರವರನ್ನು ಅಧ್ಯಕ್ಷರನ್ನಾಗಾರಿಸಿದರು. ಈ ಪಂಡಿತರು ಸಂಯುಕ್ತ ಪ್ರಾಂತ್ಯಗಳಲ್ಲಿ ಸಾರ್ವಜನಿಕ ಮುಖಂಡರು ಮುಂದಾಳುಗಳಾಗಿ ಒಳ್ಳೆಯ ಲೇಖಕರೂ, ವಾಗ್ಮಿಗಳೂ, ಸಮಾಜ ಸುಧಾರಕರೂ ಎಂದು ಖ್ಯಾತಿಗೊಂಡಿರುವರು. ಇವರು ಈಗ್ಗೆ ೨ ವರ್ಷಗಳ ಕೆಳಗೆ ಕಾಶೀ ಪಟ್ಟಣದಲ್ಲಿ ಕೂಡಿದ್ದ ಪ್ರಾಂತಿಕ ಸಭೆಗೆ ಅಧ್ಯಕ್ಷಸ್ಥಾನ ವನ್ನಲಂಕರಿಸಿದ್ದು, ಬಹು ಉಪಯುಕ್ತವಾದ ಭಾಷಣವನ್ನು ಮಾಡಿದರು. ಆದರೆ ಈಚೆಗೆ ದೇಹಾಲಸ್ಯದಿಂದ ತಮ್ಮ ವಕೀಲತಸದಲ್ಲಾಗಲಿ ರಾಜಕೀಯ ವಿಚಾರದಲ್ಲಾಗಲಿ ವಿಶೇಷ ಶ್ರದ್ಧೆಯನ್ನು ವಹಿಸುತ್ತಿಲ್ಲವು. ಇವರಿಗೆ ಈಗ ೪೫ ವರ್ಷ ವಯಸ್ಸಾಗಿರಬಹುದು ಇವರು ಬಹು ಶಾಂತ ಸ್ವಭಾವದ ಪ್ರಮುಖರೆಂದು ಉತ್ತರ ಹಿಂದೂ ಸ್ಥಾನದಲ್ಲೆಲ್ಲ ಹೆಸರುಗೊಂಡಿರುವುದರಿಂದ, ಇವರನ್ನು ಅಧ್ಯಕ್ಷರನ್ನಾಗಾರಿಸಿರುವುದು ಸರ್ವ ಜನ ಸಮ್ಮತವಾಗಿರುತ್ತದೆ.

ಪ್ರಸಿದ್ಧ ಗಾಯಕಿಯಾದ ಕಾಲ್ಯದ ಗೋದಾವರಿಯ ಮರಣಶಾಸನವು.

ಮದ್ರಾಸಾಧಿಪತ್ಯದಲ್ಲಿರುವ ಗಾಯಕಿಯರಲ್ಲಿ ಧನ ಕೋಟಿ ಸಹೋದರಿಯರು, ಗೋದಾವರಿ, ತಾಯಿ, ನಾಗು, ಮೊತ್ತ್ಮ ಕೆಲವರಾಸ್ಸಿ ಯರು ವಿಶೇಷ ಪಾಂಡಿತ್ಯವನ್ನು ಸಂಪಾದಿಸಿ ಬಹು ಪ್ರಸಿದ್ಧರಾಗಿರುವರು ಇವರಲ್ಲಿ ಗೋದಾವರಿಯು ಕಳೆದ ಅಕ್ಟೋಬರ್ ತಾ॥ ೨೦ ರಲ್ಲಿ ಮದ್ರಾಸು ಜಾರ್ಜ್ ಟವನ್ನಿಗೆ ಸೇರಿದ ತಂಬುಚೆಟ್ಟಿ ಬೀದಿಯಲ್ಲಿರುವ ತನ್ನ ಸ್ವಂತ ಗೃಹದಲ್ಲಿ ಇಹಲೋಕ ವ್ಯಾಪಾರವನ್ನು ಬಿಟ್ಟು ಪರಲೋಕ ಯಾತ್ರೆಯನ್ನು ಮಾಡಿದಳು ಈಕೆಯು ತನ್ನಾಸ್ತಿಯಲ್ಲಿ ಮದ್ರಾಸಿನಲ್ಲಿರುವ ಶಿಶುರಕ್ಷಣಾಲಯಕ್ಕೆ ೫೦೦೦ ರೂ, ಪಚ್ಚೆಯಪ್ಪನವರ ಪ್ರೌಢ ವಿದ್ಯಾಲಯಕ್ಕೆ (ಕಾಲೇಜಿಗೆ) ೮೦೦೦ ರೂ, ಅನ್ನದಾನಸಮಾಜಕ್ಕೆ ೧೦೦೦ ರೂ., ಕಾಲ್ಯದಲ್ಲಿರುವ ಪ್ರೌಢ ವಿದ್ಯಾಲಯಕ್ಕೆ ೧೦೦೦ ರೂ, ಕಾಲ್ಯದಲ್ಲಿರುವ ದಿವ್ಯಜ್ಞಾನ ಸಮಾಜಕ್ಕೆ ಸೇರಿದ ವೇದಪಾಠಶಾಲೆಗೆ ೧೦೦೦ ರೂ., ಕಾಲ್ಯದಲ್ಲಿರುವ ಶಿವಾಲಯದ ರಥಕ್ಕಾಗಿ ೪೦೦೦ ರೂ, ಮತ್ತು ಆ ದೇವಾಲಯದ ಅರ್ಚಕರ ವಾಸಕ್ಕಾಗಿ ಒಂದು ದೊಡ್ಡ ಮನೆ ಮತ್ತು ೩೦೦ ರೂ, ಈ ಪ್ರಕಾರ ವಿನಿಯೋಗವಾಗತಕ್ಕದೆಂದು ಮರಣ ಶಾಸನದಲ್ಲಿ ಬರೆದಿರುವಳು. ವಾರಾಂಗನೆಯಾದ ಈಕೆಯು ತನ್ನ ಪಾಂಡಿತ್ಯದಿಂದಲೋ, ಅಥವಾ ದೇಹವಿಕ್ರಯದಿಂದಲೋ ತಾನು ಸಂಪಾದಿಸಿದ್ದ ದ್ರವ್ಯವು ಈ ರೀತಿಯಾಗಿ ಧರ್ಮಕಾರ್ಯಕ್ಕೆ ವಿನಿಯೋಗವಾಗುವಂತೆ ಮಾಡಿ ತನ್ನ ದೇಹ ಸಾರ್ಥಕ್ಯವನ್ನು ಮಾಡಿಕೊಂಡುದು ಬಹು ಪ್ರಶಂಸನೀಯವಾಗಿರುತ್ತದೆ. ಪಿತ್ರಾರ್ಜಿತ ಹಣವನ್ನು ಸದ್ವಿನಿಯೋಗ ಮಾಡದೆ ಅನ್ಯಾಯ ಹಾಳುಮಾಡಿ ಹೋಗುವಂತಹ ಸ್ವಜಾತಿಯರಿಗೂ, ಇತರರಿಗೂ ಮಾರ್ಗದರ್ಶಕವಾಗಿರುತ್ತದೆ

ಒಳದೇಶದ ವೃತ್ತಾಂತಗಳು.

ರಜಾಪರ್ನಲ್ ಸೀಮೆಗೆ ಹೋಗಿದ್ದ ಮಿ॥ ಎಚ್. ಎಚ್. ಸ್ಪ್ರಿಂಗ್ನರವರು ಪತ್ನೀ ಸಮೇತರಾಗಿ ಕಳೆದ ಬುಧವಾರ ಬೆಂಗಳೂರಿಗೆ ಬಂದರು.

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯೊಳಗೆ ಕೆಲಸ ಮಾಡಿಕೊಂಡಿರುವವರ ೧೧ ತಿಂಗಳ ಮಗುವು ಕಳೆದ ಸೋಮವಾರ ಆಡಿಕೊಂಡಿರುವಾಗ್ಗೆ ಮೇಲಿನಿಂದ ಬಿದ್ದು ಕೆಲ ಗಂಟೆಯಲ್ಲಿ ಸತ್ತು ಹೋಯಿತು.

ರಾಜಧಾನಿಯಲ್ಲಿ ಕಟ್ಟೆಯ ಮಾಸಕಿನಲ್ಲಿ ಒಬ್ಬ ಒಕ್ಕಲಿಗರ ೩೦-೩೫ ವರ್ಷ ವಯಸ್ಸಿನ ಹೆಂಗಸು ಕೆಲ ವರ್ಷಗಳಿಂದಲೂ ಹೊಟ್ಟೆಯ ಶೂಲೆಯಿಂದ ನರಳುತ್ತಿದ್ದು, ಅದನ್ನು ಸಹಿಸಲಾರದೆ ಕಳೆದ ತಾ॥ ೭ ರಲ್ಲಿ ಬಾವಿಗೆ ಬಿದ್ದು ಆತ್ಮಹತ್ಯವನ್ನು ಮಾಡಿಕೊಂಡಳು.

ಸರ್ಕಾರದವರು ಪಟ್ಟಣಗಳಲ್ಲಿರುವ ಇಲಿಗಳನ್ನು ನಿರ್ಮೂಲ ಮಾಡಬೇಕೆಂಬುದ್ದೇಶದಿಂದ ಇಲಿಗಳನ್ನು ಹಿಡಿದು ತಂದು ತೋರಿಸಿದವರಿಗೆ ದುಡ್ಡನ್ನು ಕೊಡುತ್ತಿದ್ದರು. ಈಗ ಆ ಪ್ರಯತ್ನವು ಸಾರ್ಥಕವಾಗುವಂತಿಲ್ಲವೆಂಬುದರ ಮೇಲೆ ಇಲಿಗಳನ್ನು ಕೊಂದವರಿಗೆ ದುಡ್ಡನ್ನು ಕೊಡುವ ಪದ್ಧತಿಯನ್ನು ತಪ್ಪಿಸಿಬಿಟ್ಟಿರುವುದಾಗಿ ಪ್ರಕಟಿಸಿರುತ್ತಾರೆ.

ಕಳೆದ ತಾ॥ ೨೭ ರಲ್ಲಿ ಹುಣಸೂರಿನಲ್ಲಿ ಮರಳಸ್ವಾಮಿ ಕಾಫಿಯ ಕೆಲಸಗಾರನಾದ ಮಲ್ಲಾರಿರಾಯನೆನ್ನುವ ಯಾರೋ ದುಷ್ಟರು ಕೊಂದುಹಾಕಿ ಅವನ ಹೆಂಡತಿಯ ಮೈಮೇಲಣ ಆಭರಣವನ್ನು ಅಪಹರಿಸಿಕೊಂಡು ಹೋದರಷ್ಟೆ. ಆ ಕಳ್ಳರು ಆಕೆಯ ಆಭರಣವನ್ನು ಚಿತ್ರದುರ್ಗದಲ್ಲಿ ಆಕೆಯ ಕಾಲಿಗೆ ಕಾಯಿ ಪಟ್ಟನ್ನು ಹಾಕಿ ಹಾರಗಾರನಾಯ ಬಿದ್ದಿದ್ದರ ಹೋದ ಆಕೆಯು ರಾಜ

ಬನರಲ್ ಆಸ್ಪತ್ರೆಗೆ ಸಾಗಿಸಲ್ಪಟ್ಟು ಚಿಕಿತ್ಸೆಯನ್ನು ಹೊಂದುತ್ತಿರುವಳು.

ಈಗ್ಗೆ ಕೆಲ ತಿಂಗಳುಗಳ ಹಿಂದೆ ಒಂದು ಧೂಮಕೇತು ಕಾಣಿಸಿಕೊಂಡಿದ್ದಿತಷ್ಟೆ. ಅದು ಜಿನೀವಾ ನಗರದ ವೀಕ್ಷಣಾಲಯದ ಜಾಕೋಬಿ ಎಂಬಾತನಿಂದ ಕಂಡು ಹಿಡಿಯಲ್ಪಟ್ಟಿತೆಂದು ಹೇಳುತ್ತಿದ್ದರು ಈಗ ೧೫-೨೦ ದಿವಸಗಳಿಂದಲೂ ಬೆಳಗಿನ ಝಾವದಲ್ಲಿ ೪ ಗಂಟೆಯಿಂದ ೫-೫॥ ಗಂಟೆಯ ವರೆಗೂ ಹಸ್ತ ನಕ್ಷತ್ರದ ಕೆಳಭಾಗದಲ್ಲಿ ಒಂದು ಧೂಮಕೇತು ಕಾಣಿಸಿಕೊಳ್ಳುತ್ತಿರುವುದು. ಇದು ಬ್ರೂಕ್ಸ್ ಎಂಬಾತನಿಂದ ಕಂಡು ಹಿಡಿಯಲ್ಪಟ್ಟಿತೆಂದು ಹೇಳುತ್ತಾರೆ. ಇದರ ಬಾಲವು ಹಿಂದೆ ಕಾಣಿಸಿಕೊಂಡಿದ್ದ ಹಾಲಿಯ ಧೂಮಕೇತುವಿನ ಬಾಲದಷ್ಟು ಉದ್ದವಾಗಿರದೆ, ೪-೬ ಅಡಿಯುದ್ದ ಮಾತ್ರವಿದ್ದು ನಿತ್ಯದಲ್ಲೂ ಇಳಿದು ಹೋಗುತ್ತಿರುವುದು

ಬರೆಯಲುಪಯೋಗಿಸಲ್ಪಡದಿರುವ, ಅಥವಾ ...ದು ಕೆಡಿಸಲ್ಪಟ್ಟಿರುವ ಛಾಪಾ ಕಾಗದವನ್ನು ಹಿಂದಕ್ಕೆ ತೆಗೆದುಕೊಂಡು ಅದರ ನೋಟಿಲಗನ್ನು ಕೊಡಿಸಿ ಕೊಡುವಂತೆ ಡೆಪ್ಯುಟಿ ಕಮಿಷನರುಗಳಿಗೆ ಅರ್ಜಿಯನ್ನು ಬರೆದುಕೊಳ್ಳ ಬೇಕಾಗಿರುವುದಷ್ಟೆ. ಇದಕ್ಕಾಗಿ ಬಹು ದೂರದವರೂ ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರಿಗೆ ಬರಬೇಕಾಗಿರುವುದು ತೊಂದರೆಯಾಗಿರುವುದರಿಂದ, ತಾಲ್ಲೋಕು ಅಮಲ್ದಾರರುಗಳೇ ಡೆ॥ ಕ॥ ರವರ ಹೆಸರಿಗೆ ಬರೆಯಲ್ಪಟ್ಟಿರುವ ಅರ್ಜಿಗಳನ್ನು ತೆಗೆದುಕೊಂಡು ಅವನ್ನು ಡೆ॥ ಕ॥ ರವರ ಅಪ್ಪಣೆಗಾಗಿ ಅವರಲ್ಲಿಗೆ ಕಳುಹಿ, ಅರ್ಜಿದಾರರ ಪ್ರಾರ್ಥನೆಯನ್ನು ಕೊನೆಗೆ ನೆರವೇರಿಸಲು ಯತ್ನಿಸತಕ್ಕದೆಂದು ಸರ್ಕಾರದಪ್ಪಣೆಯಾಗಿರುತ್ತದೆ.

ರಾಜಧಾನಿಯಲ್ಲಿ ದಿವಸ ನಂಬಿಯನ್ನಿಟ್ಟುಕೊಂಡಿರುವ ಕಂಟ್ರಾಕ್ಟರ ಪಂ॥ ಬಸವಯ್ಯನವರು ಪಲ್ಲಿಯ ದರ್ಬಾರಿಗೆ ಬರಲು ಶ್ರೀಮನ್ಮಹಾರಾಜರವರಿಂದ ಆಹ್ವಾನ ಪತ್ರಿಕೆಯು ಕೊಡಲ್ಪಟ್ಟಿರುವುದಾಗಿ ಕೇಳುತ್ತೇವೆ ಈ ಸೀಮೆಯಲ್ಲಿ ಧರ್ಮ ಕಾರ್ಯವನ್ನು ಮಾಡಿ ಪ್ರಸಿದ್ಧಿಯನ್ನು ಹೊಂದಿರುವವರಲ್ಲಿ ಶ್ರೀ॥ ರಾ॥ ಬ॥ ತೋಟದಪ್ಪನವರಿಗೆ ಎರಡನೆಯವರೆಂದು ಹೆಸರುಗೊಂಡು ಶ್ರೀಮನ್ಮಹಾರಾಜರವರಿಂದ ಧರ್ಮನಿರತ ಎಂಬ ಪ್ರಶಸ್ತಿಯನ್ನು ಪಡೆದು ಪ್ರಜಾನುರಾಗಿಗಳಾಗಿರುವ ಬೆಂಗಳೂರ ಪಂ॥ ದೊಡ್ಡಣ್ಣಸೆಟ್ಟರು ಡಿಲ್ಲಿಯ ದರ್ಬಾರಿಗೆ ಹೋಗಲು ನಮ್ಮ ಪ್ರಭುಗಳಿಂದ ಆಹ್ವಾನ ಪತ್ರಿಕೆಯನ್ನು ಪಡೆಯಲು ಹೆಚ್ಚು ಅರ್ಹತೆಯುಳ್ಳವರಾಗಿರುವುದರಿಂದ, ಅವರಿಗೂ ಆ ಪತ್ರಿಕೆಯು ಕೊಡಲ್ಪಟ್ಟಿರುವುದೆಂದು ನೆನಸುತ್ತೇವೆ.

ಕಲ್ಲಹಳ್ಳಿಯ ಕಾಲುವೆ ಕೆಳಗೆ ಭೂಮಿಯುಳ್ಳವರಿಗೆ ಎಕರೆ ೧ಕ್ಕೆ ೪ ಆಣೆಯಂತೆ ಕಂದಾಯವ (ಸೆಸ್ಸ) ನ್ನು ವಿಧಿಸಿ, ಮಂಡಿಪಮ್ಮತ್ತು ಕಾಲುವೆಯವರು ಪರ್ಮನಂಟು ಆ ಕಾಲುವೆಯನ್ನು ಸರಿಪಡಿಸುವ ಕಾರ್ಯವನ್ನು ತಾವೇ ಮಾಡಿಕೊಂಡು ಹೋಗತಕ್ಕದ್ದು, ಮತ್ತು ರೈತರುಗಳು ಯಾಗೂ ಎರಡನೆಯ ಕಾಲುವೆಗಳ ಕೆಳಗೆ ಭೂಮಿಯುಳ್ಳ ರೈತರು ಕಂದಾಯವನ್ನು ಕೊಡಲೊಪ್ಪಿ ಬರೆದುಕೊಟ್ಟಲ್ಲಿ, ಆ ಕಾಲುವೆಗಳ ಕೆಲಸವನ್ನೂ ಮಂಡಿಪಮ್ಮತ್ತು ಕಾಲುವೆಯವರೇ ಮಾಡುವಂತೆ ಏರ್ಪಡಿಸಲಾಗುವುದು ಎಂದು ಸರ್ಕಾರದಪ್ಪಣೆಯಾಗಿರುತ್ತದಲ್ಲದೆ, ಇತರ ಕಾಲುವೆಯ ಕೆಳಗಣ ಭೂಮಿಯುಳ್ಳ ರೈತರೆಲ್ಲರೂ ನಿಬಂಧನೆಗಳಂತೆ ನಡೆದುಕೊಳ್ಳಲು ಏಕವಾಕ್ಯತೆಯಿಂದೊಪ್ಪಿಕೊಳ್ಳುವಾಗ್ಗೆ, ಡೆ॥ ಕಮಿಷನರು ಆವಶ್ಯಕವಾದ ಸೂಚನೆಗಳನ್ನು ಚೀ॥ ಇಂಜನಿಯರ ಮೂಲಕ ಸರ್ಕಾರದ ಪರ್ಯಾಲೋಚನೆಗಾಗಿ ಕಳುಹತಕ್ಕದೆಂದು ಬರೆಯಲ್ಪಟ್ಟಿರುತ್ತದೆ

ರಾಜಧಾನಿಯಲ್ಲಿರುವ ಪ್ರಾಣಿಪ್ರದರ್ಶನಾಲಯದಲ್ಲಿ ಪ್ರತಿ ಬುಧವಾರ ಸಾಯಂಕಾಲದಲ್ಲಿ ಪ್ರೇಕ್ಷಕರ ವಿನೋದಾರ್ಥವಾಗಿ ಅರಮನೆಯ ಕನ್ನಡ ಬ್ಯಾಂಡು ವಾದ್ಯವಾಗುವಂತೆ ಈಚೆಗೆ ಕೆಲ ಕಾಲದಿಂದ ಏರ್ಪಡಿಸಲ್ಪಟ್ಟಿರುವುದರಿಂದ, ಪ್ರತಿ ಬುಧವಾರ ಸಾಯಂಕಾಲ ಅನೇಕ ಜನ ಗಂಡಸರೂ, ಹೆಂಗಸರೂ, ಮಕ್ಕಳೂ ಒಳ್ಳೆಯ ವಸ್ತ್ರಾಭರಣಗಳನ್ನು ಧರಿಸಿಕೊಂಡು ಬಂದು ೧ ಆಣೆಯನ್ನು ಕೊಟ್ಟು ಒಳಗೆ ಪ್ರವೇಶಿಸಿ ಪಕ್ಷಿ ಮೃಗಾದಿಗಳನ್ನು ನೋಡುತ್ತ ಇಂಪಾದ ಗಾನವನ್ನು ಕೇಳಿ ಆನಂದದಿಂದ ಸಾಯಂಕಾಲದ ವರೆಗೂ ವಿಹರಿಸಿಕೊಂಡಿದ್ದು ಬರುತ್ತಿರುವರು. ಕಳೆದ ತಾ॥ ೧ನೆಯ ಬುಧವಾರ ಸಾಯಂಕಾಲ ಪ್ರೇಕ್ಷಕರ ವಿನೋದಾರ್ಥವಾಗಿ ಇಂಗ್ಲೀಷು ಬ್ಯಾಂಡಿನ ವಾದ್ಯವು, ಮತ್ತೂ ಸೈಕಲಿನ ಸವಾರಿಯಿಂದ ಬಂದಿರುವ ಪಂ॥ ಸ್ವಾಮಿಯ ಸಂಗೀತಾ...ರನ ಚಾತುರ್ಯಗಳಿಕೆಯೂ, ಅನೇಕ ಮತ್ತೂ ಕಂಬಿಗಳ ಮೇಲೆ ಇಷ್ಟಪಟ್ಟವರು ಕುಳಿತು ಸಂಚರಿಸುವಂತೆಯೂ ಏರ್ಪಡಿಸಲ್ಪಟ್ಟಿದ್ದುದರಿಂದ, ಪ್ರೇಕ್ಷಕರ ಸಂಖ್ಯೆಯು ಎಂದಿಗಿಂತಲೂ ವಿಶೇಷವಾಗಿದ್ದು ಪಾಶ್ಚಾತ್ಯ ಸಂಗೀತಪ್ರಿಯರಾದ ಅನೇಕರು ಆನಂದರಟ್ಟು ಬಂದಿದ್ದರು ಶ್ರೀಮನ್ ಮಹಾರಾಜ ಬ್ಯಾಂಡಿಯೂ ದಯವಾಗಿಸಿ ಅರ್ಧ ಗಂಟೆಯ ಕಾಲ ...

ಕಳೆದ ತಾ॥ ೨೯ ರಲ್ಲಿ ಚನ್ನಪಟ್ಟಣದ ಬಳಿ ಹೊಸಗೆರೆ ಬಂಡಿಯು ಚಕ್ರಕ್ಕೆ ಒಬ್ಬ ಒಕ್ಕಲಿಗನು ಸಿಕ್ಕಿ ಸತ್ತು ಹೋದನೆಂದೂ, ಅವನ ಶರೀರವು ಬಹು ಪ್ರಯಾಸದಿಂದ ಹೊರಕ್ಕೆ ತೆಗೆಯಲ್ಪಟ್ಟ ಮೇಲೆ ಬಂಡಿಯು ಮುಂದಕ್ಕೆ ಹೊರಟಿತೆಂದೂ ಮೊದಲು ಪ್ರಕಟವಾಗಿತ್ತಷ್ಟೆ ಆದರೆ ಕಳೆದ ತಾ॥ ೨೯ ರಲ್ಲಿ ಬಂಡಿಯು ಚೆನ್ನಪಟ್ಟಣದ ಸ್ಟೇಷನ್ನಿಗೆ ಬರುತ್ತಿರುವಾಗ್ಗೆ ಮೈಸೂರು ರಸ್ತೆಯ ಕಂಬಿಗಳ ಮಧ್ಯೆ ಒಬ್ಬ ಹೆಂಗಸು ಮಲಗಿರುವುದನ್ನು ಕಂಡು ಬಂಡಿಯನ್ನು ನಡೆಸುವವನು ಬಂಡಿಯನ್ನು ಎಷ್ಟು ನಿಲ್ಲಿಸಿದಾಗ್ಯೂ ಆ ಹೆಂಗಸು ಕದಲಲಿಲ್ಲವಾಗಿ, ಕೂಡಲೆ ಬಂಡಿಯನ್ನು ನಿಲ್ಲಿಸಿ ತಾನು ಕೆಳಗಿಳಿದು ಬಂದು ಆಕೆಯ ರಟ್ಟೆಯನ್ನು ಹಿಡಿದು ಮೇಲಕ್ಕೆತ್ತಿ ಕರೆದುಕೊಂಡು ಬಂದು ಪೊಲೀಸಿನವರ ವಶಕ್ಕೆ ಒಪ್ಪಿಸಿ ಮುಂದಕ್ಕೆ ಬಂಡಿಯನ್ನು ನಡೆಸಿಕೊಂಡು ಬಂದನು. ಆಕೆಯು ಹುಚ್ಚಿಯಾಗಿರುವುದರಿಂದ, ಪೊಲೀಸಿನವರು ಆಕೆಯನ್ನು ವಿಚಾರಣೆಗೆ ಗುರಿ ಮಾಡಲು ಅನುಮಾನಿಸುತ್ತಿರುವುದಾಗಿ ಮದ್ರಾಸು ಮೇಲ್ ಪತ್ರಿಕೆಗೆ ಒಬ್ಬರು ತಂತಿಯಿಂದ ತಿಳಿಸಿರುತ್ತಾರೆ ಇವರು ಹೆಂಗಸನ್ನು ಕಷ್ಟಕ್ಕೆ ಗುರಿಮಾಡದ ಪ್ರಾಣ ರಕ್ಷಿಸಿದ ಬಂಡಿಯು ಬರುವ ಸಮಯದಲ್ಲಿ ಆಕೆಯು ಮಾರ್ಗದಲ್ಲಿದ್ದುದನ್ನು ಕಾಣದೆ ಹೋದ ಫೈರ್‌ಮನ್‌ನನ್ನು ಮತ್ತು ಸ್ಟೇಷನ್ ಅಧಿಕಾರಿಗಳನ್ನು ಅವರ ಅಜಾಗರೂಕತೆಗಾಗಿ ದಂಡಿಸಲಾಗುವುದು ಎನ್ನುವರು.

ವರ್ತಮಾನ ಸಂಗ್ರಹವು.

ವರುದುಗಿ ... ದೇಶೀಯವಾದ ಪತ್ರಿಕೆಗಳು ತನ್ನನ್ನು ... ಹೆಚ್ಚು ... ಗಳ ... ದ್ರವ್ಯವನ್ನು ಕೊಡಬೇಕೆಂದು ... ಪಾರ್ಲಿಮೆಂಟಿನ ಬದ್ಧರು ಗಳೊಬ್ಬರು ... ಮಾಡ ... ಪರಿಗಣಿಸಿದರು.

ಚಕ್ರವರ್ತಿಗಳ ... ಭರತ ... ಜನರು ... ದಿನಗಳಲ್ಲಿ ... ಕಂಬಳಿ ... ಗಳನ್ನು ... ದಿರುವುದಕ್ಕಾಗಿ ... ಲಕ್ಷ ರೂ ಗಳ ಗುತ್ತಿಗೆ ಕೊಡಲ್ಪಟ್ಟಿದೆ

ವಿಜಾಪುರದಲ್ಲಿ ಕಳೆದ ತಾ॥ ೨೮ ರಲ್ಲಿ ನಡೆದ ಕುದುರೆಗಳ ಪಂದ್ಯದಲ್ಲಿ ಒಬ್ಬ ಯೂರೋಪಿಯನ್ನನಾದ ಸವಾರನು ಕುದುರೆಯ ಮೇಲೆ ಕುಳಿತು ಒಂದು ರೇಸ್ ಮಾಡಿಕೊಂಡು ಕುದುರೆಯನ್ನು ಓಡಿಸುತ್ತಿರುವ ಕಾಲದಲ್ಲಿ ಒಂದು ಕಂಬಕ್ಕೆ ತಾಕಿ ಬಿದ್ದು ಕುದುರೆ ಯ ಕೆಳಗೆ ಬಿದ್ದು ಸತ್ತು ಹೋದನು

ಗುಜರಾತಿನಲ್ಲಿ ... ವು ... ಬಹು ಕಷ್ಟವಾಗುತ್ತಿರುವುದರಿಂದ ... ಕ್ಷಾಮನಿವಾರಣ ... ಅಲ್ಲದೆ, ... ದಾನಿಗಳು ... ಅಲ್ಲದೆ ... ಕೆಲ ... ಮತ್ತು ಕೆಲ ... ಪ್ರಜಾ ... ಭಯವು ಹುಟ್ಟಿದೆ.

ಕಳೆದ ತಾ॥ ೨೮ ರಲ್ಲಿ ... ಕುದುರೆ ... ಬೊಂಬಾಯಿಗೆ ... ಬಂದು ... ಆದರೆ ... ಬೆಳಗ್ಗೆ ಒಬ್ಬರು ... ತಾ॥ ೧ರಲ್ಲಿ ಒಂದು ... ಹೊತ್ತಿಕೊಂಡು ... ಅಲ್ಲಿ ... ತಾ॥ ೨ರ ಬೆಳಗ್ಗೆ ಒಂದು ... ಒಬ್ಬರು ... ಕೆಳಗೆ ಸಿಕ್ಕಿ ... ಈಗ ... ಅವರೆಲ್ಲರ ... ಕೊಂಡು ... ಬಹು ... ಇದರಿಂದ ಕೊತ್ತಿಯನ್ನು ... ಬಿಡುವುದಿಲ್ಲವೆಂಬ ಗಾದೆಯು ನಿಜವಾಯಿತಲ್ಲವೆ!

ಆಗಸ್ಟ್ ದ.. ಶ್ರೀಕೃಷ್ಣ ... ಶೃಂಗಾರದಾ ... ಹೋಗುವುದಕ್ಕಾಗಿ ... ಒಂದನೆಯ ತರಗತಿಯಲ್ಲಿ ಒಂದು ... ದನ್ನು ... ಮಾಡಿದ್ದು ... ಒಬ್ಬ ... ಅವನನ್ನು ಒಳಗೆ ಬರಗೊಡದೆ ತಡೆದು ನಿಲ್ಲಿಸಿ, ... ಬಂದು ಎಷ್ಟು ... ದಂಡ ... ಅಗಲ ... ಲೆಜಿಸ್ಲೇಟಿವ್ ಕೌನ್ಸಿಲ್ ... ಅಲ್ಲದೆ ... ಆ ... ...

[ಪತ್ರವ್ಯವಹಾರಕರ ಅಭಿಪ್ರಾಯಗಳಿಗೆ ಪತ್ರಿಕಾಪ್ರಕಾಶಕರು ಬಾಧ್ಯಸ್ಥರಾಗಿರುವುದಿಲ್ಲವೆಂಬುದನ್ನು ಸರ್ವರೂ ಗಮನಿಸತಕ್ಕದು.— ಮೈ ಪ್ರ]

ಪತ್ರವ್ಯವಹಾರ.

ಕೊಳಗಲ್ಲಿನವರು ತಾ॥ ದೊಡ್ಡಗೊಂಡನ ಕೆರೆ.

ಇದೇ ಊರಲ್ಲಿ ಆಗೋಸ್ಟ್ ೧ ನೇ ತಾರೀಖಿನಿಂದ ಈ ಗ್ರಾಮದ ಶ್ರೀ ಬಸವೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಶ್ರೀ ನ್ಯಾಯಾಧ್ಯಕ್ಷ ಚಾವಳ್ಳಿಯ ಪ್ರತಿ ದಿನ ಸಾಯಂಕಾಲದಲ್ಲಿ ಹಿರೇಮಠದ ಮಠದ ಶ್ರೀ ವೀರಪ್ಪಯ್ಯನವರಿಂದ ಪುರಾಣವು ನಡಸಲ್ಪಟ್ಟು ಇಲ್ಲಿನ ವೀರಶೈವ ಪ್ರಮುಖರಿಂದ ಪ್ರತಿನಿತ್ಯ ಕಲ್ಯಾಣ ಮಂಗಳವು ನಡೆದು ನಾನಾ ಫಲತಾಂಬೂಲಗಳಿಂದಲೂ, ದಕ್ಷಿಣ ತಾಂಬೂಲಾದಿಗಳಿಂದಲೂ ಸೇರಿದ ಜನಸಮೂಹವನ್ನು ಸತ್ಕರಿಸುತ್ತಾ ಇದೇ ತಾ॥ ೧೮ ದಿವಸವಾದ ಸೋಮವಾರ ಮಧ್ಯಾಹ್ನ ೧೨ ಘಂಟೆಗೆ ಶ್ರೀ ಪುರಾಣವು ಮುಗಿಸಲ್ಪಟ್ಟು, ಸಿಂಗರಿಸಲ್ಪಟ್ಟ ಅಂದೋಳಿಕದಲ್ಲಿ ಗುರುಗಳಿಗೆ ಉತ್ಸವವು ಹೊರಡುವ ಕಾಲಕ್ಕೆ ಸರಿಯಾಗಿ ಹಿಂದಿನ ಯುಗಾಂತರಗಳಲ್ಲಿ ಪುಷ್ಪವೃಷ್ಟಿಯು, ಸುರಿಯುತ್ತಿದ್ದಂತೆ ಅತಿ ಮನೋಹರವಾಗಿ ವೃಷ್ಟಿಯಾದ್ದನ್ನು ನೋಡಿ ನೆರೆದಿದ್ದ ಜನಸಮೂಹವೆಲ್ಲಾ, ಆಶ್ಚರ್ಯವೂ, ಆನಂದವೂ ಉಳ್ಳವರಾಗಿ ಅದುವರೆಗೆ ಒಂದು ತಿಂಗಳ ಪರ್ಯಂತವೂ ಮಾಡುತ್ತಿದ್ದ ಶಿವಪೂಜೆಯನ್ನು ಪೂರೈಸಿ ಮೇಲೆ ಸಂಗಮೇಶನ ಭಜನೆಯಿಂದಲೂ ಎರಡು ಸಂದಿಗಳಲ್ಲಿ ದಂಡೆಗಳಿಂದಲೂ, ಪುಂಡುಂಬವಾಲೆಗಳಿಂದಲೂ ಪೂರೈಸಲ್ಪಟ್ಟು ಆ ಕಾಲಕ್ಕೆ ಸರಿಯಾಗಿ ಮಹಾ ಗಣ ಸಂತರ್ಪಣೆಯೂ ನಡೆಸಲ್ಪಟ್ಟು ಅದೇ ಸಾಯಂಕಾಲಕ್ಕೆ ಶಿವಾ ಪ್ರಾಣಿಗಳ ಸಹ ಬಹು ವಿಜೃಂಭಣೆಯಿಂದ ನಡೆಯಿತು. ಈ ರೀತಿ ಈ ದೇವತಾ ಕಾರ್ಯವನ್ನು ಏಕಚಿತ್ತದಿಂದ ಪೂರೈಸಿದ ವೀರಶೈವ ಮುಖಂಡರಿಗೆಲ್ಲಾ ಶ್ರೀ ಬಸವೇಶ್ವರನು ಉತ್ತರೋತ್ತರ ದೈವಭಕ್ತಿಯನ್ನೂ, ಆಯುರಾರೋಗ್ಯೈಶ್ವರ್ಯವನ್ನೂ ಕೊಡಲೆಂದು ಸದಾ ಪ್ರಾರ್ಥಿಸುತ್ತೇನೆ.

ಜಿ. ಶಿವ್ವೇರುದ್ರಪ್ಪ
ಸ್ಕೂಲ್ ಮಾಸ್ಟರ್, ದೊಡ್ಡಗೊಂಡನ ಕೆರೆ,

ಸಂತೆಬೆನ್ನೂರು ನಿವಾಸಿಗಳಾದ ವೀರಶೈವರಾದಿಯಾಗಿ ಸರ್ವ ಜನರು ಕಳೆದ ಭಾದ್ರಪದ ಮಾಸದ ಕಡೆಯವರೆಗೂ ಮಳೆಯು ಬಾರದೆ, ಬಿಸಿಲಿನ ಝಳದಿಂದ ಸಿಂಕಿದ್ದ ಪೈರುಗಳೊಣಗುತ್ತ ಬಿಸಿಯು ಭಾರಿಯೂ ಹೆಚ್ಚುತ್ತಿದ್ದುದರಿಂದ ಅಶ್ವಯುಜ ಶು ೩ ಭಾನುವಾರದ ದಿವಸ ವಾನೋಹರ ವಾಗಿ ಅಲಂಕರಿಸಲ್ಪಟ್ಟ ಶ್ರೀ ವೃಷಭೇಶ್ವರ ದೇವಸ್ಥಾನದಲ್ಲಿ ಶ್ರೀ ಹಿರಿಯದ ಮಠದ ಪಟ್ಟಾಧ್ಯಕ್ಷರಿಂದ ದೀಪದ ಕಲಯ ಕಾರ್ಯದಲ್ಲಿ ಪುರಾತನ ಚರಿತ್ರ ಓದಿಸಲ್ಪಟ್ಟಿತು. ಮಾರನೇ ದಿವಸ ಬೆಳಗ್ಗೆ ಶ್ರೀ ನಂದೀಶ್ವರನಿಗೆ ವಿಧ್ಯುಕ್ತವಾಗಿ ವಿಶೇಷ ರುದ್ರಾಭಿಷೇಕವು ನಡೆದು ಭಕ್ತ ಮಾಹೇಶ್ವರರಿಗೆ ಸಂತರ್ಪಣೆಯೂ ನಡಸಲ್ಪಟ್ಟಿತು. ಆ ನಂತರ ಶ್ರೀ ಗಳವರ ಅಧ್ಯಕ್ಷತೆಯಲ್ಲಿ ಮಹಾ ಸಭೆಯು ಸೇರಿದ್ದು ಸ್ಕೂಲ್ ಮಾಸ್ಟರ್ ಎಂ. ಶಿವಲಿಂಗಯ್ಯನವರು ಈ ದಿವಸ ಈ ಸ್ಥಳೀಯರು ಭಕ್ತಿಯಿಂದ ಪುರಾಣ ಶ್ರವಣ ಮಾಡಿ ಈಶ್ವರ ಸೇವೆಯನ್ನು ಮಾಡಿದುದಕ್ಕೆ ತಕ್ಕ ಫಲವು ಶೀಘ್ರದಲ್ಲೇ ಲಭಿಸುವುದೆಂಬುದಕ್ಕೆ ಕೆಲ ದೃಷ್ಟಾಂತಗಳನ್ನು ಕೊಟ್ಟು ಏಕಮತ್ಯ, ವಿದ್ಯೆ ಮತ್ತು ಧರ್ಮಗಳೆಂಬ ವಿಷಯತ್ರಯಗಳ ಆವಶ್ಯಕತೆ, ಅವಲಂಬನ, ಪ್ರಯೋಜನಾದಿಗಳನ್ನು ಕುರಿತು ಉಪನ್ಯಾಸ ಮಾಡಿದರು. ಇದೇ ವಿಷಯಗಳನ್ನು ಅಧ್ಯಕ್ಷರು ಪುಷ್ಟೀಕರಿಸಿ ಹೇಳಿದರು. ಮಾ॥ ರಾ॥ ಗಳಾದ ಸೋಗಿನ ಗುರುಬಸಪ್ಪನವರು, ಬರದೇಶಪ್ಪನವರ ಮಹಾದೇವಪ್ಪನವರು, ಸಜ್ಜನರ ಬಸವಲಿಂಗಪ್ಪನವರು ಮೊದಲಾದ ಪುರಪ್ರಮುಖರು ಶ್ರದ್ಧೆಯನ್ನು ವಹಿಸಿ ಈ ಕಾರ್ಯಗಳನ್ನು ನಿರ್ವಿಘ್ನವಾಗಿ ನಡೆಯುವಂತೆ ಏರ್ಪಡಿಸಿ ಶ್ಲಾಘನೀಯರಾದರು. ಆದಾಗ್ಯೂ ನೀಲಿ ಸಜ್ಜನರ ಮಹಾದೇವಪ್ಪನವರು ಹಾಗೂ ಸಿದ್ಧಲಿಂಗಪ್ಪನವರು ಮೊದಲಾದವರಿಂದ ಸಭಿಕರಿಗೆ ಗಂಧ ಪುಷ್ಪ ತಾಂಬೂಲಾದಿಗಳು ಕೊಡಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ಪುರಾಣವು ನಡೆದ ೩ ನೆಯ ದಿನ ಆಕಾಶದಲ್ಲಿ ಮೋಡವು ಕಟ್ಟಿ ಗುಡುಗು ಮಿಂಚು ಆರ್ಭಟಿಸಿ ಕೊಂಡು ಬಂದು ಮಳೆಯು ಹದಗತವಾಗಿ ಸುರಿದು ಕೆರೆ ಕಟ್ಟೆಗಳೆಲ್ಲ ತುಂಬಿ ತುಳುಕಾಡುತ್ತಿರುವುದನ್ನು ಜನರು ನೋಡಿ ಈಶ್ವರನು ತಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ದೊರೆತನಕ್ಕಾಗಿ ಅವನ ಮಹಿಮೆಯನ್ನು ಕೊಂಡಾಡಿದರು. ಬೆಳೆಯು ಚೆನ್ನಾಗಿದೆ, ದಿನಸಿಧಾರಣೆಯು ಇಳಿದಿದೆ

ವೃತ್ತಾಂತದಾತ.

ಜ್ಞಾನ ವರ್ಧಕ.

ಈಗ್ಗೆ ೧೨ ವರ್ಷಗಳ ಹಿಂದೆ ಸೋಲಾಪುರದಲ್ಲಿ ಸಿದ್ಧ ಸ್ಥಾಪಿಸಲ್ಪಟ್ಟ [illegible] ಸ್ತ್ರೀ ಸಮಾಜದ ಬಾಲಿಕೆಯರಿಗೆ ಸ್ಥಾಪಿತವಾಗಿ ಒಳ್ಳೇ ಉತ್ಸಾಹದಿಂದ ನಡೆಯುತ್ತಿತ್ತು. ಈ ಸಂಸ್ಥೆಯಲ್ಲಿ ನಮ್ಮ ವೀರಶೈವ ಸ್ತ್ರೀ ಸಮಾಜವು ಹೋಗಿ ಏನಾದರೂ ಜ್ಞಾನವನ್ನು ಸಂಪಾದಿಸಬೇಕೆಂಬುದ್ದೇಶದಿಂದ ಶ್ರೀ ರಾವ್ ಬಹಾದ್ದೂರ ವಾರದ ಅವರ ಪತ್ನಿಯಾದ ಬಸವ್ವಬಾಯಿಯವರು ಒಳ್ಳೇ ಪ್ರಯತ್ನ ಮಾಡುತ್ತಿದ್ದರು. ಆದರೆ ನಮ್ಮ ಸ್ತ್ರೀ ಸಮಾಜದ ಅಜ್ಞಾನ ಕಳೆದಿಂದ ಆ ಮಂದಿರಕ್ಕೆ ಹೋಗುವದಕ್ಕೆ ಹಿಂದು ಮುಂದು ನೋಡುತ್ತಿದ್ದರು. ಈ ಸಂಗತಿಯನ್ನು ಶ್ರೀ ರಾವಬಹಾದ್ದೂರ ಇವರು ತಿಳಿದು ಸ್ವತಃ ಒಂದು ಶಾಲೆಯನ್ನು ಮಾಡಿ ತಮ್ಮ ಮನೆಯಲ್ಲೇ ತಮ್ಮ ಸ್ವಂತ ವೆಚ್ಚದಿಂದ ಜ್ಞಾನವೊಂದಿರವೆಂಬ ಸಂಸ್ಥೆಯನ್ನು ತೆರೆದರು. ಆದರೆ ಈ ಸಂಸ್ಥೆಯು ಅವರು ಇರುವ ಪರಿಯಂತರ ಒಳ್ಳೇ ಸಂಭ್ರಮದಿಂದ ನಡೆದು, ನಮ್ಮ ದುರ್ದೈವ ಸಂಯೋಗದಿಂದ ಅವರು ನಮ್ಮನ್ನು ಮಧ್ಯದಲ್ಲಿಯೇ ಬಿಟ್ಟು ಹೋದ ಮೇಲೆ ಅದು ಸ್ವಲ್ಪ ತೊಂದರೆಗೆ ಸಿಕ್ಕಹೋಗಿತ್ತು. ಆದರೆ ರಾವಬಹಾದ್ದೂರ ಇವರ ಎರಡನೇ ಪತ್ನಿಯಾದ ಗೌರವ್ವಾಬಾಯಿಯವರು ಸ್ತ್ರೀಸಮಾಜಕ್ಕೆ ಒಳ್ಳೇ ಸಹಾಯವನ್ನು ಮಾಡಬೇಕೆಂಬ ಸಂಕಲ್ಪದಿಂದ ಈ ಸಂಸ್ಥೆಗೆ ಏನಾದರೂ ತೊಂದರೆ ಬಾರದ ಹಾಗೆ ಮೊದಲಿನ ವಿವಸ್ಥೆಯ ಪ್ರಕಾರ ನಡೆಸಿರುತ್ತಾರೆ. ಎಷ್ಟೋ ಸ್ತ್ರೀ ಸಮಾಜವು ಸಂಸ್ಥೆಗೆ ಹೋಗಿ ಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳುತ್ತಿದೆ. ಅದೇ ಪ್ರಕಾರ ಎಲ್ಲಾ ಕಡೆಯಲ್ಲಿಯೂ ಪ್ರಿಯ ಭಗಿನಿಯರು ಯಾವದಾದರೊಂದು ಜ್ಞಾನೋಪಯೋಗವಾಡಿಕೊಳ್ಳಬೇಕೆಂದು ಇಚ್ಛಿಸುತ್ತೇನೆ. ಮತ್ತೊಂದು ಪ್ರಶ್ನೆ ಹೇಳುವದೇನಂದರೆ ತಮ್ಮ ಸ್ಥಾನದಲ್ಲಿ ಬೆಳಗಾವಿ ಮಹಾ ಸಭೆಯು ಜಾಗೃತವಾದಾಗ ಸ್ತ್ರೀ ಸಭೆಯನ್ನು ಕೂಡಿಸಬೇಕೆಂಬ ಅಭಿಪ್ರಾಯವು ಕಂಡುಬರಲಿಲ್ಲ. ಪೂರ್ವದಲ್ಲಿ ಸೊಲ್ಲಾಪುರದ ಬಳ್ಳಾರಿಯಲ್ಲಿ ಸ್ತ್ರೀ ಸಭೆಯನ್ನು ಕೂಡಿಸಿದ್ದರು. ಅದೇ ಪ್ರಕಾರವಾಗಿ ಬೆಳಗಾವಿಯಲ್ಲಿಯೂ ಸ್ತ್ರೀ ಸಭೆಯನ್ನು ಕೂಡಿಸಬೇಕೆಂದು ನನ್ನ ಪ್ರಾರ್ಥನಾ ಇರುತ್ತದೆ. ಇದರಿಂದ ನಮ್ಮ ಸ್ತ್ರೀ ಸಮಾಜವು ಸುಧಾರಿಸುತ್ತಾದು ದರಿಂದ ಮಹಾ ಸಭೆಯ ಪ್ರಮುಖರು ಈ ಸ್ತ್ರೀ ಸಭೆಯನ್ನು ಕೂಡಿಸಬೇಕೆಂದು ನನ್ನ ವಿನಂತಿ ಇರುತ್ತದೆ.

ಸೌ॥ ಭಾಗೀರಥಿಬಾಯಿ ಪಾಟೀಲ
ಸೊಲ್ಲಾಪುರ,

ಸಿಂಧೀಕೆರೆಬಿಟ್ಟ.

ಗೋಕಾಕ ತಾ॥ ವೈಕಿ ಸಿಂದಿಕೆರೆಬಿಟ್ಟದಲ್ಲಿ ಶಿವಾಚಾರ ಶ್ರೀಶೈಲಪ್ಪಗೌಡ ಬಡವಾಳಿ ಇವರು ಪದ್ಧತಿಯಮೇರೆಗೆ ಶ್ರೀ ಮಹಾಲಕ್ಷ್ಮಿ ಮತ್ತೂ ಶ್ರೀ ಸರಸ್ವತಿ ಪೂಜೆಯನ್ನು ದೊಡ್ಡ ಸಮಾರಂಭದಿಂದಲೂ, ಬಹು ವಿಜೃಂಭಣೆಯಿಂದಲೂ ತಮ್ಮ ಅಂಗಡಿಯಲ್ಲಿ ಆಶ್ವೀಜ ಶು॥ ೫ ದಿವಸ ನೆರವೇರಿಸಿದರು. ಮಾ॥ರಾ॥ ಚನ್ನಮಲ್ಲಪ್ಪ ಲಗಾಡೆ ಆಸಂಗಿ, ಮಾ॥ರಾ॥ ಗುರುಶಾಂತಪ್ಪ ಅಣ್ಣಾ ದಂಡಗಿ ಈ ಉಭಯತರು ಶಾಕೇ ಕ್ರಿ ೫ ದಿವಸ ರಸಿಯನ್ನು ಸೇರಿಸಬೇಕೆಂದು ಕೂಡಿಸಿದ ಪ್ರಕಾರ ಮಾ॥ ಬಸವನಪ್ಪ ಅಣ್ಣಾ ದಂಡಗಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತ್ತು. ಈ ಸಭೆಗೆ ಗುರುಸಿದ್ಧ ಮಠಪತಿ ಸೆಟ್ಟಿ ಸಾಹುಕಾರ ಸಮಸ್ತ ವೈಶ್ಯರು, ಇತರ ಉಪಪತಿಗಳೂ ಬಂದಿದ್ದರು. ಅಲ್ಲಿ ಶಿವಯೋಗಿ ಗುರುಸಿದ್ಧಯ್ಯ ಚರವಯ್ಯ ಸ್ವಾಮಿ ಹಿರೇಮಠ ಇವರು ಧರ್ಮ ವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಒಂದು ತಾಸ ಸರಿಗೆ ಉಪನ್ಯಾಸಮಾಡಿದಮೇಲೆ ಸಭೆಯು ವಿಸರ್ಜನವಾಯಿತು. ಆಸ್ವಿನ ಶು॥ ೫ ಶಂಕರಲಿಂಗ ಸ್ವಾಮಿ ಪುಸ್ತಕ ಮಹಾಲಕ್ಷ್ಮಿ ಮರೆಗಂಡಿ ಇವರು ಅನಾಯಾಸವಾಗಿ ಬಂದು ಕಾರ್ತೀಕ ಶು॥ ೫ ದಿವಸ ಗುರುಸ್ಥಳ ಚರಮೂರ್ತಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿಸಿದ್ದರು. ಸಭೆಗೆ ವೀರಮಾಹೇಶ್ವರರೂ, ಗೌಡ ಪಾಟೀಲರೂ ಮತ್ತು ಸಿದ್ರಾಮಪ್ಪ ಅಣ್ಣಾ ಗಾಡ್ಗಿ, ಬಸಪ್ಪ ಅಣ್ಣಾ ಸೆಟ್ಟಿ, ಬಾಬಣ್ಣಾ ಯೊಸೆಟ್ಟಿ, ದಾಸಪ್ಪ ಅಣ್ಣಾ ಬಾಲಧಾಳಿ, ವೀರಭದ್ರಪ್ಪ ಅಣ್ಣಾ ಬೆಳಗಲಿ, ಬಸಲಿಂಗಪ್ಪ ಅಣ್ಣಾ ಆಸಂಗಿ, ಮಹಾರುದ್ರಪ್ಪ ಅಣ್ಣಾ ಕೋರಿ, ಸಿದ್ರಾಮಪ್ಪ ಅಣ್ಣಾ ಕೋರಿ ಈ ಮೊದಲಾದ ಪಂಚಾಯತರು ಕೂಡಿ ೨೦೦–೩೦೦ ಗಳವರೆಗೆ ಜನರು ಸೇರಿದ್ದರು. ವೇ॥ ಶಂಕರಶಾಸ್ತ್ರಿಯವರು ಧರ್ಮ, ಆಸ್ತಿವಿಕ, ವಿದ್ಯಾಭಿವೃದ್ಧಿ ಈ ವಿಷಯಗಳ ಮೇಲೆ ಸರ್ವರಿಗೂ ಮನದಟ್ಟುವಂತೆ ಸುಲಲಿತವಾಗಿ ೮ ತಾಸುಗಳವರೆಗೆ ಅಂದರೆ ರಾತ್ರಿ ೧ ಗಂಟೆಯವರೆಗೆ ಭಾಷಣಮಾಡಿದರು. ಬಳಿಕ ಗುರುಸಿದ್ಧಯ್ಯಾ ಸ್ವಾಮಿ ಹಿರೇಮಠ ಇವರು ಸ್ವಾಗತವಾಗಿ ತಮ್ಮ ಮಂಜುಳವಾಣಿಯಿಂದ ಉಪಯೋಗ ವಿಷಯವಾಗಿ ಉಪನ್ಯಾಸಮಾಡಿದರು. ಭಾಷಣಗಳು ಮುಗಿದಮೇಲೆ ಪ್ರಸಾದವು ಸರ್ವರಿಗೂ ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಈ ಪ್ರಕಾರ ಸಭೆಯು ಇಲ್ಲಿ ಎಂದೂ ಜರಿಗಿದ್ದಿಲ್ಲ. ಇದರಂತೆಯೇ ಇನ್ನು ಮುಂದೆ ಇಲ್ಲಿಯೂ ಬೇರೆ ಸ್ಥಳಗಳಲ್ಲಿಯೂ ಜರುಗಿ ಸಮಾಜವು ಸುಧಾರಿಸುತ್ತಿರಬೇಕೆಂದು ಕೋರ್

ವರದಿಗಾರನು.

ಬಾಗಲಕೋಟೆ

ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಮೃತ್ಯುಂಜಯೇಂದ್ರ ಮಹಾಸ್ವಾಮಿಗಳು ಸಂಸ್ಥಾನ ಚಿತ್ರದುರ್ಗ ಇವರ ಸವಾರಿಯು ಇಲ್ಲೇ ಇದ್ದು ಕಳೆದ ತಿಂಗಳ ತಾ॥ ೧೭–೯–೧೧ ಇಸ್ವಿ ಮಂಗಳವಾರ ದಿವಸ ಪಂಚಕಳಶಯುಕ್ತವಾದ ಅಡ್ಡಪಾಲಕಿ ವಗೈರೆ ಸಮಸ್ತ ಬಿರುದಾವಳಿಗಳೊ ಡನೆ ಉತ್ಸವ ಜರಗಿದ್ದು ಸವಿಸ್ತರವಾದ ಸಂಗತಿಯಾಗಿದೆ ಇಲ್ಲಿನ ಪತ್ರಿಕೆಯು ಭಕ್ತರು ದಿನ್ನಹದನಾಡಿಕೊಂಡ ಪ್ರಕಾರ ಕಳೆದ ತಾ॥ ೨೮–೧೦–೧೧ ಇಸ್ವಿ ಸೋಮವಾರ ಪ್ರಾತಃ ಕಾಲ ೧೦ ಘಂಟೆಗೆ ಅಡ್ಡಪಾಲಕಿ ಪಂಚಕಳಶ ಮೊದಲಾದವು ವಗೈರೆ ಸಮಸ್ತ ಬಿರುದಾವಳಿಗಳೊಡನೆ ಒಳ್ಳೆ ಸಂಭ್ರಮದಿಂದ ಪಟ್ಟಣದ ವಿರಕ್ತಮಠದಿಂದ ಹೊರಟು ಟೆಕ್ಕಿನ ಮುದಿಕ ಮುಂಭಾಗದಿಂದ ಪೊಸ ಪೇಟೆಯ ಮಾರ್ಗವಾಗಿ ವೆಂಕಟಪೇಟೆಯಲ್ಲಿ ಹಾದು ಕಳಿಪೇಟೆಯಲ್ಲಿ ತಳಿರುತೋರಣ ಕದಳಿಸ್ತಂಭಗಳಿಂದ ಅಲಂಕರಿಸಲ್ಪಟ್ಟ ಗೃಹಕ್ಕೆ ಮಹಾಸನ್ನಿಧಿಯು ೧೨ ಘಂಟೆಯ ಸುಮಾರಕ್ಕೆ ದಿಜಯಂಗೈಸಿತು. ಮೆ॥ ಕಿಧರ್ ಸಾಹೇಬ ಬಹದ್ದೂರ ಕಮೀಶನರ ದಕ್ಷಿಣಭಾಗ ಇವರ ಸವಾರಿಯು ತಾ॥ ೧೩ರಿಂದ ತಾ॥ ೧೯ರ ವರೆಗೆ ಮತ್ತು ಈ ಜಿಲ್ಲೆಯ ಮೆ॥ ಬ್ರಾಫುನ ಕಲೆಕ್ಟರಸಾಹೇಬ ಬಹದ್ದೂರ ಇವರ ಸವಾರಿ ತಾ॥ ೧೩ರಿಂದ ತಾ॥ ೧೭ರ ವರೆಗೆ ಇಲ್ಲಿ ಇದ್ದವು. ಉಭಯ ದೊರೆಗಳವರಿಗೆ ತಾ॥ ೧೬ನೇಯ ಮಂಗಳವಾರ ಸಾಯಂಕಾಲ ೫ ಘಂಟೆಗೆ ಶ್ರೀ ಜಗದ್ಗುರುಗಳವರ ವಿರಕ್ತ ಮಠದಲ್ಲಿ ಖಾನಸುಮಾರಿ ಪಾರ್ಟಿ ನಡೆಯಿತು. ಗೊತ್ತಾದ ವೇಳೆಗೆ ಉಭಯ ಸಾಹೇಬ ಬಹದ್ದೂರವರು ನೇಮಿತ ಸ್ಥಳಕ್ಕೆ ದಯಮಾಡಿಸಲು, ಸಂಸ್ಥಾನದ ಕಾರಭಾರಿಯು ಮತ್ತು ಊರಪ್ರಮುಖರು ವಾದ್ಯ ವೈಭವದಿಂದ ಇದಿರುಗೊಂಡು ಸದರಿ ಮಠದಲ್ಲಿ ಕರೆದುಕೊಂಡು ಬಂದು ಉಚಿತಾಸನದ ಮೇಲೆ ಕೂಡ್ರಿಸಿದರು. ಆ ಮೇಲೆ ಗಾಯನ ಗ್ರಾಮೋಫೋನ ಚಂದ್ರ ಸೂರ್ಯವಾದ್ಯ ಆನೆಗಳ ಸಲಾಮು ವಗೈರೆ ಆನಂದ ವೈಭವಗಳು ಜರುಗಿದನಂತರ, ಮಹಾಸ್ವಾಮಿಗಳವರ ಆಶೀರ್ವಾದದ ವ್ಯಾಖ್ಯಾನವಾಯಿತು. ಉಭಯದೊರೆಗಳವರು ಅತ್ಯಾನಂದಗೊಂಡು ಶ್ರೀ ಜಗದ್ಗುರುಗಳವರ ಆಭಾರವನ್ನು ಬಿಡದೆ ನಂತರ ಗಂಧ ಪುಷ್ಪಾದಿಗಳು ಸಮರ್ಪಿಸಲ್ಪಟ್ಟು ಸಭೆಯು ವಿಸರ್ಜನವಾಯಿತು. ಈ ತಾ॥ ವೈಕಿ ಮುರನಾಳ ಗ್ರಾಮದ ಭಕ್ತರು ತಮ್ಮ ಗ್ರಾಮಕ್ಕೆ ಶ್ರೀ ಜಗದ್ಗುರುಸ್ವಾರಿ ತಮ್ಮೂರಿಗೆ ಆಗಮಿಸಬೇಕೆಂದು ಬಿನ್ನಹಮಾಡಿಕೊಂಡದಕ್ಕೆ ದಯಮಾಡಿಸಲಿಕ್ಕೆ ಸನ್ನಿಧಿಯಿಂದ ಒಪ್ಪಿಗೆಯಾಯಿತು. ಆ ಹೊತ್ತು ಅಲ್ಲಿಯ ಕೆಲವು ಹೊಸಬರಾದ ಕುಲಕರ್ಣಿ (ಶಾನುಭೋಗ) ವ ಇತರ ಬ್ರಾಹ್ಮಣರು ಜೈನ ಮುಸಲ್ಮಾನ ವಗೈರೆ ಜನರು. ಶ್ರೀ ಜಗದ್ಗುರು ಮೃತ್ಯುಂಜಯೇಂದ್ರ ಮಹಾಸ್ವಾಮಿಗಳವರ ಪಂಚಕಳಶಯುಕ್ತವಾದ ಅಡ್ಡಪಾಲಕಿ ವಗೈರೆ ಸಮಸ್ತ ಬಿರುದಾವಳಿ ಸಹಿತ ನಮ್ಮ ಗ್ರಾಮದಲ್ಲಿ ಉತ್ಸವವಾಗುವದು ತಮಗೆ ಸಂತೋಷವೆಂದು ಸರ್ಕಾರಕ್ಕೆ ವಿನಂತಿ ಪತ್ರ ಬರೆದುಕೊಂಡಿದ್ದರು. ಆದ್ದರಿಂದಲ್ಲ. ತಾ॥ ೧೯ ರ ಬುಧವಾರದ ದಿನ ಸದರ ಗ್ರಾಮಕ್ಕೆ ದಯಮಾಡಿಸಿದ್ದಾಗ್ಯೆ ಅಲ್ಲಿಯ ಬ್ರಾಹ್ಮಣ ಜೈನ ಮುಸಲ್ಮಾನ ವಗೈರೆ ಮುಂದಾಳಿನ ವರು [illegible] ಪಂಚಕಳಶಯುಕ್ತವಾದ ಅಡ್ಡಪಾಲಕಿ ಯಾವತ್ತು ಬಿರುದಾವಳಿ ಸಹಿತ ಉತ್ಸವವನ್ನು ಒಳ್ಳೆಯ ವೈಭವದಿಂದ ಭಕ್ತಿಪೂರ್ವಕ ನೆರವೇರಿಸಿದರು. ಸಾಯಂಕಾಲ ೫ ಗಂಟೆಗೆ ಭಕ್ತಮಾಹೇಶ್ವರರ ಕರೆಯನ್ನೂ, ಶಾನುಭೋಗ ಮತ್ತು ಕೆಲ ಬ್ರಾಹ್ಮಣರ ಜೈನ ಮುಸಲ್ಮಾನ ವಗೈರೆ ಜನರ ಫಲಪುಷ್ಪವನ್ನೂ ಒಪ್ಪಿಕೊಂಡು ಶ್ರೀಗಳವರ ಸವಾರಿಯು ರಾತ್ರಿಯ ೩ ಗಂಟೆಗೆ ಬಾಗಲಕೋಟೆಯ ಸ್ವಸ್ಥಾನಕ್ಕೆ ದಯಮಾಡಿಸಿತು. ಇಂಥಹ ರೀತಿಯಿಂದ ನಡೆದುಬಂದ ಅಡ್ಡಪಾಲಕಿ ಪಂಚಕಳಶ ವಗೈರೆ ಸಮಸ್ತ ಬಿರುದಾವಳಿಗಳ ಉತ್ಸವಕ್ಕೆ ಆತಂಕವಿದೆ. ಇರಲಿ. ಕಳೆದ ತಿಂಗಳ ತಾ॥ ೧೨ ರ ಮಂಗಳವಾರ ಜರಗಿದ ಅಡ್ಡಪಾಲಕಿ ಪಂಚಕಳಶ ವಗೈರೆ ಉತ್ಸವದಲ್ಲಿ ಬಾಗಲಕೋಟೆಯ ಕೆಲವು ಪೇಟೆ ಬಳಿಯ ಬ್ರಾಹ್ಮಣರು ಇಲ್ಲಿ ಉತ್ಸವವು ಜರುಗುವದಕ್ಕಿಂತ ಮೊದಲು ಸುಳ್ಳು ಸುಳ್ಳು ಕಾರಣ ತೋರಿಸಿ ಸುದ್ದಿಯನ್ನು ಹಾರಿಸಿಂದಲೂ ಅರ್ಜಿಯಿಂದಲೂ ಸರಕಾರಕ್ಕೆ ಮಾಡಿದರು. ಆದಾಗ್ಯೂ ಅವರು ಎಷ್ಟು ಸುಳ್ಳು ಖಟಪಟಿ ಮಾಡಿದಾಗ್ಯೂ ಅವು ಫಲಿಸಲಿಲ್ಲ. ಇದರಿಂದ ಉತ್ಸವ ಪ್ರಾರಂಭಿಸ ಬೇಕಾಗಿದ್ದು ತಾವು ಮೊದಲು ಸರಕಾರಕ್ಕೆ ಬರೆದುಕೊಟ್ಟ ಅರ್ಜಿ ಮತ್ತು ತಾರುಗಳಿಗೆ ಮಾನಕೊಡದೆ ಕ್ಕಾಗಿ ಸದರಿ ತಾರೀಖಿಗೆ ಜರುಗಿದ ಉತ್ಸವದಲ್ಲಿ ಭಂಗ ಉಂಟುಮಾಡಿದ್ದು, ದರೋಡೆ ಮಾಡಿದರು ವಗೈರೆ ಅಂತ ಸ್ವಪ್ನದ ಸ್ವರೂಪತೋರಿಸಿ ಸುಳ್ಳುಬಾತ್ಮಿಯಿಂದ ರಾಜನಿಷ್ಠರಾದ ಲಿಂಗಾಯತರ ವಿರುದ್ಧ ವರ್ತಮಾನಪತ್ರಗಳಲ್ಲಿ ಪ್ರಕಟಿಸಿದರು. ಇದರಿಂದ ಸುವಿಚಾರದವರ ಮನಸ್ಸಿನಲ್ಲಿ ಲಿಂಗಾಯತರನ್ನು ಏನಾದರೂ ಕೆಳಗಿಳಿಸಬೇಕೆಂಬ ಪ್ರಸಿದ್ಧವಾಗಿದೆ. ಇಂಥ ದುಷ್ಟ ಜನರಿಗೆ ಯಾವ ಉಪಮಾನ ಕೊಡತಕ್ಕದ್ದು ಇದನ್ನು ವಾ

ಇದೆ ತಾ॥ ೧೯-೧೧-೧೬ ಇಷ್ಟು ಬುಧವಾರ ಜರಗಿದ ಮಂ ರನಾಳ ಗ್ರಾಮದ ಪಂಚಕಲಶಯುಕ್ತವಾದ ಅಗ್ನಿ ಪ್ರತಿಷ್ಠೆಯು ತ್ಸವಕ್ಕೆ ಅಲ್ಲಿಯ ಗ್ರಾಮಸ್ಥರು ವಗೈರೇರು ಮಾಡತಕ್ಕ ಮಾಡಿದ ಸಹಾಯವನ್ನು ಕೇಳಿ ನೋಡಿದವರೆಲ್ಲರೂ ಸಂತೋಷಪಡದೆ ಇರಲಾರರು. ಸದರಿ ಮುರನಾಳ ಗ್ರಾಮದ ಬ್ರಾಹ್ಮಣರು ಲಿಂಗಾಯತರ ಕೂಡ ಸಮ್ಮಿಳಿತರಾಗಿ ನೆರವೇರಿಸಿದ ಉತ್ಸವದ ಮೇಲ್ಪಟ್ಟಿ (ಕಿತ್ತೆ) ಯನ್ನು ಇತರ ಗ್ರಾಮದ ಬ್ರಾಹ್ಮಣರು ತೆಗೆದುಕೊಂಡರೆ, ಲಿಂಗಾಯತ ಮತ್ತು ಬ್ರಾಹ್ಮಣರ ನಡುವೆ ಯಾವ ತರದತೊಂದರೆಗಳೂ ಬರಲಿಕ್ಕಿಲ್ಲೆಂಬುದನ್ನು ಕೈಯು ತ್ತಿ ಸಾರಿಹೇಳಬಹುದು.

ಒಬ್ಬ ಶಿವಾರ್ಚಯುತ

ಶ್ರೀಮದ್ವೀರಶೈವ ಶಿವಯೋಗ ಮಂದಿರದ ಪ್ರಕಟನೆ ಪತ್ರಿಕೆಯು

ಶ್ರೀಮದ್ವೀರಶೈವ ಶಿವಯೋಗ ಮಂದಿರದ ಸಂಸ್ಥೆಯಿಂದ.—

ಸಮಸ್ತ ವೀರಶೈವ ಮಹಾ ಜನರಿಗೆ ಸೂಚಿಸುವದೇನೆಂದರೆ:—ಇದೇ ಸಂವತ್ಸರದ ಮಾಘ ಬಹುಳ ೧೪ ಮಹಾ ಶಿವರಾತ್ರಿಯ ದಿವಸ ಮಲಪ್ರಭಾತೀರದ ಮಹಾಕೂಟ (ದಕ್ಷಿಣ ಕಾಶಿ) ಕ್ಷೇತ್ರೋಪಾಂತ್ಯ (ಸಂಚಕೊಪ್ಪ ಶಿವಯೋಗ) ಸ್ಥಾಪಿತ ಶಿವಯೋಗ ಮಂದಿರದಲ್ಲಿ ಅನೇಕ ವೀರಶೈವರು ಕೂಡತಕ್ಕವರಿರುವರು. ಈ ಸುಸಮಯದಲ್ಲಿ ಶಿವಯೋಗ ಮಂದಿರ ಮತ್ತು ಸ್ವಮತ ಈ ವಿಷಯಗಳನ್ನು ಕುರಿತು ಆಲೋಚಿಸತಕ್ಕ ಅವಶ್ಯವಿದೆ. ಆದ್ದರಿಂದ ತಾವು ದಯವಿಟ್ಟು ಸ್ವಮತಾಭಿಮಾನಿಗಳೊಡನೆ ಆಗಮಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುವೆವು.

ಇಲ್ಲಿ ನಡೆಯತಕ್ಕ ವಿಷಯಗಳು.

೧. ಭಾಷಣಾದಿಗಳು—ಶಿವಯೋಗಮಂದಿರ ಮತ್ತು ಸ್ವಮತ ಇವುಗಳ ಸುಧಾರಣೆಯ ಬಗ್ಗೆ ವಕ್ತೃತ್ವಶಕ್ತಿಯುಳ್ಳ ವಿದ್ವಾಂಸರ ಉಪನ್ಯಾಸಗಳು ಜರಗುವವಲ್ಲದೆ, ಶಿವಾದ್ವೈತ ಮತ್ತು ಅದ್ವೈತ ಮತ ಗ್ರಂಥಗಳ ಪರೀಕ್ಷೆ, ಶಿವಕೀರ್ತನೆ, ಶಿವಭಜನೆ ಮುಂತಾದ ಮುಮುಕ್ಷುಗಳ ಮತಿಗೆ ಮಂಗಲವನ್ನೀಯುವ ಮಹಾ ಕಾರ್ಯಗಳು ಮಾಘ ಬಹುಳ ೧೨ ಶನಿವಾರ ೩೦ ರವಿವಾರ ಮತ್ತು ಫಾಲ್ಗುಣ ಶುದ್ಧ ೧ ಸೋಮವಾರ ಈ ಮೂರು ದಿವಸಗಳಲ್ಲಿ ಅಂದರೆ ಫೆಬ್ರುವರಿ ೧೬, ೧೭, ೧೮ ತಾರೀಖು ಸನ್ ೧೯೧೭ ಈ ಮೂರು ದಿವಸಗಳಲ್ಲಿ ಜರಗುವವು.

ಪರೀಕ್ಷಾ ಗ್ರಂಥಗಳು. (೧) ನಿಜಲಿಂಗಶತಕ, (೨) ಸೋಮೇಶ್ವರಶತಕ, (೩) ಶಿವಾದ್ವೈತಮಂಜರಿ, (೪) ಮೊಗ್ಗೆಯ ಮಾಯಿದೇವಕೃತಶತಕತ್ರಯದಲ್ಲಿ ಒಂದು ಶತಕ, (೫) ಶೈವಪ್ರಪದ್ಧತಿ, (೬) ವಿವೇಕಚಿಂತಾಮಣಿ ೧ ನೇ ಭಾಗ ಸಂಪೂರ್ಣ, ೨ನೇ ಭಾಗ ವೀರಶೈವ ಲಕ್ಷಣವಿಂಪ ಚತುರ್ಥಾವ ಸಂಪೂರ್ಣ, (೭) ಪಂಚದಶಿ, (೮) ವಿಚಾರಸಾಗರ, (೯) ಲಿಂಗಧಾರಣ ಚಂದ್ರಿಕೆ ಪೂರ್ವಾರ್ಧ, (೧೦) ಕರಣ ಹಸುಗೆ (ವ್ಯಾಖ್ಯಾಸಹಿತ), (೧೧) ಬಸವೇಶ್ವರ ವಚನ ಷಟ್ಸ್ಥಲ ಪೂರ್ಣ (ವ್ಯಾಖ್ಯಾನಸಹಿತ) (೧೨) ಕ್ರಿಯಾಸಾರ (ವಾರದ ವರಲ್ಲಿ ಅಚ್ಚು ಹಾಕಿದ್ದು) ಇದರಲ್ಲಿ ೧-೨ ಆಶ್ವಾಸ ವ್ಯಾಖ್ಯಾನ ಸಹಿತ, (೧೩) ಸಿದ್ಧಾಂತ ಶಿಖಾಮಣಿ ಪೂರ್ವಭಾಗ, (೧೪) ಶಿವಪಂಚಸ್ತವ ಒಂದು ಶತಕ, (೧೫) ಬಸವಪುರಾಣ ೧ ನೇ ಸಂಧಿ ೪೧ ರಿಂದ ೬೩ವರೆಗೆ, ಪದ್ಯಗಳು, ೨ನೇ ಸಂಧಿ ಪೂರ್ಣ, ೩ ನೇ ಸಂಧಿ ಪೂರ್ಣ, ೮ನೇ ಸಂಧಿ ೧ರಿಂದ ೫೬ ಪದ್ಯ ಮತ್ತು ೭೦ರಿಂದ ೩೩ ರ ವರೆಗೆ ಪದ್ಯಗಳು.

ಈ ಮೇಲ್ಕಂಡ ಗ್ರಂಥಗಳ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಿಗೆ ಯೋಗ್ಯತಾನುಸಾರವಾಗಿ ಸಂಭಾವನೆಗಳು ಕೊಡಲ್ಪಡುವವಲ್ಲದೆ ಸಂಸ್ಥೆಯಿಂದ ಅಧಿಕಾರದ ಪತ್ರಿಕೆಗಳೂ ಕೊಡಲ್ಪಡುವವು. ಈ ಗ್ರಂಥಗಳಲ್ಲಿ ಪರೀಕ್ಷೆಯನ್ನು ಕೊಡತಕ್ಕವರು ತಾವು ತೆಗೆದುಕೊಂಡ ಗ್ರಂಥದ ಹೆಸರು ಮತ್ತು ತಮ್ಮ ಹೆಸರು ಇವುಗಳನ್ನು ಶಿವಯೋಗಮಂದಿರದ ಕಾರಕೂನರಾದ ರಾ. ರಾ. ಶಿವಬಸಪ್ಪ ಮಾಗಿ ಇವರ ಕಡೆಗೆ ಮಾರ್ಗಶೀರ್ಷ ಮಾಸದೊಳಗಾಗಿ ತಿಳಿಸಬೇಕು.

ರೈಲ್ವೆಯ ಮಾರ್ಗಗಳು. ಸೊಲ್ಲಾಪೂರ ಮಾರ್ಗವಾಗಿ ಬರತಕ್ಕವರು ಬಾದಾಮಿ ಸ್ಟೇಶನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗ ಮಂದಿರವು ೯ ಮೈಲು ಆಗುವದು. ಗದಗ ಮಾರ್ಗವಾಗಿ ಬರತಕ್ಕವರು ಆಲೂರ ಸ್ಟೇಶನಕ್ಕೆ ಇಳಿಯಬೇಕು. ಅಲ್ಲಿಂದ ಶಿವಯೋಗಮಂದಿರವು ೪ ಮೈಲು ಆಗುವದು. ಇಲ್ಲಿಗೆ ಬರುವವರಿಗೆ ಮಹಾ ಕ್ಷೇತ್ರ ಪುಣ್ಯವು ಲಭಿಸುವದಲ್ಲದೆ ಮಹಾ ಶಿವಯೋಗಿ ದರ್ಶನಲಾಭವಾದದರೂ ಆಗುವದರಿಂದ, ಗಾಳಿವಾಡದಲ್ಲಿರುವ ಕ್ಷೇತ್ರಗಳಿಗೆ ಸಕಲ ಸನ್ನಾಹದೊಡನೆ ಕುಟುಂಬ ಸಹಿತವಾಗಿ ಹೋಗುವಂತೆ, ಇಲ್ಲಿಗೆ ಬಂದು, ನೇಮಮಾಡಿ, ಈ ಸ್ಥಲ ಭಾಗಗಳಿಗಾಗಿ ಸ್ವಮತಾಭಿಮಾನವನ್ನು ವ್ಯಕ್ತಗೊಳಿಸಬೇಕೆಂದು ವಿಷಯಪತ್ರ-ಸಮಾಸ್ತರಿಗೂ ಪ್ರಸಿದ್ಧಪಡಿಸುತ್ತೇವೆ.

೨೦ನೇ.

ಜನರದ ವ್ಯವಸ್ಥಾಪಕ.

ಹಾವೇರಿ ಹುಕ್ಕೇರಿ ಮಠದಲ್ಲಿ ಕೊಟಿದ್ದ ಸಭೆಯಲ್ಲಿ ಶ್ರೀ ಶಿವಯೋಗಮಂದಿರಕ್ಕೆ ದಲವರ್ಷ ಕೊಡಲಿಕ್ಕೆ ಒಪ್ಪಿದ ಮಹಾಶಿಯರ ಹೆಸರು—

(ಹಿಂದಿನವಾರದ ಶೇಷ.)

ಚೆಂನಪ್ಪ ಚನಿವೀರಪ್ಪ ಹಂಚಿನಾಳ ಸಾ॥ ಹಾವೇರಿ ೪ ರೂ. ಕಲ್ಲಪ್ಪ ಬಿಂನ ಶಿವಲಿಂಗಪ್ಪ ಬಸ್ತಿ ಸಾ॥ ಹಾವೇರಿ ೪ ರೂ. ಗದಿಗೆಯ್ಯಾ ಚೆಂನಯ್ಯಾ ಹಿರೇಮಠ ಸಾ॥ ಮಹಾರಾಜಪೇಟೆ ತಾ॥ ಹಾನಗಲ್ಲ ೪ ರೂ. ಗುರುಶಾಂತಪ್ಪ ಉರ್ಫ ದೇವೇಂದ್ರಪ್ಪ ಬಿಂನ ವೀರಬಸಪ್ಪ ಕುಬೇರ ಗೌಡರ ಸಾ॥ ಹಾವೇರಿ ಹಾಲಿವಸ್ತಿ ಅಗಡಿ ತಾ॥ ಕರ್ಜಗಿ ೪ ರೂ. ಮಹೇಶ್ವರಶಾಸ್ತ್ರಿ ಬಿಂನ ಚಂದ್ರಶೇಖರಶಾಸ್ತ್ರಿ ಸಾ॥ ಬರಿಸಾರ ೪ ರೂ. ಗುರುಶಾಂತಪ್ಪ ಬಿಂನ ತಿಪ್ಪಣ್ಣಾ ಮುಲ್ಲಿಗೆ ೧೭೧೯ರ ಸಾ॥ ಹಾವೇರಿ ೪ ರೂ. ರುದ್ರಪ್ಪ ರಾಚಪ್ಪ ವಾಲಿ ಸಾ॥ ಸಿದ್ದದೇವಪುರ ತಾ॥ ಕರ್ಜಗಿ ೪ ರೂ. ಶಿವಗಂಗಪ್ಪ ಬಿಂನ ಕೊಟ್ರಪ್ಪನವರ ಸಾ॥ ಹಾವೇರಿ ೪ ರೂ. ಗುರುಶಾಂತಪ್ಪ ಬಿಂನ ಮುರಿಗೆಪ್ಪ ಹರಿಯಾಳ ಸಾ॥ ಹಾವೇರಿ ೪ ರೂ. ಶಿವಪ್ಪ ನಾಗಪ್ಪ ಹರಿದ್ರಾಳ ಸಾ॥ ಹಾವೇರಿ ೪ ರೂ. ವಿಜಗಿಣಪ್ಪ ಬಿಂನ ರುದ್ರಪ್ಪ ಹುಲಿಕಟ್ಟಿ ಸಾ॥ ಹಾವೇರಿ ೪ ರೂ. ಬಸಪ್ಪ ಬಿಂನ ಶಿವಬಸಪ್ಪ ಕಬ್ಬೂರ ಸಾ॥ ದೇವಿಹೊಸೂರು ತಾ॥ ಕರ್ಜಗಿ ೪ ರೂ. ತಿಪ್ಪಣ್ಣ ಬಿಂನ ಶಾಂತವೀರಪ್ಪ ಜವಳಿ ಸಾ॥ ದೇವಿಹೊಸೂರು ತಾ॥ ಕರ್ಜಗಿ ೪ ರೂ. ಗದಿಗೆಯ್ಯಾ ಬಿಂನ ಚಂಕಲೆಯ್ಯಾ ಕೋರಿಮಠದ ಸಾ॥ ದೇವಿಹೊಸೂರು ತಾ॥ ಗದಗ ೪ ರೂ. ಸಿದ್ದಲಿಂಗಪ್ಪ ರಾಚಪ್ಪ ಮಹಾಲಿಂಗಶೆಟ್ಟಿ ಸಾ॥ ಹಾವೇರಿ ೪ ರೂ. ರಾಮಪ್ಪ ಬಿಂನ ತಿಮ್ಮಣ್ಣಾ ಸಾಕೇರ ಸಾ॥ ಕದರಮಂಡಲಗಿ ತಾ॥ ರಾಣೆಬೆನ್ನೂರು ೪ ರೂ. ಪುಟ್ಟಪ್ಪ ಬಿಂನ ಪುಳಿಕೆಪ್ಪ ಕಡಗಲ್ಲ ಸಾ॥ ಹಾವೇರಿ ೪ ರೂ. ಚನಬಸಪ್ಪ ಚನ್ನವೀರಪ್ಪ ಹಗವಲಹಳ್ಳಿ ಸಾ॥ ಹಾವೇರಿ ೩ ರೂ. ವೀರಯ್ಯಾ ಚೆಂನಯ್ಯಾ ಗವನೂರ ಸಾ॥ ಹಾವೇರಿ ೩ ರೂ. ಪುಟ್ಟಪ್ಪ ಕಟ್ಟಪ್ಪ ಅಕ್ಕೂರ ಸಾ॥ ಹಾವೇರಿ ೩ ರೂ. ಚೆಂನಬಸಪ್ಪ ಬಿಂನ ವೀರಬಸಪ್ಪ ಮುಲ್ಲಂಗೌಡರವರ ಸಾ॥ ಹಾವೇರಿ ೩ ರೂ. ರುದ್ರಪ್ಪ ಗಂಗಪ್ಪ ನಾಡಿಗರ ಸಾ॥ ಹಾವೇರಿ ೨ ರೂ. ಬಂಬಣ್ಣಾ ಬಿನ್ನ ಅಡಿವೆಪ್ಪ ಮಾಸೂರ ಸಾ॥ ನಿಸ್ಸೀಮ ಅಲದಕಟ್ಟಿ ಸಾ॥ ಹಾನಗಲ್ಲ ೨ ರೂ. ಮರಿತಮ್ಮಪ್ಪ ಬಿನ್ನ ನಾಗಪ್ಪ ನವಲಿ ಸಾ॥ ಹುಜಾರಿ ಲಕನಾಪುರ ತಾ॥ ಹಾವೇರಿ ೨ ರೂ. ನೀಲಪ್ಪ ಕೊಂ ಕೊಡಮಾರಪ್ಪ ಚವಳಿ ಶೆಟ್ಟಿ ಸಾ॥ ಹಾವೇರಿ ೨ ರೂ. ಈ ಪ್ರಕಾರ ೩೭ ಜನಗಳು ಶ್ರೀ ಸನ್ನಿಧಾನದವರಿಗೆ ಕೊಡಲಿಕ್ಕೆ ಒಪ್ಪಿದರು.

ಮತ್ತು ಸದರಿ ಗಧಿಯಲ್ಲಿ ಎರಡನೆ ವರ್ಗಣಿ ಕೊಟ್ಟವರು— ರಾಚಪ್ಪ ನ ಚನ್ನಪ್ಪ ಹಿಂಚಿಗೇರಿ ಸಾ॥ ಹಾವೇರಿ ೪ ರೂ. ನಂತೆ ೧೦ ವರ್ಷವು, ರುದ್ರಯ್ಯಾ ವೀರಯ್ಯಾ ಹಿರೆಗೋಡಿಮಠದ ಸಾ॥ ಬ್ಯಾಡಗಿ ೪ ರೂ. ನಂತೆ ೧೦ ವರ್ಷವು, ಚೆಂನಬಸಪ್ಪ ಸೂಗೂರಪ್ಪಶೆಟ್ರ ಸಾ॥ ಬ್ಯಾಡಗಿ ೪ ರೂ. ನಂತೆ ೪ ವರ್ಷವು, ಸಂಗನಬಸಪ್ಪ ಚೆಂನಬಸಪ್ಪ ಪುರದ ಸಾ॥ ಹಾವೇರಿ ೪ ರೂ. ನಂತೆ ೪ ವರ್ಷವು, ಗದಿಗೆಯ್ಯಾ ... ಹಿರೆಮಠ ಸಾ॥ ಮಹಾರಾಜಪೇಟೆ ತಾ॥ ಹಾನಗಲ್ಲ ... ರೂ. ನಂತೆ ೪ ವರ್ಷವು ಕೊಡಲಿಕ್ಕೆ ಒಪ್ಪಿದರು.

ಸಿಂಗಿರಾಜಪುರಾಣ ವಿಜಯಂ

ಬಾಲಕರು ಕೂಡ ಓದಿ ತಿಳಿಯುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಚಿತ್ತಾಗಳ್ಪಡುವುದಿಗಳಿಂದ ಮೆರೆಯುವವು. ಈ ಪುಸ್ತಕದಲ್ಲಿ ಶ್ರೀ ಬಸವೇಶ್ವರರ ಅರವತ್ತು ನಾಲ್ಕು ಪವಾಡಗಳ ಕಥೆಗಳು ಬರೆಯಲ್ಪಟ್ಟಿವೆ. ಸಪ್ರಮಾಣವಾಗಿ ... ಸ್ವರ್ಗ, ಸ್ವರ್ಗ ವಿವರಣೆ ... ಇರುವವು ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳ ... ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ ... ಗಳ ವಿಷಯಗಳನ್ನು ಜನರಿಗೆ ... ಯಾವರೀತಿಯಾಗಿ ... ಎಂಬದನ್ನು ಸ್ಪಷ್ಟವಾಗಿ ವಿವರಿಸಿ ಹೇಳಿರುವರು. ಆದುದರಿಂದ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ... ಪಾರಾಯಣಮಾಡಿದ್ದೆ ಆದರೆ ... ಉಪಯೋಗವಾಗುವದು. ... ಸ್ವಟಾಕ್ಷರಗಳಿಂದ ... ಕಾಗದದಲ್ಲಿ ... ಪುಟಗಳುಳ್ಳ ... ಬೆಲೆ ... ಸಹಿತವಾಗಿ ೨ ರೂ. ೮ ಆಣೆ.

ವಿಳಾಸ —ಎಂ. ಬಸವಲಿಂಗಶಾಸ್ತ್ರಿ,

ಹುಳಿಅಗ್ರಹಾರ, ಪಾಟಿಪೇಟೆ

ಮೈಸೂರು.

1 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ... ಇರಲು ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ... ವಿದ್ಯುಚ್ಛಕ್ತಿಯು (...) ... ಮಿಂಚಿನ ... ವಿದ್ಯುಚ್ಛಕ್ತಿಯು ಹುಟ್ಟುತ್ತದೆಂಬ ಮಾತು ಈಗ ಸರ್ವರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.





ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಜಡತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ನಿದ್ರೆ ... ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೆದುಳಿನ ದೌರ್ಬಲ್ಯ, ಹೃದಯ ವಿಕಾರ, ಕಣ್ಣು ಗಪಕರ್ಣ, ಜ್ವರ, ಉದರವಾತ, ಕಿವಿಯ ವ್ಯಾಧಿ, ಸ್ತ್ರೀಯರ ... ರೋಗ, ... ಅಪಸ್ಮಾರ, ಅರ್ಧಾಂಗವಾಯು, ... ಇತ್ಯಾದಿ ಅನೇಕ ಉಪಾಧಿಗಳು ... ಉಪಯೋಗದಿಂದ ... ವಾಸಿಯಾಗುತ್ತವೆ.

ಉಪಯೋಗ—ಪದಕವು ಎದೆಯಮೇಲೆ ... ಕೊರಳಿಗೆ ಕಟ್ಟಲು ... ಉಂಗುರವು ... ರಕ್ತ ... ಬೇಕು. ... ಪ್ರತಿ ೧ ಪದಕಕ್ಕೆ ೧-೮-೦ ಮತ್ತು ಪ್ರತಿ ಒಂದು ಉಂಗುರಕ್ಕೆ ... ೧-೪-೦. ... ಪೋಸ್ಟೇಜ ೦-೩-೦. ಒಮ್ಮೆಲೆ ೩ ವಸ್ತುಗಳನ್ನು ... ೧೦ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ... ಕಳುಹಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ... ಉಪಯೋಗಿಸಿದ ... ತಿಂಗಳ ... ಸಾಧಾರಣ ... ಗಿವೆ. ... ಕೊಡಲಾಗುವದು.

ವಿಳಾಸ ... ಮುಂಬೈ ...

11

ಉತ್ತಮ ಗ್ರಂಥಗಳು.

ಶಿವಸ್ವಚ್ಛಶಿರೋಮಣಿ— ಬೆಲೆ ವಿ.ಪಿ ೮ ಆಣೆ. ಇದು ಉತ್ತಮವಾದ ಸ್ತೋತ್ರವು ಕನ್ನಡಟಿಪ್ಪಣಿಯಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೬ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ ಸೋಸಲೆ ಸುವರ್ಣ ರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಯಂಚಸ್ತವ— ಬೆಲೆ ವಿ. ಪಿ ೧—೮—೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ ಅವರು ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತ— ಬೆಲೆ ವಿ. ಪಿ ೮ ಆಣೆ ಇದರಲ್ಲಿ ಆಷ್ಟಾವರಣವೂ ಹಿಂಚೂ, ಪಂಚಾಚಾರವಿಚಾರ ಧರ್ಮಾಚಾರ ವಿಭಾಗಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷಸೂಕ್ತಂ— ಬೆಲೆ ವಿ. ಪಿ ೪ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ

ಬಸವಲಿಂಗಸ್ವಾಮಿಗಳು, ಯೋಸಮಠ ಮೈಸೂರು.

ವಾಣ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

29

ಲೋಕಾನಂದದ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಛಳಿಜ್ವರ, ಜ್ವರ, ಹೊಟ್ಟೆಶೂಲೆ ಸಂಧುಗಳ ನೋವು ಮೈಕಾಲು ಯೂರತ (ಗಾರ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಜೊತ್ತು ಸುವಾಸನೆಯಾಗಿರುತ್ತೆ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಯಿಲೆಗೂ ದಾರಿಕೊಡದೆ, ನರಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಟ್ಟು ಜ್ವರ, ಕೈಕಟ್ಟುಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ರೋಗಕ್ಕೆ ಗುರಿಯಾಗುವದಿಲ್ಲ ಒಳ್ಳೇಶಕ್ತಿವರ್ಧಕವಾಗಿದೆ—೩೦ ಮಾತ್ರೆಗಳುಳ್ಳ ಡಬ್ಬಿಗೆ ೮ ಆಣೆ, ೪ ಡಬ್ಬಿಗೆ ೧ ಡಬ್ಬಿ ಬಿಟ್ಟು, ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೪ ಆಣೆ.



ಪ್ಲೇಗಿನ ಔಷಧ—ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿಸಿ. ಸುವಿಶೇಷವಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ, ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಹೊರತು ಮತ್ತೊಂದಿಲ್ಲ ಎಂಬುದು ಅನುಭವದಿಂದ ತೋರಿಬರುವುದು. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿಡಿ. ರೋಗಗಳಿಗೆ ದಳ್ಳು ಪಟ್ಟಿ ಮುಂತಾದ ಅನುಪಾನಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಡಬ್ಬಿ ೧ ಕ್ಕೆ ರೂ. ೧ ಕ್ಕೆ ಮೊದಲಾದವಕ್ಕೆ ಡವರು ದಬ್ಬಿ ೧ ಕ್ಕೆ ೮. ೪. ವರದರಿಂದ ಟಪಾಲ್ ಖರ್ಚು ೪ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈಕ) ರಾಮಸ್ವಾಮಿನಾಯುಡು, ಸ್ಯಾನಿಟರಿ ಇನ್ಸ್ಪೆಕ್ಟರ್, ಚಾಮರಾಜಪುರಂ ಸರ್ಕಲ್

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮೀನಾರಾಯಣ, ಪಾರ್ಕ್ ಸೂಪರ್ವೈಸರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ ನಮ್ಮ ವಿಳಾಸ.—ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ಪಂಡಿತ ಎಸ್. ಗಣಪತಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ

63 ಮೈಸೂರು.

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ೧೨ ೦—೪—೦.

ಜ್ವರಹರಮಾತ್ರೆ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೮—೦, ೬೪ ಮಾತ್ರೆ ಸೀಸೆ ೦—೪—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦.

ಬಾಲಸಂಜೀವಿನಿ — ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ ಸುಮಾರು ೫೦ ಸಲಕ್ಕೆ ಆಗುವ ಔಷಧಿ ದಬ್ಬಿ ೦—೮—೦ ತೊಲೆ ೧ ಕ್ಕೆ ೦—೪—೦.

ಪಂಚಕರ್ಪೂರಮಾತ್ರೆ— ಇದರಿಂದ ಗರ್ಭವೇಷ್ಟಿಯೂ ಆಕಾರವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೨ ಮಾತ್ರೆ ಸೀಸೆ ೦—೮—೦

ಅರ್ಶೋಹರ ರಸಾಯನ — ಮೂಲವ್ಯಾಧಿ ಹಿಡಿತರಿಗೆ ಇದು ಸಂಜೀವನ. ಸೇರಿನ ದಬ್ಬಿ ೧—೪—೦.

ಶ್ರೀಖಂಡಲೇಹ್ಯ — ಮೇಹಜಾಡ್ಯಗಳಲ್ಲಿ ಬಹುಳ ಖ್ಯಾತಿಯಾದ ಔಷಧಿ ಸೇರಿನ ಗಬ್ಬಿ ೮ ೧—೦ ೧೨ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩—೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೬೪ ಮಾತ್ರೆ ಸೀಸೆ ೦—೩—೦.

ಮಲಶೋಧನ ವಟಿಕಾ.—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೪—೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦ ಮಾತ್ರೆ ಸೀಸೆ ೦—೮—೦.

ಪುರುಷ ಸಂಜೀವಿನಿ — ೩೦ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦—೪—೦

ಅಜೀರ್ಣದಮಾತ್ರೆ— ೪೦ ಮಾತ್ರೆ ಸೀಸೆ ೦—೧—೦.

ದಂತಶುದ್ಧಿ ಚೂರ್ಣ— ದಬ್ಬಿ ೧ಕ್ಕೆ ೦—೩—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಸುಲಭಬೆಲೆಯುಳ್ಳ ದೊರಕುವವು. ಟಪಾಲು ಖರ್ಚನ್ನು ಅಲ್ಲಾಹಿದಾ ಕೊಡಬೇಕು. ಇತರ ಪುಸ್ತಕದಲ್ಲಿ ವಿವರಿಸಿದ ವಿಳಾಸಕ್ಕೆ ಬರೆಯಿರಿ

೧೯೧೧ನೇ. ಇಸವಿ ನವಂಬರ್ ತಾ|| ೬ ರಿಂದ ೧೯೧೧ ನೆಯ ನವಂಬರ್ ತಾ|| ೧೨ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಶುದ್ಧ ಪೌರ್ಣಮಿಯಿಂದ ಕಾರ್ತಿಕ ಬಹುಳ ಷಷ್ಠಿವರೆಗಿನ ಪಂಚಾಂಗ.

ತಾ||	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ನವಂ ಶೇದಿ
6	[1] ಸೋ	ಪೌ	37 8	ಅಶ್ವಿನಿ	7-8	21
7	ಮಂಗ	ಬಾ	34-2	ಭರಣಿ	4 58	22
8	[2] ಬುಧ	ಬಿ	28 37	ಕೃತ್ತಿಕ	1-58	23
9	[3] ಗುರು	ತ	25 0	ಮೃಗಶಿರ	5೪-28 [partly illegible]	24
10	[4] ಶುಕ್ರ	ಚ	17-0	ಆರಿದ್ರ	50-17	25
11	ಶನಿ	ಪಂ	11-19	ಪುನರ್ವಸು	8-31	2(
12	ಭಾನು	ಷ	5 8	ಪುಷ್ಯ	8 23	2

(1) ಕಾರ್ತಿಕ ಸೋಮವಾರಂ, ದುಷ್ಯನಿವರ್ತನ ಸ್ನಾನ, ವ್ಯಾಸಪೂಜೆ, ಕಾರ್ತಿಕ ಗೌರೀವ್ರತಂ, ಸ್ತ್ರೀ ಯರೋಗ. (2) ಶ್ರೀರಂಗದಲ್ಲಿ ತೊಟ್ಟಿಲೋತ್ಸವ (3) ಸಂಕಟಹರ ಚತುರ್ಥಿ. (4) ಕರಕಚತುರ್ಥಿ, ಪವಿತ್ರ...

ಮೈಸೂರ್ ಸ್ಟಾರ್ ... ಕೃಷ್ಣಪಿಳ್ಳೆ ಸಪ್ಲೈ ...

ಮೈಸೂರು ಸ್ಟಾರ್ ಚಂದಾವಿವರ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ೬ ಆಣೆ ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಕೊಡಬೇಕು ನಿಮ್ಮ ಹೆಸರು ಈ ಕೆಳಗೆ ಕಂಡಂತೆ ಕೊಡಬೇಕು

ಚಿಲ್ಲರೆ ಬೆಲೆ

೧ ಪ್ರತಿಗೆ ೧ ವರ್ಷಕ್ಕೆ ೦—೧—೦

೨ ರಿಂದ ೪ ರವರೆಗೆ ೧—೧೦—೧

ಇದಲ್ಲದೆ ಹೊಂದಿದ್ದ ಪತ್ರಿಕೆಗೂ ೧-೧ ಯಂತೆ ಪ್ರತಿಸೇಯ ದರ.

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃತ್ತಿಗೆ ಕಡಿಮೆಯಾಗಿ ಪ್ರಕಟನೆಗಳ ... ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಟ್ಟಿ ೧ ಕ್ಕೆ ೧೮ಕಾಸು. ಕಾಂಟ್ರಾಕ್ಟುಗಳು ತಕ್ಕಷ್ಟು ಪ್ರಕಟನೆಗಳನ್ನು ೬ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ವಿವರಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು ಅಗ್ರೆ ಅನುಕೂಲವಾಗಿ ಮಾಡಿಕೊಡಲ್ಪಡುವುದು. ಗ್ರಾಹಕರಿಂದ ಪ್ರಕಟಿಸಬೇಕಾದರೆ ಮುಂಗಡವಾಗಿ ದರವು ಕೇಳುವುದು.

8

ಸೂಚನಾ.

(ಪತ್ರಿಕೆಯವರಾದ ಮಾರಾಟಗಾರರಿಗೆ ಉತ್ತಮವಾದ ಪ್ರಕಟನೆಗಳಿಂದ ಬರೆಯಬೇಕು)

ಅಂಗನಿರಾಶಕಪಾಧಿ — ಇದರ ಸೇವನೆಯಿಂದ ಮೈಯ್ಯನೆ ನಿನ ... ಹೋಗಿ ... ಸುಗಂಧ ...

ಬಸವಲಿಂಗ ...

ದ ಅಥವಾ ಯಾವುದಾದರೊಂದು ಕಾರಣದಿಂದ ನಡುವೇ ನಪುಂಸಕತ್ವನಾದರೆ ಇದರಿಂದ ಖಾತ್ರಿಯಾಗಿ ನಿಟ್ಟನಾಗುತ್ತವೆ ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣಗಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ, ೧ ಬಾಟ್ಲಿಗೆ, ೧—೧೦—೦ ರೂ. ೬ ಬಾ ೨—೧೨—೦ ರೂ ೩. ಬಾ, ೩-೧೭-೧ ರೂ. ಮಿಷ್ಯಗಿಲೆ ೧ ಡಜನ್ನ ಬಾಟ್ಲಿ ತರಿಸುವವರಿಗೆ ೧೪ ರೂ. ಮೇಲೆ ೩. ಬಾಟ್ಲಿ ಇನಾಮು ಟ ೩. ಬೇರೆ.

ಪ್ರಾಗಮಾರ್ಗವು— ಇದರಿಂದ ಹ್ಯಾಷ್ಟವಸ್ಥೆಯು ... ನಾಗಿ ... ಹಾತ್ರದಿಂದ ನವಮುಂತ ಅಥವಾ ತರುವಾಯ ಹೋಗುವ ಧಾತು ಬಂದ ಆಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ ಕ್ರಯ ೧ ದಬ್ಬಿಗೆ ೧೪ ರೂ ೩. ದಬ್ಬಿಗೆ ಒಂದು ದಬ್ಬಿ ಇನಾಮು ಟ. ಖ. ಬೇರೆ.

ಮಲಮು— ಇದರಿಂದ ಹಳೇ ಗಜಕರ್ಣ, ಇಸಬು ಸಿಡ್ಡಿ, ದದ್ದು ಖಾತ್ರಿಯಾಗಿ ನಿಟ್ಟಗಾಗುವದು. ೧ ದಬ್ಬಿಗೆ ೪ ಆಣೆ. ೩ ದಬ್ಬಿಗೆ ೧ ದಬ್ಬಿ ಇನಾಮು ಟ ಖ. ಬೇರೆ

"ಪಾಚಕ."

("ಪಚನವಾಗುವ ಔಷಧವು.")

ಇದರ ಸೇವನೆಯಿಂದ ಪಚನಕ್ರಿಯೆಯು ಚೆನ್ನಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ ಬಾಯಿಗೆ ಒಂದು ತರದ ಉತ್ತಮ ರುಚಿ ಬರುತ್ತದೆ. ಕೆಮ್ಮಿನ ರೋಗಗಳು ... ೧ ಬಾ. ... ಬೇರೆ.

ನೇ ... ಅಂಜೀರಾಕ

ಧಾರವಾಡ

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

'ಯಃ ಶೂರಪುರಿ ತಾರಾ ವರಮಧಿಗತರಾಜಮಂಡಲಹಿತೈಷೀ ಘನಪಕ್ಷಕೃತಾವತಾರಾ ಪಶ್ಯಜ್ಞ ರೆ ಸ್ಪೃಷ್ಟ ಮೋದಹರಾಜ್ಯೋಯಾತಾ' ।
[illegible] ಮುಕಲಾಲೋಲಂ ಸುಧೀಪುಂಗವ । [illegible] ವಾಲಂ [illegible]
[illegible] ಸದ್ವೃತ್ತಮಾಲಾಕುಲಂ । [illegible] ಗೌರೀಶಾನುಕಂಪೋಜ್ಜ್ವಲಂ ॥

ಸಂಪುಟ ೨೮] ಮೈಸೂರ್ ಸ್ಟಾರ್ ಸನ್ ೧೯೧೧ ನೆಯ ಇಸವಿ ನವಂಬರ್ ತಾರೀಖು ೧೩ ನೆಯ ಸೋಮವಾರ. [ಸಂಚಿಕೆ ೪೬.

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೪೧)

8

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕನುಸಾರವಾಗಿ ಶ್ರೀಪರಶಿವ ದೇವತಾರಾಧನೆಯಿಂದ ಶ್ರೀ ರುದ್ರಮೂರ್ತಿಗೆ ಕರ್ಣಾಟಕ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ ಇದು ಶಿವಭಕ್ತ ಸಂಸ್ಕಾರವಾದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೪ ಆ
ವಿಳಾಸ ಮೈಸೂರು ಹಳೇಅಗ್ರಹಾರ
ನೊಪ್ಪರ ಕೊಳದ ಮನೆಯಲ್ಲಿರುವ ಶ್ರೀಕಂಠಾರಾಧ್ಯ

ಊದಬತ್ತಿಗಳು.

30

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧-೦-೦ ೫-೦-೦; ೩-೦-೦; ೨-೪-೦; ೧-೮-೦, ಕಸ್ತೂರಿ ಬಿಲೆ ತೊಲಾ ೧ ಕ್ಕೆ ೧-೦-೦, ಪುನು ಗಂಧ ತೊಲಾ ೧ ಕ್ಕೆ ೧೦ ಆಣೆ, ದಶಾಂಗಪೊಟ್ಟಣ ೧ ಕ್ಕೆ ೮ ಆಣೆ; ಧೂಪದ ಗಟ್ಟಿ ೧ ಕ್ಕೆ ೨ ಆಣೆ. ಬಾಲಗ್ರಹಧೂಪ ಟಿನ್ ೧ ಕ್ಕೆ ೪ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಕಾರಿ

ಸ್ವದೇಶಿ ! (ಸತ್ಯಮೇವಜಯತೆ) ಸ್ವದೇಶಿ !

20 ಗುಣವಾಗದಿದ್ದರೆ ಹಣವಾಪಸ್.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಿಗ ಗರ್ಭಪ್ರದಾಯಕ ಗುಪ್ತಬ್ರಹ್ಮೇಶದ ಹೊರಗೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ಶೀಘ್ರಗುಣವುಂಟಾಗಿ, ಶರೀರಕ್ಕೆ ನಿರೋಗಸ್ವಾಸ್ಥ್ಯ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು ಕಿನ್ನತಿತ್ತು ೧೦ ಗುಳಿಗೆಗಳಿಗೆ ೧ ರೂ ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೨ ರೂ ಗಳಿಗೆ ಕೊಡುವೆವು. ಟ ಪ. ೮ ಆಣೆ ಬೇರೆ ಅನುಭವಪತ್ರಿಕೆಯನ್ನು ಬಿಡುವರ ಸಂಗಡಲೇ ಕಳುಹಿಸುವೆವು ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವಸಾಮಾನ್ಯ ಕ್ಯಾಟಲಾಗ್ ಪುಕಟ ರವಾನಿಸುವೆವು ವಿಳಾಸ-
ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ. ಜಿಲ್ಲ ಉತ್ತರಕನಡಾ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು

ಶಿವಪೂಜಾವಿಧಿ	೦-೧೦-೦
ಶರಣಾದಿಗಜಾಂಕುಶಕಾರಾವಳಿ	೦-೪-೦
ಶಾರದಶೀಲೆ ಚರಿತ್ರೆ	೦-೫-೦
ಶರಬ್ಯಾಂತರ್ನ	೦-೮-೦
ಸಟೀಕಶಿವಾರ್ಚಕಶಬ್ದಮಂಜರಿ	೦-೬-೦
ಸಟೀಕ ಶಂಕರವ್ರತ	೦-೬-೦
ಸಟೀಕ ವಿವಾಹವಿಧಿ	೦-೩-೦
ವ್ರತಪಂಚಕ	೦-೩-೦
ವಿವೇಕದರ್ಪಣ	೦-೩-೦
ಮತ್ಸ್ಯಲವಿದ್ಯಾ (ಜ್ಯೋತಿಷ)	೦-೨-೦
ಗೌರೀಶಂಕರದೀಕ್ಷೆ	೦-೧-೦

೩೦ ಕಥೆಗಳು. ಸಚಿತ್ರ. ೫೧೨ ಪುಟಗಳು

ಶ್ರೀ ಕಸುಮ್ಮತಿ ಕಥೆಗಳು.

23

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು, (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, (೩) ಸ್ತ್ರೀಜಾತಿಪತಿವ್ರತಾಧರ್ಮ, ವರ್ಣಾಶ್ರಮಧರ್ಮ ಬೋಧಕಾನುಭವ, ವಿವಿಧನೀತಿ ಇವು ಇವುದನ್ನು, ತಿಳಿಸುವದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಿಕೆಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವದು. (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ (೮) ಕಥಾಸಂದರ್ಭಾನುಸಾರ ಭಾವವುಳ್ಳ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ೧ಕ್ಕೆ ರೂ ೧-೪-೦ ಅಂಚೆಹಾಸಲು ಬೇರೆ

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು; ಚಿತ್ರಪಟಗಳು, ದೊರೆಯುತ್ತವೆ. (ಪಟ್ಟಿ) [illegible]ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ.—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ

ಉತ್ತಮ ಗ್ರಂಥಗಳು.

18

ಒಸವರಾಜವಿಜಯ.—ಬೆಲೆ ವಿ. ಪಿ. ಮೀದ ೧ [illegible] ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ

ಬಿಸ್ವಬಸವೇಶವಿಜಯಂ ೧-೪-೦ ಬಿಸ್ವ [illegible] ದ ಕಥೆಗಳೆಲ್ಲಾ ವಿಭಾಗಕ್ಕೆ ಕಡುಬಿಯಿಂದ ಬರೆಯಲ್ಪಟ್ಟಿವೆ

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತೆ — ಇದು ವೀರಶೈವಮತದ ಒಬ್ಬ ಆಚಾರ್ಯರ ಚರಿತ್ರೆ, ೧ ನೆಯ ಪ್ರಕರಣಕ್ಕೆ ೧-೩-೦, ೨ ನೆಯ ಪ್ರಕರಣಕ್ಕೆ ೧ ರೂ

ವೀರಶೈವ ಧರ್ಮಶಿರೋಮಣಿ — ೧-೩-೦ ವೀರಶೈವ ಮತಸ್ವರೂಪ-ತದ್ಗ್ರಂಥ ಜನಾತ್ಮ ವಿವರ್ಣಿಸಲ್ಪಟ್ಟಿವೆ (ಸವ್ಯಾಖ್ಯಾನ)

[illegible] ಪುರಾಣಂ — ೧-೨-೦ [illegible] ನ ಕಥೆಯನ್ನು ಅನೇಕ ಉಪಕಥೆಗಳೊಡನೆ ವಿವರಿಸಿ [illegible] ವ್ಯಾಖ್ಯಾನದ ಪಟ್ಟದಿಕಾಸ್ತ್ರ

ಸಟೀಕ ತತ್ವಪ್ರಕಾಶಿಕಾ. ೬ ಆಣೆ [illegible] ಸಾರವಾಗಿ ೩೬ ತತ್ವಗಳ ಸ್ವರೂಪ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ

ಸಟೀಕ ಶಿವಸೂತ್ರರತ್ನ— [illegible] ಜ್ಞಾನ [illegible] ದೀಕ್ಷೆ [illegible] ಸಂಗತಿಯೂ [illegible] ಮವಾಗಿ ವಿವರಿಸಲ್ಪಟ್ಟಿವೆ ಬೆಲೆ ೬ ಆಣೆ,

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳ [illegible] ದೆ ಬೆಲೆ ೧೦ ಆಣೆ

ಸ್ತುತಿ ಮುಕ್ತಾವಳಿ ೩ ಕರ್ಣಾಟ [illegible] ಗದ್ಯಾದಿಗಳಿವೆ ೬ ಆಣೆ

ರತ್ನಾಕರಶತಕಂ ೨ ಆಣೆ ಶಂಕರಲಿಂಗ [illegible] ೧ ಆಣೆ

ವೀರಶೈವ ಗ್ರಂಥಪ್ರಕಾಶಿಕಾ [illegible] ಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ [illegible] ಪುಟಗಳು [illegible]

[illegible]

[illegible]

ಇಲ್ಲಿನೋಡಿ ವಿಶೇಷ ಸೂಚನೆಗಳು !
4 ಕಾಶೀವಿಶ್ವೇಶ್ವರಪ್ರಸನ್ನ

[illegible] V[illegible] [illegible] [illegible] CITY

[illegible] ಗಮನಿಸಿರಿ!

ತಾವು ನಿತ್ಯವೂ [illegible] ? [illegible] ಅಲ್ಲವೇ! [illegible] ?
[illegible]

ಮತ್ತು [illegible] ಸೀರೆ [illegible] ಮನೋರಂಜಕವಾಗಿಯೂ ಇರುವದು ಬನಾರಸ್ ಪೀತಾಂಬರ ಅಲ್ಲವೆ [illegible] !

ಈ ಕಾಗದದಲ್ಲಿ ಬೇಗನೆ ತರಿಸಿಕೊಳ್ಳಿರಿ ವಿಳಂಬಮಾಡಬೇಡಿರಿ !! ನಮ್ಮಲ್ಲಿ [illegible] ವಿವರ — [illegible] ಬನಾರಸ್ [illegible] ಇದರಲ್ಲಿ [illegible] ಇರುವುದು, ಮತ್ತು [illegible] ಜಾಗತಿ, [illegible] ಮುಂತಾದ [illegible] ಅನೇಕತರದ [illegible] ಎಲ್ಲಾ [illegible] ಕ್ರಯಕ್ಕೆ [illegible] ಕಳುಹಿಸುವೆವು [illegible] ಕ್ರಯದ ವಿವರ ತಿಳಿಯಬೇಕಾದಲ್ಲಿ [illegible] ಅರ್ಧಾಣೆ ಸ್ಟಾಂಪು [illegible] ಕಾಶೀವಿಶ್ವೇಶ್ವರನ [illegible] ಆದ್ದರಿಂದ, [illegible] ಖರೀದಿ ಮಾಡುವ [illegible] ವಿಳಾಸವನ್ನು [illegible]

ನಮ್ಮ ವಿಳಾಸ:—
[illegible]
[illegible]

ಕೃಷಿ ವ್ಯಾಪಾರ ವಿಷಯಗಳು.

ಹತ್ತಿಯ ದಂಡವನ್ನು ಕೊರೆಯುವ ಹುಳುಗಳು.

ಹತ್ತಿಯ ಗಿಡಗಳಲ್ಲಿ ಹೂ ಬಿಡಲು ಆರಂಭವಾದಾಗಿನಿಂದ ಹತ್ತಿಯನ್ನು ಬಿಡಿಸಿ ತೆಗೆಯುವವರೆಗೂ ಜಮೀನಿನ ಸ್ಥಳಗಳಲ್ಲಿ ಅಲ್ಲಲ್ಲಿ ಒಂದೊಂದು ಗಿಡವು ಬಾಡಿ ಕ್ರಮೇಣ ಸತ್ತು ಹೋಗುವುದನ್ನು ಅನೇಕರು ನೋಡಿರಬಹುದು. ಸಿದ್ಧಾಂತವಾಗಿ ಹೀಗಾಗುತ್ತದೆಂದು ಅವರು ಆಕ್ಷೇಪಣೆ ಮಾಡಬಹುದು. ಆದರೆ ಈ ರೀತಿ ಬಾಡಿ ಸತ್ತುಹೋದ ಗಿಡವನ್ನು ಕಿತ್ತು ನೆಲದ ಬಳಿಯಿರುವ ಭಾಗವನ್ನು ಕತ್ತರಿಸಿ ನೋಡಿದರೆ ದಂಡಿನ ಮಧ್ಯಭಾಗದಲ್ಲಿ ಕೊರೆದಿರುವುದನ್ನು ಅವರು ನೋಡಬಹುದು. ಈ ತೂತಿನಲ್ಲಿ ಹುಳುಗಳು ಇರುತ್ತವೆ. ಗಿಡವನ್ನು ನಾಶಮಾಡಿದವು ಈ ಹುಳುಗಳೇ.

ಈ ಹುಳುಗಳು ಗಿಡದ ದಂಟಿನ ಕೆಳಭಾಗದಲ್ಲಿ ಚಿಟ್ಟೆಯು ಇಟ್ಟ ಮೊಟ್ಟೆಗಳಿಂದ ಹುಟ್ಟಿ ಸಿಪ್ಪೆಯನ್ನು ಒಡೆದುಕೊಂಡು ಒಳ್ಳಗಿನ ದಂಟಿನೊಳಕ್ಕೆ ಪ್ರವೇಶಿಸುವವು. ಅನಂತರದಲ್ಲಿ ದಂಟಿನ ಒಳಭಾಗದಲ್ಲಿರುವ ತಿರುಳನ್ನು ತಿನ್ನುತ್ತಾ ದಂಟಿನ ಮಧ್ಯಭಾಗದಲ್ಲಿ ಉದ್ದಕ್ಕೂ ಗುಂಡಾದ ಒಂದು ತೂತನ್ನು ಮಾಡುವವು. ಅಗ್ಗಿ ಗಿಡದ ನೀರಲು ಬಾಡುವುದಕ್ಕೆ ಪ್ರಾರಂಭವಾಗಿ ಕ್ರಮೇಣ ಸತ್ತು ಹೋಗುವುದು. ಹುಳುವು ಬೆಳ್ಳಗೂ ಮೆತ್ತಗೂ ಸುಮಾರು ಒಂದು ಅಂಗುಲ ಉದ್ದವಾಗಿಯೂ ಇರುವುದು. ಇದರ ಶರೀರವು ಬೆಳ್ಳಗೂ ತಲೆಯು ಮಾತ್ರ ಸ್ವಲ್ಪ ಕಪ್ಪಾಗಿಯೂ ಮತ್ತು ನಯವಾಗಿಯೂ ಇರುವುದು. ಈ ಹುಳುವು ಪ್ರಾಣಿರೂಪದ ಬಳಿಕ ಕೋಶವಾಗಿ ಅನಂತರ ಚಿಟ್ಟೆಯಾಗಿ ದಂಡವನ್ನು ಕೊರೆದುಕೊಂಡು ಹೊರಕ್ಕೆ ಬಂದು ಸ್ವಲ್ಪ ಕಾಲದಲ್ಲಿ ೭ ಕಾಲುಗಳೂ, ೪ ರೆಕ್ಕೆಗಳೂ ಮತ್ತು ೨ ಮೀಸೆಗಳೂ ಉಳ್ಳ ಚಿಟ್ಟೆಯಾಗುವುದು. ಹೆಣ್ಣು ಚಿಟ್ಟೆಯು ಮೊಟ್ಟೆಗಳನ್ನಿಟ್ಟು ಸತ್ತು ಹೋಗುವುದು.

ನಿವಾರಣೋಪಾಯ:— ಬಾಡಿ ಹೋದ ಗಿಡಗಳನ್ನೆಲ್ಲಾ ಕ್ರಮವಾಗಿ ತಪ್ಪದೆ ಕಿತ್ತು ಹಾಕಿದರೆ, ರೋಗವು ಸಂಪೂರ್ಣವಾಗಿ ನಿಂತು ಹೋಗುವುದು. ಹುಳುವು ಗಿಡದಿಂದ ಹೊರಗೆ ಬರುವದಕ್ಕೆ ಮೊದಲೇ ಬಾಡಿದ ಗಿಡಗಳನ್ನೆಲ್ಲಾ ಬೇರು ಸಹಿತ ಕಿತ್ತು ಸುಟ್ಟು ಬಿಡುವುದು ಬಹಳ ಸುಲಭ. ಹತ್ತಿಯ ಸಾಗುವಳಿದಾರರೆಲ್ಲರೂ ರೋಗವು ತಲೆದೋರಿದ ತರುಣದಲ್ಲಿಯೇ ತಪ್ಪದೆ ಮೇಲ್ಕಂಡಂತೆ ಮಾಡಿದುದೇ ಆದರೆ, ರೋಗದ ಹುಟ್ಟೇ ಇಲ್ಲದಂತಾಗುವುದು.

ಅಲಸಂದೆ.

ಈ ಧಾನ್ಯವನ್ನು ಅಮೇರಿಕಾ ದೇಶದವರು ಬಹಳ ಹೇರಳವಾಗಿ ಬೆಳೆಯುವರು. ಇದು ಭೂಮಿ ನೀಳು ಜಮೀನುಗಳ ಫಲ ಸೊಂಪಾಗಿ ಬೆಳೆಯುವುದು ಮತ್ತು ಬಹಳ ಮಟ್ಟಿಗೆ ಅನಾವೃಷ್ಟಿಯನ್ನು ತಡೆಯುವುದು. ಇದು ಎಳೆಯದಾಗಿದ್ದಾಗ್ಗೆ ಜನರು ಇದನ್ನು ಪಲ್ಯವಾಗಿ ತಿನ್ನುವರು. ಇದು ಜಮೀನನ್ನು ಬಹಳ ಫಲವತ್ತಾಗಿ ಮಾಡುವದೆಂಬ ಅಂಶವನ್ನು ನಮ್ಮ ರೈತರುಗಳೆಲ್ಲರೂ ತಿಳಿದುಕೊಂಡಿರುವಂತೆ ತೋರುವದಿಲ್ಲ. ಇದರ ಉಪಯೋಗ ಬಹಳ ಉತ್ತಮವಾದ ಹಸಿರುಗೊಬ್ಬರವಾಗಿರುವುದು. ಅಮೇರಿಕಾ ದೇಶದವರು ಮೇಲ್ಕಂಡ ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿರುವುದರಿಂದ ಹಳೆ ಜಮೀನು ಎಲ್ಲೆ ವರುಷಗಳಿಂದಲೂ ಈ ಧಾನ್ಯವನ್ನು ಬಹಳವಾಗಿ ಬೆಳೆಯುತ್ತಿದ್ದಾರೆ.

ಇದನ್ನು ಸ್ಥಳದಲ್ಲಿಯೇ ಹಾಕುವದರಿಂದ ಉಂಟಾಗತಕ್ಕ ಪ್ರಯೋಜನಗಳನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸಿದೆ —

(೧) ಅಲಸಂದೆಯು ಯವಕ್ಷಾರ (Nitrogen)ವನ್ನು ಕೂಡಿಡುತ್ತದೆ. (೨) ಇದನ್ನು ಸಲಿಸಿ ಭೂಮಿಯ ಪಿಡಿಗಳಿಗೆ ಬೇಕಾದ ಪದಾರ್ಥಗಳನ್ನು ವನಸ್ಪತಿ ಸಸ್ಯಗಳಿಗೆ ಬೇಕಾಗುವ ಭೂಮಿಯ ಜೀವಸತ್ವವು ಹೆಚ್ಚುತ್ತಿರುವುದು, ಮತ್ತು ಮುಂದಿನ ಬೆಳೆಗೆ ಅನುಕೂಲವಾಗುವಂತೆ ಭೂಮಿಯನ್ನು ಸಡಲಿಸುವುದು. (೩) ಇದರ ಉದ್ದವಾದ ಬೇರುಗಳು ಭೂಮಿಯಲ್ಲಿ ಬಹು ಆಳವಾಗಿಯೂ ಮತ್ತು ಸುತ್ತ ಮುತ್ತಲೂ ಹಬ್ಬಿ, ಅಲ್ಲಿದ್ದ ಸತ್ವವನ್ನು ಹೀರಿ ಮೇಲಕ್ಕೆ ತರುವುವು. (೪) ಇದು ಜೀವದಾಯಕ ಮತ್ತು ಸುಡುವ ಪ್ರದೇಶಗಳಲ್ಲೂ ಸಹ ಬೆಳೆಯುವುದು. (೫) ಭೂಮಿಯು ಬಹಳ ಒಣಗಿ ನೀರು ಹೀರಿಕೊಳ್ಳುತ್ತದೆ. (೬) ಇದು ಜಾಗ್ರತೆಯಾಗಿ ಬೆಳೆಯುವುದರಿಂದ ಬಂದ ಜಮೀನಿನಲ್ಲಿ ಕಳೆಯು ಬೆಳೆಯದಂತೆ ಮಾಡುವುದು. (೭) ಬಹಳ ಒತ್ತಾಗಿ ಬೆಳೆಯುವದರಿಂದ ಕಳೆಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡುವುದು. (೮) ಜಮೀನುಗಳಲ್ಲಿ ಇತರ ಬೆಳೆಗಳನ್ನು ಬೆಳೆಯುವದಕ್ಕೆ ಹಿಂದಿನ ಕಾಲದಂತೆ ಭೂಮಿಯನ್ನು ಹದಮಾಡುವುದು. (೯) ಮುಂದಿನ ಬೆಳೆಗೆ ...

ಮುಂದಿನ ಬೆಳೆಗೆ ಬೇಕಾದ ಪದಾರ್ಥಗಳೂ ಇದು ಭೂಮಿಯಲ್ಲಿ ಹಾಕುವುದಕ್ಕೆ ಬಹಳ ಉಪಯುಕ್ತವಾಗಿ ಹಸಿರುಗೊಬ್ಬರವನ್ನು ಒದಗಿಸಿ ಕೊಡುವುದು.

ಮೇಲ್ಕಂಡ ವಿಷಯಗಳನ್ನೆಲ್ಲಾ ವಿಚಾರ ಮಾಡಿ ನೋಡಿದರೆ, ಅಲಸಂದೆಯನ್ನು ಹಾಕುವುದರಿಂದ ಬೆಳೆಯು ಮತ್ತು ಭೂಮಿಯ ಸತ್ವವೂ ಹೆಚ್ಚುವಂತೆ ತೋರುತ್ತದೆ. ಆದದರಿಂದ ರೈತರು ತಮ್ಮ ತಮ್ಮ ಜಮೀನುಗಳಲ್ಲಿ ಇದನ್ನು ಬೆಳೆಸಿ ಪ್ರಯೋಜನ ಹೊಂದಬಹುದು.

ಆಲೂಗೆಡ್ಡೆಗಳ ವ್ಯವಸಾಯ.

ಸಂಪೂರ್ಣವಾಗಿ ಕತ್ತಲಾದ ನೆಲಮಾಳಿಗೆಗಳಲ್ಲಿ ಮರದ ಪೆಟ್ಟಿಗೆಗಳ ಮೇಲೆ ಹುಲ್ಲನ್ನು ಹಾಸಿ, ಒಣಗಿದ ಮಣ್ಣನ್ನು ತುಂಬಿ ಆಲೂಗೆಡ್ಡೆಯನ್ನು ಬೆಳೆಯುವ ಒಂದು ಹೊಸ ಕ್ರಮವು ಕಲವು ದಿನಗಳಿಂದೀಚೆಗೆ ಬಹಳ ಪ್ರಚಲಿತವಾಗಿದೆ. ಈ ರೀತಿ ವ್ಯವಸಾಯ ಮಾಡುವದಕ್ಕೆ ಬೆಳಕು ಸ್ವಲ್ಪವೂ ತಗಲಕೂಡದು ಮತ್ತು ಹಾಗೆ ಬೆಳಕು ಬಿದ್ದರೆ ಆಲೂಗೆಡ್ಡೆಗಳು ಹೊರಡುವದಕ್ಕೆ ಬದಲಾಗಿ ನೆಟ್ಟ ಗೆಡ್ಡೆಗಳಿಂದ ಮೊಳಕೆಗಳು ಬೆಳೆಯುವುವು. ಇದರಿಂದ ಬಹಳ ನಷ್ಟವಾಗುವುದು. ಈ ಕ್ರಮದ ವ್ಯವಸಾಯದಲ್ಲಿ ಆಲೂಗೆಡ್ಡೆಯನ್ನು ಬೆಳೆಯುವುದರಿಂದ ಪ್ರಯೋಜನವೇನೆಂದರೆ, ಚಳಿಗಾಲದಲ್ಲಿ ಮತ್ತು ಉಷ್ಣಕಾಲದಲ್ಲಿ ಇದನ್ನು ಬೆಳೆಯುವುದಕ್ಕೆ ಅವಕಾಶವಿರುವುದು. ಸಾಮಾನ್ಯವಾಗಿ ಬೆಳೆದ ಗೆಡ್ಡೆಗಳು ಜಮೀನುಗಳಲ್ಲಿ ಬೆಳೆಯುವ ಆಲೂಗೆಡ್ಡೆಗಳಿಗಿಂತ ದಪ್ಪವಾಗಿಯೂ, ರುಚಿಯಾಗಿಯೂ ಇರುವವು ಅಲ್ಲದೆ ಇವುಗಳ ಸಿಪ್ಪೆಗಳು ಬಹಳ ತೆಳುವಾಗಿರುವುದರಿಂದ ಬೇಯಿಸುವದಕ್ಕೆ ಮುಂಚೆ ಸಿಪ್ಪೆಯನ್ನು ಸುಲಿಯ ಬೇಕಾದುದಿಲ್ಲ.

ಎಲ್ಲಾ ಜಾತಿಯ ಆಲೂಗೆಡ್ಡೆಗಳನ್ನೂ ಮೇಲ್ಕಂಡ ರೀತಿಯಲ್ಲಿ ಬೆಳೆಯಬಹುದು. ದಪ್ಪನಾದ ಮತ್ತು ಒಂದು ವರುಷಕ್ಕೆ ಮುಂಚೆ ತೆಗೆದಿಡಲ್ಪಟ್ಟ ಆಲೂಗೆಡ್ಡೆಗಳನ್ನು ಬಿತ್ತನೆಗೆ ಆರಿಸಿಟ್ಟುಕೊಳ್ಳಬೇಕು. ಪೂರ್ಣವಾಗಿ ಕತ್ತಲಾಗಿರುವ ನೆಲಮಾಳಿಗೆಗಳಲ್ಲಿ ಮರದ ಮೇಜುಗಳನ್ನು ಹಾಕಿ ಅವುಗಳ ಮೇಲೆ ಎರಡು ಮೂರು ಅಂಗುಲಗಳ ಮಂದವಾಗಿ ಚೆನ್ನಾಗಿ ಶೋಧಿಸಲ್ಪಟ್ಟ ಸಣ್ಣನಾದ ಒಣಗಿದ ಮಣ್ಣನ್ನು ಹರಡಬೇಕು. ಸುಮಾರಾಗಿ ಸಡಿಲವಾದ ಸ್ಪಂಜಿನಂಥ ಆಲೂಗೆಡ್ಡೆಗಳನ್ನೆಲ್ಲಾ ಚೆನ್ನಾಗಿ ಎರಚಬೇಕು. ಯಾವುದಾದರೊಂದು ಆಲೂಗೆಡ್ಡೆಯಲ್ಲಿ ಮೊಳಕೆಗಳು ಹೊರಟಿದ್ದರೆ ಆ ಮೊಳಕೆಗಳನ್ನೆಲ್ಲಾ ಗೆಡ್ಡೆಗೆ ಸ್ವಲ್ಪವೂ ಘಾಸಿಯಾಗದಂತೆ ಕತ್ತರಿಸಬೇಕು. ಅನಂತರ ಆ ಗೆಡ್ಡೆಗಳನ್ನು ಒಂದೊಂದಾಗಿ ಮಣ್ಣಿನಲ್ಲಿ ಸುಮಾರು ನಾಲ್ಕು ಅಂಗುಲಗಳ ದೂರವಾಗಿ ಕೂಡು ನೆಲದಿಂದ ಅರ್ಧ ಮಟ್ಟಿಗೆ ಮೆಟ್ಟಿ ನೆಲದಲ್ಲಿ ಹೂಳಬೇಕು.

ಮೇಲ್ಕಂಡಂತೆ ಕೆಲಸವನ್ನು ಮಾಡಿದರೆ, ಗಿಡದ ಸ್ಥಳದ ರೀತಿಯ ಮೇಲೆ ಮೂರು ವಾರಗಳೊಳಗಾಗಿ ಫಲ ಕಾಣುವುದು. ಕೆಂಪು ಹೂಗಳು ತೋರುವುದಿಲ್ಲ, ಹಸಿರು ಬಣ್ಣವುಳ್ಳ ಮುಖ್ಯವಾಗಿ ಜಮೀನುಗಳಲ್ಲಿ ಆಲೂಗೆಡ್ಡೆಗಳನ್ನು ಬೆಳೆಯುವ ಪದ್ಧತಿಯಂತೆ ಹಾಗೆ ಕ್ರಮವೂ ಪಡವೇಕಾಗಿಲ್ಲ. ಆರಂಭದಲ್ಲಿ ಗೆಡ್ಡೆಗಳನ್ನು ತೆಗೆದು ಅವುಗಳ ಮೇಲೆ ಮಣ್ಣು ಹಾಕಿ ಬೆಳೆಸಬೇಕು. ಎರಡು ಮೂರು ವಾರಗಳ ತರುವಾಯ, ಆ ಸ್ಥಳದ ಗೆಡ್ಡೆಗಳ ಮೇಲೆ ಅನೇಕ ಬಿಳುಪಾದ ಬಳ್ಳಿಗಳು ಕಂಡು ಬರುವುವು. ಇದಾದ ಕೆಲವು ದಿವಸಗಳಲ್ಲಿ ಈ ಬಳ್ಳಿಗಳು ದಪ್ಪವಾಗಿ ಬಹಳ ಜಾಗ್ರತೆಯಾಗಿ ಗೆಡ್ಡೆಗಳಾಗುವುವು. ಆ ದಶೆಯಲ್ಲಿ ಅನೇಕವಾದ ಗೆಡ್ಡೆಗಳು ಸಿಕ್ಕುವವು ಬಿದ್ದ ನಾದಾಗ ಅವುಗಳನ್ನೆಲ್ಲಾ ಕತ್ತರಿಸಿಕೊಂಡು ತೆಗೆಯಲು ಸಿದ್ಧವಾದ ಗೆಡ್ಡೆಗಳನ್ನು ಪುನಃ ಅಲ್ಲಿಯೇ ನೆಟ್ಟು ಬಿಟ್ಟರೆ ಅವುಗಳಿಂದ ಪುನಃ ಹೊಸ ಗೆಡ್ಡೆಗಳು ಹುಟ್ಟುತ್ತವೆ. ಇಂಥವು ಈ ರೀತಿಯಾಗಿ ಎಂಟುವರ್ಷ ಬಿತ್ತನೆಯಿಂದಲೇ ಎರಡು ಅಥವಾ ಮೂರು ಬೆಳೆಗಳನ್ನು ತೆಗೆಯಬಹುದು. ಬಿತ್ತನೆಯ ಗೆಡ್ಡೆಗಳ ಮೇಲೆ ಇಲ್ಲವೂ ತೋರ ಸಿಗಿದು ಸಿಪ್ಪೆ ಮಾತ್ರ ನಿಲ್ಲುವವರೆಗೂ ಹೊಸ ಗೆಡ್ಡೆಗಳು ಹುಟ್ಟುತ್ತಲೇ ಬರುವವು. ಆಗಿಂದಾಗ್ಗೆ ಗೆಡ್ಡೆಗಳ ಮೇಲೆ ಮೊಳಕೆಗಳು ಹೊರಡುತ್ತಿರುವುದು. ಇವಾ ಮೊಳಕೆಗಳನ್ನು ಕತ್ತರಿಯಿಂದ ಕತ್ತರಿಸಿ ಹಾಕಬೇಕು. ಈ ಕೆಲಸಕ್ಕಾಗಿ ನೆಲಮಾಳಿಗೆಯೊಳಕ್ಕೆ ಹೋಗಿ ಬರುವಾಗ ಸೂರ್ಯನ ಬೆಳಕು ಒಳಕ್ಕೆ ಸ್ವಲ್ಪವಾದರೂ ಪ್ರವೇಶಿಸದಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕೆಂದು ಹೇಳಬೇಕಾಗಿದೆ.

ತುರ್ಕಿ—ಇಟಲಿಗಳ ಯುದ್ಧವು.

ನವೆಂಬರ್ ತಾ॥ ೭—ಮೆಸಿನೋನಿಯ, ಸಿರಿಯ ಅಥವಾ ತುರ್ಕಿಯವರ ಅಧಿಕಾರದಲ್ಲಿರುವ ಇವುಗಳ ಮೇಲೆ ಯುದ್ಧ ಕಾರ್ಯಭಾಗವನ್ನು ನಡೆಸಲು ಇಟಲಿಯವರು ಟರ್ಕಿಯ ಎಲ್ಲಾ ಸಿದ್ಧವಾಗಿಟ್ಟಿರುವ ನಾವೆಗಳಿಗೆ ೧ ತಿಂಗಳಿಗೆ ಬೇಕಾಗುವಷ್ಟು ಕಲ್ಲಿದ್ದಲನ್ನು ಕೇಳಿದ್ದಾರೆ.

ಹಡಗುಗಳು ಈ ಕಲ್ಲಿದ್ದಲು ತೀರಿದ ಕೂಡಲೇ ಇಟಲಿ ಹೋಗಿ ತುಂಬಿಕೊಂಡು ಬರಬೇಕಾದಾವಶ್ಯಕತೆಯು ತಪ್ಪಿತು.

ತಾ॥ ೮—ಇಟಲಿಯು ರಾಜಕೀಯ ಸಮುದ್ರದಲ್ಲಿರುವ ದ್ವೀಪಗಳನ್ನು ಸ್ವಾಧೀನಪಡಿಸಿಕೊಳ್ಳುವ ಯೋಚನೆಯನ್ನು ಬಿಟ್ಟು ಸಿರಿನಾಯದ ದಡದಲ್ಲಿ ನಾವೆಯ ಪ್ರಯೋಗವನ್ನು ನಡೆಸುವದಾಗಿದೆ. ಕಾಡಿನ ಪ್ರದೇಶದ ಸೇನೆಯು ಸುಮಾರು ಅರೇಬಿಯ ಪ್ರದೇಶಗಳನ್ನು ವಶಪಡಿಸಿಕೊಂಡು ಸೇನೆಯ ಸಂಗಡವೂ ಟ್ರಿಪೋಲಿಗೆ ಹೋರಡಲಿದ್ದಾರೆ. ಟ್ರಿಪೋಲಿಗೆ ಬಂದಂಥ ಸೇನೆಯ ಗುಂಪುಗಳು ಬಂದು ಸೇರುವವರಾಗಿ ಇದ್ದರಾವ ಅರಬ ಯುವಕರು ತಾವು ಕದನದ ಚೇತರಿಕೆಯನ್ನು ಸಹಿಸಿಕೊಂಡು ಹೋರಾಡುವ ತುರ್ಕಿಯರಿಗೆ ತಮ್ಮನ್ನು ಬಲವಂತಪಡಿಸುತ್ತಾರೆಂದು ದೂರುತ್ತಾರೆ. ತುರ್ಕಿಯವರಿಗೆ ಸಹಾಯವನ್ನು ಕೊಟ್ಟಿರುವ ಇಟಲಿಯವರ ಪ್ರತಿನಿಧಿಯಾದ ಧಿಯಡೋರ್ ಎಂಬವರು ತುರ್ಕಿಯನ್ನು ಬಿಟ್ಟು ಹೋಗುವಂತೆ ಅಪ್ಪಣೆ ಮಾಡಲ್ಪಟ್ಟಿರುತ್ತಾನೆ. ಟ್ರಿಪೋಲಿಯಲ್ಲಿ ಇಟಲಿಯವರ ಅರಬ್ಬಿಯವರನ್ನು ನಿರ್ದಾಕ್ಷಿಣ್ಯದಿಂದ ಪ್ರಾಣಾಂತಶಿಕ್ಷೆಗೆ ಗುರಿಮಾಡುವುದು ಎಲ್ಲಾ ರಾಷ್ಟ್ರಗಳ ಹೇಗ್ ಎಂಬಲ್ಲಿ ಎಲ್ಲಾ ರಾಷ್ಟ್ರಗಳ ಪರಿಗಣನೆ ನಿಯಮಗಳಿಗೆ ವಿರುದ್ಧವಾಗಿರುತ್ತದೆಂದು ತಿಳಿಯುತ್ತ ಎಲ್ಲಾ ರಾಷ್ಟ್ರಗಳಿಗೂ ದೂರಿಕೊಂಡಿರುತ್ತಾರೆ. ತುರ್ಕಿ ಸರಕಾರವು ಪ್ರಯೋಜನದಲ್ಲಿ ಸ್ಥಿತಿಗತಿ ಪ್ರಜೆಗಳು ಇಟಲಿಯವರ ಕಾರ್ಯಗಳನ್ನು ಖಂಡಿಸಬೇಕೆಂದು ಕಳಕಳಿಯಿಂದ ಬೇಡುವ ತಂತಿ ಚಿತ್ರಾರ್ಥ ಗೆಜೆಟ್ಟಿನಲ್ಲಿ ಪ್ರಕಟಿಸಿದ್ದಾರೆ.

ತಾ॥ ೯ ಕಳೆದ ಶನಿವಾರ ದಿನ ಎರಡನೆಯ ಸಲವೂ ದೆರ್ನಾದಲ್ಲಿ ಇಟಲಿಯವರ ಮೇಲೆ ತುರ್ಕಿಯವರು ಮತ್ತೂ ಅರಬ್ಬಿಯವರು ಹೆಚ್ಚಾಗಿ ಸುಮಾರು ೨೦೦೦ ಜನರ ವರೆಗೆ ಮೊತ್ತವಿದ್ದು ಅತ್ಯಧಿಕ ಬಲವಾಗಿ ಎರಗಿ ಇಟಲಿಯವರ ಮೇಲೆ ಬಿದ್ದು ೧೦೦ ವರೆಗೆ ಇಟಲಿಯವರನ್ನು ಕೊಂದು ಗಾಯಪಡಿಸಿದರು, ಮತ್ತೂ ಮರುಭೂಮಿಯಲ್ಲಿ ಇರುವ ಒಳ ಇರುವ ಗ್ರಾಮಗಳನ್ನು ಬಿಟ್ಟೋಡಿಸಿದರು. ಇಟಲಿಯವರು ತಾ॥ ೭ ರಲ್ಲಿ ೫೫೦೦೦ ಗಡದ ವರೆಗೆ ಮುಂದಿದ್ದವರು ಈಗ ೩೦೦೦ ಗಡದ ವರೆಗೆ ಹಿಂಜರಿದಿರುತ್ತಾರೆ. ತುರ್ಕಿಯವರು ತಮ್ಮ ಫಿರಂಗಿಗಳನ್ನು ಮುಂದೆ ಸಾಗಿಸಿ ತೆಗೆದುಕೊಂಡು ಬಂದು ಇಟಲಿಯವರ ಮೇಲೆ ಗುಂಡನ್ನು ಹೊಡೆಯುತ್ತಿದ್ದಾರೆ ಎಂದು ಕ್ಷಣಕ್ಷಣಕ್ಕೂ ತಂತಿಯ ಮೂಲಕ ವರ್ತಮಾನವನ್ನು ಕೊಡುವ ವರ್ತಮಾನ ಪತ್ರಗಳು ತಿಳಿಸುತ್ತಾರೆ. ಇಟಲಿಯವರು ಬಹು ಹಿಂದಕ್ಕೋಡಿಸಲ್ಪಟ್ಟಿರುವುದರಿಂದ ಸಮುದ್ರದ ಮೇಲಿನ ಪಡೆ ಮುಂದಕ್ಕೆ ಹೋಗಲು ಯತ್ನಿಸಲಿಲ್ಲವಾಗಿದೆ, ಮತ್ತೂ ಮರುಭೂಮಿಯೊಳಗೆ ಪ್ರವೇಶಿಸುವ ಹೊಂಚನ್ನು ರದ್ದಿನಲ್ಲಿ ಬಿಟ್ಟಿದ್ದಾರೆ. ಟ್ರಿಪೋಲಿಯಲ್ಲಿರುವ ಸೇನಾ ಜನರಲ್ಲಿ, ಇತರರಲ್ಲಿ ಕಾಣಿಸಿದ ರೋಗವು ಅಂಟುರೋಗವೆಂದು.

ಮೆಸರ್ಸ್ ವಿ ಪಿ ಮಾಧವರಾಯರು, ಪಿ. ಶ್ರೀನಿವಾಸಯ್ಯಂಗಾರರು, ರಾ॥ ಬ॥ ಎ. ಗಂಗಸ್ವಾಮಯ್ಯಂಗಾರರು, ಧರ್ಮ್ಸ ಎಂ ಗೋಕುಲದಾಸರು ಮತ್ತೂ ಅವರ ಪಿ ಜನ ಮಕ್ಕಳು, ನರೋತ್ತಮ ಗೋಕುಲದಾಸರು ಮತ್ತೂ ಅವರ ಮಗ, ಎಚ್. ಪಿ ಮಾಂಡಲಿಕ್‌ರವರು, ವಿಚ್ ಎ ಲಾವರ್ಸ್‌ರವರು, ಎ ಬಾಮಯ್ಯಾಜಿ ಅರಸಿನವರು, ಎ ಪಿ. ಸುಬ್ರಹ್ಮಣ್ಯರಾಜ ಅರಸಿನವರು, ಎಚ ನಂಜುಂಡರಾಜ ಅರಸಿನವರು, ಎಚ್ ಲಿಂಗರಾಜ ಅರಸಿನವರು, ಎಚ್. ಸಿ ಲಿಂಗರಾಜ ಅರಸಿನವರು, ಬಿ ಪುಟ್ಟಯ್ಯಾಜಿ ಅರಸಿನವರು, ಎಚ್. ಚಿಕ್ಕೇಅರಸಿನವರು, ಡಾಕ್ಟರ್ ಬಾರ್ಲ ದಂಪತಿಗಳು ಪಿಕ್ಕಿಂಗ್‌ಟನ್ ದಂಪತಿಗಳು, ಮಿಸ್ಟರ್ ಸ್ಪಿರಿಂಗ್ ದಂಪತಿಗಳು, ಕೊಳ್ಳೆಗಾಲದ ಜಮೀನ್ದಾರರು, ಮಾಂಡ್ಯದ ಆರ್. ಎಚ್. ಅಯ್ಯಂಗಾರರು, ಬಿ ವೆಂಕಟರಾಮಯ್ಯನವರು, ಬಿ. ನರಸಿಂಗರಾಯರು, ಸೆಯದ್ ಹಸೇನರವರು, ಇಡ್‌ಮ್ಸ್, ಸ್ಮಿತ್ ಮತ್ತೂ ಸ್ಟಿಕ್ಸ್ ಇವರುಗಳ ಪತ್ನಿಯರುಗಳು, ಕ್ಯಾಂಬಲ್‌ರವರ ಪತ್ನಿಯವರು ಮತ್ತೂ ಮಗಳು, ಪಾಳೆಯಗಾರರ ಪ್ರತಿನಿಧಿಗಳಾದ ಬಿ. ಜಿ. ಕುಮಾರಸ್ವಾಮಿನಾಯಕರು, ಜಿ. ಎಚ್. ಕ್ರಿಮ್ಲಿಗಲ್ ದಂಪತಿಗಳು, ಮಹಾರಾಜಾವರ ಬಾಡಿಗಾರ್ಡ್ ಕಮ್ಯಾಂಡೆಂಟ್ ಎಲ್. ಗೋಪಾಲರಾಯರು, ಬಾಸ್ಸಮುಖದ ಮೊಕ್ತೇಸರ್ ಎಂ ಮುದ್ದರಾಜ ಅರಸಿನವರು, ಹುಜೂರ್ ಕಾಂಟ್ರಾಕ್ಟರ್ ಎಂ. ಸಿ. ಸುಬ್ರಹ್ಮಣ್ಯರಾಜ ಅರಸಿನವರು, ಶ್ರೀ ಶೇಷಾದ್ರಿ ಅಯ್ಯರವರ ಮಕ್ಕಳು ಜೆ. ಎಸ್. ಹಿರಣ್ಯಸ್ವಾಮಿ ಅಯ್ಯರ್‌ರವರು ಮತ್ತೂ ಮೈಸೂರು ಮೈದರಾಬಾದಿನ ಇಂಪೀರಿಯಲ್ ಸರ್ವಿಸ್ ...

ಸರದಾರರುಗಳಲ್ಲಿ ಮ॥ ಎಂ ಕಾಂತರಾಜಅರಸಿನವರೂ, ಮ॥ ಟಿ. ಬಸವರಾಜಅರಸಿನವರೂ ಅನಿವಾರ್ಯದಿಂದ ಹೊರಡುವುದಿಲ್ಲವು. ಅಧಿಕಾರಿಗಳಲ್ಲಿ ವಿದ್ಯಾಭ್ಯಾಸದ ಇನ್ಸ್‌ಪೆಕ್ಟರ್ ಜನರಲ್‌ರವರ ಸ್ಥಾನದಲ್ಲಿ ರಾ॥ ಕಮಿಷನರ ಸ್ಥಾನಗಳಲ್ಲಿ ಯಾರೂ ನೇಮಿಸಲ್ಪಟ್ಟಿಲ್ಲವು ಪೊಲೀಸು ಇ॥ ಜನರಲ್ ಮ॥ಡಿ ದೇವರಾಜಅರಸಿನವರೂ, ಚೀಫ್ ಕಮ್ಯಾಂಡೆಂಟ್ ಕರ್ನಲ್ ದೇಶರಾಜಅರಸಿನವರೂ ಸರದಾರರುಗಳಾಗಿ ದಯಮಾಡಿಸುತ್ತಾರೆ. ಅತಿಥಿಗಳಲ್ಲಿ ಮ॥ ವಿ. ಪಿ ಮಾಧವರಾಯರು ಮದ್ರಾಸ್ ಸರ್ಕಾರದ ಅತಿಥಿಗಳಾಗಿ ಹೊರಡುವರು, ಮತ್ತೂ ಮ॥ ಎ. ರ ಗಂಗಸ್ವಾಮಯ್ಯಂಗಾರರೂ, ಮ॥ ಪಿ ಶ್ರೀನಿವಾಸಯ್ಯಂಗಾರರೂ ತೊಂದರೆಯಿಂದ ಹೊರಡುವುದಿಲ್ಲವು.

ಇವರುಗಳಲ್ಲದೆ ಪ್ರಜಾಪ್ರತಿನಿಧಿ ಮೆಂಬರುಗಳಾದ ಬೆಂಗಳೂರ ಅಡ್ವೊಕೇಟ್ ಮ॥ ಡಿ ವಿ ಕಟರಾಮಯ್ಯನವರೂ, ಶ್ರೀರಂಗಪಟ್ಟಣದ ಮ॥ ಪಿ. ನರಸಿಂಗರಾಯರೂ ತಾ॥ ೧೯ರಲ್ಲೂ, ಜ॥ ಮತ್ತೂ ರೆ॥ ಸೆಕ್ರೆಟರಿ ಮ॥ ಬಾಲಸುಬ್ರಹ್ಮಣ್ಯಯ್ಯನವರು ಪ್ರೈವೇಟ್ ಸೆಕ್ರೆಟರಿ ಮ॥ಟಿ. ಗೋವಿಂದರಾಯರು ಡಾಕ್ಟರ್ ರಘುನಾಥೇಂದ್ರರಾಯರು ಇವರುಗಳೊಡನೆ ದಿವಾನರು ಮ॥ ಟಿ ಆನಂದರಾಯರು ಮತ್ತೂ ಚೀಫ್ ಇಂಜನೀರು ಮ॥ ವಿಶ್ವೇಶ್ವರಯ್ಯನವರು ತಾ॥ ೨೫ರಲ್ಲೂ, ಜನರಲ್ ಅಸಿಸ್ಟೆಂಟರೊಡನೆ ಒಂದನೆಯ ಕೌನ್ಸಿಲರ್ ಮ॥ ಕೆ. ಪಿ. ಪುಟ್ಟಣ್ಣಶೆಟ್ಟರು, ಸೀನಿಯರ್ ಸರ್ಜನ್ ಡಾಕ್ಟರ್ ಅಚ್ಯುತರಾಯರು, ಪಾಳೆಯಗಾರರ ಪ್ರತಿನಿಧಿಗಳಾದ ಬೆಂಗಳೂರ ಕೆ॥ ಕೆ॥ ಮ॥ ಬಿ. ಜಿ ಕುಮಾರಸ್ವಾಮಿನಾಯಕರು ತಾ॥ ೧೬ರಲ್ಲೂ ಪ್ರಯಾಣಮಾಡಿದರು ಮತ್ತೂ ಸರದಾರ್ ಡಿ. ದೇವರಾಜಅರಸಿನವರು, ಫಾರೆಸ್ಟುಗಳ ಕನ್ಸರ್ವೇಟರ್ ರಾ॥ ಬ॥ ಮುತ್ತಣ್ಣನವರು ಮತ್ತೂ ಅ॥ ಕಮಿಷನರುದ್ಯೋಗದಿಂದ ನಿವೃತ್ತರಾಗಿರುವ ಹಾಸನದ ಮೆ॥ ಸಯದ್ ಅಮೀರ್ ಜಸೇಟ್ ರವರು ಈ ದಿನ ರಾತ್ರಿ ಪ್ರಯಾಣಮಾಡುವರು.

ಶ್ರೀಮನ್ಮಹಾರಾಜ ಸಹೋದರರ, ಮಹಾರಾಣಿಯವರುಗಳ ಮತ್ತೂ ರಾಜಕುಮಾರಿಯರುಗಳ ಉಪಯೋಗಕ್ಕಾಗಿ ೯೯ ಕುದುರೆಗಳೂ, ೪೦ ಬಂಡಿಗಳೂ, ೧೦ ಮೋಟಾರುಗಳೂ, ಆಹಾರ ಸಾಮಾಗ್ರಿಗಳೂ, ಪಾತ್ರೆ ಪದಾರ್ಥಗಳೂ ಸ್ತ್ರೀ ಪುರುಷ ಸೇವಕರೂ ೩ ಬಿಟ್ಟುಗಟ್ಟಲೆಯ ರೈಲುಬಂಡಿಗಳಲ್ಲಿ ಮುಂದಾಗಿ ಕಳುಹಲ್ಪಟ್ಟಿರುವರು. ಕಳೆದ ಶುಕ್ರವಾರ ಶ್ರೀಮದ್ರಾಜಧಾನಿಯಲ್ಲಿ ಸ್ಪೆಷಲ್ ಆಫೀಸರಾಗಿರುವ ಮ॥ ಸಿಂಗಳಾಚಾರರು, ಅರಮನೆಯ ಶಾಖೆಗೆ ಸೇರಿದ ಮಿ॥ ಪಾರುಪತ್ತೇದಾರರು, ಮ॥ ಗಳಾದ ವೆಂಕಟಸ್ವಾಮಿಅಯ್ಯಂಗಾರ್ಯರು, ಕೃಷ್ಣಸ್ವಾಮಿಯವರು, ಬಂಕೀರಾಯರು, ಮುದ್ದುಕೃಷ್ಣಪ್ಪನವರು ಹೊರಟರು. ತಾ॥ ೨೩ರ ಬೆಳಿಗ್ಗೆ ಶ್ರೀಮನ್ಮಹಾರಾಜರವರೂ, ಯುವರಾಜರೂ ಪರಿವಾರಗಳೊಡನೆ ಹೊರಟು ಬಂದಿದ್ದಲ್ಲೂ, ಅದೇ ದಿವಸ ರಾತ್ರಿ ಮಹಾಮಾತೃಶ್ರೀಯವರೂ, ಮಹಾರಾಣಿಯವರೂ, ಯುವರಾಣಿಯವರೂ, ರಾಜಕುಮಾರಿಯರುಗಳೂ ಪರಿವಾರದೊಡನೆ ರೈಲು ಬಂಡಿಯಲ್ಲೂ ಬೆಂಗಳೂರಿಗೆ ಪ್ರಯಾಣಮಾಡಿ ಅಲ್ಲಿಂದ ತಾ॥ ೨೪ರಲ್ಲಿ ಎಲ್ಲರೂ ಒಟ್ಟಿಗೆ ಬಿಟ್ಟುಗಟ್ಟಲೆಯ ರೈಲು ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡುವವರಾಗಿರುವರು.

ಒಳದೇಶದ ವೃತ್ತಾಂತಗಳು.

ಪ್ರೊ॥ ಇ॥ ಜನರಲ್ ಮ॥ ಡಿ. ದೇವರಾಜಅರಸಿನವರು ಕಳೆದ ಗುರುವಾರ ರಾಜಧಾನಿಗೆ ಬಂದಿದ್ದು ನೆನ್ನೆಯ ದಿನ ಬೆಂಗಳೂರಿಗೆ ಹಿಂತಿರುಗಿ ದಯಮಾಡಿಸಿದರು.

ಕಳೆದ ತಾ॥ ೯ರಲ್ಲಿ ಹರಿಕೆರೆಯಲ್ಲಿ ಬೆಂಕಿಯನಾಹುತಿಯಿಂದ ೬ ಹೆಂಚಿನಮನೆಗಳು ಸುಟ್ಟುಹೋಗಿ ೩೧೦೦ ರೂ ವರೆಗೂ ನಷ್ಟವಾಯಿತು ಈ ಬೆಂಕಿಯನ್ನಾರಿಸಲು ಬಂದ ೧೦ ಜನರಲ್ಲಿ ಇಬ್ಬರಿಗೆ ಭಾರಿ ಗಾಯವಾಗಿರುವುದು.

ಹಿಂದೆ ಮದರಾಸ್ ಗೌರ್ನರಾಗಿದ್ದ ಸರ್ ಆರ್ಥರ್ ಲಾಲೆಯವರು ಕಳೆದ ತಾ॥ ೧೯ರಲ್ಲಿ ಊಟಕಮಂಡದಿಂದ ರಾಜಧಾನಿಗೆ ದಯಮಾಡಿಸಿ ಶ್ರೀಮನ್ಮಹಾರಾಜರವರ ಅತಿಥಿಗಳಾಗಿ ಗೌರ್ನಮೆಂಟ್ ಹೌಸಿನಲ್ಲಿಳಿದುಕೊಂಡಿರುವರು. ಇವರು ಇಲ್ಲಿಂದಲೇ ದಿಲ್ಲಿಗೆ ಪ್ರಯಾಣವನ್ನು ಮಾಡುವವರಾಗಿರುವರು.

ರಾಜಧಾನಿಯ ಶ್ರೀಮಂತ ಮೋತಿಖಾನೆ ವರ್ತಕರಾದವರು ದಿಲ್ಲಿಯ ದರ್ಬಾರ್ ಮಹೋತ್ಸವವನ್ನು ನೋಡಿಕೊಂಡು ಬರುವುದಕ್ಕಾಗಿ ನೆನ್ನೆಯ ದಿನ ದಿಲ್ಲಿಗೆ ಪ್ರಯಾಣಮಾಡಿದರು. ಬೆಂಗಳೂರಿಂದ ಮ॥ ಗೋವಿಂದ ದಾಸಣ್ಣನವರು ಮೊದಲಾದ ವರ್ತಕಮಹಾಶಯರು ಚಕ್ರವರ್ತಿ ದಂಪತಿಗಳ ದರ್ಶನಕ್ಕಾಗಿ ಬೊಂಬಾಯಿಗೆ ಹೋಗಿರುವರು.

ಹೆಚ್ ವಿ. ಸಿ. ಮಾಧವರಾಯರು ಬರುವ ಡಿಸೆಂಬರ್ [illegible] ಮ॥ ಪಂಡಿತ ಮದನಮೋಹನಮಾಳವೀಯ ...

ವಿಚಾರವಾಗಿ, ಮೈಸೂರು ರಾಯರ ಸಂತಾಪಸೂಚಕ ಸಭಾಧ್ಯಕ್ಷರಾದ ಮಿ|| ಇ. ಎಚ್. ಬಿಸ್ಸರವರನ್ನು ಕಂಡು ಮಾತನಾಡುವುದಕ್ಕಾಗಿ ಹೋಗುವ ಪ್ರತಿನಿಧಿಗಳ ಕೂಡ ಸೇರಲು ಒಪ್ಪಿಕೊಂಡಿರುತ್ತಾರೆ.

ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿರುವ ಮಂಡ್ಯ ತಾ|| ಮಾದನಾಯಕನಹಳ್ಳಿ ಕೃಷ್ಣಮೂರ್ತಿರಾಯರ ಮನೆಯಲ್ಲಿ ನಡೆದ ಕಳುವಿನ ಸಂಬಂಧವಾದ ವರ್ತಮಾನದಲ್ಲಿ «ನೋಟುಗಳು ಮುದ್ರೆಯ ಸಬ್ ಪೋಸ್ಟ್‌ಮಾಸ್ಟರ್ ಸುಬ್ಬರಾಯರಲ್ಲಿರುವುದಾಗಿ ತಿಳಿಯಬರುತ್ತದೆ" ಎಂದಿರುವುದಕ್ಕೆ ಬದಲಾಗಿ «ಕೆಲ ನೋಟುಗಳು ಮುದ್ದೂರಿನ ಸಬ್ ಪೋಸ್ಟ್ ಮಾಸ್ಟರ ವಶದಲ್ಲಿರುವುದು ಗೊತ್ತಾಯಿತು" ಎಂದು ಹಸ್ತದೋಷದಿಂದ ಬಿದ್ದಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ.

ಕಳೆದ ಮಂಗಳವಾರ ರಾತ್ರಿ ಮಿ|| ವಿ. ಪಿ. ಮಾಧವರಾಯರು ತಮ್ಮ ಜನ್ಮದಿನಕ್ಕೆ ಸರ್ಕಾರಿ ಅಧಿಕಾರಿಗಳು ಮೊದಲಾದ ಮಿತ್ರಮಂಡಲಿಯವರನ್ನು ಬರಮಾಡಿಕೊಂಡು ಹರಿಕಥೆಯನ್ನು ಮಾಡಿಸಿದ ಮದ್ರಾಸಿನ ೧೦ ವರ್ಷ ವಯಸ್ಸಿನ ಪದ್ಮಾವತಿಬಾಯಿ ಎಂಬಾಕೆ ರುಕ್ಮಿಣೀ ಪರಿಣಯ ಕಥಾ ಕಾಲಕ್ಷೇಪವನ್ನು ಮಾಡಿಸಿದರು. ಆಕೆಯ ಗಾನದ ಮಾಧುರ್ಯಕ್ಕಾಗಿಯೂ, ಶ್ರೋತೃಜನರ ಮನಸ್ಸಿನಲ್ಲಿ ಭಕ್ತಿಯನ್ನು ಹುಟ್ಟಿಸುವ ಸಾಮರ್ಥ್ಯಕ್ಕಾಗಿಯೂ ಸಭಿಕರೆಲ್ಲರೂ ಆಕೆಯನ್ನು ಮೆಚ್ಚಿ ಶ್ಲಾಘಿಸಿದರು.

ಈ ತಿಂಗಳ ೬ನೇ ತಾರೀಖು ತಲಕಾಡಿನಲ್ಲಿ ನಡೆಯುವ ಪಂಚಲಿಂಗಗಳ ದರ್ಶನದ ಯಾತ್ರೆಗಾಗಿ ರಾಜಧಾನಿಯಿಂದ ೭-೮ ಸಾವಿರ ಜನರು ಸಾವಿರಾರು ಬಂಡಿಯಲ್ಲಿ ಕಳೆದ ೩-೪ ದಿವಸಗಳಿಂದಲೂ ಪ್ರಯಾಣಮಾಡಿದರು. ಬೆಂಗಳೂರು ಮೊದಲಾದ ಕಡೆಯಿಂದ ಬರುವವರು ಮದ್ದೂರಿ ಮಾರ್ಗವಾಗಿಯೂ, ಮದ್ರಾಸಿನಿಂದ ಬರುವವರು ಮೈಸೂರುಮಾರ್ಗವಾಗಿಯೂ ಹೋಗಿರುವುದಾಗಿ ಕೇಳುತ್ತೇವೆ. ಈ ದರ್ಶನವು ಇನ್ನು ಮುಂದೆ ಬಹು ವರ್ಷಗಳವರೆಗೂ ಬರುವುದಿಲ್ಲವೆಂಬುದಾಗಿ ಮೇಲೆ ಈ ಸಲ ಎಲ್ಲ ಕಡೆಯಿಂದಲೂ ವಿಶೇಷ ಜನರು ಹೊರಟಿರುತ್ತಾರೆ. ಶ್ರೀಮನ್ಮಹಾರಾಜರವರು ಈ ಬೆಟ್ಟಕ್ಕೆ ಮೊಟಾರುಬಂಡಿಯಲ್ಲಿ ಚಿತ್ತೈಸಿ ದರ್ಶನಮಾಡಿಕೊಂಡು ಇದೇ ಸಾಯಂಕಾಲ ಹಿಂತಿರುಗುವುದಾಗಿ ಕೇಳುತ್ತೇವೆ.

ದಿವಾನರು, ಕೌನ್ಸಿಲರುಗಳು ಮತ್ತು ಸೆಕ್ರೆಟರಿಯವರು ಡಿಲ್ಲಿಯ ದರ್ಬಾರಿಗೆ ಪ್ರಯಾಣಮಾಡುವುದರಿಂದ ಸರ್ಕಾರದ ಅಂಡರ್ ಸೆಕ್ರೆಟರಿಯವರಾದ ಮಿ|| ಬಿ. ರಾಮಸ್ವಾಮಯ್ಯನವರು ನಿತ್ಯಗಟ್ಟಲೆಯ ಸಾಧಾರಣ ಕೆಲಸಗಳನ್ನು ನೋಡಿಕೊಂಡು, ಸೆಕ್ರೆಟರಿಯವರ ಹೆಸರಿಗೆ ಬರತಕ್ಕ ಕಾಗದಗಳನ್ನು ಸ್ವೀಕರಿಸಿ ಅವುಗಳನ್ನು ದಿವಾನರಿಂದ ಕೂಡಲೇ ವಿಲೆಮಾಡಲ್ಪಡಬೇಕಾಗಿರತಕ್ಕವುಗಳನ್ನು ತಾವು ಗೊತ್ತುಪಡಿಸಿ ಡಿಲ್ಲಿಯ ಅಲಿಪುರ ರೋಡಿನಲ್ಲಿರುವ ಮೈಸೂರ ಬೋರ್ಡಿಂಗ್ ಕಳುಹಿಸತಕ್ಕದ್ದಲ್ಲದೆ, ಮಿಕ್ಕ ಸಾಧಾರಣ ಕಾಗದಗಳನ್ನು ದಿವಾನರು ಹಿಂತಿರುಗಿ ಬರುವವರೆಗೂ ತಮ್ಮಲ್ಲೇ ಇಟ್ಟುಕೊಳ್ಳುವುದು. ಮತ್ತು ಸರ್ಕಾರಿ ಉದ್ಯೋಗಸ್ಥರಿಗಳು ಅಥವಾ ಅವರ ಸಮೀಪಬಂಧುಗಳು ಅಸ್ವಸ್ಥರಾಗಿರುವ ಸಂದರ್ಭದಲ್ಲಿ ಮಾತ್ರ ಅವರಿಗೆ ರಜವನ್ನು ಕೊಡುವುದು. ಡೆಪ್ಯುಟಿ ಕಮಿಷನರುಗಳು ಅಮಲ್ದಾರರುಗಳಿಗೇನೋ ಕ್ಯಾಜುಯಲ್ ರಜವನ್ನು ಕೊಡಬಹುದು. ದಿಲ್ಲಿಗೆ ಹೋಗತಕ್ಕ ಅಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಕೆಲಸಗಳು ಕ್ರಮವಾಗಿ ನಡೆಯುವಂತೆ ಏರ್ಪಡಿಸತಕ್ಕದ್ದು. ಎಂದು ಸರ್ಕಾರದಪ್ಪಣೆಯಾಗಿರುತ್ತದೆ.

ಡಿಲ್ಲಿಯಲ್ಲಿ ನಡೆಯುವ ಚಕ್ರವರ್ತಿ ದಂಪತಿಗಳ ಕಿರೀಟಧಾರಣಮಹೋತ್ಸವದ ಜ್ಞಾಪಕಾರ್ಥವಾಗಿ, ಚಿಕ್ಕಮಗಳೂರು ನಿವಾಸಿಗಳು ಅಲ್ಲಿ ಒಂದು ಪುಸ್ತಕಭಂಡಾರವನ್ನು ಸ್ಥಾಪಿಸಬೇಕೆಂದೂ, ಬೀರೂರಿನ ಮತ್ತು ಮೂಡಿಗೆರೆಯ ನಿವಾಸಿಗಳು ತಮ್ಮ ಸ್ಥಳಗಳಲ್ಲಿ ಪಠನಾಲಯಗಳನ್ನೂ, ಹುಳಿಯಾರಿನವರು ಇಂಗ್ಲಿಷ್ ಶಾಲೆಗಳನ್ನೂ ಸ್ಥಾಪಿಸಲು ಮೊದಲಾದ ಧರ್ಮ ಸತ್ಕಾರ್ಯಗಳನ್ನು ಸ್ಥಾಪಿಸಲು ಯೋಚಿಸಿರುವುದಾಗಿ ಕೇಳುತ್ತೇವೆ. ಇದೇ ರೀತಿಯಾಗಿ ಈ ಸಂಸ್ಥಾನದ ಇತರ ಕಡೆಯ ನಿವಾಸಿಗಳು ಏನಾದರೂ ಚಿರಸ್ಮಾರಕಚಿಹ್ನೆಗಳನ್ನು ಸ್ಥಾಪಿಸಿ ಈ ದೇಶೀಯರಿಗೆ ಸಾರ್ವಭೌಮರಲ್ಲಿರತಕ್ಕ ಅತಿಶಯವಾದ ರಾಜಭಕ್ತಿಯನ್ನು ಪ್ರದರ್ಶಿಸುವವರಾಗುವರೆಂದು ನಿರೀಕ್ಷಿಸುತ್ತೇವೆ. ಬೀರೂರಿನಲ್ಲಿ ಬಾರ್ ಶ್ರೀಮಂತರಾಗಿರುವ ಮಿ|| ಬಿಕ್ಕಿ ಮಲ್ಲಪ್ಪನವರು ನೀತಿ ಶಾಲೆಯ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ೩೦೦೦ ರೂ. ಗಳನ್ನು ಕೊಡುವುದಾಗಿ ವಾಗ್ದಾನಮಾಡಿರುವುದಲ್ಲದೆ ಈ ಸಾರ್ವಭೌಮರು ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಪ್ರೈಸ್ ಕಾಲೇಜಿನ್ನು ಸ್ಥಾಪಿಸಿ, ತಮ್ಮ ಪರಿಗ್ರಹದವನ್ನು ಸಾರ್ಥಕಪಡಿಸಿಕೊಳ್ಳುವುದಲ್ಲದೆ, ತಮಗಿರುವ ರಾಜಭಕ್ತಿಯ ವಿಶೇಷವನ್ನು ತೋರ್ಪಡಿಸಿ ಇತರರಿಗೆ ಮಾದರಿಯಾಗಿ ನಡೆಯುವರೆಂದು ನಿರೀಕ್ಷಿಸುತ್ತೇವೆ.

ವರ್ತಮಾನ ಸಂಗ್ರಹವು.

ಚಕ್ರವರ್ತಿಯವರ ದಂಡಿಗಾಗಿ ನೇಪಾಳದ ಕಾಡುಗಳಲ್ಲಿ ಹುಲಿಗಳೂ, ಕಾಡಾನೆಗಳೂ ಕೂಡಿಹಾಕಲ್ಪಟ್ಟಿರುತ್ತವೆ.

ಡಿಲ್ಲಿಯಲ್ಲಿ ರಾಗ ಹಗಲೂ ರಾತ್ರಿ ಎಡೆಬಿಡದೆ ಮಳೆಯು ಸುರಿಯುತ್ತಿದೆ. ಆದರೆ ಇದರಿಂದ ಅಲ್ಲಿ ನಡೆಯುತ್ತಿರುವ ಉತ್ಸವ ಸಮಾರಂಭದೇರ್ಪಾಟಿಗೆ ಯಾವ ತೊಂದರೆಯೂ ಸಂಭವಿಸಿರುವುದಿಲ್ಲ.

ಬೊಂಬಾಯಿ ಅಧಿಪತ್ಯಕ್ಕೊಳಪಟ್ಟ ಶೋಲಾಪುರ, ನಾಸಿಕ ಮತ್ತು ಸತಾರಾ ಡಿಸ್ಟ್ರಿಕ್ಟುಗಳಲ್ಲಿರತಕ್ಕ ವ್ಯವಸಾಯ ಸ್ಥಿತಿಯನ್ನು ಕುರಿತು ವಿಚಾರಿಸಿ ಆಹಾರ ಪದಾರ್ಥಗಳನ್ನು ಒದಗಿಸಲು ನವಂಬರ್ ತಾ|| ೧ರಿಂದ ಪಕ್ಕೆಯೇ ಕ್ಷಾಮಕಾರ್ಯವನ್ನು ಪ್ರಾರಂಭಿಸಲು ಸರ್ಕಾರದಿಂದ ಕೆಲಸ ನಡೆಸಬೇಕೆಂದು ಇಂಡಿಯಾ ಸರ್ಕಾರದವರಪ್ಪಣೆಯಾಗಿರುತ್ತದೆ.

ಬೆಲ್ಜಿಯಂ ದೊರೆಯು ೩,೦೦೦,೦೦೦ ರೂ. ಬೆಲೆಯುಳ್ಳ ತನ್ನ ಆಸ್ತಿಯು ತನ್ನ ಹೆಣ್ಣುಮಕ್ಕಳಿಗೆ ಸೇರದೆ ಇರುವುದಕ್ಕಾಗಿ ಅದನ್ನು ಒಂದು ಕಂಪನಿಗೆ ಕೊಟ್ಟುಬಿಟ್ಟಿದ್ದದರಿಂದ, ಆ ದೊರೆಯ ಮಗಳು ತನ್ನ ತಂದೆಯ ಆಸ್ತಿಯು ತನಗೆ ಬರಬೇಕೆಂದು ಮಾಡಿದ್ದ ವ್ಯವಹಾರವು ಕೆಟ್ಟುಹೋಯಿತು. ಆದರೆ ದೊರೆಯು ತನ್ನ ಮರಣಕ್ಕೆ ೨ ದಿವಸಗಳ ಮುಂಚೆ ಕೊಟ್ಟಿದ್ದ ೫೦೦೦೦೦ ರೂ. ಮಾತ್ರ ಆಕೆಗೆ ದೊರೆಯಿತು.

ಭರತಖಂಡದ ವಾಯುವ್ಯ ಪ್ರಾಂತದಲ್ಲಿ ಎಲ್ಲಿಯ ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ ಮಾಡಿಸತಕ್ಕದ್ದು. ಈ ಶಾಲೆಗಳ ಸಂಬಂಧ ಆಲೋಚನೆಯು ನಡೆಯುತ್ತಿದೆ ಮತ್ತು ಉಪಾಧ್ಯಾಯರುಗಳ ಕನಿಷ್ಟ ಸಂಬಳವು ೬ ರೂ. ಇಂದ ೧೧ ರೂ. ಗೆ ಏರಿಸಲ್ಪಡುತ್ತದೆ ಎಂದು ಆ ಪ್ರಾಂತದ ಚೀಫ್ ಕಮಿಷನರು ಪ್ರಸಿದ್ಧಪಡಿಸಿರುತ್ತಾರೆ.

ಜಾಮನಗರ ಸಂಸ್ಥಾನದವರು ತಮ್ಮ ಸಂಸ್ಥಾನದಲ್ಲಿ ಜ್ಞಾನಮಯವಾದ ವರ್ಗದಲ್ಲಿ ಸಿವಿಲ್ ಕೋರ್ಟಿನ ಡಿಕ್ರಿಯನ್ನು ಆಚರಣೆಗೆ ತರಕೂಡದೆಂದು ಅಪ್ಪಣೆಮಾಡಿರುವುದಾಗಿಯೂ, ಪಬ್ಲಿಕ್ ಸಂಸ್ಥಾನದಲ್ಲೂ ಇದೇ ರೀತಿಯಾಗಿ ಅಪ್ಪಣೆಮಾಡಲ್ಪಟ್ಟಿರುವುದಲ್ಲದೆ, ಭಾವಿಗಳನ್ನೂ, ಕೊಳಗಳನ್ನೂ ತೋಡಿಸುವುದು, ಇರುವ ಮಾರ್ಗಗಳನ್ನು ಅಭಿವೃದ್ಧಿಗೊಳಿಸುವುದು ಮೊದಲಾದ ಕ್ಷಾಮನಿವಾರಣಾ ಕಾರ್ಯಗಳು ಪ್ರಾರಂಭಿಸಲ್ಪಟ್ಟಿರುತ್ತವೆ.

ಕಳೆದ ತಾ|| ೧೮ಕ್ಕೆ ಕಡೆಯಾದ ವಾರದಲ್ಲಿ ಭರತಖಂಡದಲ್ಲೆಲ್ಲ ಒಟ್ಟು ೧೧೦೫೨ ಜನರಿಗೆ ಪ್ಲೇಗು ತಗಲಿ ೯೩೯೯ ಜನರು ಸತ್ತರು. ಇವರಲ್ಲಿ ಬೊಂಬಾಯಿಯಲ್ಲಿ ೨೧೮೭, ಮಧ್ಯಪ್ರಾಂತಗಳಲ್ಲಿ ೩೪೪, ಪಂಜಾಬಿನಲ್ಲಿ ೬೫, ಸಂಯುಕ್ತ ಪ್ರಾಂತಗಳಲ್ಲಿ ೫೯೭, ಬಂಗಾಳದಲ್ಲಿ ೬೩, ವರ್ಮಾದಲ್ಲಿ ೧೯, ಮದ್ರಾಸು ಪ್ರಾಂತಗಳಲ್ಲಿ ೬೫೩; ಮೈಸೂರು ಸಂಸ್ಥಾನದಲ್ಲಿ ೬೪೭, ಹೈದರಾಬಾದು ಸಂಸ್ಥಾನದಲ್ಲಿ ೩೪೩ ಮತ್ತು ಮಧ್ಯ ಹಿಂದೂಸ್ಥಾನದಲ್ಲಿ ೬೨೫ ಈ ಪ್ರಕಾರ ಮರಣವುಂಟಾಗಿರುತ್ತವೆ.

ಬಂಗಾಳಕ್ಕೆ ಸೇರಿದ ಒಂದು ಹಳ್ಳಿಯಲ್ಲಿ ಕೆಲವು ನಿತ್ಯಾಲ ಬಾಲಕನೊಬ್ಬ ಎಂಬುವನ ಹೊಲದಲ್ಲಿ ಬೆಳೆಯನ್ನು ಕುಯ್ದು ಕೊಳ್ಳುತ್ತಿದ್ದಾಗ, ನಿತ್ಯಾಲಾಲನು ಬಂದು ತಡೆಯನ್ನು ಮಾಡಲು, ಅವರು ಅವನನ್ನು ಹಿಡಿದು ಹೊಟ್ಟೆಯನ್ನು ಬಗೆದು ಕೊಂದುಹಾಕಿದರು. ಈ ಸತ್ತುಹೋದ ನಿತ್ಯಾಲಾಲನ ಚಿಕ್ಕ ವಯಸ್ಸಿನ ಹೆಂಡತಿಯು ತನ್ನ ಗಂಡನ ಮರಣವಾರ್ತೆಯನ್ನು ಕೇಳಿ, ತನ್ನ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂದು ನಿರ್ಧರಿಸಿ ಮನೆಯ ಬಾಗಿಲನ್ನು ಒಳಗಿನಿಂದ ಬಂದೋಬಸ್ತುಮಾಡಿಕೊಂಡು ಮೈಗೆ ಬೆಂಕಿಯನ್ನು ಹೊತ್ತಿಸಿದಳು. ನೆರೆಯವರು ಮನೆಯು ಹೊತ್ತಿಕೊಂಡುರಿಯುವುದನ್ನು ಕಂಡು ಬಾಗಿಲನ್ನು ಮುರಿದು ಒಳಗೆ ನುಗ್ಗಿ ಆ ಹೆಂಗಸನ್ನು ಹೊರಗೆ ಕರೆದುಕೊಂಡುಬಂದರು. ಆಕೆಗೆ ಕೊಂಚ ಅಪಾಯವಾಗಿದೆ ಆದರೆ ಮನೆಯು ಸುಟ್ಟು ಭಸ್ಮವಾಯಿತು.

ಮುಂಬಯಿಯಲ್ಲಿ ಒಬ್ಬ ಸಂಬಾಳ್ತಿಯು ಸ್ಟೈಲು ಬಂತಿ ಉಸ್ತಿಕಿಯುತಲೆ, ಅವನ ಬಳಿಗೆ ಒಬ್ಬ ಸೇವಕನು ಬಂದ. ನೀನು ಹೇಳಿದ ಹೊಸ್ತಿಲಿನ್ನು ತೊಂದರೆಕೊಡುವನಾದುದರಿಂದ ಅವಳಿಗೆ ಎರಡು ರೂಪಾಯಿಯನ್ನು ಕೊಟ್ಟಲ್ಲದೆ ಬಿಡುವುದಿಲ್ಲ. ನಿನ್ನ ಇಲ್ಲವಾದರೆ ನಿನ್ನನ್ನು ಹಿಡಿದು ಶಿಕ್ಷೆಗೆ ಗುರಿಮಾಡುತ್ತೇನೆ" ಎಂದು ಅವನನ್ನು ಬೆದರಿಸಿ ಅವನಿಂದ ೨ ರೂ. ಗಳನ್ನು ತೆಗೆದುಕೊಂಡನು. ಆ ಸಂಬಾಳ್ತಿಯು ಹಣವನ್ನು ಕೊಡುವಾಗಲೇ ಬರು ಸೇವಕನಿಂದ ನ್ಯಾಯಾಧಿಕಾರಿಗಳಲ್ಲಿ ಆಕ್ಷೇಪಣೆಯನ್ನು ಇನ್ನೂ ೧೦ ದಿವಸಗಳಲ್ಲಿ ಅನುಭವಿಸಬೇಕೆಂದು ತೀರ್ಪುಮಾಡಿದರು. ಆ ಸೇವಕನು ಕೆಲ ದಿವಸ ಜೈಲಿ ರಾಜಮನೆಯಲ್ಲಿ ಹೋಗುತ್ತಿರುವಾಗ್ಗೆ ಸಿಕ್ಕಿಬಿದ್ದು ಸತ್ತುಹೋದನು. .... ತ್ರಿಯ ಕಾಲವು ಸಾರ್ಥಕವಾಯಿತಲ್ಲ.

ಕಳೆದ ತಾ|| ೪ರಲ್ಲಿ ಕಲಕತ್ತಾದಲ್ಲಿ ೭ ಅಂತಸ್ತಿನ ಒಂದು ಮನೆಯ ಕೆಳಭಾಗದಲ್ಲಿ ಕರ್ಪೂರ, ಗಂಧಕ, ಕಡ್ಡಿಪೆಟ್ಟಿಗೆ ಮೊದಲಾದ ಪದಾರ್ಥಗಳು ತುಂಬಲ್ಪಟ್ಟಿದ್ದ ಕೊಠಡಿಗೆ ಹೇಗೋ ಬೆಂಕಿಯು ಬಿದ್ದು ಪದಾರ್ಥಗಳೆಲ್ಲ ಸುಟ್ಟು ಹೋದವಲ್ಲದೆ, ಕೆಳಗಿನ ಅಂತಸ್ತು ಸುಟ್ಟುಹೋಗಿ ಮೇಲಿನ ಅಂತಸ್ತಿಗೆ ಹತ್ತುವ ಮರದ ಮೆಟ್ಟಲುಗಳೂ ಸುಟ್ಟುಹೋದುದರಿಂದ, ಮೇಲೆ ವಾಸಮಾಡುತ್ತಿದ್ದ ಜನರು ಹೊರಗೆ ತಪ್ಪಿಸಿಕೊಂಡು ಬರಲಾಗದಿದ್ದರು. ಅಷ್ಟರಲ್ಲಿ ಬೆಂಕಿ ಆರಿಸುವ ಜನರು ಯಂತ್ರವನ್ನು ತೆಗೆದುಕೊಂಡು ಬಂದು ನೀರನ್ನು ಹಾಯಿಸಿ ಏಣಿಯನ್ನು ಹಾಕಿ ಮೇಲಿನ ಅಂತಸ್ತಿಗೆ ಹತ್ತಿ ಅಲ್ಲಿದ್ದ ಸ್ತ್ರೀಯರು, ಮಕ್ಕಳು ಮೊದಲಾದವರನ್ನು ಜಾಗ್ರತೆಯಿಂದ ಇಳಿಸಿಕೊಂಡರು. ಬೆಂಕಿಯು ಆರಿದ ಮೇಲೆ ನೋಡಲು, ಒಂದು ಕೊಠಡಿಯೊಳಗೆ ಒಬ್ಬ ಹೆಂಗಸೂ, ೮ ಮಕ್ಕಳೂ ಸುಟ್ಟು ಇದ್ದಲಾಗಿ ಬಿದ್ದಿದ್ದುದು ಕಂಡುಬಂದಿತು.

ಮಲೇರಿಯಾ ಜ್ವರೋತ್ಪತ್ತಿ ಮತ್ತು ಅದರ ನಿವಾರಣೋಪಾಯ ಮೊದಲಾದುವನ್ನು ಕಂಡುಹಿಡಿಯಲು ಈಗ ದೊಡ್ಡ ದೊಡ್ಡ ವೈದ್ಯರುಗಳ ಸಭೆ, ಬಂಗಾಳ ಸರ್ಕಾರದ ಪ್ರತಿನಿಧಿಯಾಗಿ ಬಂದಿರುವ ... ಕ್ಯಾಪ್ಟನ್ ಬಂಗಲೆ ... ಕೂಡಿ ... ಕಳೆದ ವಾರ ... ಇದ್ದ ಎಲ್ಲಾ ... ಉಂಗುರಗಳನ್ನು, ಚಿನ್ನದ ಗಡಿಯಾರ, ... ೫ ದಿವಸಗಳು ... ಬೆಲೆಬಾಳುವ ಪದಾರ್ಥಗಳನ್ನು ... ಕೆಲ ಪದಾರ್ಥಗಳು ಅಡಿಗೆಯ ಮನೆಯ ಬಳಿ ಬಿದ್ದಿದ್ದುದು ಗೊತ್ತಾಯಿತು.

ಉತ್ತರ ... ಒಬ್ಬ ದೇಶೀಯ ವೈದ್ಯರು ಕೆಲ ದಿವಸ ... ಒಂದು ದಿವಸ ರಾತ್ರಿ ... ಒಂದು ದೊಡ್ಡ ... ತಪ್ಪಿಸಿಕೊಂಡು ... ಒಂದು ... ಆ ... ಬಹು ... ಆಸ್ಪತ್ರೆಯಲ್ಲಿ ... ಚಿಕಿತ್ಸೆಯನ್ನು ಹೊಂದುತ್ತಿರುವನು. ಆ ... ಈ ... ತನ್ನ ... ಒಂದು ಮಗುವನ್ನೆತ್ತಿಕೊಂಡು ಹೋಗುತ್ತಿರುವುದನ್ನು ಆ ಮಗುವಿನ ತಂದೆಯು ಕಂಡು ಗಟ್ಟಿಯಾಗಿ ಕೂಗಿಕೊಂಡು, ಗಸ್ತಲವನ್ನು ಬೆನ್ನಟ್ಟಿ ಬರಲು ಮಗುವನ್ನು ಬಿಟ್ಟು ಓಡಿಹೋಯಿತು.

ಕೊಚ್ಚಿ ಸಂಸ್ಥಾನದ ದಿವಾನರಾದ ಶ್ರೀಮಾನ್ ವರ್ಮಾ, ಬಿ. ಸಿ. ಎಸ್. ಐ. ರವರು ತಮ್ಮ ಮಂತ್ರಿಯಾದ ಎ. ಎ. ಆರ್. ... ಮೊದಲಾದ ಅಧಿಕಾರಿಗಳೊಡನೆ ... ಕಳೆದ ತಾ|| ೧೪ರಲ್ಲಿ ... ಬಂದರು. ಅಲ್ಲಿಯ ... ವರು, ಬ್ರಿಟಿಷ್ ರೆಸಿಡೆಂಟರು, ... ದಿವಾನರಾದ ಮಿ|| ... ಮೊದಲಾದ ಅಧಿಕಾರಿಗಳು ... ಮರ್ಯಾದೆ ಮಾಡಿದರು. ... ಬಳಿಕ ... ಮಹಾರಾಜರೊಡನೆ ... ಒಂದು ... ಅಧಿಕಾರಿಗಳ ... ಮಾಡಿಸಿದರು. ...

... ಸಭೆ. ... ೧೦.

... ಸಭೆ.

[illegible] ಮಹಾರಾಜರ ವರ್ಷ ೩ ಪ್ರತಿದಿನ ಬಗೆಯ ನಡೆಸುವ ಜೋಗಿಗಳ್ಳಿ ಉತ್ಸವನ್ನು ಆಗುತ್ತಿದೆ. [illegible] ಮಹಾಪಾಪಿಗಳಿಗೆ ಅಶ್ಚರ್ಯವನ್ನು ಮಾಡಿ [illegible] ಧನಿಕ ತನ್ನ ಸ್ವಿಯವನ್ನು [illegible] ತೀರಿಸಿದರು.

ನವೆಹ್ನವರ.

ಶ್ರೀ ಕಾಶಿಮಂಡೆ ಗದಿಮಠಾಧ್ಯಕ್ಷ ಶ್ರೀ ಚೆನ್ನಬಸವ ಮಹಾಸ್ವಾಮಿಗಳವರು ನಿ ಬಹಳ್ಳು ವಿರಕ್ತ ಮಠದಲ್ಲಿ ನಡೆಯುತಕ್ಕ ಸಂಸ್ಕೃತ ಧರ್ಮ ಪಾಠಶಾಲೆ ಗಾಗಿ ಪ್ರತಿವರ್ಷವೂ ತಪ್ಪದಂತೆ ೧೦೦ರೂಪಾಯಿಗಳ ದೇಣಿಗೆ ಕೊಡುವದಕ್ಕೆ ಮಾನ್ಯ ಮಾಡಿ ಲಿಖಿತ ಮೂಲಕವಾಗಿ ತಿಳಿಸಿರುತ್ತಾರೆ ಮತ್ತು ನವಲಗುಂದ ಮಠದ ಬಸವ [illegible] ಸವರ ಪುತ್ರನಾದ [illegible] ವರ್ಷ ೧೦ ರೂಪಾಯಿಗಳನ್ನು ಪಾಠಶಾಲೆ ಇರುವ ವರೆಗೂ ತಪ್ಪದೆ ಕೊಡುತ್ತೇವೆಂದು ವಾಗ್ದಾನ ಮಾಡಿರುತ್ತಾರೆ. ಇದರಂತೆ ಇನ್ನುಳಿದ ವೀರಶೈವ ಶ್ರೀಮಂತರು ಇಂತಹ ಮಹಾಕಾರ್ಯಕ್ಕೆ ಮನಸ್ಸು ಕೊಟ್ಟು ಸದ್ವಿದ್ಯಾ ಪ್ರವೃತ್ತಿಗಳಿಗೆ ಬಾದ ನಬಾಗಳಿಂದ ಸಂತೋಷವನ್ನು [illegible] ಧ್ವನಿ ರಿತ್ತೇವೆ.

ಅಡವಾನಿ

[illegible] ಈ ಕ್ಷೇತ್ರದ [illegible] ರೊಳಗೆ ಈಗ ಕೆಲವು ತಿಂಗಳು [illegible] ಪ್ರದೇಶಗಳಲ್ಲಿ [illegible] ಶೇರಿ, ಬಿದಿಗಳು, ಗ್ರೀವರಿಗಳು, ಭಕ್ತ [illegible] ನಾಟಕದ ಕಂಪನಿಗಳು [illegible] ಈ ಅನಾನುಕೂಲದಿಂದ ನಗರಿ ಕಂಪನಿಯವರಿಗೆ ನೂರಾರು ೧೦೦೦ ರೂಪಾಯಿಗಳ ನಷ್ಟವಾಗಿರಬಹುದು. ಪ್ರೈವಾ ಸ್ಯುಗಳಿಂದ ಪ್ರಾಪ್ತಪಾಗಳಿಗೇನೂ ಸಂಭವಿಸಲಿಲ್ಲ. ಈಗ ಸದರಿ ಕಂಪನಿಯವರು ನೂತನವಾಗಿ ಸಿದ್ಧವಾದ ಗಳನ್ನು ಸಿದ್ಧಮಾಡಿಕೊಳ್ಳಬೇಕಾಗಿರುತ್ತದೆ. ಅದುವರೆಗೆ ಇವರು ನಾಟಕಗಳನ್ನು ಆಡಲು ಯೋಗ್ಯವಿಲ್ಲ.

ಬಿ ಸಂಗಪ್ಪ.

ನರಗುಂದ ಪಂಚಗೃಹ [illegible] ಶ್ರೀ ಚೆನ್ನವೀರದೇವರು [illegible] ಮಹಾಸ್ವಾಮಿಗಳು [illegible] ಲಿಂಗಸ್ವರೂಪ [illegible] ಶ್ರೀವಿರೂಪಾಕ್ಷಲಿಂಗಸ್ವಾಮಿ [illegible] ರಥೋತ್ಸವ [illegible]

[illegible] ಗೋಕಾವಿ ಜಿಲ್ಲೆಗೆ ಸೇರಿದ [illegible] ಕನ್ನಡ [illegible] ಶಾಲೆಯ [illegible] ಬುಧವಾರ ಪ್ರಾತಃಕಾಲ [illegible]

ಮಾಗಡಿ ಸಿದ್ದಪ್ಪ — ಬಸಯ್ಯಸಾಳುಂಕೆ

[illegible] ಸಂಗಪ್ಪ [illegible] ಪ್ರತಿ ವರ್ಷದ ಪದ್ಧತಿಯಂತೆ ಈ ವರ್ಷವೂ [illegible] ಪಲ್ಲಕ್ಕಿಯ [illegible] ಮೆರವಣಿಗೆಯು [illegible] ಉತ್ಸವವು ನಿರ್ವಿಘ್ನದಿಂದ ಜರುಗಿತು.

ಮತಾಭಿಮಾನಿ.—

ನೀಲಕಂಠಗೌಡ ಪಾಟೀಲ

ಪ್ರಸಾದಕೆರೆಯ ವೀರಶೈವರಿಗೆ ಒಂದು ವಿಜ್ಞಾಪನೆ.

[illegible] ಮಹಾಶಯರೇ! ಈ ಹಿಂದಿನ ವೀರಶೈವ [illegible] "ವೀರಶೈವಾರ್ಯ ಸಮಾಜ" [illegible]

ಕೊಣ್ಣಾರು [illegible] ದೇಶದಲ್ಲಿ ಕೇಂದ್ರ ಸ್ಥಳವಾಗಿರುವ [illegible] "ವೀರಶೈವ ಮಾನ್ಯ" [illegible] ಧರ್ಮಶಾಲೆ ನಿಲಯವನ್ನು [illegible]

ನಡೆಸುವ ನೀಲಕಂಠ

ಲಯವು ಒಬ್ಬ [illegible] ಅಲ್ಲದೆ ಒಂದು ಅಂಗಡಿ [illegible] ಪ್ರಯೋಜನ [illegible] ಶೈವ ಮಹಾಸಭೆ [illegible] ಶೀ ಶೀವಯೋಗಿ ಮಂದಿರ [illegible] ಸಂಬಂಧ [illegible]

[illegible] ನಂದ ಸೂಚನೆಯನ್ನು ಕೊಂಡಿರಿ

ಮುಂಬೈ ಸರ್ಕಾರದ [illegible] ದಯೆಯಿಂದ ಅನೇಕ ಜನಗಳು ಹೋಗಬಹುದು. [illegible] ಉಪಾಧ್ಯಾಯ [illegible]

ಶಿವ ನಾಗಪ್ಪ [illegible] ದಾವಣಗೆರೆ

ದಾವಣಗೆರೆ

ಶ್ರೀ [illegible] ಸ್ವರೂಪಿಗಳಾದ ಅಥಣಿಯ [illegible] ಗಚ್ಚಿನ ಮಠದ ಶ್ರೀ ಮುರುಘೇಂದ್ರ ಮಹಾಸ್ವಾಮಿಗಳವರು [illegible] ಗುರುಭಕ್ತಿಯನ್ನು [illegible] ಶ್ರೀ ಸಿದ್ಧರಾಮೇಶ್ವರ [illegible] ಪುರಾಣವನ್ನು [illegible] ಗುರುಕಾರುಣ್ಯಕ್ಕೆ ಪಾತ್ರರಾದರು. [illegible] ಶ್ರೀ ಗುರು [illegible] ವೀರಶೈವರೆಲ್ಲ [illegible] ಸಾನ್ನಿಧ್ಯ [illegible] ಭಕ್ತಿಯನ್ನು [illegible]

[illegible] ವೀರಶೈವ [illegible] ಹಿರೇಮಠ

ಕರ್ ನಂಜಪ್ಪನವರು ಒಂದು ಉಪನ್ಯಾಸವನ್ನು ಮಾಡಿದರು "ಜನಗಳಲ್ಲಿ ಭಕ್ತಿಯುಂಟಾಗುವಂತೆ ಮಾಡಬೇಕೆಂಬುದೇ ಪುರಾಣಗಳ ಮುಖ್ಯೋದ್ದೇಶವಾಗಿದೆ. ವೀರಶೈವಮತವು ತತ್ವಕ್ಕೆ ಪ್ರೀತಿಯಿಂದ ಭಕ್ತಿಯು ಅತಿಮುಖ್ಯವಾಗಿ ಅವಶ್ಯಕವಾಗಿರಬೇಕೆಂದು ತಿಳಿಸುತ್ತದೆ. ದೇಶಕಾಲಾನುಗುಣ್ಯವಾಗಿ ಜನಗಳಲ್ಲಿ ವಿಚಾರಭಿನ್ನತ್ವವುಂಟಾಗುವುದು ಸ್ವಾಭಾವಿಕವಾಗಿದೆ. ಅವರವರುಗಳ ಪ್ರಕೃತ ವಿಚಾರ ಯುಕ್ತವಾದ ಭಕ್ತಿಯು ... ವಿಶೇಷ ಮಹತ್ವಕ್ಕೆ ... ಪ್ರೇಗ್ ಮೊದಲಾದ ರೋಗಗಳಲ್ಲಿ ಆ ಮೂಢಭಕ್ತಿಯಿಂದಾಗತಕ್ಕ ಅಪಾಯವು ಸರ್ವಶ್ರುತವಾದುದಾಗಿದೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ತತ್ವಜ್ಞಾನಿಗಳಲ್ಲಿರತಕ್ಕ ತಾರತಮ್ಯವನ್ನು ತೋರಿಸಿ, ಭಕ್ತಿಯ ನಿವೃತ್ತಿಯನ್ನು ವ್ಯಕ್ತಗೊಳಿಸಿದರು" ಅನಂತರ ವೆ॥ ಚೆನ್ನವೀರಪ್ಪ ಶಾಸ್ತ್ರಿಗಳು "ಬ್ರಹ್ಮ" ಎಂಬ ವಿಷಯಕ್ಕೆ ಉಪನ್ಯಾಸವನ್ನು ಮಾಡಿ ಈ ವಿಷಯಕ್ಕೆ ಮತಾಂತರಗಳಲ್ಲಿರತಕ್ಕ ಭಿನ್ನಾಭಿಪ್ರಾಯಗಳನ್ನು ವಿವರಿಸಿದರು. ಶ್ರೀ ಗಳವರು ಇಲ್ಲಿಗೆ ದಯಮಾಡಿಸಿದ್ದರಿಂದ ಮೂರು ಮುಖ್ಯ ಕಾರ್ಯಗಳು ಅನುಷ್ಠಾನದಲ್ಲಿ ಬರುವಂತೆ ತೋರುತ್ತವೆ (೧) ಬೆಕ್ಕನ್ನು ಲಿಂಗವನ್ನು ಧರಿಸದೆ ಬರಿಗೊರಳಲ್ಲಿರತಕ್ಕ ದುಷ್ಟ ಪ್ರವೃತ್ತಿಯನ್ನು ಹೋಗಲಾಡಿಸಿ ಮಕ್ಕಳು ಒಂದು ವರ್ಷದವರಾದಂದಿನಿಂದ ಏ ಇದನೆಯ ಜನ್ಮ ಸಂಸ್ಕಾರವಾಗುವವರೆಗೂ, ಸಜ್ಜೆಯಲ್ಲಿದ್ದರೂ ಲಿಂಗವನ್ನು ಮಕ್ಕಳಿಗೆ ಧರಿಸಬೇಕು. (೨) ೧೬-೧೦ ವರ್ಷದವರಾದ ನಂತರ ಶ್ರೀ ಬಸವೇಶ್ವರರ ಬಾಲಕ, ಬಾಲಕಿಯರು, ಅಪರಾಧ ದೀಕ್ಷಾಸಂಸ್ಕಾರವನ್ನು ವಿಧಿವತ್ತಾಗಿ ಹೊಂದಬೇಕು. (೩) ವೀರಶೈವರಾದವರು ತಮ್ಮ ಇಷ್ಟಲಿಂಗದ ವಿನಹ ಇತರ ವಿಗ್ರಹಗಳಿಗೆ ಪೂಜಿಸಬಾರದು. ಶ್ರೀ ಗಳವರು ಆಜ್ಞಾಪಿಸಿದ ಈ ಮೂರು ವಿಷಯಗಳನ್ನು ವೇ॥ ಇಲ್ಲಿನ ಹಿರೇಮಠದ ರುದ್ರಪ್ಪಶಾಸ್ತ್ರಿಗಳವರು, ಇಲ್ಲಿನ ಪೋಸ್ಟ್ ಮಾಸ್ಟರ್ ವೆ॥ ರಾ॥ ಗುರುಶಾಂತಪ್ಪನವರು, ವೆ॥ ರಾ॥ ಮಾಗಾನಹಳ್ಳಿ ಸಂಗಪ್ಪನವರು, ವೆ॥ ರಾ॥ ಹರ್ಡೀಕರ್ ಮಂಜಪ್ಪನವರು, ಅನೇಕಸಾರಿ ಉಪನ್ಯಾಸಮೂಲಕ ಶಾಸ್ತ್ರಾಧಾರಗಳಿಂದ ಜನಗಳಿಗೆ ಬೋಧಿಸಿದರು. ಇಂತು ಪರಿಪರಿ ಈ ನಾನಾವಿಧಗಳಿಂದ ಸಂಭ್ರಮಗಳು ಜರುಗಿ ಶ್ರೀ ಗಳವರು ಇನ್ನೇ ದಿನ ಸಾಯಂಕಾಲದ ವೇಳೆಗೆ ಬಂಡಿಯಲ್ಲಿ ಚಿತ್ರದುರ್ಗಕ್ಕೆ ದಯಮಾಡಿಸಿದರು.

ಪ್ರತ್ಯಕ್ಷದರ್ಶಿ.

ವಿಜಯಂ ಇಲಾಖಾ ಚೆನ್ನಗಿರಿ ತಾ॥ ನ್ಯಾಮತಿ ಸೀಮೆಗೆ ಸೇರಿದ ಸುರಹೊನ್ನೆ ಗ್ರಾಮದ ಶ್ರೀ ಗುರು ಬಸವೇಶ್ವರ ಮಹೋತ್ಸವ

ಇಲ್ಲಿಯ ನಮ್ಮ ಸೀಮೆಗೆ ನಿಶ್ಚ್ಯವಾಗಿ ಮಹೇಶ್ವರರು ಈ॥ ಶ॥ ೧೧ ಯಲ್ಲಿ ಶ್ರೀಬಸವೇಶ್ವರ ದೇವಸ್ಥಾನದಲ್ಲಿ ತಂದಿರಿಸಿದ್ದ ಮೂರ್ತಿಗೆ ರುದ್ರಾಭಿಷೇಕ ಮಂಗಳಾರತಿ ಮುಂತಾದವುಗಳನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿ ೧ ರಥವನ್ನೆಳೆದು ಮೂಡಣಕ್ಕೆ ತಪ್ಪಿಸಿದರು, ಗಂಡಾಂತರದ ದಕ್ಷಿಣಕ್ಕೆ ತಿರುಗಿಸಿ, ಮಗ್ಗುಲಾಗಿ ಯಲ್ಲಿ ಶಿವಪೂಜೆ ರಥೋತ್ಸವ ಮುಂತಾದವುಗಳಿಂದ ಕಾಲಯಾಪನೆ ಮಾಡುತ್ತಿದ್ದರು. ಎರಡನೆಯ ದಿವಸ ಅಂದರೆ ಈ॥ ಶ॥ ೧೬ ರ ಮಧ್ಯಾಹ್ನದಲ್ಲಿ ಸಭೆಯು ಕೂಡಿತು. ಸಭೆಯಲ್ಲಿ ಬಂದು ಹಳ್ಳಿಗಳಿಂದ ನೂರಾರು ಜನರು ಬಂದಿದ್ದರು. ಒಟ್ಟು ಜನಸಂಖ್ಯೆಯು ೨ ಸಾವಿರದವರೆಗೂ ಇತ್ತು. ಆಸ್ಥಾನದಲ್ಲಿ ಪರಪಟ್ಟಾಧಿಕಾರಿಗಳು ಪೇಟೆ-ದ್ಯಾವನ್ನೂರು ಶಾಸ್ತ್ರಿಗಳು ವಿದ್ವಾಂಸರುಗಳು ಗ್ರಾಮಮುಖಂಡರಾದ ಮಡಿವಾಳಪ್ಪ ಮಾ॥ ಗ೧೫ ಬಸವಣ್ಣಪ್ಪ ಗ೧೫ ಸಿದ್ದಮಲ್ಲಪ್ಪ ಚನ್ನಬಸಪ್ಪ ದೇವ ಶೆಟ್ಟಿ ಚನ್ನಬಸಪ್ಪ ಬುಳ್ಳಾಪುರದ ಸಿದ್ಧಪ್ಪ ಶೆಟ್ಟಿಯವರು ಕರಿಯಪ್ಪ ಚಿಕ್ಕಪ್ಪನವರ ಮುಂತಾದವರು ಪ್ರವೇಶಿಸಿದಬಳಿಕ ಬೇವಿನಹಳ್ಳಿ ರಾಚಪ್ಪನವರು ಪರಮಪೂಜ್ಯರಾದ ಮಾಲಗತ್ತಿ ಮಠದ ಶ್ರೀ ವೀರಭದ್ರಸ್ವಾಮಿಗಳಿಗೆ ಅಧ್ಯಕ್ಷಸ್ಥಾನವನ್ನು ಕೊಡಬೇಕೆಂದು ಸೂಚಿಸಲು ಸಭೆಯವರನುಮತಿಯಿಂದ ವೀರಭದ್ರಪ್ಪ ನೆಂಬವರು ಅನುಮೋದಿಸಲು ಸದರಿ ಸ್ವಾಮಿಗಳು ಸಂತೋಷಭರಿತರಾಗಿ ಜನರ ಕರತಾಡನ ಕೋಲಾಹಲಧ್ವನಿಯೊಡನೆ ಅಧ್ಯಕ್ಷಸ್ಥಾನವನ್ನು ವಹಿಸಿದಬಳಿಕ ಸಂಸ್ಕೃತ ಪಾಠಶಾಲಾಧ್ಯಾಪಕರ ವೆ॥ ಮಾ॥ ನಾಯಕನಹಳ್ಳಿ ಬಸವರಾಜಶಾಸ್ತ್ರಿಗಳು ಸುಶ್ರಾವ್ಯವಾಗಿ ಈಶ್ವರಸ್ತುತಿಯ ಅನಂತರ ಶೈವ ಮತದ ಉಪಾದೇಯತೆಯನ್ನು ಶ್ರೋತೃಗಳ ಮನಮುಟ್ಟುವಂತೆ ಸ್ವಮತಸ್ಥರ ಮೌಢ್ಯದಿಂದಲೂ, ಮತಾಂತರದವರ ಕುಟಿಲತನದಿಂದಲೂ ಶೈವಸ್ಥಿತಿಗೆ ಬಂದಿರುವ ಕುಂದುವನ್ನು ತಿದ್ದಲು ಬರಬೇಕಾದರೆ ಪ್ರಥಮತಃ ಗುರುವರ್ಗದವರಿಗೂ ಹಾಗು ಭಕ್ತಮಹೇಶ್ವರರಿಗೂ ಅವಶ್ಯವಾಗಿ ಶ್ರೀಘ್ರಕ್ಕೆಬರಬೇಕೆಂದು ವರ್ತಿಸಿ ಒಂದು ಘಂಟೆವರೆಗೂ ಗಂಭೀರವಾದ ಸ್ವರದೊಡನೆ ಜನಗಳಿಗೆ ಆಹ್ಲಾದವುಂಟಾಗುವಂತೆ ಸುಶ್ರಾವ್ಯವಾದ ಸ್ವರದಿಂದ ಸಭೆಯನ್ನು ತೋರಿಸಿ ಶ್ರೋತೃಗಳ ಪ್ರಶಂಸೆಯನ್ನು ಪಡೆದರು ...

ರಿಂದುಂಟಾಗುವ ಲಾಭವನ್ನು, ಹಾಗು ಅದಕ್ಕುಂಟಾದ ಕೊರತೆಯನ್ನು ಪ್ರತಿಯೊಬ್ಬ ವೀರಶೈವನೂ ಈ ಪತ್ರಿಕೆಯನ್ನು ತರಿಸಬೇಕೆಂಬುದಾಗಿ ಸೂಚಿಸಲು, ಅಧ್ಯಕ್ಷರಾದ ಮಹಾಸ್ವಾಮಿಗಳು ಈ ಪತ್ರಿಕೆಯು ಬೆಳೆಯಲು ಜಗದ್ಗುರುಗಳು ಅನುಗ್ರಹಿಸಲೆಂಬುದಾಗಿಯೂ ಮತ್ತು ಶ್ರೀಬಸವೇಶ್ವರ ಮಹೋತ್ಸವ ಜ್ಞಾಪಕಾರ್ಥವಾಗಿ ಶ್ರೀ॥ ಮಾ॥ ಮೈಸೂರ್ ಯಜಮಾನ ಸಂಗಪ್ಪನವರ ಸಿದ್ಧರಕ್ಷಣೆ ದಿಗೆ ಸಹಾಯಕ್ಕಾಗಿ ಹಣವನ್ನು ಕಳಿಸಬೇಕೆಂದು ಸೂಚಿಸಲು ಸಭೆಯವರು ಕೈಯೆತ್ತಿ ಮೂಲಕ ಅನುಮೋದನ ಕೊಟ್ಟಬಳಿಕ ಮುಂದೆ ಬರತಕ್ಕ ವಾರ್ಷಿಕೋತ್ಸವದಲ್ಲಿ ಆದನೆಯ ಶ್ರೀಮತ್ಸ್ವರೂಪ ಮಹಾಸಭೆಯಲ್ಲಿ ಈ ಪತ್ರಿಕೆಗೆ ಸಹಾಯಮಾಡುತ್ತೇವೆಂಬುದಾಗಿ ವಾಗ್ದಾನ ಮಾಡಿದಬಳಿಕ ಶ್ರೀ॥ ವಗ್ಗಿ ಲಿಂಗಪ್ಪನವರ ಅಯ್ಯಪ್ಪನವರು ಪರಿಣತ ಸಾಹಿತ್ಯರವರು ವೀರಭದ್ರಪ್ಪನವರು ಸ್ವಾಗತವತ್ರಿಕೆ ತರಿಸುವದಕ್ಕೆ ವಾಗ್ದಾನ ಮಾಡಿದುದಲ್ಲದೆ ಹಣವನ್ನು ಕೂಡ ಶಾಸ್ತ್ರಿಗಳಿಗೆ ಒಪ್ಪಿಸಿದರು. ಆ ಮೇಲೆ ಶಾಸ್ತ್ರಿಗಳು ಆಚಾರವಿಷಯವಾಗಿ ಸ್ವಲ್ಪ ಮಾತನಾಡಿ ತಮ್ಮ ಸ್ಥಾನಕ್ಕೆ ತೆರಳಿದನಂತರ ಮಡಿವಾಳಪ್ಪ ಮಾ॥ ಗ೧೫ ವಿದ್ಯಾವಿಷಯವಾಗಿಯೂ ಇವರ ಸುಪುತ್ರರಾದ ಚನ್ನಪ್ಪನವರು ಆಚಾರವಿಷಯವಾಗಿಯೂ, ಶಿವಮೂರ್ತಿಯವರು ವಿದ್ಯಾರ್ಥಿಗಳು ದಾನಮಾಡುವವರನ್ನು ಶ್ರೋತೃಗಳ ಕರ್ಣಾನಂದವಾಗುವಂತೆ ಒಬ್ಬೊಬ್ಬರಾಗಿ ಭಾಷಣಮಾಡಿದ ಬಳಿಕ ಅಧ್ಯಕ್ಷ ಮಹಾಶಯರು ಈ ವರೆಗೂ ಹೇಳಿದವಿಷಯಗಳನ್ನು ದೃಢಪಡಿಸಿ ಅವುಗಳಲ್ಲಿ ತರಬೇಕೆಂಬುದಾಗಿ ಸೂಚಿಸಲು ಸಭ್ಯರೂ ಕರತಾಡನದ ಮೂಲಕ ಅನುಮೋದನಕೊಟ್ಟರು. ಬಳಿಕ ಉಭಯ ವಿದ್ಯಾರ್ಥಿಗಳು ಸದರಿಶಾಸ್ತ್ರಿಗಳಿಂದ ಶ್ರೀಬಸವೇಶ್ವರ ಪರವಾಗಿ ರಚಿಸಿದ ಕೆಲವು ಕೀರ್ತನೆಗಳನ್ನು ಪಿಟೀಲು ಮೃದಂಗ ಮುಂತಾದ ವಾದ್ಯಗಳೊಡನೆ ಕೇಳುವ ಜನರಿಗೆ ಇಂಪಾಗುವಂತೆ ಹಾಡಿದನಂತರ ಅಧ್ಯಕ್ಷರನುವಾಗಿಯೇ ರಿಗೆ ನೀರಾಜನವಿಂಮಾಡಿ ಸ್ವನಾಮವರೊಡನೆ ಸಭೆಯು ವಿಸರ್ಜಿಸಲ್ಪಟ್ಟನಂತರ ಕೆಲಕಡಿಂದಕೂಡಿದ ಪಲ್ಲಕ್ಕಿಯಲ್ಲಿ ಶ್ರೀಬಸವೇಶ್ವರ ಮೂರ್ತಿಯನ್ನು ಕುಳ್ಳಿರಿಸಿ ಜನಸ್ತೋಮ ದೊಡನೆ ಸಾರಜಿಕಾಂಕ್ಷೆ ಗಳಿಂದಲೂ ತಳಿರುತೋರಣಗಳಿಂದಲೂ ಧ್ವಜಪತಾಕೆಗಳಿಂದಲೂ ರಂಭಾಸ್ತಂಭಗಳಿಂದಲೂ ದೀಪೋತ್ಸವಗಳಿಂದಲೂ ಶೃಂಗರಿಸಲ್ಪಟ್ಟ ಪುರವೀಧಿಯಲ್ಲಿ ಶಿ ಭಜನೆಯನ್ನು ಮಾಡುತ್ತಾ ನರ್ತನ ವಂಗ್ಯಸಂತ್ತ ನಾನಾವಿಧವಾದ ವಾದ್ಯಜಾಲಗಳನ್ನು ಬಾರಿಸುತ್ತ ನೂರಾರು ಬಾಲಿಕೆಯರು ಆರತಿಯಂ ಮಾಡಿ ಮಂಗಲತರವಾದ ಹಾಡುಗಳನ್ನು ಹಾಡುತ್ತ ಅನೇಕ ವಿಧವಾದ ಮಂಗಲವಾದ್ಯಗಳನ್ನು ಬಾರಿಸುತ್ತ ಬೀದಿ ಬೀದಿ ಗಳಲ್ಲಿ ಮೆರವಣಿಗೆಯನ್ನು ಮಾಡಿ ಪುನಃ ದೇವಸ್ಥಾನಕ್ಕೆ ತೆರಳಿ ಶ್ರೀ ಬಸವೇಶ್ವರನಿಗೆ ಅಷ್ಟವಿಧಾರ್ಚನೆ ಮಾಡಿ ಆಶೀರ್ವಾದವಂ ಪಡೆದುಕೊಂಡು ತಮ್ಮ ತಮ್ಮ ಗೃಹಕ್ಕೆ ತೆರಳಿದರು.

ತಮ್ಮ ವಿಧೇಯರಾದ ಸಿದ್ಧಸಂಸ್ಥಾನದ
ಶಾಲಾ ವ್ಯವಸ್ಥಾಪಕರು.

ಸಿಂಗಿರಾಜ ಪುರಾಣ ವಿಜಯಂ

೨

ಬಂಲಕರು ರೂಢ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗಡೆಯಾದುವುಗಳಿಂದ ಮೊದಲಾದುವು ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತು ಮೂರು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವುದು ಮತ್ತು ಶ್ರೀ ಬಸವೇಶ್ವರರು ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ ... ವಿಭೂತಿ, ರುದ್ರಾಕ್ಷಿ, ಲಿಂಗ, ಗುರು, ಜಂಗಮ ಮೊದಲಾದ ಅಷ್ಟಾವರಣಗಳ ಮಹಿಮೆಯನ್ನು ... ಸ್ಪಷ್ಟವಾಗಿ ವಿವರಿಸಿ ಹೇಳಿರುವರು. ಆದ ಕಾರಣ ವೀರಶೈವ ಮತಾಭಿಮಾನಿಗಳೆಲ್ಲರೂ ಈ ಗ್ರಂಥವನ್ನು ಒಂದುಸಲ ಪ್ರಾರ್ಥನೆಯಾಗಿ ಪಾರಾಯಣ ಮಾಡಿದ್ದೇ ಆದರೆ ವೀರಶೈವಮತಸಿದ್ಧಾಂತವು ಅವರ ಹೃದಯದಲ್ಲಿ ಸ್ಪಷ್ಟಾರ್ಥ ಬೋಧೆಯಾಗುವುದು. ಸಂಶಯವಿಲ್ಲ. ಸಂಶಯವಿಲ್ಲ. ಒಳ್ಳೆ ಕಾಗದದಲ್ಲಿ ಸ್ಪಷ್ಟಾಕ್ಷರಗಳಿಂದ ಪ್ರಿಂಟಾಗಿ ೬೦೦ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆಕೂಲಿ ಸಹಿತವಾಗಿ ೨ ರೂ ೮ ಆಣೆ.

ವಿಳಾಸ — ಎಂ. ಬಸವಲಿಂಗಶಾಸ್ತ್ರಿ
ಪಾಳೆಗಾರ, ಬನಿಯನ್‌ಬೀದಿ
ಮೈಸೂರು.

೮ ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈ ಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಚಲನೆ ಹೆಚ್ಚಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನು ಜೀವಿಸುತ್ತಾನೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಸಂಚರಿಸುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಚ್ಛಕ್ತಿಯ (ಮಿಂಚಿನ) ಸ್ಪರ್ಶವು ... ಪರಿಣಮಿಸುತ್ತದೆ ... ಬಿಂದ ಪದಲ್ಲಕೆಯು ಹುಟ್ಟುತ್ತದೆಂಬ ವಿಚಾರ ಈಗ ಸಾಬೀತಾಗಿದೆ!!

ಮಿಂಚಿನ ಪದಕವು. ಮಿಂಚಿನ ಉಂಗುರವು.

ರಕ್ತ ಕೆಟ್ಟದ್ದರಿಂದ ಉಂಟಾಗುವ ಎಲ್ಲ ರೋಗಗಳು— ಅಶಕ್ತಿ, ಅಜೀರ್ಣ, ಕೈಕಾಲುಬೆವರು, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬಿಸ್ತಿನ ... ಹೋದದ ಅಶಕ್ತಿ, ಪಡ್ಡನಿದ್ದೆ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಜೆಮ್ಮು, ನಪುಂಸಕತ್ವ, ಮೋಡದ ಜಾಡ್ಯ, ತೃಷೆರೋಗ, ವಿಕಾರ, ಗಂಡಮಾಲೆ, ಜ್ವರ, ಉದರವಾತ, ಚಳಿಬಿದ್ದ ವ್ಯಾಧಿ, ಸ್ತ್ರೀಯರ ಬಾಳಂತಿ ರೋಗ, ಹಲ್ಲೆ ಬೇನೆ, ಅಪಸ್ಮಾರ, ಅರ್ಧಾಂಗವಾಯು, ... ಮೊದಲಾದ ಅನೇಕ ಉಪದ್ರವಗಳು ಮೇಲೆ ಹೇಳಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ತೂಗುಬಿಡಬೇಕು ... ಅದರಿಂದ ಹುಟ್ಟಿದ ಮಿಂಚು ... ರಕ್ತ ಶುದ್ಧವಾಗುವುದು. ಉಂಗುರವು ಬಲಗೈ ಒಂದೇ ಬೆರಳಿಗೆ ... ಬೆಲೆ ಪ್ರತಿ ೧ ಪದಕಕ್ಕೆ ೧—೦—೦. ಮತ್ತು ಪ್ರತಿ ಒಂದು ಉಂಗುರಕ್ಕೆ ... ಪೋಸ್ಟ್ ಖರ್ಚು ೦-೨-೦ ... ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ... ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ... ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳುಹಿಸಬೇಕು. ... ಪ್ರತಿ ವರ್ಷದ ... ವಿ. ಪಿ. ಮುಂಬಯಿ ಕಳುಹಿಸುವೆವು.

ಮಿಲೇನಾಸ್ ಪಾರ್ಡಿಗೋದ್ರಿಕರ್, ಮುಂಬಯಿ.

೬೩ ಉತ್ತಮ ಗ್ರಂಥಗಳು.

ಶಿವಸ್ವರೋದಯ ಮಣಿ— ಬೆಲೆ ವಿ.ಪಿ. ೮ ಆಣೆ. ಇದು ಉತ್ತಮವಾದ ಸ್ವರಶಾಸ್ತ್ರವು. ಕನ್ನಡಟಿಪ್ಪಣದಿಂದ ಕೂಡಿದೆ.

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೭ ಆಣೆ. ಸ್ವಸ್ವರೂಪ ಪ್ರಕಾಶಿಕಾ ಸಹಿತವಾಗಿದೆ. ಸೋಸಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಸಂಚಿನ್ನುಮ— ಬೆಲೆ ವಿ. ಪಿ. ೧-೮-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣದಿಂದಲೂ ಕೂಡಿದೆ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುವುವು. ಸಾಧಾರಣ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಸದ್ಭಾಷಿಸಿದ್ಧಾಂತ— ಬೆಲೆ ವಿ. ಪಿ. ೮ ಆಣೆ. ಇದರಲ್ಲಿ ಅಷ್ಟಾವರಣಪಂಚಾಚಾರವಿಚಾರ ಧರ್ಮಸಂಬಂಧ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ. ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ.

ಷಟ್ಸ್ಥಲಸೂಕ್ತಂ— ಬೆಲೆ ವಿ. ಪಿ. ೬ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ರಚಿತವಾಗಿದೆ.

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ವಾಲ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

31

ಗೋರೋಚನಾದಿ ಜವರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛಳಿಜ್ವರ, ಜ್ವರ, ಹೊಟ್ಟೆನೋವು [illegible] ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ಸಿಳ್ಳೆ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕಿಟ್ಟಿದೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಬಾಳೆಯ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗಿರುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವಕಾಲದಲ್ಲಿಯೂ ದಾಹಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟುಶೂಲೆ, ಮಕ್ಕಳ ಎಳವು, ಜ್ವರ, ಸಜ್ಜು ಜ್ವರ, ಕೈಶಕ್ತಿಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇಶಕ್ತಿವರ್ಧಕವಾಗಿದೆ—೩೦೦ ಮಾತ್ರೆಗಳುಳ್ಳ ಡಬ್ಬಿಗೆ ೮ ಆಣೆ; ಈ ಡಬ್ಬಿಗೆ ೧ ಡಬ್ಬಿ ಹೆಚ್ಚು, ೧ ರಿಂದ ೧೨ ಡಬ್ಬಿ ವರೆಗೆ ಪೋಸ್ಟೇಜು ೮ ಆಣೆ.

೮. ಪ್ಲೇಗಿನೌಷಧ.— ಪ್ಲೇಗಿಗೆ ಔಷಧವು ಉಂಟೆ ಎಂದು ಅನುಮಾನಿಸಬೇಡಿ. ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ, ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ. ಸಮಯದಲ್ಲಿ ಗಾಬರಿಯಿಂದ ಪೇಚಾಡಬೇಡಿ. ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮ ಬಳಿಯಲ್ಲಿಡಿ. ಹೊಗಳಿಕೆ ಇಲ್ಲ. ತರಿಸಿ ನೋಡಿ, ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ— ಪ್ಲೇಗಿನ ಔಷಧ ಡಬ್ಬಿ ೧ ಕ್ಕೆ ರೂ. ೧ ಕಿತ್ತುಕೊಡಬಹುದಕ್ಕೆ ಸವರುವ ಡಬ್ಬಿ ೧ ಕ್ಕೆ ಆ. ೪. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಮಸ್ವಾಮಿನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗುತ್ತದೆ. (ಸೈ) ಲಕ್ಷ್ಮಣರಾಯರು, ವರ್ಕ್ ಓವರ್‌ಸಿಯರ್, ಮೈಸೂರ್.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ. ನನ್ನ ವಿಳಾಸ— ಶ್ರೀ ಸೀತಾರಾಘವವೈದ್ಯಶಾಲಾ, ಮೈಸೂರು.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಎಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಇಳಿಸುವದಲ್ಲದೆ ಅಂಚೆಯ ವೆಚ್ಚವನ್ನು ದೇಶೆ ಈ ಕೆಳಗೆ ಕಂಡಂತೆ ತೆಗೆದುಕೊಳ್ಳುವೆವು.

ಅಂಚೆಯ ವೆಚ್ಚ

೧ ಪ್ರತಿಗೆ ೧ ವರ್ಷಕ್ಕೆ ೦—೧೨—೦.

೨ ರಿಂದ ೮ ರವರೆಗೆ ೧—೧೦—೦.

ಇದರಂತೆ ಮುಂದೆ ವೃದ್ಧಿಯಾಗುವ ಪತ್ರಿಕೆಗೂ ೧-೧೦-೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕು ಸಲ ತೀವ್ರವಾಗಿ ಜಾಹೀರಾತನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಟ್ಟಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಟ್ಟಿ ೧ ಕ್ಕೆ ೧ಆಣೆ. ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೬ ಮಾಸಕ್ಕೆ ಮಾರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಗ್ಗ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ಪ್ರತ್ಯೇಕವಾಗಿ ದರವು ಹಾಕಲ್ಪಡುವದು.

೫೦ ಬಾಲಚಿಕಿತ್ಸೆ.

(ಪತ್ಥ್ಯವಿಲ್ಲದಾದ ಮಾದಕವಸ್ತು ಇಲ್ಲದ ಉತ್ತಮವಾದ ಅ ಔಷಧಗಳಿಂದ ತಯಾರಾದವು)

ಬಾಲಗ್ರಹನಿವಾರಣ — ಇದರ ಸೇವನೆಯಿಂದ ಮೈಯಲ್ಲಿ ಹತ್ತಿದ ಬಾಲಗ್ರಹವೂ ರೋಗ ಬಾಧೆಯೂ ನಾಶವಾಗುತ್ತದೆ. ಮತ್ತು ಶಾರೀರಿಕ ಬಲವೂ ಉಂಟಾಗುತ್ತದೆ.

ದ ಅಥವಾ ಹಲ್ಲು ಬರುವ ಕಾಲದಲ್ಲಿ ಹೊಟ್ಟೆನೋವು ಕಾರಣದಿಂದ ಏನಾದರೂ ತೊಂದರೆಯುಂಟಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗುತ್ತದೆ. ಸಣ್ಣ ಹುಡುಗರಿಗೆ ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ದೊಡ್ಡದಾಗಿ ಕೈ ಕಾಲು ಸಣ್ಣವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ದಷ್ಟಪುಷ್ಟ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ, ೧ ಬಾಟ್ಲಿಗೆ, ೧-೧೦-೦ ರೂ. ೨ ಬಾ, ೨-೧೨-೧ ರೂ. ೩ ಬಾ, ೩-೧೮-೦ ರೂ. ಮಿಕ್ಕಿಗೆ ೧ ಡಜನ್ನ ಬಾಟ್ಲಿ ತರಿಸ ಬಹುದು ೧೫ ರೂ. ಪೋಸ್ಟ್ ೩ ಬಾಟ್ಲಿ ಇನಾಮು ಡಿ. ಪಿ. ಬೇರೆ.

ಬಾಲ್ಯಾಂಗ ಪುಷ್ಟಿಕರ — ಇದರಿಂದ ಸ್ವಭಾವವಸ್ಥೆಯು ಬಂದಾಗ ಧಾತುವೃದ್ಧಿಯಾಗುತ್ತದೆ. ಮೂತ್ರವಿಸರ್ಜನದ ಮುಂದೆ ಅಥವಾ ಹಿಂದೆ ಹೋಗುವ ಧಾತು ಬಂದಾಗುತ್ತದೆ. ಜ್ಞಾಪಕವು ಚೆನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧೫ ರೂ ೩ ಡಬ್ಬಿಗೆ ಒಂದು ಡಬ್ಬಿ ಇನಾಮು ಡಿ. ಪಿ. ಬೇರೆ.

ಬಾಲಮುದು— ಇದರಿಂದ ಚಳೀ ಗಡಗಡ, ಇಸಬು, ಬೆಚ್ಚ, ದದ್ದು ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೮ ಆಣೆ. ೨ ಡಬ್ಬಿಗೆ ೧ ಡಬ್ಬಿ ಇನಾಮು ಡಿ. ಪಿ. ಬೇರೆ.

"ಬಾಲಸುಧೆ."

("ಬಾಲಕರಿಗಾಗುವ ಔಷಧವು.")

ಇದರ ಸೇವನೆಯಿಂದ ಮಲಬದ್ಧತೆಯು ನೆಟ್ಟಗಾಗಿ ಮಲಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚೆನ್ನಾಗಿ ಆಗುತ್ತದೆ. ಬಾಲಕರಿಗೆ ಒಂದು ತರಹ ಉತ್ತಮ ರುಚಿ ಬರುತ್ತದೆ. ಕೆಮ್ಮಿನ ರೋಗಗಳು ಬರುವದಿಲ್ಲ. [illegible] ಡಿ. ಪಿ. ಬೇರೆ.

ಮಾತ್ರ್ಯ ಬಾಲ ಚಿಕಿತ್ಸಾ ಭವನ
ಜೋಶಿ ಪ್ರಯೋಗಶಾಲೆ ದಾಮೋದರ ನಾರಾಯಣ
ನಂ. ೫೬೫ ಕಾಳ್ಬಾದೇವಿ
ಮುಂಬಯಿ

ಪಂಡಿತ ಎಸ್. ಗರಳಪುರಿ ಶಾಸ್ತ್ರಿ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ ಮೈಸೂರು.

೬೨

ಗೋರೋಚನ ಮಾತ್ರೆ— ೧೨ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೭೦-೮೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦—೮—೦.

ಜ್ವರದಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೨ ಮಾತ್ರೆ ಸೀಸೆ ೦—೮—೦, ೨೪ ಮಾತ್ರೆ ಸೀಸೆ ೦—೪—೦.

ಆರೋಗ್ಯಪ್ರಭಾಕರ.— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೮ ಮಾತ್ರೆ ಸೀಸೆ ೧—೦—೦

ಬಾಲಸಂಜೀವಿನಿ.— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೆ. ಸುಮಾರು ೨೦ ಸಲಕ್ಕೆ ಆಗುವ ಔಷಧಿ ಡಬ್ಬಿ -೮-೦ ತೊಲೆ ೧ ಕ್ಕೆ ೧-೪-೦

ಮಸ್ತಕಶೂಲಹರ— ಇದರಿಂದ ಗರ್ಭವೇಟ್ಟಿಯುಂಟಾಗುವ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೭ ಮಾತ್ರೆ ಸೀಸೆ ೦—೮—೦.

ಅಜೀರ್ಣಹರ ರಸಾಯನ— ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧—೪—೦.

ಕ್ಷಯಾಂತಕಲೇಹ್ಯ— ಮೇಹರೋಗಗಳಲ್ಲಿ ಬಹಳ ಖಾತರಿಯಾದ ಔಷಧಿ. ಸೇರಿನ ಡಬ್ಬಿ ೮—೦—೦. ೧೭ ದಿನಗಳ ಔಷಧಿ ೨—೦—೦.

ಸುಖಭೇದಿ ಮಾತ್ರೆ— ೧೨ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ. ೨೪ ಮಾತ್ರೆ ಸೀಸೆ ೦—೩—೦

ಮಲಶೋಧನ ವಟಿಕಾ— ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ. ೩೦ ಮಾತ್ರೆ ಸೀಸೆ ೦—೪—೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದ್ದು ೩೦೦ ಮಾತ್ರೆ ಸೀಸೆ ೦—೮—೦.

ಪುರುಷ ಸಂಜೀವಿನಿ.— ೩೦ ಮಾತ್ರೆ ಸೀಸೆ ೨—೦—೦

ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦—೪—೦

ಅಜೀರ್ಣದಮಾತ್ರೆ— ೪೦ ಮಾತ್ರೆ ಸೀಸೆ ೦—೧೨—೦

ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦—೩—೦

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ಬಹಳ ಕ್ರಯಕ್ಕೆ ದೊರೆಯುವು. ಸದಾ ಒಂದು ಸನ್ನ ಅಲ್ಲಾ ಹವಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೆಯ ಇಸವಿ ನವೆಂಬರ್ ತಾ॥ ೨೦ ರಿಂದ ೧೯೧೧ ನೆಯ ನವೆಂಬರ್ ತಾ॥ ೨೬ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಬಹುಳ ಅಮಾವಾಸ್ಯೆಯಿಂದ ಮಾರ್ಗಶಿರ ಶುದ್ಧ ಪಂಚಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಮಲಬಾರ್ ತೇದಿ
20	ಸೋಮ	ಅ	45 15	ವಿ	30-30	5
21	ಮಂಗ	ಪಾ	16-58	ಅನು	44-18	6
22	ಬುಧ	ಬಿ	53-2	ಜ್ಯೇ	49 36	7
23	ಗುರು	ತ	57-58	ಮೂ	55-40	8
24	ಶುಕ್ರ	ಚ	60 0	ಪೂಷಾ	60-0	9
25	ಶನಿ	ಚ	4 6	ಪೂಷಾ	2 50	10
26	ಭಾನು	ಪಂ	9 10	ಉಷಾ	9-3	11

(1) ಸೋಮವತೀಅಮಾವಾಸ್ಯ, ಪದ್ಮಕಯೋಗಃ, ಕಾರ್ತಿಕಸೋಮವಾರ, ಅಮಾಸೋಮವ್ರತಂ, ಗಜಾರಣ್ಯಪ್ರೇಕ್ಷೆ, ಮಾರ್ಗಶಿರಾಗದರ್ಶನಂ, ಸುಬ್ರಹ್ಮಣ್ಯಪ್ರಜೆ, ಬಕ್ಷದೀರ್ಕ್ಷೋತ್ಸವ (2) ಶಿವತ್ರಿಕೋಣಾರಾಧನವ್ರತಂ. (3) ಗಣದ್ಯಾಗೆಣಾಕನಿಷ್ಟೇ (4) ಬವರೀನಾರಾಯಣವ್ರತಂ, ಶೂಲಕರದಂಚಮಿವ್ರ

ಮೈಸೂರ್ ಪ್ರೆಸ್ಸಿನಲ್ಲಿ ಮುದ್ರಿತ

ಕಿರಿಯ ಸ್ಟಾರ್

REGISTERED NO M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಶಾನಾ ಪರಮಧಿಗತರಾಜಮಂಡಲಹಿತೈಷಾ ಘನಪಥಕ್ಯತಾವನಾರಾ ಜಕ್ಯಜ್ಜನೆ ಹೃತ್ತ ಸೋಜರಾಜೆಯಾತ್ ।
ಶ್ರೀಮತ್ಕೃಷ್ಣನೃಪಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟಪ್ರದಶೀಲ ವಾಕವಿತಸಾದ್ಗುಣ್ಯಾಲಿಪಾಲಂಪಲಂ ।
ಸೀಮಾತೀತಯಶಃಪ್ರತಾಪವಿಪುಲಂ ಸದ್ವೃತ್ತಮಾಲಾಕುಲಂ । ಪ್ರೇಮಂಬೆತ್ತಿ ಕೆಯಂ ಸದಾಪ್ರೊರೆಗೆ ಗೌರೀಶಾನುಕಂಪೋಜ್ವಲಂ ।

ಪುಸ್ತಕ ೨೪] ಮೈಸೂರ್ ಸ್ಟಾರ್ ಸನ್ ೧೯೧೦ ನೆಯ ಇಸವಿ ನವಂಬರ್ ತಾ|| ೨೮ ನೆಯ ಸೋಮವಾರ. [ಸಂಚಿಕೆ ೪೭.

44

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ ೧–೦–೦ ೫–೦–೦; ೩ ೦–೦; ೨–೮–೦; ೧–೮–೦; ಕಲೆಸ್ತೂರಿ ಬಿಳೂಪು ತೊಲಾ ೧ ಕ್ಕೆ ೧–೦–೦; ಹಸಿ ಗಂಧ ತೊಲಾ ೧ ಕ್ಕೆ ೧೨ ಆಣೆ; ದಶಾಂಗ ಗಟ್ಟಿ ೧ ಕ್ಕೆ ೪ ಆಣೆ, ಧೂಪದ ಗಟ್ಟಿ ೧ ಕ್ಕೆ ೨ ಆಣೆ, ಬಾಲಗ್ರಹಧೂಪ ಟಿನ್ ೧ ಕ್ಕೆ ೪ ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲಿ

ಸಿಂಗಿರಾಜಪುರಾಣವಿಜಯ ?

4

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗಿರಾಜಪುರಾಣದ ಕಥೆಗಳು ಬಿಡುಗನ್ನಡ ನುಡಿಗಳಿಂದ ನೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳದ್ದಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರ ಈ ಭೂಲೋಕದಲ್ಲಿ ವೀರಶೈವ ಮತದವರುಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿಯಾಗಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ಹೇಳಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುಸಲ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂದೇಹವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ ೩೦೦ ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ ೨ ರೂ. ೮ ಆಣೆ.

ವಿಳಾಸ—ಎಂ. ಬಸವಲಿಂಗಶಾಸ್ತ್ರಿ,
ಹಳೆಅಗ್ರಹಾರ, ದಿವಿಟಗೆಬೀದಿ
ಮೈಸೂರು.

4 ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ. ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ಹರಿದಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕ್ರಿಯೆಗೆ ವಿದ್ಯುಲ್ಲತೆಯು (ಮಿಂಚಿನ) ಸ್ಪರ್ಶವು ಹಿತಕರವಾಗಿ ಪರಿಣಮಿಸುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ ಸಮ್ಮೇಲನದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸಕಲರಿಗೂ ಗೊತ್ತಾಗಿದೆ !!!

ಮಿಂಚಿನ ಪದಕವು. ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಕೈಕಾಲುಹರತ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಸುತ್ತು ಸೊಂಟದ ಅಶಕ್ತಿ, ನಿಷ್ಪನಿದ್ರೆ ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೇಹದ ಜಾಡ್ಯ, ಹೊಟ್ಟೆಯ ವಿಕಾರ, ಕಜ್ಜಿ ಗಜಕರ್ಣ, ಜ್ವರ, ಉದರವಾತ, ಕಳಿವರ ವ್ಯಾಧಿ, ಸ್ತ್ರೀಯರ ಬಾಣಂತಿ ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ಊನತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ರೇಶ್ಮೆಯ ದಾರದಿಂದ ಕೊರಳಿಗೆ ಕಟ್ಟಲು ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರ ರಕ್ತ ವ್ಯಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ ಪ್ರತಿ ೧ ಪದಕಕ್ಕೆ ೧–೨–೦. ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರಯ ೧–೨–೦ ಪೋಸ್ಟ್ ಖರ್ಚ ೦–೩–೦ ಒಮ್ಮೆಲೆ ೩ ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ ಬಿಟ್ಟು ಕಳಿಸುವೆವು. ಒಮ್ಮೆಲೆ ೧೨ ನಗಗಳನ್ನು ತರಿಸಿಕೊಳ್ಳುವವರಿಗೆ ೩ ನಗಗಳನ್ನು ಬಿಟ್ಟಾಗಿ ಕಳಿಸುವೆವು. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ಧರಿಸುವಾಗ ಬೆರಳಿನ ಅಳತೆ ಕಳುಹಿಸಬಹುದು. ಉಪಹತಿಯು ಗುಣಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿದೆ. ವೈಷಮ್ಯಪ್ರಕೃತಿಯುಳ್ಳವರು ಮೇಲಿನ ಒಂದೊಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಆಗತ್ಯವು. ೩ ವರ್ಷದ ಕೆಳಗಿನ ಚಿಕ್ಕಬಾಲ್ಯದವರಿಗೆ ದಾಕ್ತರಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಆಗಾಗಿದೆ. ವಿ. ಪಿ. ಯಿಂದಲೂ ಕಳಿಸುವೆವು.

ಪಿಕಲದಾಸ ರಾಮಗೋಪ್ರ್ಯರ, ಮುರ್ಡೇಶ್ವರ.
ಪೋಸ್ಟ್ ಬೆಳೆ. ತಾ|| ಕುಮಟಾ ಕಾನಡಾ ಜಿಲ್ಲಾ,
Kanara District

ಶಾಂತಮೂರ್ತಿ ಪ್ರಕಾಶಿಕಾ. (ಪುಟ ೪೦)

10

ಈ ಗ್ರಂಥದಲ್ಲಿ ಶಕ್ತಿವಿಶಿಷ್ಟಾದ್ವೈತಮತಕ್ಕೆ ಸಂಬಂಧವಾಗಿ ಶ್ರೀಮೋಸಲೆ ರೇವಣಾರಾಧ್ಯರಿಂದ ಶ್ರೀ ರುದ್ರಸೂಕ್ತಕ್ಕೆ ಕನ್ನಡ ಟೀಕೆಯು ವಿಶದವಾಗಿ ಬರೆಯಲ್ಪಟ್ಟಿರುತ್ತೆ. ಇದು ಶಿವಭಕ್ತಿಸಂಪನ್ನರೆಂದವರಿಗೆ ನಿತ್ಯಪಾರಾಯಣಕ್ಕೆ ಅತ್ಯಂತೋಪಯುಕ್ತವಾದದ್ದು. ಬೆಲೆ ವಿ. ಪಿ. ಸಹಿತ ೪ ಆ.

ವಿಳಾಸ ಮೈಸೂರು ಹಳೇಅಗ್ರಹಾರ
ಸೊಪ್ಪಿನ ಕೊರಟಿ ... ಶ್ರೀಕ ಆರಾಧ್ಯ

ಮೈಸೂರ್ ಸ್ಟಾರ್ ಆಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦–೧೦–೦
ಪರಮಾದಿಗಜಾ ಕುಶೇತಾರಾವಳಿ	೦–೪–೦
ಬಾಲಲೀಲೆ ಚರಿತ್ರೆ	೦–೫–೦
ಕರಸ್ಥಾಂಜನ್ನು	೦ ೪–೦
ಸಟೀಕ ಕರ್ನಾಟಕ ಶಬ್ದಮಂಜರಿ	೦–೩–೦
ಸಟೀಕ ಸಂಧ್ಯಾವ್ರತ	೦–೩–೦
ಸಟೀಕ ವಿವಾಹವಿಧಿ	೦–೩–೦
ವ್ರತಪಂಚಕ	೦–೨–೦
ವಿಷೇಶಮಂಜರಿ	೦–೨–೦
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	೨–೨–೦
ಗುರುಕಂಠೇಶ್ವರಶತಕಂ	೦–೨–೦

ಅಂಚೆ ವೆಚ್ಚ ಬೇರೆ

ಉತ್ತಮ ಗ್ರಂಥಗಳು.

15

ಬಸವರಾಜವಿಜಯಂ—ಬೆಲೆ ವಿ. ಪಿ. ಯಿಂದ ೧ ರೂ. ಬಾಲಕರು ಕೂಡ ಓದಿಕೊಳ್ಳುವಂತೆ ಬಸವಪುರಾಣದ ಕಥೆಗಳೆಲ್ಲಾ ಇವೆ.

ಚೆನ್ನಬಸವೇಶವಿಜಯಂ – ೧–೪–೦. ಚೆನ್ನಬಸವಪುರಾಣದ ಕಥೆಗಳೆಲ್ಲಾ ಬಿಡುಗನ್ನಡ ನುಡಿಯಿಂದ ಬರೆಯಲ್ಪಟ್ಟಿವೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯಚರಿತಂ, ಇದು ವೀರಶೈವಮತದ ಒಬ್ಬಾಚಾರ್ಯರ ಚರಿತ್ರೆ. ೧ ನೇಯ ಪ್ರಕರಣಕ್ಕೆ ೧–೩–೦. ೨ ನೇಯ ಪ್ರಕರಣಕ್ಕೆ ೧ ರೂ.

ವೀರಶೈವ ಧರ್ಮಶಿರೋಮಣಿ– ೧ ೩ ೦. ವೀರಶೈವ ಮತಸ್ವರೂಪವೂ–ತದ್ಧರ್ಮವೂ ಚೆನ್ನಾಗಿ ವಿವರಿಸಲ್ಪಟ್ಟಿವೆ. (ಸವ್ಯಾಖ್ಯಾನ)

ಶಿವಗಣ ಪುರಾಣಂ– ೧–೩–೧ ಶಿವಗಣರ ಸಂಬಂಧದ ಕಥೆಗಳನ್ನು ಅನೇಕ ಉಪಕಥೆಗಳೊಡನೆ ವಿವರಿಸುವ ಕನ್ನಡ ವ್ಯಾಖ್ಯಾನ ಪುಸ್ತಕವಾಗಿದೆ.

ಸಟೀಕ ತತ್ವಪ್ರಕಾಶಿಕಾ ೩ ಆಣೆ. ಸಿದ್ಧಾಂತಾನುಸಾರವಾಗಿ ೩೬ ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನಂ— ಜ್ಞಾನದೀಕ್ಷೆಗಳ ಲಕ್ಷಣವು, ಮೋಕ್ಷವು ದೀಕ್ಷೆಯಿಂದಲಬ್ಧವೆಂಬ ಸಂಗತಿಯೂ ಉತ್ತಮವಾಗಿ ವಿವರಿಸಲ್ಪಟ್ಟಿದೆ ಬೆಲೆ ೩ ಆಣೆ.

ಸಟೀಕ ದೀಕ್ಷಾವಿಧಿ– ವಿಶೇಷ ವಿಷಯಗಳಿಂದ ಕೂಡಿದೆ ಬೆಲೆ ೧೨ ಆಣೆ.

ಶ್ರುತಿ ಮುಕ್ತಾವಳಿ– ಬಸವೇಶ ಪಂಚಪ್ರಕಾರ ಗದ್ಯ ದಿಗಳಿವೆ. ೩ ಆಣೆ.

ರಕ್ಷಾಕವಚ ೨–೨ ಆಣೆ. ಪಂಚಾಕ್ಷರೀ ಕ್ರಮ ೧ ಆಣೆ. ವೀರಶೈವ ಗ್ರಂಥಪ್ರಕಾಶಿಕಾ ಉತ್ತಮವಾದ ವೀರಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ–ಪ್ರತಿ ತಿಂಗಳೂ ೮೦ ಪುಟಗಳು. ... ಬೆಲೆ ...

... ಶಿವಶಾಸ್ತ್ರಿ,
... ಮೈಸೂರು.

ಬಂಗೀ ಕುಸ್ತಿಗಳು ! ಬಂಗೀ ಕುಸ್ತಿಗಳು !!

ನವಲಗುಂದದಲ್ಲಿ ಜರಗುವ ಕೊರೋನೇಶನ್

ದರಬಾರದ ಜಾಹಿರಾತು.

ಇದರ ಮೂಲಕ ಸಾರ್ವಜನಿಕ ಜನರಿಗೆ ತಿಳಿಸುವದೇ ನೆಂದರೆ:—

ಸಮಸ್ತ ರಾಜ್ಯವನ್ನು ಆಳುವ ಹಿಂದುಸ್ಥಾನದ ಚಕ್ರವರ್ತಿಗಳಾದ ಪರಮಪೂಜ್ಯ ಶ್ರೀ ಬಾದಶಹಾ ೫ ನೆಯ ಜಾರ್ಜ್ ಮಹಾರಾಜರು ಮತ್ತು ಚಕ್ರವರ್ತಿನಿಯರಾದ ಮೇರಿ ಮಹಾರಾಣಿ ಸಾಹೇಬರ ರಾಜ್ಯಾರೋಹಣದ ದರಬಾರದ ಉತ್ಸವದ ದೆಸೆಯಿಂದ ನವಲಗುಂದದಲ್ಲಿ ತಾ॥ ೬ ನೆಯ ಡಿಸೆಂಬರ ೧೯೧೧ನೆ ಯ ಬುಧವಾರದಿಂದ ತಾ॥ ೧೧ ಡಿಸೆಂಬರ ೧೯೧೧ನೆಯ ಇಸ್ವಿ ಸೋಮವಾರದವರೆಗೆ ಬಂಗೀ ಕುಸ್ತಿಗಳನ್ನು ಆಡಿಸಿ, ಬಂಗಾರ, ಬೆಳ್ಳಿಯ ಖಡೆಗಳು, ಶಾಲು, ಫಡಕಾ ಮೊದಲಾದ ವಸ್ತ್ರಗಳು ಕುಸ್ತಿ ಆಡುವವರ ಯೋಗ್ಯತೆಯ ಮೇರೆಗೆ ಇನಾಮ ಕೊಡುವದರಲ್ಲಿ ಬರುವದು. ಮತ್ತು ಸದರ ತಾ॥ ೬ ರಿಂದ ೧೨ ಡಿಸೆಂಬರ ವರೆಗೆ ಬಾಲಿಕಾ ಬಾಲಿಕೆಯರ ಆಟನೋಟಗಳು, ಗಾಯನ, ನರ್ತನ, ಮದ್ದು ಹಾರಿಸುವದು, ದೀಪೋತ್ಸವ ಬಡಬಡವರಿಗೆ ಅನ್ನ ವಸ್ತ್ರ ಕೊಡುವದು ಮುಂತಾದ ಸಮಾರಂಭಗಳು ಜರಗುವವು. ಅದ್ದರಿಂದ ಕುಸ್ತಿ ಆಡತಕ್ಕವರೂ, ನೋಡತಕ್ಕವರೂ ಈ ಮಹೋತ್ಸವದ ಸಂಧಿಯನ್ನು ಕಳಕೊಳ್ಳದೆ ಅಗತ್ಯವಾಗಿ ಬಂದು ಮುನಸಿಪಾಲಿಟಿಯ ನೇತ್ರಗಳಿಗೆ ಆನಂದವನ್ನು ಉಂಟುಮಾಡಿಕೊಳ್ಳಬೇಕೆಂದು ನಮ್ಮ ಸವಿನಯ ಸೂಚನೆಯುಂಟು. ನವಲಗುಂದದಲ್ಲಿ ಈಗ ಪ್ಲೇಗು ಶಾಂತವಾಗಿದೆ, ಮತ್ತು ನೀರಿನ ಸಮೃದ್ಧಿಯುಂಟು. ತಾ॥ ೨೧-೧೧-೧೯೧೧

ಕಮಿಟಿಯ ಮೆಂಬರುಗಳು

ರಾವಸಾಹೇಬ ದಾಮೋದರ ಕೇಶವ ಕಟಗೇರಿ ಮಾಮಲೇದಾರ.

ಮಿ॥ ಕೊಟ್ರಬಸಪ್ಪಾ ಗುರುಪಾದಪ್ಪಾ ಬಾವಿಕಟ್ಟಿ ಪ್ಲೀಡರ್ ಬಿ. ಎ.

„ ದತ್ತಾತ್ರಯ ಶಿವರಾಮ ಶಿರಾಳಿ ಫಸ್ಟ್ ಕಾರಕೂನ.

„ ಬಾಪುರಾವ ಚಿಟಗುಪ್ಪಿ ಪೋಲೀಸ ಸಬ್ ಇನಸ್ಪೆಕ್ಟರ್.

„ ರಾಮರಾವ ಜೋಶಿ ವಾದ ಯಾಕ್ನಿಯಡ ಇಷಿ

„ ಕೃಷ್ಣರಾವ ದಾಸರಿ ಸಬ್ ರಿಜಿಸ್ಟ್ರಾರ.

„ ಲಕ್ಷ್ಮಣರಾವ ಕಿತ್ತೂರಕರ ಸಬ್ ಅಸಿಸ್ಟಂಟ ಸರ್ಜನ.

ಮುನ್ಸಿಪಲ್ ಮೆಂಬರರು

೧ ಮಿ॥ ಕೃಷ್ಣಪ್ಪಾ ಜೆಬಸೂರ.
೨ „ ಸಂಗಪ್ಪಾ ಶಿದ್ರಾಮಸೆಟ್ಟಿ.
೩ „ ಬಸಪ್ಪಾ ಸಿದ್ರಾಮಸೆಟ್ಟಿ.
೪ „ ಅಡಿವೆಪ್ಪಾ ಅಮರಸೆಟ್ಟಿ.
೫ „ ಸಿದ್ದಪ್ಪಾ ಸುದೇವಾರ
೬ „ ಬಸನಗೌಡ ಪಾಟೀಲ
೭ „ ಮಾರುತಿ ಬಕಾಜಿ.

ಲೋಕಲ್ ಬೋರ್ಡ ಮೆಂಬರರು.

೮ ಮಿ॥ ಹನುಮಂತಗೌಡಾ ಪಾಟೀಲ.
೯ „ ಮುಳಮುತ್ತಲ ಗವಸಾಹೇಬ ಖಾಜೀ.
೧೦ „ ಕಲ್ಲಪ್ಪಾ ಕಿಬಸದ.
೧೧ „ ರಾಮಚಂದ್ರ ಕೃಷ್ಣ ಬನ್ನಿಗಟ್ಟಿ.

ಊರೊಳಗಿನ ಪ್ರಮುಖರು.

೧೨ ಮಿ॥ ಗುರಪ್ಪ ಜಿಬಾರಿಯ ಅಬಕಾರಿ ಕಂಟ್ರಾಕ್ಟದಾರ.
೧೩ „ ಕೃಷ್ಣಪ್ಪಾ ದಾರವಾಡ.
೧೪ „ ರಾಮರಾವ ಮಾರವಾಡಿ.
೧೫ „ ಗಂಗಾರಾಮ ಮಾರವಾಡಿ.
೧೬ „ ಮಾಣಿಕ್ಯಚಂದಪ್ಪಾ ಅನಿಗುಂದಿ.

ಚಕ್ರವರ್ತಿಗಳು ದಿಲ್ಲಿಯ ಪಟ್ಟಣವನ್ನು ಪ್ರವೇಶಿಸುವಾಗ್ಗೆ ಆನೆಯಮೇಲೆ ಅಂಬಾರಿಯಲ್ಲಿ ಉತ್ಸವಗೊಳ್ಳದಿರಲು ಕಾರಣ:—

ರಾಜಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಿ ದಿಲ್ಲಿಪಟ್ಟಣವನ್ನು ಪ್ರವೇಶಿಸುವಾಗ್ಗೆ ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಉತ್ಸವಗೊಳ್ಳದಿರುವ ವಿಚಾರದಲ್ಲಿ ಭಾರತಪ್ರಜೆಗಳು ಅಸಮಾಧಾನವಾಗಿರುತ್ತಾರೆ. ಆದರೆ ಸ್ವರವಾದ ಪೂರ್ವದೇಶಕ್ಕೆ ಪ್ರಾಚೀನಪದ್ಧತಿಯನ್ನು ಕೊಡದೆ ದಿಲ್ಲಿಯಲ್ಲಿ ಆನೆಯಮೇಲೆ ಕುಳಿತು ಉತ್ಸವಗೊಳ್ಳುವ ಅಭಿಲಾಷೆಯು ಅವರಿಗೆ ಪ್ರಕೃತವಾಗಿದ್ದಿತು. ಆ ಕಾಲದಲ್ಲಿ ಹಿಂದೂರಾಜರು ಬ್ರಾಹ್ಮಣರನ್ನು ತಮ್ಮ ಸೇವಕರನ್ನಾಗಿ ಮಾಡಿಕೊಳ್ಳುತ್ತಿದ್ದರು. ಹಿಂದೂರಾಜರೆಲ್ಲ ಕೈಕೆಳಗೆಂದು ಭಾವಿಸಲ್ಪಟ್ಟಿದ್ದ ಪ್ರಾಚೀನರು ಮತ್ತು ಆಯಾ ದೇಶದ ಶ್ರೇಷ್ಠರೆಂದು ಭಾವಿಸಲ್ಪಟ್ಟಿದ್ದ ಸಮುದಾಯಗಳು ಮಾತ್ರ ಹೀಗೆ ಗಜವಾಹನಗಳ ಮೇಲೆ ಮತ್ತು ಚಕ್ರವರ್ತಿಗಳ ಮುಂಬದಿಯಲ್ಲಿ ತಿರು

[ಮುಂದಿನ ಕಾಲಮ್ಮಿನಲ್ಲಿ ನೋಡಿರಿ]

ಗಿ, ಆನೆಯಮೇಲಿನ ಅಂಬಾರಿಯಲ್ಲಿ ಕುಳಿತು ಉತ್ಸವಗೊಳ್ಳುವ ಪದ್ಧತಿಯು ಭರತಖಂಡದಲ್ಲಿ ಬಹಳವಾಗಿ ಕಡಿಮೆ ಯಾಗಿರುವದು. ಯೂರೋಪಿನಲ್ಲಿ ಹದಿನೆ ಯಾವ ಕಾಲದಲ್ಲೂ ಆನೆಯಮೇಲೆ ಕುಳಿತು ಉತ್ಸವಗೊಳ್ಳುವ ಪದ್ಧತಿಯು ಇಲ್ಲವೇ ಇಲ್ಲವಾದುದರಿಂದ, ಪೂರ್ವಾಪರ ಪದ್ಧತಿ ಜಾರಿಗೆ ಅವರು ಚಕ್ರವರ್ತಿಯವರ ಮುಖಭಂಗಕೆ ಬಿನ್ನನ್ನ ತಿರಿಗಿ ಕೊಂಡು ಕುಳಿತುಕೊಳ್ಳಬೇಕಾದ ಬಿಕ್ಕಟ್ಟಿನವರುಗಳೆಲ್ಲ ಆನೆಯ ಮೇಲೆ ಕುಳಿತುಕೊಂಡು ಅದನ್ನು ಸಮರ್ಥತೆಯಿಂದ ನಡೆಸಬಲ್ಲ ಬಿಕ್ಕಟ್ಟನು ಜಾರ್ಜ್ ಚಕ್ರವರ್ತಿಯವರಿಗೆ ದೊರೆಯುವುದು ಕಷ್ಟತರವಾಗಿದೆ. ಆನೆಯು ಸಾಧುವಾಗಿರುವದೆಂದು ಅದನ್ನು ನಂಬಿಕೊಂಡಿರಲಾಗುವುದಿಲ್ಲವು. ಅದು ಜನರಗುಂಪು ವಿಶೇಷವಾಗಿ ನೆರೆದಿರುವಾಗ್ಗೆ, ಗುಂಡುಗಳು ಹಾರುವಾಗ್ಗೆ ಇದ್ದಕ್ಕಿದ್ದಹಾಗೆ ರೇಗಿ ಜನರಮೇಲೆ ನುಗ್ಗಿ ಅನೇಕ ಪ್ರಾಣಹಾನಿಯನ್ನುಂಟುಮಾಡುವ ಸ್ವಭಾವದ್ದಾಗಿ ದ್ದಾಗಿರುತ್ತದೆ. ಈ ಎರಡು ಕಾರಣಗಳಿಂದ ನಮ್ಮ ದಯಾಪರರಾದ ರಾಜಚಕ್ರವರ್ತಿಯವರು ಅಪರಿಮಿತವಾದ ಜನಸಂದಣಿಯಲ್ಲಿ ಶ್ರೀಗಂಧದ ಪ್ರಾಣಿಯಾದ ಆನೆಯಮೇಲೆ ಕುಳಿತು ಉತ್ಸವಗೊಳ್ಳುವುದನ್ನು ತಪ್ಪಿಸಿಬಿಟ್ಟಿರುವುದರಿಂದ, ತಮ್ಮ ಪ್ರಜೆಗಳ ಪ್ರಾಣರಕ್ಷಣೆಯ ವಿಷಯದಲ್ಲಿ ಚಕ್ರವರ್ತಿಯವರು ಎಷ್ಟೊಂದು ದಯೆಯನ್ನು ತೋರಿಸಿರುವರೆಂಬುದು ವ್ಯಕ್ತವಾಗುತದೆ. ಪೂರ್ವಕಾಲದಲ್ಲಿ ಹಿಂದೂ ದೊರೆಗಳೂ, ರಾಜರುಗಳೂ ಆಕಾಶದಲ್ಲಿ ಕುಳಿತು ಸಂಚರಿಸುತ್ತಿದ್ದರೆಂದು ಹೇಳುತ್ತಾರೆ. ನಮ್ಮ ಜಾರ್ಜ್ ಚಕ್ರವರ್ತಿಯವರು ಆ ಪ್ರಕಾರ ಆಕಾಶದಲ್ಲಿ ಸಂಚರಿಸಬೇಕೆಂದು ಇಚ್ಛೆಪಟ್ಟಿದ್ದಲ್ಲಿ, ಅತ್ಯುತ್ತಮವಾದ ಆಕಾಶವಿಮಾನವು ನಿರ್ಮಿಸಲ್ಪಡುತ್ತಿದ್ದಿತು. ಆದರೆ ತಮ್ಮ ಪ್ರಜೆಗಳು ತಮ್ಮ ದರ್ಶನವನ್ನು ನೋಡಿ ಆನಂದಪಡುವುದಕ್ಕಿಲ್ಲವಾಗುತ್ತದೆಂಬುದರ ಮೇಲೆ, ಚಕ್ರವರ್ತಿಯವರು ಆ ಪ್ರಯತ್ನವನ್ನು ಮಾಡಲಿಲ್ಲವಾಗಿ ಸ್ಪಷ್ಟವಾಗುತ್ತದೆ. ಎಂದು ಮುನ್ಶಿ ರಿಯಾದ್ ಅಹಮದ್ ಎಂಬಾತರು ಒಂದು ಉರ್ದು ಪತ್ರಿಕೆಯಲ್ಲಿ ಬರೆದಿರುತ್ತಾನೆ

ರಾಜಚಕ್ರವರ್ತಿದಂಪತಿಗಳು ದಯಮಾಡಿಸಿದ ವೇಳೆಯಲ್ಲಿ ನಡೆಯುವ ಉತ್ಸವಗಳ ಕಾಲನಿರ್ಣಯವು:—

ಚಕ್ರವರ್ತಿದಂಪತಿಗಳು ಪ್ರಯಾಣಮಾಡುತ್ತಿರುವ ಮೆಡಿನಾ ಹಡಗು ಬೊಂಬಾಯಿಯನ್ನು ಸೇರುತಲೆ ಗೌವರ್ನರ್ ಜನರಲ್‍ರವರು ಭರತಖಂಡದ ಸರ್ವ ಸೇನಾಧಿಪತಿಗಳ (ಕಮಾಂಡರ್ ಇನ್ ಚೀಫರ) ಕೂಡ ಅಪೋಲೋಬಂದರದಿಂದ ನಾವೆಯಲ್ಲಿ ಕುಳಿತು ಮೆಡಿನಾ ಹಡಗಿಗೆ ಹೋಗುವರು. ಅದೇ ಮಧ್ಯಾಹ್ನ ೩॥ ಘಂಟೆಗೆ ಲೇಡಿಹಾರ್ಡಿಂಜವರು, ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರುಗಳು, ಲಾರ್ಡ ಬಿಷಪ್ಪರವರು, ಗೌವರ್ನರ್ ಕೌನ್ಸಿಲ್ ಮೆಂಬರುಗಳು, ಗೌವರ್ನಮೆಂಟ್ ಚೀಫ್ ಸೆಕ್ರೆಟರಿಯವರು ಇವರುಗಳ ಕೂಡ ಬೊಂಬಾಯಿ ಗೌವರ್ನರ್ ಸರ್ ಜಾರ್ಜ್ ಕ್ಲಾರ್ಕರವರು ಅಪೋಲೋಬಂದರದಿಂದ ಮೆಡಿನಾ ಹಡಗಿಗೆ ಹೋಗುವರು. ಸಾಯಂಕಾಲ ೪ ಘಂಟೆಗೆ ಶ್ರೀಗಳವರು ಪಡವನ್ನಿಳಿಯುವರು. ಡಿಸೆಂಬರ್ ತಾ॥ ೬ ರಲ್ಲಿ ಗೌವರ್ನರ್ ಜನರಲ್‍ರವರು ಬೊಂಬಾಯಿಯಿಂದ ಪ್ರಯಾಣಮಾಡುವರು. ಬೊಂಬಾಯಿಯಲ್ಲಿ ಪ್ರದರ್ಶನ ನಡೆಯತಕ್ಕ ದೃಶ್ಯದಲ್ಲಿ ಜನರವಿನೋದವು ಜರಗುವುದು. ಚಕ್ರವರ್ತಿದಂಪತಿಗಳು ಬೆಳಿಗ್ಗೆ ೯ ಘಂಟೆಯಲ್ಲಿ ಅಪೋಲೋಬಂದರಿಗೆ ದಯಮಾಡಿಸಿ ಅಲ್ಲಿಂದ ನಾನಾವಿಧವಾಗಿ ಶೃಂಗರಿಸಲ್ಪಟ್ಟಿರುವ ಅಪೋಲೋಬಂದರಿಗೆ ಹೋಗುವ ಮಾರ್ಗ, ಹ್ಯೂಯೋಮಾರ್ಗ, ಎಸ್ಪ್ಲನೇಡ್ ಮಾರ್ಗಗಳಲ್ಲಿ ಹೋಗುತ ಪ್ರದರ್ಶನಶಾಲೆಗೆ ಚಿತ್ತೈಸುವರು. ಅಲ್ಲಿ ಚಕ್ರವರ್ತಿದಂಪತಿಗಳಿಗಾಗಿ ನಿರ್ಮಿಸಲ್ಪಟ್ಟಿರುವ ಉನ್ನತಾಸನಗಳಿಗೆ ಅರ್ಧಚಂದ್ರಾಕೃತಿಯಲ್ಲಿ ೨೬೦೦೦ ವಿದ್ಯಾರ್ಥಿಗಳು ನಿಲ್ಲಿಸಲ್ಪಟ್ಟಿರುವರು. ಈ ವಿದ್ಯಾರ್ಥಿಗಳೆಲ್ಲರೂ ಒಟ್ಟಾಗಿ ಚಕ್ರವರ್ತಿದಂಪತಿಗಳ ಶುಭಾಗಮನವನ್ನು ಬಯಸಿ ಜಯಘೋಷವನ್ನು ಮಾಡಿದಮೇಲೆ, ವಿಕ್ಟೋರಿಯಾ ಹಮ್ಮದಿಯ ಪಾರ್ಸಿ, ಗುಜರಾತಿ, ಮರಾಠಿ ಮೊದಲಾದ ವಿದ್ಯಾರ್ಥಿಗಳಲ್ಲಿ ಕ್ರಮವಾಗಿ ಇಬ್ಬಿಬ್ಬರು ಪುಷ್ಪಗುಚ್ಛವನ್ನು ಕಾಣಿಕೆ ಇಡುವರು. ಅನಂತರ ಹಿಂದು ಗುಜರಾತಿಯ ಬಾಲಿಕೆಯರು ನರ್ತನವನ್ನು ಮಾಡುವರು. ಚಕ್ರವರ್ತಿದಂಪತಿಗಳು ಪ್ರದರ್ಶನವನ್ನು ಮುಗಿಸಿಕೊಂಡು ಬಿಟ್ಟು ಮಾರ್ಗದಿಂದ ಶ್ರೀ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರತಿಮೆಯ ಬಳಿಗೆ ಬಂದು ಅಲ್ಲಿಂದ ಹೊರಟು ಬಂದ ಮಾರ್ಗಗಳಲ್ಲೇ ಅಪೋಲೋಬಂದರಿಗೆ ದಯಮಾಡಿಸುವರು. ವೃದ್ಧಿನವಿನೋದವು ನಡೆದಮೇಲೆ ಬಾಲಕಬಾಲಿಕೆಯರುಗಳಿಗೆ ಮಿಠಾಯಿಯೂ, ಬಹುಮಾನಗಳೂ ಹಂಚಲ್ಪಡುವುವು.

ದಿಲ್ಲಿಯಲ್ಲಿ ಜರಗುವ ಉತ್ಸವದ ಕಾಲನಿರ್ಣಯವು:—

ಡಿಸೆಂಬರ್ ತಾ॥ ೭ನೆಯ ಗುರುವಾರ ಪ್ರಾತಃಕಾಲ ೧೦ ಗಂಟೆಗೆ ದಿಲ್ಲಿಪಟ್ಟಣದ ಪ್ರವೇಶೋತ್ಸವ...

[ಮುಂದಿನ ೩ ಕಾಲಮಿನಲ್ಲಿ ನೋಡಿರಿ]

ರಿಂದ ಪ್ರಾರಂಭಿಸಲ್ಪಡುವ ಮಹೋತ್ಸವವು ಮುಗಿಯುವವರೆಗೆ ಸಾಯಂಕಾಲದವರೆಗೂ ಅಲ್ಲಿದ್ದು ಈ ಕಾರ್ಯಕ್ರಮಗಳನ್ನೂ ದರ್ಶನ ಮಾಡಿಕೊಳ್ಳುವರು. ತಾ॥ ೮ನೆಯ ಶುಕ್ರವಾರ ಬೆಳಿಗ್ಗೆ ೧೧ ಇಂದ ೧೧ ಗಂಟೆಯವರೆಗೆ ಪ್ರಮುಖ ಜನರು ಪೂರ್ವ ದರ್ಶನವನ್ನು ತೆಗೆದುಕೊಳ್ಳುವರು; ಅದೇ ಮಧ್ಯಾಹ್ನ ೩-೩೦ ಗಂಟೆಗೆ ಶ್ರೀ ಎಡ್ವರ್ಡ್ ಚಕ್ರವರ್ತಿಯವರ ಸ್ಮಾರಕ ಶಾಲಾಸ್ಥಾಪನೋತ್ಸವವು ಜರಗುವುದು; ರಾತ್ರಿ ೮ ಗಂಟೆಗೆ ರಾಜಭೋಜನವು ನಡೆಯುವುದು. ತಾ॥ ೯ ನೆಯ ಶನಿವಾರದ ಬೆಳಿಗ್ಗೆ ೧೦॥ ಗಂಟೆಯಿಂದ ೧೨ ಗಂಟೆಯವರೆಗೆ ಪ್ರಮುಖ ಪುರುಷರು ಪುನಃ ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಳ್ಳುವರು; ಮಧ್ಯಾಹ್ನ ೩॥ ಗಂಟೆಗೆ ಪೋಲೋ ಆಟದ ಸಂದರ್ಭವು ನಡೆಯುವುದು. ತಾ॥ ೧೦ ನೆಯ ಭಾನುವಾರ ಬೆಳಿಗ್ಗೆ ೧೧॥ ಗಂಟೆಗೆ ವಿಜಯದಶಿಕ್ಕೂಟ ದಲ್ಲಿ ದೇವರ ಪ್ರಾರ್ಥನೆಯು ನಡೆಯುವುದು. ತಾ॥ ೧೧ ನೆಯ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಸೈನಿಕರ ನಜರಾಗುವುದು; ಮಧ್ಯಾಹ್ನ ೩॥ ಗಂಟೆಗೆ ಪೋಲೋ ಆಟದ ಸಂದರ್ಭವು ನಡೆಯುವುದು, ತಾ॥ ೧೨ ನೆಯ ಮಂಗಳವಾರ ಬೆಳಿಗ್ಗೆ ೧೨ ಗಂಟೆಗೆ ದರ್ಬಾರಾಗುವುದು, ರಾತ್ರಿ ೮ ಗಂಟೆಗೆ ರಾಜಭೋಜನವೂ ಅನಂತರ ಅಧಿಕಾರಿಗಳ ಸ್ವಾಗತವೂ ಜರಗುವುವು. ತಾ॥ ೧೩ ನೆಯ ಬುಧವಾರ ಬೆಳಿಗ್ಗೆ ೧೧-೪೫ ಗಂಟೆಗೆ ವಾಲಂಟಿಯರುಗಳು ಮತ್ತು ಇಂಡಿಯಾ ಸರ್ಕಾರಿಯಧಿಕಾರಿಗಳು ದರ್ಶನವನ್ನು ತೆಗೆದುಕೊಳ್ಳುವರು, ಮಧ್ಯಾಹ್ನ ೩॥ ಗಂಟೆಗೆ ವನವಿಹಾರೋತ್ಸವವೂ, ಜನರು ಗುಂಪುಗುಂಪಾಗಿ ಉತ್ಸವದಿಂದ ಹೊರಡುವುದೂ, ಆ ರಾತ್ರಿ ೮ ಗಂಟೆಗೆ ಚಕ್ರವರ್ತಿ ದಂಪತಿಗಳ ಔತಣವೂ ಜರಗುವವು. ತಾ॥ ೧೪ ನೆಯ ಗುರುವಾರ ಬೆಳಿಗ್ಗೆ ೧೦॥ ಗಂಟೆಗೆ ಸೈನಿಕರ ಪರಾಂಬರಿಕೆಯೂ, ಮಧ್ಯಾಹ್ನ ೩॥ ಗಂಟೆಗೆ ಹಾಕಿ ಆಟದ ಕ್ರೀಡಾ ಸಂದರ್ಭವೂ, ರಾತ್ರಿ ೯॥ ಗಂಟೆಗೆ ಪ್ರಜೆಸ್ತೃತಿಯನ್ನು ದಯಪಾಲಿಸುವುದೂ ಜರಗುವುವು. ತಾ॥ ೧೫ ನೆಯ ಶುಕ್ರವಾರದ ಬೆಳಿಗ್ಗೆ ೧೧ ಗಂಟೆಗೆ ಪೋಲೀಸರ ಪರಾಂಬರಿಕೆಯೂ, ಮಧ್ಯಾಹ್ನ ೩ ಗಂಟೆಗೆ ಸೈನಿಕರ ಹಂದ್ಯವೂ, ರಾತ್ರಿ ೯ ಗಂಟೆಗೆ ಮಹಾಪ್ರಮುಖರ ಕಾಳಗದ ಸಂದರ್ಭವೂ ನಡೆಯುವುವು. ತಾ॥ ೧೬ ನೆಯ ಶನಿವಾರದ ಮಧ್ಯಾಹ್ನ ೧ ಗಂಟೆಗೆ ರಾಜಚಕ್ರವರ್ತಿ ದಂಪತಿಗಳು ದಿಲ್ಲಿಯನ್ನು ಬಿಟ್ಟು ಪ್ರಯಾಣಮಾಡುವರು.

ಬೊಂಬಾಯಿ ಪಟ್ಟಣದ ಶೃಂಗಾರ.

ಚಕ್ರವರ್ತಿ ದಂಪತಿಗಳ ಉತ್ಸವವು ಬರುವ ಮಾರ್ಗಗಳಲ್ಲಿಯ ನಿವಾಸಿಗಳು ತಂತಮ್ಮ ಅಂಗಡಿಮನೆಗಳನ್ನು ಸುಣ್ಣ ಬಣ್ಣಗಳಿಂದಲೂ, ಧ್ವಜಪತಾಕೆಗಳಿಂದಲೂ, ವಿಧವಿಧವಾದ ಚಿತ್ರಪಟಗಳಿಂದಲೂ, ಕಾಗದದಿಂದ ಮಾಡಿದ ಪುಷ್ಪಮಾಲಿಕೆ ತೋರಣ ಮೊದಲಾದವುಗಳಿಂದಲೂ ತಂತಮಗೆ ಅನುಕೂಲವೂ, ಅಭಿರುಚಿಯೂ ಇದ್ದ ರೀತಿಯಲ್ಲಿ ಬಹು ಸಡಗರದಿಂದ ಶೃಂಗರಿಸುತ್ತಿರುವರು. ಮಾರ್ಗಗಳಲ್ಲಿ ಕಮಾನುಗಳೂ, ಮಂಟಪಗಳೂ ಮನೋರಂಜಕವಾಗಿ ಕಟ್ಟಲ್ಪಡುತ್ತಿರುವುವು. ಬೊಂಬಾಯಿಯಲ್ಲಿ ಜರಗುವ ಈ ಮಹೋತ್ಸವದಲ್ಲಿ ಜೀವನದಲ್ಲಿ ಸಂಗ್ರಹಿಸಿಕೊಳ್ಳಬಹುದೆಂದು ನಿರೀಕ್ಷಣೆಯಿಂದ ಹೊರ ಊರುಗಳಿಂದ ಹತ್ತಾರು ಸಾವಿರ ಜನರು ಬಂದಿರುವರು. ಗುಜರಾತ ಮೊದಲಾದ ದೇಶಗಳಿಂದ ಪ್ರಾಯಶಃ ಏಳು ಲಕ್ಷ ಜನರು ಬಂದಿರುವುದರಿಂದ ಆ ಪಟ್ಟಣದ ಯಾವ ಭಾಗದಲ್ಲಿ ನೋಡಿದರೂ ಈ ಕೆಲಸಗಾರರ ಓಡಾಟವೇ ಹೆಚ್ಚಾಗಿರುವುದು. ಈ ಕೆಲಸಗಾರರಲ್ಲದೆ ಈ ಉತ್ಸವಸಮಾರಂಭವನ್ನು ನೋಡಲು ಹೊರಗಿನ ಜನರು ನಿತ್ಯದಲ್ಲೂ ರೈಲು ಬಂಡಿಗಳಲ್ಲಿ ಬರುತ್ತಿರುವರು. ಈಗ ಅಲ್ಲಿಯ ಪ್ರಜಾಸಂಖ್ಯೆಯಲ್ಲದೆ ಹೊರಗಿನಿಂದ ಬಂದಿರುವವರು ಪ್ರಾಯಶಃ ೮ ಲಕ್ಷದ ಮೇಲಾಗಬಹುದೆಂದು ಊಹಿಸಲ್ಪಟ್ಟಿರುವುದಲ್ಲದೆ, ಡಿಸೆಂಬರ ತಾ॥ ೨೩ ರೊಳಗೆ ಹೊರಗಿನ ಜನರ ಸಂಖ್ಯೆಯು ೬ ಲಕ್ಷದ ವರೆಗಾಗಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಆ ಪಟ್ಟಣದಲ್ಲಿ ಶೃಂಗಾರವು ಈ ರೀತಿಯಾಗಿ ನಡೆಯುತ್ತಿರುವುದನ್ನು ನೋಡಿ ಹೊಳೆರಾಜನು ಅಸೂಯೆಪಟ್ಟು ಶೃಂಗಾರವನ್ನೆಲ್ಲ ನಾಶಪಡಿಸದೇಕೆಂಬ ಆಗ್ರಹದಿಂದ ತನ್ನ ದೂತನಾದ ಮಳೆಯನ್ನು ಕಳುಹಿಸಿದಹಾಗೆ ದೆಂಬಂತೆ ಹಾಗೆ ಕಳೆದ ತಾ॥ ೨೦ ರಲ್ಲಿಗ್ಗೆ ವಿಪರೀತ ಮಳೆಯು ಸುರಿದು ಕಾಗದ, ಬಣ್ಣ ಮೊದಲಾದ ಪದಾರ್ಥಗಳಿಂದ ಮಾಡಿದ್ದ ಶೃಂಗಾರಗಳೆಲ್ಲವೂ ನಾಶವಾದುವು. ಮತ್ತು ಪ್ರೇಕ್ಷಕರ ಬೊಂಬಾಯಿ ಪಟ್ಟಣವನ್ನು ಪ್ರವೇಶಿಸಲು ಕಿತ್ತಾನಿರ್ಮಿಸಲ್ಪಟ್ಟಿದ್ದ ಕಟ್ಟಡಗಳು ಮಳೆಯಿಂದ ನೆನೆದು ಹಳಗಡೆ ಬಾಗಿಯಂತೆ ನಿಂತಿದ್ದವು. ಭರತಖಂಡಕ್ಕೆ ಈವರೆಗೆ ಅಪೂರ್ವವಾಗಿರುವ ಮತ್ತು ಅತ್ಯಂತ ಸುಂದರವಾದ ರಚ್ಚರಿನಿಂದ ಶೃಂಗರಿಸಲ್ಪಟ್ಟ ದೀಪಗಳಿಂದ ಹೊಳೆಯುವ ಈಗತಾನೆ ತೆರೆಯಲ್ಪಟ್ಟ ನಮ್ಮ ಪ್ರದರ್ಶನ ಶಾಲೆಯಲ್ಲಿ ಹಾಳಲ್ಪಟ್ಟಿದ್ದವು. ಅವುಗಳೆಲ್ಲ ನೂರಾರು ಈ ಮಳೆಯ ಹೊಡೆತದಿಂದ ನಾಶವಾದವು. ಈಗ ಅಲ್ಲಿ ಪುನಃ ನಿರ್ಮಿಸಲಾಗಿ ದಿನವೂ ಬೇಗ...

[ಮುಂದಿನ ಕಾಲಮಿನಲ್ಲಿ ನೋಡಿರಿ]

ಗಾರಗಳಲ್ಲಿ ಜೋಡವನ್ನು ಪರಿಶಧಿಸಿ ಮುಗಿಸ ಯತ್ನಿಸಿರುವ ದ್ವ್ಯಸ್ತನಿಕರೂ, ಪ್ರೋಗ್ರಾಂ ಉತ್ಸವಕಾಲದಲ್ಲಿ ತಾವು ಮಾಡಬೇಕಾದ ಕೆಲಸಗಳನ್ನು ಈಗಿನಿಂದಲೇ ಮಾಡಿನೋಡಿಕೊಳ್ಳುತ್ತಿರುವರು. ಬೊಂಬಾಯಿನಲ್ಲಿ ಸ್ಥಳವು ಕಲದವರಿಂದ, ದೆಹಲಿ ಸೇನೆಯು ಈ ವಾರದಲ್ಲಿ ಬಲು ಗೊತ್ತುಮಾಡಲ್ಪಟ್ಟಿತು.

ಚಕ್ರವರ್ತಿ ದಂಪತಿಗಳುಪಯೋಗಿಸುವ ಮೋಟಾರು ಬಂಡಿಗಳು.

ಚಕ್ರವರ್ತಿಯವರು, ಚಕ್ರವರ್ತಿನಿಯವರು, ಬೊಂಬಾಯಿ ಗೌರ್ನರು ಮತ್ತು ಚಕ್ರವರ್ತಿ ದಂಪತಿಗಳ ಪರಿವಾರದವರು ಕುಳಿತು ಸಂಚರಿಸಲು ಮೋಟಾರು ಬಂಡಿಗಳು ಸೀಮೆಯಿಂದ ತರಿಸಲ್ಪಟ್ಟು ಈಗ ತಾನೆ ಬೊಂಬಾಯಿನ ಮೋಟಾರು ಮತ್ತು ಸೈಕಲ್ ಏಜನ್ಸಿ ಕಂಪನಿಯವರ ಅಂಗಡಿಯಲ್ಲಿ ಪ್ರದರ್ಶನಕ್ಕಾಗಿಡಲ್ಪಟ್ಟಿವೆ. ಇವುಗಳಲ್ಲಿ ಚಕ್ರವರ್ತಿಯವರುಪಯೋಗಿಸುವ ಬಂಡಿಯು ಎಂಟು ಕುದುರೆಗಳ ಶಕ್ತಿಯುಳ್ಳದಾಗಿದೆ. ಈ ಬಂಡಿಗೆ ನೀಲಿಬಣ್ಣವು ಹಾಕಲ್ಪಟ್ಟು ಕೆಂಪುಬಣ್ಣದ ಸಣ್ಣ ಗೆರೆಗಳು ಎಳೆಯಲ್ಪಟ್ಟಿವೆ. ಮತ್ತು ಬಾಗಿಲುಗಳ ಹಲಗೆಯ ಮೇಲೆ ಕಿರೀಟದ ಚಿತ್ರವು ಬರೆಯಲ್ಪಟ್ಟಿದೆ. ಬಂಡಿಯೊಳಗೆ ಕಿ ಬೂದುಬಣ್ಣದ ಬಟ್ಟೆಯು ಹಾಕಲ್ಪಟ್ಟು ಅದರ ಅಂಚಿಗೆ ನುಣ್ಣಲ ರೇಷ್ಮೆಯ ಧಾರದಿಂದ ಶೃಂಗರಿಸಲ್ಪಟ್ಟಿದೆ. ಮತ್ತು ಒಳಗೆ ಕ್ಯಾಬಿನ ಮೊದಲಾದ ಪದಾರ್ಥಗಳ ದಂತದಿಂದಲೂ, ಬೆಳ್ಳಿಯಿಂದಲೂ ಬಹು ಶ್ಲಾಘ್ಯವಾಗಿ ಮಾಡಲ್ಪಟ್ಟಿವೆ. ಬಂಡಿಯ ಮುಂಭಾಗದಲ್ಲೂ, ಒಳಗಡೆಯೂ ವಿದ್ಯುಚ್ಛಕ್ತಿಯ ದೀಪಗಳು ಇಡಲ್ಪಟ್ಟಿವೆ. ಬಂಡಿಯು ಚಕ್ರಗಳು ಉಕ್ಕಿನಿಂದ ಮಾಡಲ್ಪಟ್ಟಿವೆ. ಬಂಡಿಗಳನ್ನು ನಡೆಸುವವರಿಗೆ ಕಿರೀಟದ ಚಿತ್ರವನ್ನುಳ್ಳ ಕಪ್ಪುಗುಂಡಿಗಳಿಂದ ಕೂಡಿದ ಕೊಂಚ ಕಪ್ಪುನವಿನೀಲಿರುವ ನೀಲಿಬಣ್ಣದ ಕೋಟುಗಳೂ, ಸೈನಿಕರು ಉಪಯೋಗಿಸುವಂತಹ ಶಿರಾಯಿಗಳೂ, ಅವುಗಳ ಮೇಲೆ ಮೊಣಕಾಲಿನವರೆಗೂ ಕಟ್ಟಲು ಕಪ್ಪುಬಣ್ಣದ ಪಟ್ಟಿಗಳೂ ಕೊಡಲ್ಪಟ್ಟಿವೆ.

ಚಕ್ರವರ್ತಿ ದಂಪತಿಗಳು ಕುಳಿತುಕೊಳ್ಳುವ ಸಿಂಹಾಸನಗಳು.

ಚಕ್ರವರ್ತಿ ದಂಪತಿಗಳು ಭರತಖಂಡದಲ್ಲುಪಯೋಗಿಸುವುದಕ್ಕಾಗಿ ಬಹು ಶ್ಲಾಘ್ಯವಾದ ಎರಡು ಸಿಂಹಾಸನಗಳು ಈ ದೇಶದವುಗಳ ಮಾದ್ರಿಯಂತೆ ಬೊಂಬಾಯಿನಲ್ಲಿರುವ ಇ. ವಿಂಬ್ರಿಡ್ಜ್ ಮತ್ತು ಕಂಪೆನಿಯವರಿಂದ ಮಾಡಲ್ಪಡುತ್ತಿವೆ. ಈ ಸಿಂಹಾಸನಗಳು ೭ ಅಡಿ ಎತ್ತರವಿದ್ದು ಆನೆಗಳ ಮೇಲೆ ಹುಡಲ್ಪಟ್ಟಿವೆ. ಇವಕ್ಕೆ ಅತ್ಯುತ್ತಮವಾದ ತೇಗದ ಮರವು ಉಪಯೋಗಿಸಲ್ಪಟ್ಟಿರುವುದಲ್ಲದೆ ಪ್ರಾಕಿನಿಂದ ಚಿನ್ನದ ಗಿಲಿಟು ಮಾಡಲ್ಪಟ್ಟಿದೆ. ಸೂರಿತದಲ್ಲಿ ಈ ಕಾರ್ಯಕ್ಕಾಗಿಯೇ ನೇಯಲ್ಪಟ್ಟಿರುವ ಭಂಗಾರದ ಕಲಾಪತ್ತಿನ ಬಟ್ಟೆಯು ಸಿಂಹಾಸನಗಳ ಹಿಳಿಗೂ, ಮೊರಗೂ ಹಾಕಲ್ಪಡುವು. ದಿಣ್ಣ ನಡೆ ಗಲು ಭಾಗಗಳಲ್ಲಿ ರಾಜ ಚಿನ್ನೆಗಳು ಕೊರೆಯಲ್ಪಟ್ಟಿರುವುದಲ್ಲದೆ, ಅವುಗಳ ಮೇಲ್ಭಾಗದಲ್ಲಿ ಇಂಗ್ಲೆಂಡಿನ ಕಿರೀಟಗಳು ಮಾಡಲ್ಪಟ್ಟಿವೆ. ಚಿನ್ನದ ಸರಿಗೆಯಿಂದ ಕೂಡಿದ ರೇಷ್ಮೆಯಿಂದ ಕಸೂತಿಮಾಡಲ್ಪಟ್ಟಿರುವ ಊದಾ ಬಣ್ಣದ ಮುಕಮಲ್ಲನ್ನು ಹಾಸಿರುವ ಎತ್ತರವಾದ ಜಗತಿಯ ಮೇಲೆ ಈ ಸಿಂಹಾಸನಗಳು ಇಡಲ್ಪಡುವುವು. ಈ ಸಿಂಹಾಸನಗಳು ಮನೋಹರವಾದ ಮೇಲೆ ಬೊಂಬಾಯಿನಲ್ಲಿ ಕಟ್ಟಲ್ಪಡುತ್ತಿರುವ ಹೊಸ ಪ್ರದರ್ಶನ ಶಾಲೆಯಲ್ಲಿ ಭರತಖಂಡಕ್ಕೇನೆ ಅಭೂತ ಪೂರ್ವವಾಗಿರುವ ಮಹೋತ್ಸವದ ಜ್ಞಾಪಕಾರ್ಥವಾಗಿಡಲ್ಪಡುವುವು.

ರಾಜಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣ ಮಾಡಿರುವರು.

ನವೆಂಬರ್ ತಾ॥ ೧೧ ರಂದು ರಾಜಚಕ್ರವರ್ತಿ ದಂಪತಿಗಳು ಪರಿವಾರಸಮೇತ ಪ್ರಯಾಣಮಾಡುತ್ತಿರುವ ಮೆಡಿನಾ ಹಡಗು ಪೋರ್ಟ್ಸ್‌ಮೌತಿಗೆ ತಾ॥ ೨೧ ರ ಬೆಳಿಗ್ಗೆ ಬರುತ್ತಲೇ ಪ್ರಾರ್ಥನಾರ್ಥವಾದ ಗುಂಡುಗಳು ಹಾರಿಸಲ್ಪಟ್ಟವು. ಲಾರ್ಡ್ ಕಿಚನರ್‌ರವರು, ಸರ್ ಫ್ರಾನ್ಸಿಸ್ ಯಂಗ್‌ಹಸ್‌ಬೆಂಡ್ ರವರು ಮತ್ತು ಜನರಲ್ ಮ್ಯಾಕ್ಸ್‌ವೆಲ್‌ರವರು ಮೆಡಿನಾ ಹಡಗಿಗೆ ಹೋಗಿ ಚಕ್ರವರ್ತಿ ದಂಪತಿಗಳ ದರ್ಶನವನ್ನು ತೆಗೆದುಕೊಂಡು ಯೋಗಕ್ಷೇಮವನ್ನು ವಿಚಾರಿಸಿದನಂತರ, ಈಜಿಪ್ಟಿನ ಖೇದೀವ್ ರವರು, ತುರ್ಕಿಯ ಸುಲ್ತಾನರ ಜೇಷ್ಠ ಪುತ್ರನಾದ ಜೇ-ಇಜ್ಜೀನನೂ ಮೆಡಿನಾ ಹಡಗಿಗೆ ಹೋಗಿ ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಂಡು ಪರಸ್ಪರ ಕುಶಲಪ್ರಶ್ನೆಯನ್ನು ಮಾಡಿದ ಮೇಲೆ, ಜೇ-ಇಜ್ಜೀನನು ತನ್ನ ತಂದೆಯು ಕಳುಹಿಸಿಕೊಟ್ಟಿದ್ದ ಕುಶಲಪತ್ರವನ್ನು ಚಕ್ರವರ್ತಿಯವರಿಗೊಪ್ಪಿಸಿದನು. ಅದರಲ್ಲಿ ಚಕ್ರವರ್ತಿ ದಂಪತಿಗಳಿಗೆ ಭರತಖಂಡದ ಪ್ರಯಾಣವು ಸುಖಪ್ರದವಾಗಿರಲೆಂದೂ, ತನ್ನ ಸಾಮ್ರಾಜ್ಯಕ್ಕೂ, ಇಂಗ್ಲೆಂಡಿಗೂ ಇರತಕ್ಕ ಮೈತ್ರಿಭಾವವು ಅಭಿವೃದ್ಧಿಯಾಗಲೆಂದೂ, ಚಕ್ರವರ್ತಿ ದಂಪತಿಗಳಲ್ಲಿ ತನಗಿರುವ ಪೂರ್ಣಪ್ರೇಮವನ್ನು ಮತ್ತು ಗೌರವವನ್ನು ತೋರಿಸಿಕೊಂಡು ಬರೆದಿತ್ತು. ಚಕ್ರವರ್ತಿಯವರು ಸುಲ್ತಾನರ ಪತ್ರವನ್ನು ಓದಿ ... ಕಾಯಲು

ಅಲ್ತಾನರು ಇಟ್ಟಿದ್ದ ಅಭಿಮಾನ ಪ್ರೇಮಗಳನ್ನು ಬಹಳವಾಗಿ ಕೊಂಡಾಡಿ ಹಾವು ಅವರನ್ನು ವಂದಿಸುತ್ತೇನೆಂದೂ, ತಮ್ಮಿಬ್ಬರ ರಾಜ್ಯಗಳ ಮೈತ್ರಿತ್ವವು ಸ್ಥಿರವಾದುದಾಗಿ ನಡೆದುಕೊಂಡು ಬರುವುದಾಗಿ ತಾವು ನಂಬುತ್ತೇನೆಂದೂ ಉತ್ತರವನ್ನು ಬರೆದು ಕೊಟ್ಟರು. ಅನಂತರ ಲಾರ್ಡ್ ಕಿಚನರ್‌ರವರು ಕೈಮುಲ್ ಪಾಷ, ಸಯಿದ್ ಬೆ, ರಚಿದ್ ಪಾಷ ಇವರುಗಳು, ಮತ್ತು ಈಜಿಪ್ಟಿನಲ್ಲಿರುವ ಇಂಗ್ಲೀಷ್ ಮತ್ತು ಇತರ ಅಧಿಕಾರಿಗಳ ಪರಿಚಯವನ್ನು ಮಾಡಿಸಿದರು. ಖೇದೀವ್, ಜೇ-ಇಜ್ಜೀನ, ಮುಸ್ತಫಾ ಫಹಿಲ್ ಪಾಷ, ಲಾರ್ಡ್ ಕಿಚನರ್, ಸರ್ ಫ್ರಾನ್ಸಿಸ್ ವಿಂಗೇಟ್, ಜನರಲ್ ಮ್ಯಾಕ್ಸ್‌ವೆಲ್, ಕೈಮುಲ್ ಪಾಷ, ಸಯಿದ್ ಪಾಷ ಮೊದಲಾದ ಪ್ರಮುಖ ವ್ಯಕ್ತಿಗಳು ಚಕ್ರವರ್ತಿಯವರೊಡನೆ ಅಲ್ಪಾಹಾರವನ್ನು ಮಾಡಿದರು. ಮತ್ತು ಲಾರ್ಡ್ ಕಿಚನರ್ ಸರ್ ಫ್ರಾನ್ಸಿಸ್ ವಿಂಗೇಟ್ ಮತ್ತು ಮ್ಯಾಕ್ಸ್‌ವೆಲ್ ರವರು, ಮೆಡಿನಾ ಹಡಗಿನಲ್ಲಿ ಚಕ್ರವರ್ತಿಯವರ ಅಂಗರಕ್ಷಕ ಭಟರನ್ನು ಪರೀಕ್ಷಿಸಿದರು. ತಾ॥ ೨೦ರ ಬೆಳಿಗ್ಗೆ ಮೆಡಿನಾ ಹಡಗು ಪೋರ್ಟ್‌ಸೈದನ್ನು ಬಿಟ್ಟ ಹೊರಟಿತು. ತಾ॥ ೨೩ ರಲ್ಲಿ ಸ್ಯಾಮಿನ ದ ಹ ದಕ್ಕೆ ಪ್ರಯಾಣಗೊಂಡಿತು. ತುರ್ಕಿ ಸುಲ್ತಾನನ ಮಗನಾದ ಜೇ-ಇಜ್ಜೀನನಿಗೆ ಜಿ. ಸಿ. ವಿ. ಒ. ಎಂದರೆ ನೈಟ್‌ಗ್ರಾಂಡ್ ಕ್ರಾಸ್ ಆಫ್ ದಿ ರಾಯಲ್ ವಿಕ್ಟೋರಿಯನ್ ಆರ್ಡರ್ ಎಂಬ ಪ್ರಶಸ್ತಿಯನ್ನು ಚಕ್ರವರ್ತಿ ಪ್ರಭುಗಳು ದಯಪಾಲಿಸಿದ್ದಾರೆನ್ನಲಾಗಿದೆ. ಲಾರ್ಡ್ ಕಿಚನರ್‌ರವರು ತಾ॥ ೨೦ ರಲ್ಲಿ ಸುಯೆಜ್ ಅರಮನೆಯಲ್ಲಿ ಖೇದೀವ್ ದೊರೆಯು ಇದಿರಿಗೆ ಜೇ-ಇಜ್ಜೀನನಿಗೆ ಔತಣ ಕೊಟ್ಟರು.

ತುರ್ಕಿ-ಇಟಲಿಗಳ ಯುದ್ಧವು.

ತಾ॥ ೧೯ ನೆಯ ಬೆಳಿಯಾಧಿಕ್ಯದಿಂದ ಟ್ರಿಪೋಲಿಯ ಸುತ್ತಲೂ ವಿಪರೀತ ಪ್ರವಾಹವು ಬಂದು ತುರ್ಕಿಯವರು ಮತ್ತು ಇಟಲಿಯವರು ತಂತಮ್ಮ ಪಾಳೆಯಗಳಿಗೆ ಶತ್ರುಗಳು ಪ್ರವೇಶಿಸದಂತೆ ಆತ್ಮರಕ್ಷಣಾರ್ಥವಾಗಿ ಕಂದಕಗಳನ್ನು ಮಾಡಿಕೊಂಡಿರುವ ಸ್ಥಳಗಳಲ್ಲಿ ನೀರು ತುಂಬಿಕೊಂಡು ಉಭಯ ಸೈನಿಕರನ್ನೂ ತೊಂದರೆಗೊಳಿಸುತ್ತಿದೆ. ಇಟಲಿಯವರ ಯುದ್ಧದ ಹಡಗುಗಳು ಬಿರುಗಾಳಿ ಸಹಿತವಾದ ಮಳೆಯ ದೆಸೆಯಿಂದ ಟ್ರಿಪೋಲಿಯನ್ನು ಬಿಟ್ಟು ಬಹುದೂರ ಹೋಗಿ ನಿಲ್ಲಬೇಕಾಯಿತು.

ತಾ॥ ೧೯ ರಲ್ಲಿ ರಷ್ಯಾ ಚಕ್ರವರ್ತಿಯು ತನ್ನ ರಾಜ್ಯದ ಕೂಡ ಮೈತ್ರಿಭಾವದಿಂದಿರುವ ತುರ್ಕಿ ರಾಜ್ಯದ ನೆರೆಯಲ್ಲಿರುವ ಮತ್ತು ಪರಂತುಕಾಲದಲ್ಲಿ ತನ್ನ ವಿಚಾರ ಸ್ಥಳವಾಗಿರುವ ಲಿವಡಿಯಾಕ್ಕೆ ಬಂದಿರುವುದರಿಂದ, ಸುಲ್ತಾನನ ಅಭಿನಂದನವನ್ನು ತಿಳಿಸುವುದಕ್ಕಾಗಿ ಕೆಲ ರಾಯಭಾರಿಗಳು ಲಿವಡಿಯಾಕ್ಕೆ ಹೊರಟಿರುವರು.

ತಾ॥ ೨೦ ರ ಬೆಂಗಾಲಿಯದ ಅಕಾಸ್ಮಾಲಯಗಳಲ್ಲಿ ಕೆಲಸ ಮಾಡುವ ಮಹಮ್ಮದೀಯರು ಕೆಂಪಿನಾಗಾದಲ್ಲಿ ತಾ॥ ೧೯ರಲ್ಲಿ ಒಂದು ದೊಡ್ಡ ಸಭೆ ಸೇರಿದ್ದರು. ಅಲ್ಲಿ ೩೦೦೦ ಜನ ಕೆಲಸಗಾರರು ಟರ್ಕಿಶ್ ರೆಡ್ ಕ್ರೆಸೆಂಟ್ ಸಂಘದವರಿಗೆ ವಿದಾಯಿಸಿರುವ ಸಹಾಯಕ್ಕೆ ಒಂದು ವಾರದ ತಮ್ಮ ಸಂಪಾದನೆಯನ್ನು ಕೊಟ್ಟರಲ್ಲದೆ, ಅಕಾಸ್ಮಾಲಯದ ಮ್ಯಾನೇಜರಿಂದ ಒಬ್ಬ ಎರೋಪ್ಲೇನನ್ನು ಸಹ ಚಂದಾಹಣವನ್ನು ಕೊಟ್ಟರು. ಟ್ರಿಪೋಲಿಯ ಯುದ್ಧದಲ್ಲಿ ಗಾಯಪಟ್ಟವರ ಮತ್ತು ಅನಾಥರಾದವರ ಉಪಚಾರಾರ್ಥವಾಗಿ ಟ್ರಿಪೋಲಿಗೆ ಹೋಗಿರುವ ವೈದ್ಯರು ಸಿಲೋನಿನಿಂದಲೂ, ಮಲಯ ಪೆನಿನ್ಸುಲದಿಂದಲೂ ರೆಡ್ ಕ್ರೆಸೆಂಟ್ ಸಂಘದವರಿಗೆ ಬರೆದುಕೊಂಡಿರುತ್ತಾರೆ.

ಮೈಸೂರ್ ಗೆಜೆಟ್ ಸಂಗ್ರಹವು.

ಆನೇಕಲ್ಲು ತಾ॥ ಅಮಲ್ದಾರ್ ಮ॥ ಎಂ ರಂಗರಾಯರವರಿಗೆ ೧೯೧೧ ನೆಯ ನವಂಬರ್ ತಾ॥ ೧ ರಿಂದ ಅಥವಾ ಅವರುಪಯೋಗಿಸಿಕೊಳ್ಳುವದರಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿದೆ.

ಬ್ಯಾಡಗಿ ಸಬ್ ಡಿವಿಜನ್ನಿನ ಹೆಡ್ ಅಸಿಸ್ಟೆಂಟ್ ಕಮಿಷನರ್ ಮ॥ ಕೆ. ಕೃಷ್ಣಯ್ಯನವರಿಗೆ ೧೯೧೧ ನೆಯ ಡಿಸೆಂಬರ್ ತಾ॥ ೧ ರಿಂದ ಎರಡು ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಮುಕ್ತಾಯವನ್ನು ಹೊಂದುವವರೆಗೆ ಚಳ್ಳಕೆರೆ ತಾ॥ ಅಮಲ್ದಾರ್ ಮ॥ ಎಂ ಎಲ್. ರಾಮಚಂದ್ರರಾಯರು ಫ಼ಸ್ಟ್ ಕ್ಲಾಸ್ ೪ ನೆಯ ತಾ॥ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೇಮಿಸಲ್ಪಟ್ಟು, ದಾವಣಗೆರೆಯ ಸಬ್ ಡಿವಿಜನ್ನಿನ ಛಾರ್ಜಿಗೆ ಹಾಕಲ್ಪಟ್ಟಿರುತ್ತಾರೆ.

ಚಳ್ಳಕೆರೆ ಸಬ್ ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮ॥ ಟಿ. ರಾಮಯ್ಯನವರಿಗೆ ೧೯೧೧ ನೆಯ ಡಿಸೆಂಬರ್ ತಾ॥ ೩ ರಿಂದ ಅಥವಾ ಅವರುಪಯೋಗಿಸಿಕೊಳ್ಳುವದರಿಂದ ೩ ತಿಂಗಳ ಪ್ರಿವಿಲೇಜ್ ರಜವು ಕೊಡಲ್ಪಟ್ಟಿರುವುದರಿಂದ, ಅವರು ಬರುವವರೆಗೆ ಅಥವಾ ಮುಕ್ತಾಯವನ್ನು ಹೊಂದುವವರೆಗೆ ಚಳ್ಳಕೆರೆ ತಾ॥ ಅಮ[redacted] ... ರಾಯರು ಬಿ. ...

ಮಾಡಿದವರಾಗಿ ನೇಮಿಸಲ್ಪಟ್ಟು ಚಳ್ಳಕೆರೆ ಸಬ್ ಡಿವಿಜನ್ ಛಾರ್ಜಿಗೆ ಹಾಕಲ್ಪಟ್ಟಿರುತ್ತಾರೆ.

ಸಿರಾ ತಾ॥ ಅಮಲ್ದಾರ್ ಮ॥ ಟಿ. ಅಬ್ದುಲ್ ಖಾದರ್ ರವರಿಗೆ ೧೯೧೧ ನೆಯ ಡಿಸೆಂಬರ್ ತಾ॥ ೪ ರಿಂದ ೩ ತಿಂಗಳ ವರೆಗೆ ಇದರಲ್ಲಿ ಮೊದಲು ಒಂದು ತಿಂಗಳು ೮ ದಿವಸಗಳು ಪ್ರಿವಿಲೇಜ್ ರಜವಾಗಿಯೂ, ಉಳಿದ ದಿವಸಗಳಿಗೆ ಸಂಬಳವಿಲ್ಲದೆಯೂ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಕಮಿಷನರು ಅಪ್ಪಣೆಯಾಗುವವರೆಗೆ ಮೈಸೂರು ಜಿಲ್ಲೆ ಟಿ. ನರಸೀಪುರ ತಾ॥ ಶೆರಿಸ್ತೇದಾರ್ ರಾಗಿರುವ ಬಿ. ಮೊಹಿದೀನ್ ಷರೀಫ್‌ರವರು ಸಿರಾ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತಾ॥ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ನಗರ ತಾ॥ ಆಕ್ಟಿಂಗ್ ಅಮಲ್ದಾರ್ ಮ॥ ಎಂ ರಾಮಯ್ಯನವರಿಗೆ ವೈದ್ಯರ ಅನುಮತಿಯ ಮೇಲೆ ಅವರುಪಯೋಗಿಸಿಕೊಳ್ಳುವದರಿಂದ ೩ ತಿಂಗಳ ರಜವು ಕೊಡಲ್ಪಟ್ಟಿರುವುದರಿಂದ, ಈ ಅವಧಿಯಲ್ಲಿ ಅಥವಾ ಬೇರೊಂದಪ್ಪಣೆಯಾಗುವವರೆಗೆ ಕೊಪ್ಪ ಸಬ್ ತಾ॥ ದಿ ಅಮಲ್ದಾರ್ ಮ॥ ಬಿ ಮೊಹಿದೀನ್ ಷರೀಫ್‌ರವರು ನಗರ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತಾ॥ ಮ್ಯಾಜಿಸ್ಟ್ರೇಟರಾಗಿಯೂ, ಶಿವಮೊಗ್ಗ ಜಿಲ್ಲೆ ಕೊಪ್ಪಡ್ ಮರಾಸ್ತೆದಾರ್ ಬಿ. ಬಿ. ರಾಮರಾಯರು ಕೊಪ್ಪ ಸಬ್ ತಾ॥ ದಿ ಅಮಲ್ದಾರರಾಗಿಯೂ, ೩ ನೆಯ ತಾ॥ ಮ್ಯಾಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುತ್ತಾರೆ.

ಆನೆಕಲ್ ತಾ॥ ಛಾರ್ಜಿನಲ್ಲಿರುವ ದೇವನಹಳ್ಳಿ ತಾ॥ ಶಿರಸ್ತೇದಾರ್ ಜೆ. ಎಲ್. ನರಸಿಂಹರಾಯರವರು ಆನೆಕಲ್ ತಾ॥ ಆಕ್ಟಿಂಗ್ ಅಮಲ್ದಾರರಾಗಿಯೂ, ೩ ನೆಯ ತಾ॥ ಮ್ಯಾಜಿಸ್ಟ್ರೇಟರಾಗಿಯೂ ಮ॥ ಟಿ. ಸುಬ್ರಹ್ಮಣ್ಯ ರಾಯರವರು ಪ್ರಿವಿಲೇಜ್ ರಜದಲ್ಲಿರುವವರಿಗೆ ಅಥವಾ ಇನ್ನೊಂದಪ್ಪಣೆಯಾಗುವವರೆಗೆ ನೇಮಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಕಮಿಷನರ್ ಮತ್ತು ೧ ನೆಯ ತಾ॥ ಮ್ಯಾಜಿಸ್ಟ್ರೇಟ್ ಮ॥ ಜಿ ಆರವಮುದಯ್ಯಂಗಾರ್, ಬಿ ಎ, ಬಿ ಎಲ್, ರವರು ೧೯೧೧ ನೆಯ ಜನವರಿ ತಾ॥ ೩೧ ವರೆಗೆ ತಿಂಗಳೊಳಗೆ ೧ ನೆಯ ತಾ॥ ಮ್ಯಾಜಿಸ್ಟ್ರೇಟರಾಗಿ ನೇಮಿಸಲ್ಪಡುವ ಮೊದಲಿನ ಅವಧಿಯಲ್ಲಿ ೨ನೆ ಮ್ಯಾಜಿಸ್ಟ್ರೇಟರವಿಗಿರತಕ್ಕ ಅಧಿಕಾರವನ್ನೆಲ್ಲ ಉಪಯೋಗಿಸಬಹುದೆಂದು ಅಪ್ಪಣೆ ಮಾಡಲ್ಪಟ್ಟಿರುತ್ತದೆ.

ಅಮಲ್ದಾರ್ ಜೆ ೧೯ ನೇ ... ಪಟ್ಟಣಗಳ ನಿಗಾ ರವರು ಮಾಗಡಿ ತಾ॥ ಎ ದ ಚನ್ನಪಟ್ಟಣ ತಾ॥ ಗೂ, ಈ ಅಮಲ್ದಾರ್ ... ದಾರರಾಗಿ ಚನ್ನರಾಯಪಟ್ಟಣದ ... ಅಮಲ್ದಾರ್ ಮ॥ ಎಂ. ರಂಗರಾಮ ... ರವರನ್ನು ಪ್ರಾಕ್ಸಿ ... ಬಂದ ಮೇಲೆ ... ಮಾಗಡಿ ತಾ॥ ಗೊ ವರ್ಗಾಯಿಸಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ... ಕಲೆಕ್ಟರ್ ... ಇವುಗಳಿಗೆ ನೇಮಿಸಲ್ಪಟ್ಟಿರುತ್ತಾರೆ.

ಪ್ರೊಬೇಷನರ್ ಅಸಿಸ್ಟೆಂಟ್ ಕಮಿಷನರ್ ಮ॥ ಎಲ್. ವೆಂಕಟರಂಗಂ ಬಿ. ಎ., ಬಿ. ಎಲ್, ರವರು ೧೯೧೧ ನೆಯ ಡಿಸೆಂಬರ್ ತಾ॥ ೧ ರಿಂದ ೫ನೆ. ಪ್ರೊಬೇಷನ್ ೩ ನೆಯ ತಾ॥ ಅಸಿಸ್ಟೆಂಟ್ ಕಮಿಷನರಾಗಿ ಸ್ಥಿರಗೊಳಿಸಲ್ಪಟ್ಟಿರುತ್ತಾರೆ.

ದಿಲ್ಲಿಯ ದರ್ಬಾರ ಮಹೋತ್ಸವದ ಕಾಲ ಸಂಬಂಧವಾಗಿ ರಾಜಧಾನಿಯಲ್ಲಿ ನಡೆಸಬೇಕಾದ ವಿನೋದೋತ್ಸವಗಳು.

ಮೈಸೂರ ಸಂಸ್ಥಾನದಲ್ಲಿ ಉತ್ಸವಾದಿಗಳನ್ನು ನಡೆಸುವುದಕ್ಕೆ ಬಳಸಿ ಸರ್ಕಾರದಿಂದ ಏರ್ಪಟ್ಟಿರುವ ಉಪ ಸಭೆಯ ಪ್ರಕಾರ ರಾಜಧಾನಿಯಲ್ಲಿ ಉತ್ಸವ ನಡೆಸಲು ನೇಮಿಸಲ್ಪಟ್ಟಿರುವ ಕಮಿಟಿಯ ಮೆಂಬರುಗಳಲ್ಲಿ ಮೈಸೂರಿನ ವೈಸ್ ಪ್ರೆಸಿಡೆಂಟರು ಎಂ. ಜಿ ಕೃಷ್ಣಸ್ವಾಮಿರಾಯರು, ಎಂ. ಸಿ. ರಂಗಯ್ಯಂಗಾರರು, ಮುಜರಾಯಿ ಬಾರ್ ಪ್ರೊಫೆಸರರು, ಆನಂತ ಅಣ್ಣಯ್ಯ ಪಂಡಿತರು, ಕೆ. ಶ್ರೀಕಂಠಯ್ಯನವರು, ಮತ್ತು ರೆವೆರೆಂಡ್ ಗಾರ್ಡನ್ ಛಾರ್ಜ ಹಾಜರಾಗಿದ್ದ ಸಭೆಯಲ್ಲಿ ರಾಜಧಾನಿಯಲ್ಲಿ ಉತ್ಸವಗಳನ್ನು ನಡೆಸಲು ಸರ್ಕಾರದಿಂದ ಕೊಡಲ್ಪಟ್ಟಿರುವ ಹಣ ರೂ., ಮತ್ತು ಮ್ಯುನಿಸಿಪಾಲಿಟಿಯಿಂದ ಕೊಡಲ್ಪಟ್ಟಿರುವ ... ಖರ್ಚು ವಿಷಯಗಳೂ ಗಳಲ್ಲಿ (೧) ಬಡ ಜನರಿಗೆ ಅನ್ನದಾನ ನಡೆಸುವುದು ಮತ್ತು ... ಗಳಲ್ಲಿ (೨) ... (೩) ... ಗಳಿಗೂ, ... ಗಳಿಗೂ, ... (೪) ... ಬಡ ... ಗಳಿಗೆ ... (೫) ... ಗಳಿಗೆ ... ನಿಯಮಿಸಿದರು.

ಬೆಳ್ಳಿ ಗಳಾದ ಶಿವಸಿಂಹಸ್ವಾಮಿಯವರು, ಅಗ್ನಿಹೋತ್ರಿ ಪಂಡಿತರು, ಜಹಗೀರ್ದಾರ್ ಮಾದಪ್ಪನವರು, ಎಂ. ಅನಂತ ರಾಮಯ್ಯನವರು, ಜವರೇಗೌಡರು, ಮೊದಲಾದವರು, ಮತ್ತೂ ಮಹಮದ್ ಜಾಫರ್‌ಸಾಹೇಬರು ಡಿಸೆಂಬರ್ ತಾ ೬ ನೆಯ ಗುರುವಾರ ಬೆಳಿಗ್ಗೆ ಹರುವನ್ನು ಕರೆಯಿಸಿ ಇಟ್ಟಿ ಯಲ್ಲಿ ಮತ್ತೂ [illegible]

[illegible]

ಮೈಸೂರ್ ಸ್ಟಾರ್

೧೯೧೬ ನೆಯ ನವೆಂಬರ್ ತಾ ೨೭ನೆಯ ಸೋಮವಾರ.

ಹಿಂದೂ ವಿಶ್ವವಿದ್ಯಾಲಯವೂ ಮತ್ತೂ ಮಿಸ್ಟರ್ ಶಂಕರನ್ನಾಯರ್‌ರವರು

ಈಗ ಹಿಂದೂ ವಿಶ್ವವಿದ್ಯಾಲಯ [illegible]

[illegible]

ಒಳದೇಶದ ವೃತ್ತಾಂತಗಳು.

[illegible]

ರಂಗಳೂ ಹೆಗಟ್ಟು ಟ್ರೈಲಿನ್ಲಾ ಮೇಲ್ ಬಂಡಿಯಲ್ಲಿ ಬೆಂಗಳೂರಿಗೆ ದಯಮಾಡಿಸಿದರು. ಮಾತೃಶ್ರೀಯವರ ಮರ್ಯಾದಾರ್ಥವಾಗಿ ಈ ಬೆಳಿಗ್ಗೆ ೧೯ ಗುಂಡು ಹಾರಿಸಲ್ಪಟ್ಟವು. ಈ ದಿವಸ ಬೆಂಗಳೂರಿನಿಂದ ನಾಳೆಯ ದಿನ ಮಧ್ಯಾಹ್ನ ಒಟ್ಟಿಗೆ ಹೆಚ್ಚು ಗಟ್ಟಲೆಯ ರೈಲು ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡುವರು.

ರಾಜಧಾನಿಯಲ್ಲಿ ಕಳೆದ ಸೋಮವಾರದಿಂದ ಗುರುವಾರದ ಸಾಯಂಕಾಲದವರೆಗೂ ಒಂದೇ ಸಮವಾಗಿ ಮೋಡವು ಕವಿತುಕೊಂಡು ಸೋನೆಹಾಕುತ್ತಿದ್ದು, ಗುರುವಾರ ರಾತ್ರಿ ೩ ಅಂಗುಲ ೧೦ ಸೆಂಟು ಮಳೆಯಾಯಿತಲ್ಲದೆ, ಶುಕ್ರವಾರ ರಾತ್ರಿಯೂ ಕೊಂಚ ಮಳೆಯು ಬಂದಿತು. ಈ ಮಳೆಯು ಸಂಸ್ಥಾನದೆಲ್ಲ ಕಡೆಯೂ ಆಗಿರಬಹುದೆಂದು ನಿರೀಕ್ಷಿಸಲ್ಪಟ್ಟಿದೆ. ಇಷ್ಟಾದರೂ ಬತ್ತದ ಬೆಲೆಯು ಮಾತ್ರ ಇಳಿಯದೆ ಪಲ್ಲಕ್ಕೆ ೧೧ ರೂ. ಇಂದ ೧೨ ರೂ. ವರೆಗಿರುತ್ತದೆ. ಬತ್ತವು ರೈಲು ಬಂಡಿಗಳಲ್ಲಿ ಹೊರಗಡೆಗೆ ರವಾನೆಯಾಗುತ್ತಿರುವುದರಿಂದ, ಈ ರೀತಿ ಬೆಲೆಯು ಹೆಚ್ಚಿರುವುದಾಗಿ ಹೇಳಬೇಕಾಗಿದೆ

ಪ್ಲೇಗುರೋಗವು ಇನ್ನೂ ಶಾಂತವಾಗಿಲ್ಲ ಕೆಲವು ಕಡೆ ಈಗೀಗ ಇಲಿಗಳು ಸಾಯಲಿಕ್ಕಾರಂಭವಾಗಿ, ರೋಗಗ್ರಸ್ತರಾದವರು ೨೪ ಗಂಟೆಯೊಳಗೆ ಸಾಯುತ್ತಿರುವರೆಂದು ಕೇಳುತ್ತೇವೆ ಒಂದು ಮನೆಯಲ್ಲಿ ಇನಾಕ್ಯುಲೇಷನ್ ಮಾಡಿಸಿಕೊಂಡಿದ್ದ ಇಬ್ಬರು ಹುಡುಗರಿಗೆ ಮಾತ್ರ ರೋಗವು ತಗಲಿ ಇನಾಕ್ಯುಲೇಷನ್ ಮಾಡಿಸಿಕೊಳ್ಳದವರೆಲ್ಲರೂ ಸುರಕ್ಷಿತರಾಗಿರುವರೆಂದು ಕೇಳಿ ಆಶ್ಚರ್ಯಪಡುತ್ತೇವೆ. ಇದರ ಕಾರಣವನ್ನು ಆರೋಗ್ಯಶಾಖೆಯವರೇ ತಿಳಿಸಬೇಕಾಗಿದೆ ಇತರ ರೋಗಾದಿಗಳೇನೂ ಇಲ್ಲ

ಶ್ರೀಮನ್ ಮಹಾರಾಜರವರು, ಮತ್ತು ಯುವರಾಜರವರು ಕಳೆದ ಸೋಮವಾರ ಬೆಳಿಗ್ಗೆ ೮½ ಗಂಟೆಯ ಸಮಯದಲ್ಲಿ, ಮೋಟಾರು ಬಂಡಿಯಲ್ಲಿ ಬಲಮುರಿಗೆ ದಯಮಾಡಿಸಿ ಅಲ್ಲಿ ನದಿಯಲ್ಲಿ ಸ್ನಾನವನ್ನು ಮಾಡಿ ಬಾದಬೋರಿಗಳಾಗಿಯೆ ಹೊರಟು ವೈದ್ಯೇಶ್ವರ ಮೊದಲಾದ ದೇವರುಗಳ ದರ್ಶನವನ್ನು ಮಾಡಿಕೊಂಡು ಮುತ್ತತ್ತಿರಿಗೆ ಬಂದು, ಅಲ್ಲಿ ಮಲ್ಲಿಕಾರ್ಜುನೇಶ್ವರನ ದರ್ಶನಾನಂತರ ಊಟ ಉಪಹಾರಾದಿಗಳನ್ನು ಪೂರೈಸಿಕೊಂಡು ಸಾಯಂಕಾಲ ೫ ಘಂಟೆ ವೇಳೆ ಮೋಟಾರು ಬಂಡಿಯಲ್ಲಿ ಹೊರಟು ರಾತ್ರಿ ೯ ಘಂಟೆಗೆ ರಾಜಧಾನಿಯನ್ನು ಸುರಕ್ಷಿತವಾಗಿ ತಲುಪಿದರು ಈ ವೇಳೆ ರಾಜಧಾನಿ ಮೊದಲಾದ ಕಡೆಗಳಿಂದ ಬಂದಿದ್ದ ಜನರ ಸಂಖ್ಯೆಯು ೩೦೦೦ರದ ಮೇಲೆಯೇ ಆಗಬಹುದೆಂದು ತೋರುತ್ತದೆ. ತಳಕಾಡು ಬಹಳ ಬೇಗ ಗ್ರಾಮವಾದದ್ದರಿಂದ, ಮುಂಚಿತವಾಗಿ ಮೊರೆಹೋಗಿದ್ದ ಜನರು ತಂತಮ್ಮ ಬಂಡಿಗಳ ಕೆಳಗೂ, ಮರಗಳ ಕೆಳಗೂ ಇಳಿದುಕೊಂಡಿದ್ದರು. ಡಿ॥ ಕ॥ ಮೈಸೂರಿನ ರಾಮಾರಾಯರವರು, ಅ॥ ಕ॥ ವಿ॥ ರಾಮಸ್ವಾಮಿರವರು ಅ॥ ಕ॥ ಪ॥ ಎ. ಸುಬ್ಬರಾಯರು ಪೊಲೀಸ್ ಸೂಪರಿಂಟೆಂಡೆಂಟ್ ಮಿ॥ ರಾಜಗೋಪಾಲಯ್ಯರು ಟಿ॥ ನರಸೀಪುರ ತಾ॥ ಅಮಲ್ದಾರ್ ಮಿ॥ ವೆಂಕಟರಮಣಶಾಸ್ತ್ರಿಯವರು ಬಂದಿದ್ದು ಜನರ ಗದ್ದಲಕ್ಕೆ ಸ್ಥಳವಿಲ್ಲದಂತೆ ತಕ್ಕ ಏರ್ಪಾಟನ್ನು ಮಾಡಿದ್ದರು. ಡಿ॥ ರಾಮಸ್ವಾಮಿರವರ ಒಳ್ಳೆಯ ಕುದುರೆಯು ಅಕಸ್ಮಾತಾಗಿ ಸತ್ತುಹೋಯಿತೆಂದು ಕೇಳುತ್ತೇವೆ

ವರ್ತಮಾನ ಸಂಗ್ರಹವು.

ಅಲಿಘರದಲ್ಲಿ ಮಹಮ್ಮದೀಯರ ಸರ್ವ ಕಲಾಶಾಲೆಯನ್ನು ಸ್ಥಾಪಿಸುವುದಕ್ಕಾಗಿ ಏರ್ಪಟ್ಟಿರುವ ಫಂಡಿಗೆ ಹೈದರಾಬಾದಿನ ನೈಜಾಮರವರು ೫ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತಾರಂತೆ.

ಹಿಮಾಲಯದ ಚೀಫ್ ಸೆಕ್ರೆಟರಿ ಮತ್ತು ಬೊಂಬಾಯಿ ಸರ್ಕಾರದೊಡನೆ ಟ್ರಾವನ್ಕೋರಿನ ಮಹಾರಾಜರವರು ಕಳೆದ ತಾ॥ ೨೪ರ ರಾತ್ರಿ ಮದ್ರಾಸಿನಿಂದ ಹೆಚ್ಚು ಗಟ್ಟಲೆಯ ರೈಲು ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡಿದರು.

ದಿಲ್ಲಿಯಲ್ಲೀ ಏರ್ಪಡಿಸಲ್ಪಟ್ಟಿರುವ ಪಾಲಂಪುರ ಮಹಾರಾಜರ ಬಿಡಾರದಲ್ಲಿ ಊಟಮಾಡುವ ಡೇರಾ ಕೆಳಗೆ, ಹೈದರಾಬಾದಿನ ರೆಸಿಡೆಂಟರವರ ಬಿಡಾರದಲ್ಲಿ ಒಂದು ಸಣ್ಣ ಡೇರಾ ಕೆಳಗೆ ಬೆಂಕಿಯು ಬಿದ್ದು ಅವು ಸುಟ್ಟುಹೋದುವು ನೀರನ್ನು ಹುಯ್ದು ಬೆಂಕಿಯನ್ನು ಆರಿಸುವ ೫ ಯಾಗೆಯಂತ್ರಗಳನ್ನು ದರ್ಬಾರು ಕಮಿಟಿಯವರು ಬರೋಡದ ಮಹಾರಾಜರಿಂದ ತರಿಸಿಕೊಂಡಿರುವರು.

ಸೆಯಾಲ್ಕೋಟಿನಲ್ಲಿ ಗುಡ್ಡದವಾಸಿಗಳಾದ ಕೆಲವರು ದುಷ್ಟರು ಒಬ್ಬ ಮ್ಯಾಜಿಸ್ಟ್ರೇಟನನ್ನು ಕೊಂದುಹಾಕಿ ಒಂದು ಹಳ್ಳಿಗೆ ಬೆಂಕಿಯನ್ನು ಹೊತ್ತಿಸಿ ಅನೇಕ ಮನೆಗಳನ್ನು ಸುಟ್ಟುಬಿಟ್ಟು ಪುನಃ ಗುಡ್ಡಗಳಿಗೆ ಹೋಗಿ ಸೇರಿಕೊಂಡಿದ್ದರು. ಪೋಲೀಸರು ಪ್ರಯತ್ನಪಟ್ಟು ಅವರಲ್ಲಿ ೩೦ ಜನರನ್ನು ಹಿಡಿದಿರುತ್ತಾರೆ. ಮಿಕ್ಕ ಆ ಜನರು ಬ್ರಿಟಿಷರಿಗೆ ಸೇರಿದ ಸ್ಥಳಗಳಿಗೆ ನುಗ್ಗಿ ತೊಂದರೆಯನ್ನು ಮಾಡದಹಾಗೆ ಸೈನಿಕರು ಎಚ್ಚರದಿಂದ ಕಾಯುತ್ತಿದ್ದಾರೆ.

ಕಳೆದ ತಾ॥ ೧೯ ಕ್ಕೆ ಕಡೆಯದಾದ ವಾರದಲ್ಲಿ ಭರತಖಂಡ[illegible] ಒಟ್ಟು ೯[illegible] ಜನರಿಗೆ ಪ್ಲೇ[illegible]
ಸತ್ತು ಇವರ್ಗಳ ಇವರಲ್ಲಿ [illegible]

ಲ್ಲಿ ೩೩,೪೧೫, ಮದ್ರಾಸು ಸಂಸ್ಥಾನದಲ್ಲಿ ೬೦೦, ಬಂಗಾಳೆದಲ್ಲಿ ೧೩೫, ಸಂಯುಕ್ತ ಪ್ರಾಂತಗಳಲ್ಲಿ ೩೫೭, ಪಂಜಾಬಿನಲ್ಲಿ ೧೧೯ ಬರ್ಮಾದಲ್ಲಿ ೬, ಮಧ್ಯಪ್ರಾಂತಗಳಲ್ಲಿ ೬೮೩, ಹೈದರಾಬಾದು ಸಂಸ್ಥಾನದಲ್ಲಿ ೧೧೧೯, ಮೈಸೂರು ಸಂಸ್ಥಾನದಲ್ಲಿ ೪೧೯, ಮಧ್ಯ ಹಿಂದೂಸ್ಥಾನದಲ್ಲಿ ೮೯೯ ರಜಪುಟಾನದಲ್ಲಿ ೨೬, ಮೈಸೂರಿನ ಸತ್ತಿರುತ್ತಾರೆ.

ಕಳೆದ ಬುಧವಾರ ಮದ್ರಾಸಿನ ಗವರ್ನರು ಅಲ್ಲಿಯ ಕಾರಾಗೃಹಕ್ಕೆ ದಯಮಾಡಿಸಿ ಬಂದಿಗಳನ್ನು ಪರೀಕ್ಷಿಸಿಕೊಂಡು ಬರುವಾಗ್ಗೆ ಕಾರಾಗೃಹಕ್ಕೆ ಹೊಸದಾಗಿ ಸೇರಿಸಲ್ಪಟ್ಟಿರುವ ಬಂದಿಗಳ ದೇಹದಾರ್ಢ್ಯಸ್ಥಿತಿಯು ಮೊದಲಿಂದಲೂ ಇರುವ ಬಂದಿಗಳ ದೇಹದಾರ್ಢ್ಯಸ್ಥಿತಿಗಿಂತ ಬಹು ಕಡಿಮೆಯಾಗಿರುವುದನ್ನೂ ನೋಡಿದರೆ, ಕಾರಾಗೃಹದ ಆಡಳಿತವು ಎಷ್ಟು ಸಮರ್ಪಕವಾಗಿ ನಡೆಯುತ್ತಿರುವುದು ವ್ಯಕ್ತವಾಗುತ್ತದೆ ಇಂತಹ ವ್ಯವಸ್ಥೆಯನ್ನು ನಾನು ಯೂರೋಪಿನ ಲ್ಲಾಗಲಿ, ಅಥವಾ ಆಸ್ಟ್ರೇಲಿಯಾದಲ್ಲಾಗಲಿ ನೋಡಿರಲಿಲ್ಲವು; ಎಂದು ಅಲ್ಲಿಯ ವಿಜಿಟರ್ ಪುಸ್ತಕದಲ್ಲಿ ಬರೆದಿರುತ್ತಾರೆ

ದಿಲ್ಲಿಯ ಕಡೆಯಿಂದ ಹೊರಟ ರೈಲು ಬಂಡಿಯು ಗನೆಯು ತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ಪಠಾಣನು ತಾನು ತೊಟ್ಟಿದ್ದ ಕೋಟನ್ನು ತೆಗೆದು ಗೂಟಕ್ಕೆ ನೇತುಹಾಕಿ ಮಲಗಿಕೊಂಡಿದ್ದು ಬೆಳಿಗ್ಗೆ ಎದ್ದು ಕೋಟನ್ನಲ್ಲದ್ದ ಭಂಗಾರದ ಗಡಿಯಾರವೂ, ಸರಪಳಿಯೂ ಮಾಯವಾಗಿರುವುದನ್ನು ಕಂಡು ದಿಗಿಲುಬಿದ್ದು, ಕೆಳಗಡೆ ಇಟ್ಟಿದ್ದ ಪೆಟ್ಟಿಗೆಯನ್ನು ತೆಗೆದು ನೋಡುವುದರಲ್ಲಿ, ಕೆಲ ಬೆಳ್ಳಿಗಳು ಕೂಡ ಇಲ್ಲದಿರುವುದು ಗೊತ್ತಾಯಿತು ಆ ಬಂಡಿಯಲ್ಲಿ ಆತನ ವಿನಹ ಮತ್ತಾವ ಪ್ರಯಾಣಿಕನೂ ಇರಲಿಲ್ಲವಾದುದರಿಂದ ಕಳುವನ್ನು ಮಾಡಿದವರಾರೆಂಬುದು ಗೊತ್ತಾಗಿಲ್ಲವು

ಕಳೆದ ತಾ॥ ೨೪ ರಲ್ಲಿ ಬೊಂಬಾಯಿನಲ್ಲಿ ಒಬ್ಬ ಮಹಮ್ಮದೀಯನು ಬಾಡಿಗೆಗಾಡಿಯವನನ್ನು ಹೊಡೆದುದಕ್ಕಾಗಿ ಪೋಲೀಸು ಇನ್ಸ್‌ಪೆಕ್ಟರಿಂದ ಹಿಡಿಯಲ್ಪಟ್ಟು ಪೋಲೀಸುಠಾಣಕ್ಕೆ ಕರೆತರಲ್ಪಡುತ್ತಿರುವಾಗ್ಗೆ, ತನ್ನ ಜೇಬಿನಿಂದ ೧೦ ರೂಪಾಯಿನ ನೋಟನ್ನು ತೆಗೆದು ಇನ್ಸ್‌ಪೆಕ್ಟರ ಕೋಟಿನ ಜೇಬಿಗೆ ಹಾಕಲು ಪ್ರಯತ್ನಪಟ್ಟು, ಆ ಕೋಟಿಗೆ ಜೇಬು ಇರಲಿಲ್ಲವಾಗಿ ಇನ್ಸ್‌ಪೆಕ್ಟರ ಕೋಟಿನ ನೆರಿಗೆಯಲ್ಲಿ ಎಸೆದನು ಇನ್ಸ್‌ಪೆಕ್ಟರು ತಾನಾಕ್ಷಣ ಬಂಧನದೊಳಗೆ ನಡೆದ ಸಂದರ್ಭವನ್ನು ಪೋಲೀಸು ಸೂಪರಿಂಟೆಂಡೆಂಟರಿಗೆ ತಿಳಿಸಿ ಅವನನ್ನು ಮ್ಯಾಜಿಸ್ಟ್ರೇಟರ ವಿಚಾರಣೆಗೆ ಗುರಿಮಾಡಿದುದರಲ್ಲಿ ಅವನಿಗೆ ೫೦ ರೂ. ದಂಡವು ವಿಧಿಸಲ್ಪಟ್ಟಿತು.

ಸತಾರಾ ಮತ್ತು ಪೂನಾ ಡಿಸ್ಟ್ರಿಕ್ಟುಗಳಲ್ಲಿ ಸೇರಿಕೊಂಡು ಬರತಕ್ಕಂಥ ಅನೇಕ ಕಡೆಯ ರೈಲ್ವೆಯ ಬಂಡಿಗಳಲ್ಲಿ ವಿಶೇಷವಾಗಿ ಕಳುವುಮಾಡುತ್ತಿದ್ದ ೨೦ ಜನರ ಒಂದು ಗುಂಪನ್ನು ಪೋಲೀಸರು ಬಹು ಸಾಹಸದಿಂದ ಹಿಡಿದು ಸೆಷನ್ನು ಜಡ್ಜರ ವಿಚಾರಣೆಗೆ ಗುರಿಮಾಡಿದ್ದರು. ಜಡ್ಜರು ಅವರುಗಳಲ್ಲಿ ೧೭ ಜನರಿಗೆ ಯಾವಜ್ಜೀವ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಿ, ಅವರ ಆಸ್ತಿಯೆಲ್ಲವನ್ನೂ ಸರ್ಕಾರಕ್ಕೆ ಸೇರಿಸಿಕೊಳ್ಳತಕ್ಕದೆಂದು ಅಪ್ಪಣೆಮಾಡಿ ಮಿಕ್ಕ ಮೂವರಲ್ಲಿ ಒಬ್ಬನನ್ನು ದೋಷಮುಕ್ತನನ್ನಾಗಿ ಮಾಡಿ, ಇಬ್ಬರಿಗೆ ೭ ವರ್ಷ ಮತ್ತೊಬ್ಬರಿಗೆ ೩ ವರ್ಷ ಕಾರಾಗೃಹವಾಸ ಶಿಕ್ಷೆಯನ್ನು ೫೦೦ ರಿಂದ ೩೦೦ ರೂ ವರೆಗೆ ದಂಡವನ್ನೂ ವಿಧಿಸಿದರು

ಕಳೆದ ತಾ॥ ೨೦ರಲ್ಲಿ ಪೊನ್ನಾಮಲೆಯ ಮಾರವಾಡಿಯ ಒಬ್ಬ ಸೆಟ್ಟಿಯು ಎತ್ತಿನ ಬಂಡಿಯನ್ನು ತೆಗಿಸಿಕೊಂಡು ಆ ಡಿಸ್ಟ್ರಿಕ್ಟಿಗೆ ಹೋಗಿ, ಅಲ್ಲಿಗೆ ಮದ್ರಾಸಿನಿಂದ ಮೇಲು ಬಂಡಿಯಲ್ಲಿ ಪ್ರಯಾಣಮಾಡಿ ಬಂದಿದ್ದ ತನ್ನ ಹೆಂಡತಿ ಮಕ್ಕಳನ್ನು ಎತ್ತಿನ ಬಂಡಿಯಲ್ಲಿ ಕುಳ್ಳಿರಿಸಿಕೊಂಡು ಬರುತ್ತಿರುವಾಗ್ಗೆ ಪಂಘರ್‌ಪೇಟೆ ಎಂಬ ಗ್ರಾಮದ ಹತ್ತಿರ ಕೆಲ ಕಳ್ಳರು ಅವರ ಬಂಡಿಯನ್ನು ಹಿಡಿದುಕೊಳ್ಳಲು ಒಳಗಿದ್ದ ಸೆಟ್ಟಿಗೆ ಪೆಟ್ಟು ಹೊಡೆದು ಅವನ್ನು ಹೊರಕ್ಕೆ ಬಿಸಾಡಿ, ಇಬ್ಬರು ಹೆಂಗುಸರನ್ನು ಒಂದು ಕಟ್ಟೆಯ ಬಳಿಗೆ ಕೊಂಡುಹೋಗಿ ಅವರ ಮೈಮೇಲಿದ್ದ ಸುಮಾರು ೧೨೦೦ ರೂ. ಬೆಲೆಬಾಳುವ ಆಭರಣಗಳನ್ನು ಅಪಹರಿಸಿಕೊಂಡು ಹೋದರು.

ಪದಚ್ಯುತನಾದ ತುರ್ಕಿಯ ಸುಲ್ತಾನ್ ಅಬ್ದುಲ್ ಹಮೀದನಿಗೆ ಸೇರಿದ್ದ ಆಭರಣಗಳೆಲ್ಲವೂ ತುರ್ಕಿಯ ಸರ್ಕಾರಕ್ಕೆ ಸೇರಿಸಿಕೊಳ್ಳಲ್ಪಟ್ಟಿರುವುದಷ್ಟೆ. ಈಗ ಆ ಆಭರಣಗಳೆಲ್ಲವೂ ಪ್ಯಾರಿಸ್ ಪಟ್ಟಣದಲ್ಲಿ ಹರಾಜು ಮಾಡಲ್ಪಟ್ಟು, ಆ ಹರಾಜಿನಲ್ಲಿ [illegible] ಗಳನ್ನು, ಮತ್ತು [illegible] ಗಳನ್ನೂ ಕೊಂಡು[illegible] ಪ್ಯಾರಿಸ್ಸಿನಲ್ಲಿ ಪ್ರಸಿದ್ಧರಾದ [illegible] ಎಂಬಾತನು ತುರ್ಕಿಯ ರಾಜಧಾನಿಯಾದ [illegible] ಪಟ್ಟಣದವರಿಗೆ [illegible] ಬಂದಿದ್ದಾಗ್ಗೆ, ಅಬ್ದುಲ್ ಹಮೀದನು [illegible] ಬಿಡಿ ಪುಸ್ತಕವನ್ನು [illegible] ಸರ್ಕಾರದವರ [illegible]
ಇವರ [illegible]
[illegible] ರೂಪಾಯಿಗಳ [illegible]

ಹೈದರಾಬಾದು ಸಂಸ್ಥಾನದ ನೈಜಾಮರವರು ಕಳೆದ ತಾ॥ ೨೯ ರ ಸಾಯಂಕಾಲ ಕೋಟಿ ಅರಮನೆಯಿಂದ ರಥಾರೋಹಣರಾಗಿ ಸಕಲ ಮರ್ಯಾದೆಯೊಡನೆ ಧ್ವಜ ಪತಾಕೆಗಳಿಂದಲೂ, ತಳಿರುತೋರಣಗಳಿಂದಲೂ ಅಲಂಕೃತವಾಗಿದ್ದ ಮಾರ್ಗದಲ್ಲಿ ಪೋಲೀಸರೂ, ಸೈನಿಕರೂ ಕಾವಲಿದ್ದ ಮಾರ್ಗದಿಂದ ಸ್ಟೇಷನ್ನಿಗೆ ಬಂದು ಮಂತ್ರಿಗಳಾದ ಮಹಾರಾಜ ಸರ್ ಕೃಷ್ಣಪ್ರಸಾದರವರು, ಏಡಿಕಾಂಗರಾದ ಸರ್ ಅಫ್ಸರ್ ಉಲ್ ಮುಲ್ಕರವರು, ಪ್ರೈವೇಟ್ ಸೆಕ್ರೆಟರಿ ಮಸೌದ್ ಜಂಗ್ ಬಹದ್ದೂರರವರು, ಏಡಿಕಾಂಗ್ ನವಾಬ್ ಸಿದ್ದಿಕ್ ಜಂಗ್ ರವರು ಮೊದಲಾದವರೊಡನೆ ಹೆಚ್ಚು ಗಟ್ಟಲೆಯ ಬಂಡಿಯಲ್ಲಿ ದಿಲ್ಲಿಗೆ ಪ್ರಯಾಣಮಾಡಿದರು. ಸ್ಟೇಷನ್ನಿನಲ್ಲಿ ಅಲ್ಲಿ ರೆಸಿಡೆಂಟರು ಆಫೀಸ್ ಮಂತ್ರಿಗಳು ಮೊದಲಾದ ಅಧಿಕಾರಿಗಳು ನೈಜಾಮರವರನ್ನು ಇದಿರುಗೊಂಡು ಮರ್ಯಾದಿಸಿದರು. ಸೇನೆಯು ಮರ್ಯಾದೆಯನ್ನಿತ್ತಿತು ಬಂಡಿಯು ಹೊರಟಾಗ ೨೧ ಗುಂಡುಗಳು ಹಾರಿಸಲ್ಪಟ್ಟವು

ಫ್ರಾನ್ಸಿನಲ್ಲಿ ಪೂರ್ಣಪ್ರವಾಹದಿಂದ ಕೂಡಿದ ಒಂದು ನದಿಯ ಸೇತುವೆಯ ಮೇಲೆ ಹೋಗಿಯ ಬಂಡಿಯು ಬರುತ್ತಿರುವಾಗ್ಗೆ, ಸೇತುವೆಯು ಕೊಚ್ಚಿಹೋಗಿ ೩ ಬಂಡಿಗಳ ವಿನಹ ಮಿಕ್ಕ ಬಂಡಿಗಳೆಲ್ಲವೂ ನೀರಿನಲ್ಲಿ ಮುಳುಗಿದುವು ಒಳಗಿದ್ದ ಪ್ರಯಾಣಿಕರಲ್ಲಿ ಕೆಲವರು ಒಂದು ಮರದ ರೆಂಬೆಗೆ ನೇತಾಡುತ್ತಿಕೊಂಡರು ಮತ್ತೆ ಕೆಲರು ಈಜಿಕೊಂಡು ಹೋಗುತ್ತಿದ್ದರು. ಹೊಳೆಯಾದರಲ್ಲಿ ದೋಣಿಗಳೆಲ್ಲವೂ ಕೊಚ್ಚಿಕೊಂಡು ಹೋಗಿದ್ದುದರಿಂದ, ನೀರಿನಲ್ಲಿ ಮುಳುಗಿಹೋಗುತ್ತಿದ್ದ ಜನರನ್ನು ರಕ್ಷಿಸಲಾಗಲಿಲ್ಲ. ಈ ಅಪಘಾತದಲ್ಲಿ ೫೦ ಜನರು ನೀರಿನಲ್ಲಿ ಮುಳುಗಿ ಸತ್ತುಹೋದರು. [illegible] ಒಬ್ಬ ಮನುಷ್ಯನು ೭ ಘಂಟೆಯ ಕಾಲ ಮರದ ರೆಂಬೆಗೆ ನೇತಾಡುತ್ತಿಕೊಂಡಿದ್ದನು. ಮತ್ತು ೧೦ ಜನರು ನದಿಯ ಮಧ್ಯಭಾಗದಲ್ಲಿ ಕುಳಿತಿದ್ದರು ಒಂದು ಬಂಡಿಯು ಪ್ರವಾಹದಲ್ಲಿ ಸಿಕ್ಕಿ ನುಗ್ಗಿಕೊಂಡು ಹೋಗುತ್ತಿರುವಾಗ್ಗೆ, ಅದರೊಳಗಿದ್ದ ಜನರನ್ನು ರಕ್ಷಿಸುವ ಪ್ರಯತ್ನದಲ್ಲಿ ಒಬ್ಬನು ಮುಳುಗಿ ಸತ್ತುಹೋದನು.

ಯಂತ್ರಗಳಿಗೆ ಬಿರುಸನ್ನೂ, ಗತಿಯನ್ನೂ, ಮೋಟಾರು ಬಂಡಿಗಳಿಗೆ ಸೀಮೆಯೆಣ್ಣೆಯನ್ನು ಹಾಕಿ ಅವುಗಳನ್ನು ನಡೆಯಿಸಬೇಕಾಗಿರುವುದಷ್ಟೆ. ಅವನ್ನು ಈಗ ಪಟ್ಟಿದ ಹೊಸರೀತಿಯಿಂದ ಸೀಮೆಯೆಣ್ಣೆಯ ಬೆಲೆ ಕಡಿಮೆಯಾಗುವಂತೆ ಒಂದು ಹೊಸ ಅಡಾಯವು ಕಂಡು ಹಿಡಿಯಲ್ಪಟ್ಟಿರುತ್ತದೆ ಅದು ಹೇಗೆಂದರೆ ಪ್ರತಿ ಮೂಟೆಯಲ್ಲಿ ೧೦ ಪವನು ಕಲ್ಲಿದ್ದಲನ್ನು ಹಾಕಿ ಅದನ್ನು ಬೆಂಕಿಯಿಂದ ಬಿಸಿಮಾಡಿ ನೀರನ್ನು ಸೇರಿಸಿ ಆಮೇಲೆ ನೆಲ್ಲಿನ ಮೇಲೆ ಆ ಮೂಟೆಗಳನ್ನು ಇಟ್ಟುಬಿಟ್ಟರೆ ಸೀಮೆಯೆಣ್ಣೆಯ ಹಾಗೆ ಉಪಯೋಗಿಸಬಹುದು. ಇದರಿಂದ ನೀರು ಆವಿಯಾಗುತ್ತದೆ ಅದು ಬೇರೆ ಬೇರೆ ಉಪಯೋಗಕ್ಕೆ ಬರುವುದು. ಅದರ ಸಹಾಯದಿಂದ ಮೊದಲ್ಲಿ ಯಂತ್ರಗಳನ್ನು ನಡೆಸಬಹುದು. ಮೋಟಾರು ಬಂಡಿಗಳನ್ನು ನಡೆಸಲೂ ಸಾಧ್ಯವಾಗಿರುವುದರಿಂದ ಈ ಉಪಾಯದಿಂದ ಬೇಕಾದ ಅಥವಾ ಎಷ್ಟಾದರೂ ಮಟ್ಟಿಗೆ ವೆಚ್ಚವನ್ನು ಮಿಗಿಸಿಕೊಳ್ಳಬಹುದಾಗಿದೆಯಾದುದರಿಂದ, ಈ ಹೊಸ ಉಪಾಯವು ಎಲ್ಲಾ ಬಗೆಯವರಿಗೂ ಉಪಯೋಗವಾಗಿರುವುದೆಂದು ತೋರುತ್ತದೆ.

ಬಿವರ್‌ಪೂಲಿನಲ್ಲಿ ಒಂದು ಎಣ್ಣೆಯ ಕಾರ್ಖಾನೆಯಲ್ಲಿ ೭ ಡಿಗ್ರಿಯನ್ನು ಅಳೆಯುವ ಯಂತ್ರವು ಬೆಂಕಿಯಿಂದ ಹೊತ್ತಿಕೊಂಡು ಒಡೆದುಹೋಗಿ ಕಟ್ಟಡದ ಸೀಲಿಂಗನ್ನು ಕೆಡಿಸಿಕೊಂಡು ಹೋಯಿತು ಇದರ ರಭಸಕ್ಕೆ ಕಟ್ಟಡವೆಲ್ಲವೂ ಧ್ವಂಸವಾಯಿತಲ್ಲದೆ, ಅಲ್ಲಿ ಕೆಲಸಮಾಡುತ್ತಿದ್ದ ೪೦೦ ಜನರು ಭಯದಿಂದ ಬ್ರಾಂತರಾಗಿ ದಿಕ್ಕಾಪಾಲಾಗಿ ಓಡಿದರು. ಕಟ್ಟಡದ ಕೆಳಭಾಗದಲ್ಲಿದ್ದ ಸ್ತ್ರೀಯರು, ಇತರರೂ ಒಡೆದು ಸತ್ತು ಸುಮಾರು ೫೦ ಶವಗಳು ಕಟ್ಟಡದ ಅಡಿಯಲ್ಲಿ ಸಿಕ್ಕಿಕೊಂಡವು. ಕಟ್ಟಡದ ಕೆಳಗೆ ಸಿಕ್ಕಿದ್ದ ಜನಗಳನ್ನು ಕೆಲವರು ಸಿಕ್ಕಿಸಿಕೊಂಡಿದ್ದರು. ಅಷ್ಟರಲ್ಲಿ ಬೆಂಕಿಯನ್ನಾರಿಸುವ ಸೈನಿಕರು ಯಂತ್ರವನ್ನು ತೆಗೆದುಕೊಂಡು ಬಂದು ಬೆಂಕಿಯನ್ನು ನಿಲ್ಲಿಸಿ ಬಹು ಕಷ್ಟದಿಂದ ಹೊರಗೆ ತೆಗೆದು, ನೀರನ್ನು ಹಾಯಿಸಿ ಬೆಂಕಿಯನ್ನು ಆರಿಸಿದರು ಈ ಅಪಘಾತಕ್ಕೆ ಸಿಕ್ಕಿ ಪ್ರಾಣವನ್ನು ಕಳೆದುಕೊಂಡಿರುವವರು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದಾರೆ. ಮಾನವ ದೇಹ ಒಂದು ಗುರುತಿಸಲಾರದಂತೆ [illegible]. ಸತ್ತು ಹೋದವರನ್ನು ಸ್ಮಶಾನಕ್ಕೆ ಸಾಗಿಸುವಾಗ ಅಲ್ಲಿ ಅವರ ಬಂಧುಗಳು ಗುರುತಿಸಿ ಶವ ಸಂಸ್ಕಾರವನ್ನು ಮಾಡಿದರು. [illegible] ಸಾಮಾನುಗಳು [illegible] ಆ ಯಂತ್ರವು [illegible] ಅತಿಶಯವಾದ
ಗಿಡ್ಡ ತೆಂ. [illegible] ೩೬೪
[illegible] ೪೮
[illegible] ೫

ಪ್ರಥಮ ಶ್ರೀಮನ್ಮಹೀಶೂರ ಮಹಾಸಭೆಯು.

ಸಕಲೇಶಪುರದ ತಾಲೂಕಿನ ಪ್ರತಿನಿಧಿಗಳ ಸಭೆ

ವರದಿ—

ಈ ವರ್ಷ ದೀಪಾವಳಿ ೩ ನೆಯ ಶ್ರೀಮಾನ್ ಮಹೀಶೂರು ಮಹಾಸಭೆಯನ್ನು ಐದನೇ ಡಿಸೆಂಬರ ತಾರೀಖು, ೬ನೇ, ನೆಯ ಬುಧವಾರ, ಗುರುವಾರ, ಶುಕ್ರವಾರಗಳಲ್ಲಿ ಕೂಡಿ ಸಲಾಗಿದೆ.

ಈ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಸಭೆಯನ್ನು ಏರ್ಪಡಿಸಿದ ವಿಷಯಗಳ ಪಟ್ಟಿ ಕಾರ್ಯಕ್ರಮ ಮೊದಲಾದವುಗಳು ಮುಂದಿನ ಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಲ್ಪಡುವುವು.

ಎಸ್. ವಿ. ಸೀತಾರಾಮಯ್ಯ,

ಮಹಾಸಭಾ ಸ್ವಾಗತ ಕಮಿಟಿಯ ಕಾರ್ಯದರ್ಶಿ.

ಬ್ರಹ್ಮಪುರದಲ್ಲಿ ೨-೩ ತಿಂಗಳುಗಳಿಂದಲೂ ಪ್ಲೇಗು ಪ್ರಾರಂಭವಾಗಿ ಪ್ರಜೆಗಳೆಲ್ಲರೂ ಗುಡಿಸಲುಗಳಲ್ಲಿ ವಾಸವಾಗಿದ್ದಾರೆ. ಅವರೊಳಗೆ ೮-೧೦ ದಿವಸಗಳಲ್ಲಿ ಬಿಸ್ಸಿ ಜ್ವರ ರೋಗದಿಂದ ಸಾಯುತ್ತಿದ್ದಾರೆ. ಈ ಡಿಸ್ಟ್ರಿಕ್ಟ್ ಆಸ್ಪತ್ರೆಯ ಅಧಿಕಾರಿಗಳಾದ ಮಿ॥ ಸುಬ್ಬರಾಯರವರು ಈ ಊರಿನ ನೆರೆಹೊರೆಗಳಲ್ಲಿ ಇನಾಕ್ಯುಲೇಷನ್ ಮಾಡುತ್ತಿದ್ದಾರೆ. ಈ ಊರಿನ ಆಸ್ಪತ್ರೆಯ ಅಸಿಸ್ಟೆಂಟರವರಾದ ಮಿ॥ ಸುಬ್ಬರಾಯರವರು ತುಂಬಾ ಶ್ರದ್ಧೆಯನ್ನು ವಹಿಸಿ ಬಡವರಿಗೂ ಬುದ್ಧಿವಾದವನ್ನು ಹೇಳಿ ಗುಡಿಸಲುಗಳಿಗೆ ಕಳುಹಿಸುತ್ತಿದ್ದಾರೆ. ಇವರ ಉಪಕಾರವು ಚಿರಸ್ಮರಣೀಯವಾಗಿರುತ್ತೆ. ಈ ಊರಲ್ಲಿ ಈಗ ಸುಮಾರು ೩ ತಿಂಗಳಿಂದಲೂ ಪೋಸ್ಟ್ ಮಾಸ್ಟರಾಗಿದ್ದ ಮಿ॥ ಎಸ್. ಆರ್. ದೇವಯ್ಯನವರು ಬೇರೆಕಡೆಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರು ದೊಡ್ಡವರು ಸಣ್ಣವರು ಎಂಬ ಭೇದವನ್ನು ಎಣಿಸದೆ ಎಲ್ಲರ ದಿವಸಗಳನ್ನು ಗಣನೆಗೆ ತಾರದೆ ಜನಗಳ ಕೆಲಸ ಕಾರ್ಯಗಳನ್ನು ಮಾಡಿಕೊಡುತ್ತಾ ಇದ್ದರು. ಇಂತಹವರನ್ನು ಅಗಲಿರಲು ನಾವೆಲ್ಲರೂ ಬಹಳ ವ್ಯಸನಾಕ್ರಾಂತರಾಗಿರುತ್ತೇವೆ. ಇವರಿಗಾಗಿ ಈ ದಿನ ಒಂದು ಅಲ್ಪಾಹಾರಕೂಟವು ನೇರಿಸಲ್ಪಟ್ಟಿತ್ತು. ದೇವರು ಇವರಿಗೂ ಇವರ ಕುಟುಂಬಕ್ಕೂ ಆಯುರಾರೋಗ್ಯವನ್ನು ಕೊಡಲೆಂದು ಪ್ರಾರ್ಥಿಸುತ್ತೇವೆ. ಸುಪೂರ್ಣ

ಶ್ರೀ ರೇಣುಕಾಚಾರ್ಯರ ಪ್ರಸಾದ.

ದೇವರೂರು ಶ್ರೀಮಂತ ಪಟ್ಟೇದ ವೀರಪ್ಪಯ್ಯನವರು ಇದೇ ೩ ತಿಂಗಳ ಮುಂದೆ ತಮ್ಮ ಧರ್ಮಪತ್ನಿಯವರು ಶಿವನಿಗೆ ಯುಕ್ತಮುಂಬೊಂದಿದ್ದುದರಿಂದ ಅವರ ಮಾಸಿಕಗಳಾದ ಧನೆಯ ದಿವಸವಾದ ಕಳೆದ ಕಾರ್ತೀಕ ಬಹುಳ ೫ ಶುಕ್ರವಾರ ಜ್ಞಾಪಕಾರ್ಥವಾಗಿಯೂ, ಮತ್ತು ಅವರಿಗೆ ಬಾಲಕಿಯರಲ್ಲಿದ್ದ ಪ್ರೇಮಾತಿಶಯ ಸೂಚನಾರ್ಥವಾಗಿಯೂ ಇಲ್ಲಿ ಹೆಣ್ಣುಮಕ್ಕಳ ಶಾಲೆಯಲ್ಲಿ ಸಮಸ್ತ ಬಾಲಕ ಬಾಲಿಕೆಯರಿಗೆ ಸಕ್ಕರೆ ಮಿಠಾಯಿ ಮೊದಲಾದ ಫಲಾಹಾರಗಳನ್ನು ವಿನಿಯೋಗ ಮಾಡುವ ಕೆಲಸಕ್ಕೆ ಆ ದಿನ ಸಾಯಂಕಾಲ ೪ ಘಂಟೆಗೆ ಸ್ಕೂಲಿನಲ್ಲಿ ಒಂದು ಸಭೆಯನ್ನೇರ್ಪಡಿಸಿದರು. ಆ ಸಭೆಗೆ ಪಟ್ಟಣದ ಸಮಸ್ತ ಮಹನೀಯರುಗಳಾದ ದೇವರೂರು ಸಾಹುಕಾರ ನಂಜದೇವಪ್ಪನವರು, ಸ್ಕೂಲ್ ಇನ್ಸ್‌ಪೆಕ್ಟರು, ಪ್ಲೀಡರ್ ಜನರುಗಳು, ಮುನಿಸಿಪಲ್ ಕೌನ್ಸಿಲರುಗಳು, ಸ್ಕೂಲ್ ಉಪಾಧ್ಯಾಯರು ಮೊದಲಾದ ಸರ್ಕಾರದ ಅಧಿಕಾರಿಗಳು, ಮತ್ತು ಬುದ್ಧಿವಂತರು, ಶ್ರೀಮಾನ್ ನಂಜಪ್ಪನವರು, ಪಟ್ಟಣಗೆರೆ ರಂಗಸ್ವಾಮಿಗಳು, ಚನ್ನಬಸವಣ್ಣನವರು, ಗೋವಿಂದಪ್ಪನವರು, ಶ್ರೀರಂಗಪ್ಪನವರು, ಕಪ್ಪು ಶೆಟ್ಟರು ಶೀಗೆಬೀಡನವರು, ಡಿ. ವೀರಣ್ಣನವರು, ಕಿರಿಯ ಗಣ್ಣಪ್ಪನವರು, ಡಿ. ಚೆಲುವಪ್ಪನವರು, ಡಿ. ಮರಿಯಣ್ಣನವರು, ಬಿ. ಶೆಟ್ಟಿ ಗಂಗಪ್ಪನವರು, ರುದ್ರಪ್ಪನವರು ಮೊದಲಾದ ಬಹುಜನ ದೊಡ್ಡಮನುಷ್ಯರು ಸಭೆಯನ್ನಲಂಕರಿಸಿದ್ದರು. ಇಲ್ಲಿನ ಸಂಸ್ಕೃತ ಪಾಠಶಾಲೆಯ ಉಪಾಧ್ಯಾಯರಾದ ಸ್ವಾಮಿಗಳು ಪೀಠದಲ್ಲಿ ಕುಳಿತು ಸಭೆಯ ಕಾರ್ಯವನ್ನು ಅಂಗೀಕರಿಸಿದರು. ತರುವಾಯ ಸಹಾಧ್ಯಾಯರಾದ ಮಿ॥ ಸ್ಕೂಲ್ ಅಸಿಸ್ಟೆಂಟ್ ಮಾಸ್ಟರುಗಳಾದ ಮಿ॥ ಲ... ಸ್ಕೂಲ್ ಇನ್ಸ್‌ಪೆಕ್ಟರುಗಳು, ಮಿ॥ ರಾ॥ ಆಡುವರ ಶ್ರೀಮಂತ ಪಟ್ಟೇದ ವೀರಪ್ಪಯ್ಯನವರಿಗೆ ಅಕಾಲದಲ್ಲಿ ಪತ್ನಿಯೋಗವಾದುದಕ್ಕೆ ವ್ಯಸನವನ್ನು ಪ್ರದರ್ಶನಗೊಳಿಸಿ ತಮ್ಮನಾದರದಿಂದ ಶ್ರೀಮನ್ಮಹಾದೇವನು ಸಕಲ ಸಿರಿ ಶುಭಗಳನ್ನು ದಯಪಾಲಿಸಲೆಂದು ಪ್ರಾರ್ಥಿಸಿದರು. ಇವರ ಸದ್ಗುಣಗಳಿಗೆ ವಿಶೇಷವಾಗಿ ಸುಮಾರು ವರ್ಷಗಳಿಂದ ಪ್ರೋತ್ಸಾಹಕರಾಗಿರುವ ದಯಾಶೀಲರೆಂದೂ ಈ ಶಾಲೆಯ ಶಿಕ್ಷಣ ವಿಷಯದಲ್ಲಿ ವಿಶೇಷವಾದ ಅಭಿಮಾನವನ್ನು ತೋರಿಸುತ್ತಿರುವ ಧರ್ಮಿಷ್ಠರೆಂದೂ ಬಾಲಕಿಯರ ವಿದ್ಯಾಭಿವೃದ್ಧಿಗೆ ಸಹಾಯಕರಾದ ಪ್ರಸಿದ್ಧ ಪುರುಷರೆಂದೂ ಪ್ರಶಂಸಿಸಿ ವಂದನೆಗಳನ್ನು ಸಮರ್ಪಿಸಿದರು. ನಿಜವಾಗಿಯೂ ಇವರು ಸಮಸ್ತ ಸದ್ಗುಣಗಳಲ್ಲಿ ಶ್ರೇಷ್ಠರಾಗಿರುವುದರಿಂದ ಇವರ ಕೀರ್ತಿಯು ಹೆಚ್ಚಲೆಂದು ಹಾರೈಸುತ್ತೇವೆ.

ದ್ವಿತೀಯವಿಷಯದ ಪ್ರಸ್ತಾಪದಲ್ಲಿ ಗೌರ್ನಮೆಂಟು ಹೆಣ್ಣುಮಕ್ಕಳ ಶಾಲೆಯ ಉಪಾಧ್ಯಾಯರಾದ ಮಾದೇವಪ್ಪನವರಿಗೂ ಪ್ರಕಾರದವರಿಂದ ಸಭಾಸದರು ಸ್ಕೂಲಿನ ಬಾಲಿಕೆಯರನ್ನು ಕೂಡಿಸಿ ಸ್ಕೂಲಿನ ದಿವಸ ಪ್ರಾರ್ಥನೆ ಮಾಡಿಸಿದರು. ಆದಾಗ್ಯೂ ಸ್ವಲ್ಪ ಕಾಲದ ವರೆಗೂ ಸಿಹಿಹಂಚುತ್ತಿದ್ದರು. ಆದರೆ ಈ ದಿನ ತುಂಬಾ ತೊಂದರೆಯಾಯಿತು. ಆದ್ದರಿಂದ ಗತಿಸಿದ ಶ್ರೀ ಸಿದ್ಧಮ್ಮನವರ ಜ್ಞಾಪಕಾರ್ಥವಾಗಿ ಬಾಲಕಿಯರ ಶಾಲೆಗೆ ಉಪಯುಕ್ತವಾಗುವಂತೆ ಒಂದು ಸ್ಕೂಲ್ ಕಟ್ಟಡವನ್ನು ಕಟ್ಟಿಸಿಕೊಡಬೇಕೆಂದು ಪ್ರಾರ್ಥಿಸಿದರು.

ತರುವಾಯ ಅಧ್ಯಕ್ಷರು ಆ ದಿವಸ ನಡೆದ ಸಭೆಯ ಉದ್ದೇಶವನ್ನು ಸರ್ವರಿಗೂ ವಿದಿತವಾಗುವಂತೆ ಸೂಚಿಸಿ ಉಪಾಧ್ಯಾಯರಿಗೂ, ವಿದ್ಯಾರ್ಥಿಯವರಿಗೂ, ವಿದ್ಯಾರ್ಥಿನಿಯರಿಗೂ, ಭಾರತಿಗಳ, ವಿದ್ಯಾರ್ಥಿಯರಿಗೂ ಬೋಧೆಯಾಗುವಂತೆ ಪುರಾತನ ಸ್ತ್ರೀಪತಿಗಳಾದ ಸಾವಿತ್ರಿ, ದಮಯಂತಿ ಮೊದಲಾದವರ ಸತ್ಯಸಂಧತೆ, ಪತಿಸೇವಾಪರತೆ, ಭೂತದಯೆ, ಧರ್ಮಮಾರ್ಗ ಪ್ರವರ್ತನೆಗಳನ್ನು ಹಾಗೂ, ಅವರೆಲ್ಲರ, ಧರ್ಮಾಗ್ರ ಮೊದಲಾದವರ ಚಾರಿತ್ರ್ಯಮಂಗಳಗಳನ್ನು ವಿವರಿಸಿ ಧರ್ಮವನ್ನು ಮತ್ತು ಗತಿಸಿದ ಶ್ರೀ ಸಿದ್ಧಮ್ಮನವರ ಪತಿಸೇವಾಸಕ್ತಿ ಮೊದಲಾದ ಸದ್ಗುಣಗಳನ್ನು ವ್ಯಕ್ತಗೊಳಿಸಿ, ಈ ತರಹ ನೀತಿಮಾರ್ಗ ಪ್ರವರ್ತಕರಾದ ಮಹಾಪುರುಷರು ಆಚರಿಸಿದ ನಡತೆಗಳು ನಮಗೆ ಜನ್ಮೋದ್ಧಾರಕವೆಂದು ಅಸ್ಮದಾದಿಗಳು ಮಾರ್ಗದರ್ಶಕರಾಗಿರುವುದರಿಂದ, ಅವರುಗಳಂತೆ ನಡೆಯಬೇಕೆಂದು ಭಾಷಣ ಮಾಡಿದರು. ಮತ್ತು ಈ ಸಭೆಯ ಕಾಲದಲ್ಲಿ ವಿಶೇಷವಾಗಿ ಸ್ತ್ರೀಯರಿಗೆ ಗರ್ಲ್‌ಸ್ಕೂಲ್ ಕಟ್ಟಡದ ವಿಷಯವಾಗಿ ಸ್ತ್ರೀ ವಿದ್ಯಾಭ್ಯಾಸದಿಂದುಂಟಾಗುವ ಪ್ರಯೋಜನವನ್ನು ತೋರಿಸಿದರು. ಸಿದ್ಧಮ್ಮನವರ ಸಂತೋಷಚಿತ್ತರಾಗಿ ನಮ್ಮ ಜ್ಯೇಷ್ಠ ಭ್ರಾತೃಗಳಾದ ಶ್ರೀಮಾನ್ ರುದ್ರಪ್ಪನವರ ಕಾಲದಲ್ಲಿ ಇಲ್ಲಿನ ಇಂಗ್ಲೀಷ್ ಸ್ಕೂಲ್ ಕಟ್ಟಡವನ್ನು ಧರ್ಮಾರ್ಥವಾಗಿ ಮಾಡಿಕೊಟ್ಟಿದ್ದರು. ಅದರಂತೆ ಈಗಲೂ ಈ ಗರ್ಲ್‌ಸ್ಕೂಲ್ ಮಂದಿರವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡುತ್ತೇವೆಂದು ಭಾಷಣ ಮಾಡಿದರು.

ವಾಚಕ ಮಹಾಶಯರೇ ನಮ್ಮ ಪತಿತ ಕಾರ್ಯೋಪಯುಕ್ತ ಕಾರ್ಯೋನ್ನತಿಯ ಯೆಂಬಂತೆ ಸೌ॥ ಸಿದ್ಧಮ್ಮನವರು ಪರಲೋಕಗತರಾದಾಗ್ಯೂ ಲೋಕೋತ್ತರವಾದ ಅಂತಹ ಸದ್ಗುಣಗಳಿಗೆ ಸ್ಥಾನಭೂತರಾಗಿದ್ದುದರಿಂದಲೇ ಅವರ ಹೆಸರು ಸ್ಥಿರವಾಗಿ ನಿಲ್ಲುವದಕ್ಕೆ ಕಾರಣವಾಯಿತಲ್ಲವೆ?

ಅನಂತರ ಅಧ್ಯಕ್ಷರೂ, ಸಭಾಸದರೆಲ್ಲರೂ, ಯಸ್ಮಿನ್ ಜೀವತಿ ಜೀವಂತಿ ಬಹವಸ್ಸತುಜೀವತು ಯೆಂಬಂತೆ ಬಹು ಜನರ ಜೀವನಕ್ಕೆ ಆಶ್ರಯಭೂತರಾಗಿಯೂ, ವಿದ್ಯಾಪ್ರೋತ್ಸಾಹಕರಾಗಿಯೂ ಅನ್ನದಾನ ಮೊದಲಾದ ಧರ್ಮಕಾರ್ಯ ನಿರತರಾಗಿಯೂ ಪ್ರಖ್ಯಾತಿಗೊಂಡಿರುವ ಶ್ರೀಮಂತ ಪಟ್ಟೇದ ವೀರಪ್ಪನವರಿಗೆ ಅಕಾಲದಲ್ಲಿ ಪ್ರಾಪ್ತವಾದ ಭಾರ್ಯಾವಿಯೋಗ ವ್ಯಸನವನ್ನು ಸಹಿಸುವ ಧೈರ್ಯವನ್ನೂ, ವಿಚಕ್ಷಣತೆಯನ್ನೂ ಸ್ಥಿರತೆಗೆ ತಂದುಕೊಳ್ಳುವಂತೆ ಧೀಲತೆ, ವಿಚಕ್ಷಣತೆ ಮೊದಲಾದ ಗುಣಗಳನ್ನು ಕೃಪಾಕರನಾದ ಶ್ರೀ ಪರಮೇಶ್ವರನು ಕರುಣಿಸಿ, ಮುಂದೆ ಇತ್ಯೋಪಕಾರ ಮಾಡ ಸಕಲೈಶ್ವರ್ಯವನ್ನು ಪುತ್ರಪೌತ್ರಾದ್ಯಭಿವೃದ್ಧಿಯನ್ನು ಸತ್ಯ ಸ್ವರ್ಗವನ್ನು ದಯಪಾಲಿಸಲೆಂದು ಭಗವತ್ಪ್ರಾರ್ಥನೆಯಂ ಮಾಡಿದರು. ಅನಂತರ ಸಂಗೀತ ವಿದ್ಯಾಪ್ರವೀಣರಾದ ಪ್ರಭುಗಳು ಸಂಗೀತ ನಡೆಯುತ್ತಿರಲು ವಿದ್ಯಾರ್ಥಿನಿಯರಾದ ಬಾಲಿಕೆಯರು ಮಂಗಳಕರವಾದ ಗಾನವನ್ನು ಮಾಡಿದರು. ಅನಂತರ ಸರ್ವರಿಗೂ ಸಕ್ಕರೆ, ವಿ ರಾಮ, ಗಂಧ, ಫಲತಾಂಬೂಲ, ಪುಷ್ಪ ಹಾರಾದಿಗಳನ್ನು ವಿನಿಯೋಗ ಮಾಡಿದರು. ಸಭೆಯು ವಿಸರ್ಜನೆಯಾಯಿತು. ದೊಡ್ಡಗುಂಜೆಮರದ ಪಟ್ಟದೇವರು.

ದೇವರೂರು. ಸಂಸ್ಥಾನ ಶಾಲೆಯ ಶ್ರೀ ಮಾಸ್ಟರ್.

ಲಿಂಗಾಯತ ಜಂಗಮರುಗಳ ಅಷ್ಟಪಾಲಿಕೆ ಮತ್ತು ಬಾಗಲಕೋಟೆಯ ಬ್ರಾಹ್ಮಣರು, ಹಾಗೆ ಬ್ರಾಹ್ಮಣ ಪತ್ರಿಕೆಯವರೆಲ್ಲರು.

ಸಂಪಾದಕರೇ, ಸರಕಾರಿ ಪತ್ರಿಕೆ ಜನರಲ್ಲಿ ಯಾರಾದರೂ ಅಪರಾಧ (ದೋಷ) ಮಾಡಿ ಕೊಂಡರೆ ಶಿಕ್ಷೆಗಾಗುವರು ಸಹಜ. ಆದರೆ ಅವರೆಲ್ಲರೂ ಒಟ್ಟಾಗಿ ತೊಂದರೆಯಾದ ಕೂಡಲೆ ಆ ವರ್ಗದ ಎಲ್ಲವನ್ನು ನಿಂದಿಸುವದು ಯಾವದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿರುತ್ತದೆ. ಆದರೆ ಈ ಬಾಗಲಕೋಟೆಯ ಬ್ರಾಹ್ಮಣ ಜನರ ವಿಷಯವಾಗಿ ಹೀಗೆ ಈ ಬಾಗಲಕೋಟೆಯ ಬ್ರಾಹ್ಮಣರು ಯಾಕೆಂದರೆ, ಲಿಂಗಾಯತ ಜಂಗಮರುಗಳನ್ನು ಅಷ್ಟಪಾಲಿಕೆ ಮಾಡ್ಲ ಕೂಡದೆಂದು ಕೋರ್ಟಿನಲ್ಲಿ ದಾವೆಮಾಡಿ ಆ ಬೇರೆ ಜಾತಿಯವರ ಮನಸ್ಸನ್ನು ನೋಯಿಸಲು ವಿರೋಧವನ್ನು ಕಟ್ಟಿಕೊಂಡದ್ದರಿಂದ, ಕಟ್ಟಕಡೆಗೆ ಸ್ವಧರ್ಮದ ರೀತಿಯಿಂದ ತಾವು ಪಂಡಿತರು, ವಿದ್ಯಾವಂತರು, ತಾವು ಏನನ್ನು ಮಾಡಿದರೂ ಅದು ದಕ್ಕುತ್ತದೆ ಎಂಬ ಹೆಮ್ಮೆಯಿಂದ ಕಾರ್ಯಸಿದ್ಧಿಯ ಬೆಲೆಯನ್ನು ಕಡಿಮೆ ಮಾಡುತ್ತಾರೆ. ಯಾರಿಗೆ ಗೊತ್ತಿಲ್ಲ ಈ ಬ್ರಾಹ್ಮಣರು ಪುಸ್ತಕಗಳ ಮತ್ತು ಸಂಗತಿಯ ಕುರಿತು ನಾನು ಬರೆದ ಪತ್ರವನ್ನು, ಬಾಗಲಕೋಟೆಯ ಯಾವತ್ತು ಸಂಗತಿ, ತಮ್ಮ ಜಾತಿಯ ವರ್ತಮಾನ ಪತ್ರಿಕೆ ಇವರಿಗೆ ನಾನಾತರ.

ಈ ಫೈಲುಗಳನ್ನು ಬಗಿಹಿದರು ಎಲ್ಲರಿಗೂ ಬಿಡುವಷ್ಟೇ ಪತ್ರಿಕಾಕಾರರು ಎರಡು ತಾಸಿನವರೆಗೆ ಬಿಡಿಸಿಕೊಟ್ಟು ಅಗ ಬಂದ ಬ್ರಾಹ್ಮಣ ಜನರ ಮನೆಯಮೇಲೆ ಕಲ್ಲುಗಳು ಬಿದ್ದವೆಂತಲೂ, ಮತ್ತೊಬ್ಬ ಪತ್ರಕಾರರು ಕಲ್ಲುಗಳ ವಿಷಯಕ್ಕೆ "ಜಂಗಮರುಗಳಿಂದ" ಎಂಬ ಶಬ್ದ ಪ್ರಯೋಗದಿಂದಲೂ, ಎಷ್ಟೋ ಬಗೆ ವರ್ಣನೆ ಗುಡಿಯಲ್ಲಿ ಮೂಕನ್ನು ಗಂಗಿಕಟ್ಟಿಸಿ ಕಳವು ಮಾಡಿಕೊಂಡು ಹೋದರೆಂತಲೂ, ಬಾಗಲಕೋಟೆ ಬ್ರಾಹ್ಮಣರ ಮನೆಗೂಕ್ಕು ಜಂಗಮರಿಗೆ ಎ ಹುಡುಗರಿಗೆ (ಪೋಲಿದ್ದಾಗ) ಪೀಡಿಸಿದರೆಂತಲೂ ಒದೆದಿರುತ್ತಾರೆ. ಆದರೆ (ಪೋಲಿದ್ದಾಗ) ಅಂದರೆ ಜಂಗಮರನ್ನು ಒದಿದರು ಅನ್ನುವ ಇಷ್ಟೇ ಅರ್ಥ ಆಗಬೇಕೇನು. ಅವರ ಅಪೇಕ್ಷೆ ಇಷ್ಟೋ ಅಥವಾ ಅದಕ್ಕೂ ಹೆಚ್ಚಿನ ಅರ್ಥ ಆಗಬೇಕೆಂಬ ಅಪೇಕ್ಷೆ ಇತ್ತೋ ತಿಳಿಯಲಿಲ್ಲ.

ಇಂದೂ ಪ್ರಕಾಶಕಾರರು ತಾವು ಮುಂಬಯಿಯೊಳಗೆ ಬಹು ದೊಡ್ಡ ಕಾಂಗ್ರೆಸ್ಸು ಅತ್ಯಂತ ಪಣಾಂದಿಂದೆಂದು ತಿಳಕೊಂಡು ಅಧಿಕಾರಸ್ಥರು ಪ್ರತಿಕ್ರಿಯೆ ಜನರಿಗೆ ಸಂಬಂಧವಾದುದ ಪ್ರಕಾರ, ಎಲ್ಲಾ ಲಿಂಗಾಯತ ಅಪರಾಧಿಗಳನ್ನು ಬಾಗಲಕೋಟೆಯಿಂದ ಸರಕಾರದವರು ವರ್ಗಮಾಡಿದ್ದಕ್ಕಿಂತ ಒಂದು ಗರ್ವದಿಂದ ಅದ್ಭುತಿಸಿದ್ದಾರೆ. ಪರಂತು ಪರಿಣಾಮವು ಹೀಗಾಗಿರುತ್ತದಲ್ಲಾ—ಒಟ್ಟಿಗೆ ಬಾಗಲಕೋಟೆಯಲ್ಲಿ ಅಧಿಕಾರಸ್ಥರು ಇರತಕ್ಕವರು (೭) ಜನರು ಇವರಲ್ಲಿ ಇಬ್ಬರು ಪೋಲೀಸ್ ಸಬ್ ಇನ್ಸ್‌ಪೆಕ್ಟರು, ಒಬ್ಬರು ಪೋಲೀಸ್ ಇನ್ಸ್‌ಪೆಕ್ಟರು, ಇಬ್ಬರು ಸಬ್ ಜಡ್ಜ್, ಒಬ್ಬರು ಮಾಮಲೇದಾರರು (೧ನೆ ವರ್ಗ ಮ್ಯಾಜಿಸ್ಟ್ರೇಟರು) ಒಬ್ಬರು ಅವಲಕಾರಕೂನ (ಮೂರನೇ ವರ್ಗ ಮ್ಯಾಜಿಸ್ಟ್ರೇಟರು) ಈ ಪ್ರಕಾರ ಇದ್ದು ಅತ್ಯಂತ ಪದಕಾರಲ್ಕೆ ಇಬ್ಬರು ಪಾರಸಿಗರು, ಇಬ್ಬರು ಬ್ರಾಹ್ಮಣರು, ಒಬ್ಬ ಲಿಂಗಾಯತರು, ಇಬ್ಬರು ಇತರ ಜಾತಿಯವರು ಇದ್ದರು. ಆದರೆ ಬ್ರಾಹ್ಮಣರಾದ ಇಬ್ಬರೂ ಸಹ ಇಲ್ಲಿಂದ ವರ್ಗಾಯಿಸಲ್ಪಟ್ಟಿರುತ್ತಾರೆ.

ದರ ಒಬ್ಬ ಬ್ರಾಹ್ಮಣ ವರ್ತಮಾನಪತ್ರಕಾರರೂ ಮೈಸೂರ ಸರ್ಕಾರದಲ್ಲಿ ಚಿತ್ರಕಲ್‌ದುರ್ಗದ ಸ್ವಾಮಿಗಳ ಅವರಿಗೆ ಅಡ್ಡಪಾಲಕಿಯ ಪರವಾನಿಗಿ ಇಲ್ಲಾ ಅನ್ನುವ ಮಾತನ್ನು ಮಹತ್ವದ ಸಂಗತಿಯನ್ನಾಗಿ ಬರೆದಿದ್ದಾರೆ. ಆದರೆ ಮೈಸೂರ ಸಂಸ್ಥಾನದಲ್ಲಿಯೇ ಮಹತ್ವವುಳ್ಳ ಕೊಲ್ಲಾಪುರ ಸಂಸ್ಥಾನದಲ್ಲಿ ಇರುವ ಸ್ವಾಮಿಗಳವರು ಅಡ್ಡಪಾಲಕಿ ಇಲ್ಲದೆ ಅಲ್ಲ ಪ್ರಯಾಣ ಮಾಡುತ್ತಾರೆ ಎರಡು ಮೂರು ಅಲ್ಲಾ ವ್ಯಾಪಾರತನದ ಸಹಿತವಾಗಿ ಎರಡು ಮೂರು ಸ್ಥಳಗಳಲ್ಲಿ ಮೆರೆದದ್ದನ್ನು ಮರೆತುಬಿಟ್ಟಿರುವರೇ, ಅಥವಾ ಈ ಸಂಗತಿಯನ್ನು ಬರೆಯಲಿಕ್ಕೆ ನಾಚಿಕೆಯೇ? ಇದು ವಿಚಾರ ಮಾಡತಕ್ಕ ಸಂಗತಿಯಾಗಿದೆ. ಇಷ್ಟೇ ಅಲ್ಲದೆ ಬ್ರಾಹ್ಮಣ ಸಂಸ್ಥಾನಗಳಾದ ಸಾಂಗ್ಲಿ ಮುಂತಾದವುಗಳಲ್ಲಿ ಸಹ ಅಡ್ಡಪಾಲಕಿ ಉತ್ಸವ ಮಾಡಲಿಕ್ಕೆ ಅಲ್ಲಿನ ಯುವರಾಜರು ಅಪ್ಪಣೆಯನ್ನು ಕೊಟ್ಟಿದ್ದಾರೆ ಹಾಗೂ ಬ್ರಾಹ್ಮಣ ಜಗದ್ಗುರುಗಳು ಇರುವ ಸಂಕೇಶ್ವರದಲ್ಲಿ ಸಹ ಈ ಲಿಂಗಾಯತ ಜಗದ್ಗುರುಗಳು ಅಡ್ಡಪಾಲಕಿ ಮೆರೆಯಲು ಶ್ರೀ ಶಂಕರಾಚಾರ್ಯರು ಪರವಾನಿಗೆಯನ್ನು ಕೊಟ್ಟಿದ್ದಾರೆ. ಇದಲ್ಲದೆ ಕೊಲ್ಲಾಪುರ ಮುಂತಾದ ಇತರ ಸಂಸ್ಥಾನಗಳಲ್ಲಿ ಸಹ ಈ ಸ್ವಾಮಿಗಳವರಿಗೆ ಅಡ್ಡಪಾಲಕಿಯ ಮರ್ಯಾದೆಯುಂಟು ಹೀಗೆ ನಿಜಸ್ಥಿತಿಯು ಇದ್ದು ಬ್ರಾಹ್ಮಣರು ಮತ್ತು ಬ್ರಾಹ್ಮಣ ವರ್ತಮಾನ ಪತ್ರಕಾರರು ಅನುಚಿತವಾಗಿ ವರ್ತಿಸಿದ್ದು ಅಸೂಯಾಂಧತೆಯೇ ಹೊರತು ಬೇರೆ ಏನೂ ಇಲ್ಲ.

ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬರವರ ಹುಕುಮು ಇಲ್ಲದೇಲೆ ಲಿಂಗಾಯತ ಮಾಮಲೇದಾರರು ಅಡ್ಡಪಾಲಕಿಯು ತ್ಸವಕ್ಕೆ ಅಪ್ಪಣೆ ಮಾಡಿದರು ಮತ್ತು ಅವರಿಗೆ ನೌಕರಿ ಅಧಿಕಾರಸ್ಥರಿಂದ ಬಂದ ತಂತಿಯ ಅರ್ಥ ತಿಳಿಯದೆ ಹೋಯಿತು ಅಧಿಕಾರಸ್ಥರ ಅಜ್ಞೆಯನ್ನು ಉಲ್ಲಂಘಿಸಿದರು. ಇವರಿಗೆ ಕೆಲಸವಿಲ್ಲದಿರುವ ಯೋಗ್ಯತೆ ಇಲ್ಲ ಎಂದು ಮೊದಲಾದ ಲೇಖನಗಳನ್ನು ಈ ವರ್ತಮಾನಪತ್ರಕಾರರು ನಿರ್ಲಜ್ಜೆಯಿಂದ ಬರೆದಿರುವರು. ಕಾಮಾಲೆ ರೋಗದಿಂದ ಹೀಡಿತರಾದ ಮನುಷ್ಯನಿಗೆ ನೋಡಿದ್ದೆಲ್ಲ ಹಚ್ಚಗೆ ಕಾಣುವಂತೆ ಈ ಜನರಿಗೆ ಪೀರೆಗೆ ಅಸೂಯೆ ಎಂಬ ಕಾಮಾಲೆ ರೋಗವುಂಟಾಗಿ ಯಾವತ್ತು ವಿರುದ್ಧ ತೋರಲಿಕ್ಕೆ ಹತ್ತಿರುತ್ತದೆ. ಯಾಕೆಂದರೆ ಲಿಂಗಾಯತರು ಮತ್ತು ಮಾಮಲೇದಾರರು ಕಾಯದೇಶೀರದ ಸ್ಥಿರ ಕಾಯದೇಶೀರದ ಕಲಸಿದಂತೆ ಕಾಣಿಸಿತು. ಮೇಲಿನ ಮಹ್ಯಾ ಸಾಹೇ ಬರ ಹುಕುಮು ಇದ್ದರೂ ಮಾಮಲೇದಾರರು ಕಾಣಿಸಿದಂತೆ ಕಾಣಿಸಿತು. ಡಿಸ್ಟ್ರಿಕ್ಟ್ ಮತ್ತು ಸಬ್‌ಡಿವಿಜನ್ ಅಧಿಕಾರಸ್ಥರಿರುವುದು ಪ್ರಸಿದ್ಧವಿದ್ದು ಅಲ್ಲಿನ ಪ್ರಜೆಗಳಿಗೆ ತಿಳಿಯುವಂತೆ ಕಾಣಿಸಿತು. ಇಷ್ಟೇ ಈ ರೋಗವು ಹೆಚ್ಚಾಗಿ ವಿಪರೀತ ಬುದ್ಧಿಯಿಂದ ಜಾಗೃತರಾಗಿ ವಿನಾಶಕಾಲವಾಗಿ ಅಲ್ಲವೇ ಅಧಿಕಾರಸ್ಥರ ಯೋಗ್ಯ

ಮುಸ್ಸಂಜೆಗಳನ್ನು ಸಹ ಸಂಕೇಯ ತೆಗೆದುಕೊಳ್ಳದಂತೆ ಈ ಕೊಡಲೇ ಚೆನ್ನಾಗಿ ಪ್ರತಿಷ್ಠಿತವಾಗಿದೆಯೋ ಅಂಥವರ ಬಳಿ ಈ ಪ್ರಕಾರದ ವರ್ತಮಾನಪತ್ರ ಮುಖಾಂತರ ... ಗಳ ನ್ನು ತೆಗೆದದ್ದಕ್ಕೆ ಅವರಿಗೆ ಸವಿಸ್ತರತ್ವಕ್ಕೆ ... ವಿಚಾರವಾಡಬೇಕು. ತಾವು ದೊಡ್ಡ ಪಂಡಿತರು ದ ರವಿಷಧರರು ಎಂಬ ಗರ್ವದಿಂದ ತಾರಿಕ ಅರ್ಥವನ್ನು ಸ ಕ ಚೆನ್ನಾಗಿ ಮಾಡದೆ ವಿಪರೀತ ಅರ್ಥವನ್ನು ಮಾಡಿ ಸಿಕ್ಕ ದ್ದನ್ನು ಈಗ ಪತ್ರಾದಲ್ಲಿಕ್ಕೆ ಪತ್ರಿಸ್ತಿರುತ್ತಾರೆ. ಬ್ರಾಹ್ಮಣರಲ್ಲ ದೊಡ್ಡ ದೊಡ್ಡ ಅಧಿಕಾರಸ್ಥರಿರುವದರಿಂದ ತಮಗೆ ಬೇಕಾದ ಗಳನ್ನು ಮಾಡಿಕೊಳ್ಳಲಿಕ್ಕೆ ಅನುಕೂಲವವೆಂಬ ಮಾತು ಗಿನ ಉದಾಹರಣೆಯಿಂದ ಸ್ಪಷ್ಟವಾಗಿ ಕಂಡುಬರುತ್ತದೆ. ಬ್ರಾಕಿ ಹಕ್ಕಿನ ಪ್ರಶ್ನೆಯು ಬಗ್ಗೆ ಡಿವಾನಿಕೋರ್ಟಿನಲ್ಲಿ ವಾಹಿಸಿಯಾಗಿರುವಿರೆಂಬ ಮಾತು ಪ್ರಸಿದ್ಧವದೆ. ಒಳಗಡೆಗೆ ಕ್ಯುಳ್ಳಿಯಲ್ಲಿ ಲಿಂಗಾಯುತಸ್ವಾಮಿಗಳ ಅಡ್ಡಪಾಲಕಿಯ ದ ಬಗ್ಗೆ ಶ್ರೀ ಶಂಕರಾಚಾರ್ಯರು ಅವರ ಮೇಲೆ ದಾವ ದು ಪ್ರಿವ್ಹಿಕೌನ್ಸಿಲವರಿಗೆ ಪ್ರಶ್ನೆಯು ಯೋಗಿ ಶಂಕರಾ ಚಾರ್ಯರ ದಾವೆ ರದ್ದು ಆಗಿದ್ದಲ್ಲದೆ, ಅವರು ಸಾವಿರ ಗಟ್ಟಲೆ ರೂಪಾಯಿ ಲುಕ್ಸಾನಿಯನ್ನು ಲಿಂಗಾಯುತ ಸ್ವಾಮಿಗಳಿಗೆ ಕೊಡಬೇಕಾಯಿತು. ಬಾಗಲಕೋಟಿಗೆ ಸ್ವಾಮಿಗಳವರು ಗಳವರು ಒಂದು ತಿಂಗಳ ಮೊದಲೇ ತಿಳಿದದ್ದರೂ ಬ್ರಾಹ್ಮಣನಾದರೂ ಮುಂಚಿರಿಯದೆ ಸುಮ್ಮನೆ ಇದ್ದು ಆಯಾತ ಳಿಯಲ್ಲಿ ಏನಾದರೂ ಗೊಂದಲವೆಬ್ಬಿಸುವ ಹೇತುವಿನಿಂದ ಮೆರವಣಿಗೆಯ ಮುಂಚಾನೆ ಉತ್ಸವವು ಹೊರಡುವದನ್ನು ಕೇಳಿದು ಹಿಂದಿನ ದಿನ ಸಾಯಂಕಾಲ ೬-೭ ಘಂಟೆಗೆ ಲಿಂಗಾಯುತಸ್ವಾಮಿಗಳ ಮೇಲೆ ಜೋಸ್ತ್ರಬಲನಿಸು ದಾವೆಯನ್ನು ಬ್ರಾಹ್ಮಣ ಮುನುಸೂಫರ ಕಡೆಗೆ ದಾಖಲಮಾಡಿದರು. ಬ್ರಾಹ್ಮಣ ಮುನುಸೂಫರು ತಮ್ಮ ಜವಾಬದಾರಿಯ ಮೇಲೆ ದಾವೆಯನ್ನು ಹಿಡಿದರು ಲಿಂಗಾಯುತರಕಡೆ ವಕೀಲರಿಲ್ಲ ಮತ್ತು ಲಿಂಗಾಯುತರಕಡೆಯಿಂದ ಏನೂ ಕಾರಣ ತೋರಿಸ ಕ್ಕೆ ಆಗುವದಿಲ್ಲ ವಾದ್ದರಿಂದ ಇದರ ನ್ಯಾಯವೇ ತಗೋಣ ನ್ನುವದು ಎಲ್ಲ ಬ್ರಾಹ್ಮಣರಮನಸ್ಸಿನಲ್ಲಿ ಗಾಢವಾಗಿ ನೆಲೆ ಗೊಂಡಿತ್ತು. ಆದರೆ ಲಿಂಗಾಯುತರಿಗೆ ಯೋಗ್ಯವ್ಯಾಜ್ಯಕ್ಕೆ ವ ಕೀಲರು ನೂರೆತು ಮುನುಸೂಫರು ಧಾವೆಹಿಡಿಯಲಿಕ್ಕೆ ಬರು ತ್ತಿಲ್ಲ ಮತ್ತು ಅವಸರದಲ್ಲಿ ಅಡ್ಡಿಯಪ್ಪಣೆಯನ್ನು ಮಾಡ ಬಾರದೆಂತ ಕಾರಣಗಳನ್ನು ತೋರಿಸಿದರು. ಆದರೆ ಮುನ ಸೂಫರು ರಾತ್ರಿ ೧೧ ಘಂಟೆಯವರೆಗೆ ಕಚೇರಿಮಾಡಿ ಮನಾ ಸಿತಾಕೀದಿ ಕೊಡುತ್ತೇವೆಂತ ಆಗ್ರಹ ಹಿಡಿದು ಹೆಚ್ಚು ಬ್ರ ರ್ದವಾಗದೆ ಮರುದಿವಸ ಮುಂಜಾನೆ ೧೧ ಘಂಟೆಯವರೆಗೆ ಉತ್ಸವಮಾಡಕೂಡದಂತಾ ಮನಾಯಿ ತಾಕೀದಿ ಹುಕುಂ ಮಾಡಿದರು. ಆದರೆ ಬಾಗಲಕೋಟಿಯೂರಲ್ಲ ಮಹಾನ್ಯ ಸಗಳವರ ಉತ್ಸವನೋಡಲಿಕ್ಕೆ ಸಾವಿರಗಟ್ಟಲೆ ಜನರು ಕೂಡಿದ್ದರು. ಮರುದಿವಸ ಮುಂಜಾನೆಕಾಲಕ್ಕೆ ಉತ್ಸವವೊ ಗುತ್ತದೆಂದು ಜನರು ತಮ್ಮ ತಮ್ಮ ಭಾಗಗಳನ್ನು ಶೃಂಗರಿ ದ್ದರು. ಆದರೆ ಉತ್ಸವವನ್ನು ೧೧ ಘಂಟೆಯವರೆಗೆ ತಡೆ ದಿದ್ದನ್ನು ಕೇಳಿ ಬ್ರಾಹ್ಮಣಜನರೆಲ್ಲರೂ ಲಿಂಗಾಯುತರ ಥ ತೆಮಾಡಿದವೆಂತ ಹಾಸ್ಯದ ಮಾತುಗಳನ್ನು ಅಲ್ಲಲ್ಲಿ ವುತ್ತಾ ನಡೆದದ್ದಲ್ಲದೆ, ಬ್ರಾಹ್ಮಣವಕೀಲರು ಅಲ್ಲಲ್ಲಿ ವತ್ತ ಗೆ ಕೂಡಿ ನಗಾಡಿದರು. ಆದರೆ, ಸತ್ಯಮೇವಜಯತೆ" ಮಾತಿಗನುಸಾರವಾಗಿ ಕಾಯದೆ ಆಧಾರಗಳೂ ವಿ ಸಿಗದೆ ಇದ್ದದ್ದರಿಂದ ಬ್ರಾಹ್ಮಣರು ಸದರ ದಾವೆಯನ್ನು ರತೆ ತೆಗೆದುಕೊಳ್ಳಬೇಕಾಯಿತು. ಬ್ರಾಹ್ಮಣರಿಗೆ ಅವಮಾ ನವಾಗಿ ಏನಾದರೂ ಮಾಡಬೇಕೆಂತ ವಿಶೇಷವಾಗಿ ಬ್ರಾ ಣವಕೀಲಜನರೂ ಮತ್ತು ಸರಕಾರಿನೌಕರರೂ ಅಲ್ಲಲ್ಲಿ ಕೂಟ ಆಲೋಚನೆಮಾಡಿ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರವರ ಕ ಗೆ ಸುಳ್ಳು ಮಜಕೂರಿನ ತಾರುಗಳನ್ನು ಮುಂಜಾನೆಸಹಿತ್ಯ ಕಾರ ಅಧೀರ ಸುರುವು ಆಗುವದಕ್ಕಿಂತ ಮೊದಲು ಬಂದ ರುಗಳನ್ನು ಮಾಡಿಸಿದರು. ಬ್ರಾಹ್ಮಣರಲ್ಲದೆ ಇತರ ಜಾ ಯವರ ಹೆಸರಿನಿಂದಲೂ ಕೆಲವು ತಮ್ಮ ಬಿರ್ಟಿನಿಂದಲೆ ಬ್ರಾಹ್ಮಣರು ತಾರು ಮಾಡಿದರು. ಆದರೆ ಇದರಿಂದಲೂ ತ ಮನಸ್ಸಿನಂತೆ ಆಗದಿದ್ದದ್ದರಿಂದ ಉತ್ಸವ ಹೊರಟಾಗ್ಗೆ ನಾದರೂ ಗೊಂದಲವೆಬ್ಬಿಸಬೇಕೆಂತ ಕೆಲವು ಜಲಿತರಾಗದ ಬ್ರಾಹ್ಮಣರು ಇಪ್ಪತ್ತು ಮೂವತ್ತು ಸಾವಿರ ಜನರು ಕೂಡಿ ವ ಕಾಯದೇಶೀರ ಕೆಲಸಕ್ಕೆ ಹರಕತ್ತುಮಾಡಲಿಕ್ಕೆ ಗೆ ಉದ್ದೇಶದಿಂದ ವತೀಸಿ ಪಟ್ಟನ್ನು ತಿಂದರು. ಸುಂ ಗುದ್ದು ಮನೆಗೆ ಬಂದೆಂಬ ಗಾದೆಯಂತೆ ಈಗ ಅವರ ಪಾ ರುವದು ಇತರ ಸ್ಥಳಗಳಲ್ಲಿರುವ ಬ್ರಾಹ್ಮಣಜನರು ಬಾ ಲಕೋಟಿಯವರಂತೆ ಮೂರ್ಖಮಾರ್ಗವನ್ನು ತೋರಿಸದೆ ಕೇ ಲಶಾನುಭೂತಿಯನ್ನು ತೋರಿಸಿರುತ್ತಾರೆ. ಆದರೆ ಬಾ ಲಕೋಟಿಯಲ್ಲಿ ಬಹಳ ದಿವಸದಿಂದ ಬ್ರಾಹ್ಮಣಜನರ ಪ್ರಾ ಲ್ಯವು ಹೆಚ್ಚಿ, ಇದ್ದು ತಮ್ಮ ಗರ್ವದ ಪ್ರದರ್ಶನವನ್ನು ಮಾಡುವ ವಿಚಾರದಂತೆ ಅವರು ಈ ಸಂಧಿಯಲ್ಲಿ ಮಾಡಿದ

ಈ ಅನ್ಯಾಯವೀತಿಯಾಗಿರುವವೆಂಬುದ
ನ್ನು ಮುಂದಾದರೂ ಜಾಗರೂಗರಾ!

ನಮ್ಮ ಹಿರೇನೂರ ಗುರುದೇವಬಾಪುದಾದ್ದರವರು ಬಾಗಲ ಕೋಟಿ ಸ್ಟೇಷನ್ನಕ್ಕೆ ಒಂದು ರಾತ್ರಿ ಬಂದು ಹಾಗೆ ಹಿಂದಿ ರುಗಿಹೋದರು. ಅಂತ ವರ್ತಮಾನಪತ್ರದಲ್ಲ ಬಳದಿರುವರು. ಇದಂತೂ ಬಹಳ ನಾಚಿಕೆಗೇಡಾದ ಸುಳ್ಳು ಕಲ್ಪನೆ ಇರು ವದು. ತಾವು ವಿದ್ಯಾವಂತರೂ, ಮಾರ್ಗದರ್ಶಕರೂ ಅಂತಾ ಡಂಗುರಸಾರಿ ಈಗ ಸುಳ್ಳುವತವನವನ್ನು ತಾವೇ ಆಗಿರುವೆ ವೆಂಬುದನ್ನು ಪರಿಹಾರವಾಗಿ ಜಗತ್ತಿನ ನಿದರ್ಶನಕ್ಕೆ ತಂದು ಕೊಟ್ಟರು.

ಅನುರಾಗವತಿಯಲ್ಲಿ ಹೊರಡುವ ಶ್ರೀಕೃಷ್ಣವಿಲಾಜಿಲಿನಿ ಯೆಂಬ ಪುರಾತನ ಪತ್ರಿಕೆಯ ಎಡಿಟರವರು ಲಿಂಗಾಯುತರಿದ್ದು ಅವರಕಡೆಗೆ ತಮಗೆ ಅನುಕೂಲವಾಗುವಂತೆ ಸುಳ್ಳು ಮಜ ಕೂರಿನ ಲೇಖನವನ್ನು ಬ್ರಾಹ್ಮಣರಲ್ಲ ಒಟ್ಟರು ಬಹಳ ತೀವ್ರ ವಾಗಿ ಬರೆದು ಕಳಿಸಿಕೊಟ್ಟರು. ಸದರಿ ಎಡಿಟರರು ಎಷ್ಟೋ ದೂರ ಇದ್ದು ಖರೇಪರೀಕ್ಷೆಯನ್ನು ತಿಳಿಯದೆ ಅದನ್ನು ಛಾಪಿ ಸಿದರು. ಲಿಂಗಾಯುತರು ದಂಗೆ ಆಗಲಿ ವಂತಾರೆ. ಆದರೆ ಲಿಂಗಾಯುತರ ಪತ್ರದಲ್ಲ ದಂಗೆಯಾಗಿದೆ ಅಂತ ಪ್ರಸಿದ್ಧ ಆಗ ದೆ ನೋಡಿದಿರಿ ಅಂತ ಕೇಸರಿ ಮಸ್ಯರ ಪತ್ರಗಳಲ್ಲಿ ಮೊದಲೇ ತಮ್ಮಲ್ಲಿ ಹಂಚಿಕೆಮಾಡಿಕೊಂಡು ಈ ಪ್ರಕಾರ ಲೇಖನಗ ಳನ್ನು ಬರೆದರು. ಇದೆಂಥದೆಂಯುಕ್ತಿಯು! ಈಗ ಬಾಗಲ ಕೋಟಿಯಲ್ಲಿರುವ ಮುಳುಗುಂದ ಮಹಾದೇವಾಧರ ಮೇಲೆ ಹಿಂದೆ ಲಂಚದಬಗ್ಗೆ ನಡಿದಾಗ್ಗೆ ಪ್ರಸಿದ್ಧ ಸರ್ಕಾರಿ ಅಧಿಕಾರ ಸ್ಥರಿಂದ ರಾವ ಬಾವಿ ಅರವಾಳ ಸಾಹೇಬರ ಮೇಲೆ ಅನೇಕ ಬ್ರಾಹ್ಮಣ ವರ್ತಮಾನಪತ್ರಗಳಲ್ಲಿ ಯಾರೋ ಇದೇಪ್ರಕಾರದ ಅತಿಶಯೋಕ್ತಿಯಿಂದ ಸುಳ್ಳುಲೇಖನಗಳನ್ನು ಬರೆದು ಬಹಳ ಗೊಂದಲ ಎಬ್ಬಿಸಿದ್ದರು. ಆದರೆ ಸದರಿ ಮುಳುಗುಂದ ಇವ ರಿಗೆ ಹಾಯಕೋರ್ಟಿನಿಂದ ಶಿಕ್ಷಾಕಾಯಿತು ಆದಾಗಲೆ ದ ರಂತರು ಪತ್ರಕಾರರೇ ಮೊದಲಾದವ "ಅಧಾನ-ಹೀನ" ಅಂತ ಬಾಯಿಮುಚ್ಚಿ ಕೊಂಡು ಸುಮ್ಮನೇ ಕಾಯಿತು. ವರ್ತ ಮಾನಪತ್ರಕಾರರು ಬ್ರಾಹ್ಮಣರಿರುವದರಿಂದ ಅವರ ಮು ಖಾಂತರ ಲೇಖನಗಳನ್ನು ಬರಿಸಿ ಮತ್ತು ದೂರ ಇರುವ ಅಧಿ ಕಾರಸ್ಥರಿಗೆ ಬಮುಂಕರಸ್ವರೂಪದ ತಾರುಗಳನ್ನು ಮಾಡಿ ಸ ರ್ಕಾರದವರ ಮನಸ್ಸನ್ನು ಕಲುಷಿತಮಾಡುವದು ಉತ್ತಮ ಸಾಧನವೆಂದು ಬ್ರಾಹ್ಮಣ ವರ್ಗದವರೆಲ್ಲರೂ ಸಂದಿರುವರು. ಮತ್ತು ಆಯಾತಾಮೇಳಿಯಲ್ಲಿ ಅಂದರೆ ಲಿಂಗಾಯುತರಿಗೆ ಖರೇ ಸಗತಿಯನ್ನು ತಿಳಿಸಲಿಕ್ಕೆ ವ್ಯಾಳೆ ಉಳಿಯದಂತೆ ಸಂಧಿಸಾಧಿಸಿ ಅವರಿಗೆ ತೊಂದರೆಕೊಡುವ ಪ್ರಯತ್ನಮಾಡುವರು. ಆದರೆ ಅದು ಈಗಿನ ಸ್ಥಿತಿಯಲ್ಲಿ ಸಾಧಿಸುವದಿಲ್ಲವೆಂತಲೂ ಮತ್ತು ಅವುಗಳ ಪರಿಣಾಮವು ಕೆಡಕಾಗುವದೆಂತಲೂ ಅವರು ಚ ನ್ನಾಗಿ ಲಕ್ಷದಲ್ಲಿಡಬೇಕು. ಮತ್ತು ಸರ್ಕಾರದವರು ಈ ಪ್ರ ಕಾರದ ಅವರಸಾಧನೆಗಳಿಗೆ ಅವಕಾಶ ಸಿಗದಂತೆ ತಪಾಸಿಸಿ ಮಾಡಿದರೆ, ಇಂತಹ ಅನರ್ಥಗಳು ಸಂಭವಿಸಲಿಕ್ಕಿಲ್ಲ

ವಿಜಿ ಗದಿಗಯ್ಯನ ವಕೀಲ ಧಾರವಾಡ ಇವರು ಈ ದ ಮ್ಮಂಧವಾದ ಒಂದು ಲೇಖನವನ್ನು ಕೊಟ್ಟದ್ದಾಗಿ ... ದ ರು ಪತ್ರಕಾರರು ಅದಕ್ಕೆ ಉತ್ತರವಾಗಿ ಲೇಖನವನ್ನು ಬರೆದಿಪ್ಪರಲ್ಲ, ವಿಜಿ ಗದಿಗಯ್ಯನವರಿಗೆ ... ವಿಜಿ ... ರ ನೆಗಾನುಲೇದಾರ ಸಾಳಿ ಬಗ್ಗೆ ತನಗೆ ... ದ್ದಿಯದೆ, ಆದರೆ ಉತ್ಸವನೋಡಲಾಗದ ನೊದಲ ... ದನ್ನು ಕರಿಸಿ ಬ್ರಾಹ್ಮಣರ ಒಂದು ಗೊಂದಲ ಹೊರತು ಆದರೆ ಉತ್ಸವ ಜಂಗಮವಾಗುತ್ತೀವೆ ಅಂತ ಹೇಳಿದ್ದರೆ, ... ದಾಂಧಲ ಆಗುತ್ತಿದ್ದಿಲ್ಲ. ಅಂತ ಬರದಿರುತ್ತಾರೆ. ಇದರಲ್ಲಿ ಇವರ ವಿಚಾರಶಕ್ತಿಯವು ಯಥಾರ್ಥಕಂತುಬರುತ್ತದೆ. ಯಾ ಕಂದರೆ ಮೊದಲು ದಂಗೆಯಾಯಿತು ಅ ತ ನಿರಾಧಾರವಾ ಗಿ ಗೃಹಿತಮಾಡಿಕೊಂಡಿದ್ದು ಅವರ ಮೊದಲನೇ ತಪ್ಪು. ಈಗಾದರೆ ಕಿಂಚಿತ್ತು ಗದಿಬಿಡಿ ಸಹ ಆಗಲಿಕ್ಕೆ ಬ್ರಾಹ್ಮಣರೇ ಕಾರಣರಿದ್ದು, ಲಿಂಗಾಯುತರಿಗೆ ಮಾಮಲೇದಾರ ಸಾಹೇಬರು ಉಪದೇಶಮಾಡುವ ಅವಶ್ಯಕತೆ ಏನಿತ್ತೆಂಬದನ್ನು ವಿಚಾರ ಮಾಡದೆ ಇರುವದು ಎರಡನೇ ತಪ್ಪು. ಹಾಗು ಸ್ವಾಮಿಗಳ ಮತ್ತು ಮಾಮಲೇದಾರ ಸಾಹೇಬರ ಪ್ರಸಂಗಕ್ಕೆ ಬೇಕಾ ದ ಯೋಗ್ಯತೆಯಿಂದೊಬ್ಬನ್ನ ಇಟ್ಟದ್ದರೂ ಸಹ ಅನು... ಭಾವದಿಂದ ಸಿಸ್ಸಿಗೆ ಬಂದಂತೆ ಬರದದ್ದು ಮೂರನೇ ತಪ್ಪು ಇರುತ್ತದೆ. ಈ ಮೊತ್ತಿನ ವರೆಗೆ ತತ್ಕಾಲ ಕೇಸರಿ ಮರಾಠಾ ಇಂದು ಪ್ರಕಾಶ ಮೊದಲಾದ ವಜನದಾರ ವರ್ತ ಮಾನಪತ್ರಗಳು ಅವೆ ಮತ್ತು ಅವುಗಳ ಮುಖಾಂ ತರ ಏನಾದರೂ ಗೊಂದಲವೆಬ್ಬಿಸಲಿಕ್ಕೆ ದೊಡ್ಡ ಸಾಧನ ಯಾದ ಅಂತ ಪೇಟ್ರಿಮಾಡುತ್ತಿರುವ ಬ್ರಾಹ್ಮಣ ವರ್ಗದವರು ಹಿಂದೆ ಸ್ಟಾರ್ ಪತ್ರದಲ್ಲಿ ಪ್ರಕಟವಾಗಿರುವ ಮುಂಬಯಿ ಸ ರ್ಕಾರದವರು ನೋಟಿಸ ನೀಡಿದ ಇತರ ಲೇಖಗಳು ಇನ್ನು ಮುಂದೆ ಸರ್ಕಾರದ ಗವರ್ನರ್ ಒಂದು ಸವಾಲನ್ನು ತಾ ದದರೂ ಮಾಡದೆ ... ಎಂಬುದನ್ನು ವಾಚಕರು, ಮ ಸ್ಥಿತಿಗೆ ಹಿರಿಯ ಪತ್ರಕಾರರು ಯೋಚಿಸತಕ್ಕದ್ದು.

ಈ ಉತ್ಸವದ ಸಮಯ ... ವಿಧಾನದ ... ತು ...

. B. ವಕೀಲನು ತಾರ ಮಾಡಿದ
ವಿದ ಒಟ್ಟು ... ಮುಂತಾದ್ದು

೨ ನೇ ವರ್ಗದ ಮ್ಯಾಜಿಸ್ಟ್ರೇಟರು ಸುಸ್ವಭಾವದಿಂದ ಕೊಡುವದ್ದ ಕ್ಕಾಗಿಯೂ, ಹಾಗು ಸ್ಥಿರಬುದ್ಧಿ ರೀತಿಯಿಂದ ಲಿಂಗಾಯುತ ಸ್ವಾಮಿಗಳ ವಿರುದ್ಧ ಮುನಸೂಫರು ಜಾಮೀನಾಬುವಮಾಡಿ ಕೊಂಡದ್ದಕ್ಕಾಗಿಯೂ ಸರಕಾರದವರು ಈ ಮೂವರ ದ ವಾಬ ಕೇಳಿದ್ದು ಕೆಲಸ ನಡೆದದೆಯಂತ ತಿಳಿಯುತ್ತದೆ. ಈಗ ಪೇಶ್ವೆರಾಜ್ಯವಿಲ್ಲ ಅಥವಾ ಈಗಿನ ನ್ಯಾಯ ಪ್ರಿಯವಾದ ಬ್ರಿಟಿ ಷ್ ಸರ್ಕಾರದವರು ಮೊದಲಿನ ಪನಿಕರಾಜರಂತೆ ಪಕ್ಷಾಕ ಕ್ತಿ ಬಾಹದ್ದೂರರಿಂದ ಲೇಖಕಬಾಹದ್ದೂರರೂ ಸಹ ಇ ದ್ದರೆ ಆದ್ದರಿಂದ ಈಗಿನ ಕಾಲಕ್ಕೆ ಬ್ರಾಹ್ಮಣರ ಕುಚೇಷ್ಟೆಗ ಳು ಎಂದೂ ನಡೆಯಲಾರವೆಂಬುದನ್ನು ಅವರು ಪೂರ್ಣಲಕ್ಷ ದಲ್ಲಿಡತಕ್ಕದ್ದು ಪತ್ರವಿಸ್ತಾರಕ್ಕೆ ಕ್ಷಮೆ ಇರಬೇಕು.

ತಮ್ಮ ನ್ಯಾಯಾಭಿಲಾಷಿ,

ಬಾಗಲಕೋಟಿ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪ್ರತಿಕೆಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಲ್ಲದೆ ಅಂಚೆಯ ವೆಚ್ಚ ವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

ಅಂಚೆಯ ವೆಚ್ಚ

೧ ಪ್ರತಿಗೆ ೧ ವರ್ಷಕ್ಕೆ ...೦.
೨ ರಿಂದ ೪ ರವರಿಗೆ ...೦.

ಇದರಂತೆ ಮುಂದಕ್ಕೆ ಪ್ರತಿಯೊಂದು ಪ್ರತಿಗೆ ...೦ ಯಂತೆ.

ಪ್ರಕಟಣೆಯ ದರ.

ಕಾಲಂ ಕಾಲಮ್ಮಿಗಿಂತಲೂ ಕಡಿಮೆಯಾಗಿ ನಾಲ್ಕಾವೃ ತ್ತಿಗೆ ಕಡಿಮೆಯಾಗ ಪ್ರಕಟವಿಸುವನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ತಿ ೧ ಕ್ಕೆ ೨ ಆಣೆ; ಎರಡನೇ ಆವೃ ತ್ತಿಯಿಂದ ಪಙ್ತಿ ೧ ಕ್ಕೆ ೧ ಆಣೆ. ಕಾಲಂಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸ ಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿ ದುಕೊಳ್ಳಬಹುದು. ಅಗ್ಗಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

11 # ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತಮವಾದ ಅ ಕ್ಷರಗಳಿಂದ ಬರೆಯಬೇಕು.)

ಅಂಜೀರಾ ಕರ್ನಲ್ ಮೊದಲು — ಇದರ ಸೇವನೆಯಿಂದ ಮೈಯೊ ಳಗಿನ ... ಹೋಗಿ ಧಾತು ಪುಷ್ಟಿಕರವಾಗುತ್ತ ದೆ ಮತ್ತು ... ಹೆಚ್ಚಾಗಿ ಸಂತತಿ ಧಾರಣ ... ಕಠಿಣವುಳ್ಳದ್ದುದರಿಂದ ದ ಅಥವಾ ಯಾವದಾದರೂ ಕಾರಣದಿಂದ ನಡುವೆ ತಪ್ಪಿ ಹೋಗತಕ್ಕವಾದರೆ ಇದರಿಂದ ಖಾತ್ರಿಯಾಗಿ ನೆಟ್ಟಗಾಗು ತ್ತದೆ ... ಅನ್ನ, ಅಥವಾ ಕಾಲು ಹಚನ ವಾಗದಿದ್ದರೆ ಹೊಟ್ಟೆಯು ಬೊಡ್ಡದಾಗಿ ಕೈ ಕಾಲು ಸಣ್ಣ ವಾಗುತ್ತವೆ. ಇಂಥ ಹುಡುಗರಿಗೆ ಈ ಔಷಧವನ್ನು ಸೇವಿ ಸುವದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಜ ೀರ್ಣವಾಗಿ ... ಮತ್ತು ಕಾಂತಿಯುಕ್ತರಾಗುತ್ತಾರೆ ಕ್ರಯ ೧ ಬಾಟ್ಲಿಗೆ ...೦ ರೂ. ೨ ಬಾಟ್ಲಿ ...೦ ರೂ. ೬ ಬಾ, ೩ ...೦ ರೂ, ೬ ಬ್ಯಾಗಲಿಗೆ ೧ ಡಜನ್ ಬಾಟ್ಲಿ ತರಿಸುವವರಿಗೆ ...೫ ರೂ. ಮೇಲೆ ೬ ಬಾಟ್ಲಿ ಇನಾ ಮು. ಪ ಪಿ. ಬೇರೆ

ಮಹಾಂಗಂಧರ್ವರಸ — ಇದರಿಂದ ಸ್ವಪ್ನಾವಸ್ಥೆಯು ಬಂದಾಗ ಧಾತು ನಷ್ಟವಾಗುತ್ತದೆ. ಮೂತ್ರವಿಸರ್ಜನವ ಮಾಡುವ ಅಥವಾ ಇರುವಾಗ ಹೋಗುವ ಧಾತು ಬಂದ ಆಗುತ್ತದೆ. ... ಚೆನ್ನಾಗಿ ಆಗುತ್ತದೆ. ಮಲಮೂ ತ್ರವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವ ದಿಲ್ಲ ... ೧ ಡಬ್ಬಿಗೆ ೧ ರೂ. ೬ ಡಬ್ಬಿಗೆ ಒಂದು ಡಬ್ಬಿ ಇನಾಮು ವ. ಪಿ. ಬೇರೆ.

ಸಾಲಮಿಶ್ರ — ಇದರಿಂದ ಹಳೇ ಗನೋರಿಯಾ, ಇವುಗಳು ಮಿಶ್ರ, ರಕ್ತ ಖಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ ೬ ಡಬ್ಬಿಗೆ ೧ ಡಬ್ಬಿ ಇನಾಮು ವ. ಪಿ. ಬೇರೆ

"ಮಾ ಚಿ ಕ"

(...)

ಇದರ ಸೇವನೆ ... ನೆಟ್ಟಗಾಗಿ ಮ ... ಆಗುತ್ತದೆ. ಹೊಟ್ಟೆ ... ಚೆನ್ನಾಗಿ ಆಗುತ್ತದೆ. ... ಕಲವ ... ಗಳು, ... ಆಣೆ

...

...

೩೦ ಕಥೆಗಳು. ಸಚಿತ್ರ. ೫೧೦ ಪುಟಗಳು.

ಶುಕಸಪ್ತತಿ ಕಥೆಗಳು.

25

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು; (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು; (೩) ಸ್ತ್ರೀಪಾತಿವ್ರತ್ಯಧರ್ಮ, ವರ್ಣಾಶ್ರಮಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು; ತಿಳಿಸುವುದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲಕಬಾಲಿಕೆಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರಸಮ್ಮತವಾದ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಸ್ವಾದುಮಧುರ ವಾಕ್ಯಬಂಧದಿಂದ ನವರಸಾಲಂಕೃತವಾಗಿರುವುದು (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯಕಥೆಗಳಿವೆ. (೮) ಕಥಾಸಂದರ್ಭಾನುಸಾರ ಭಾವನಷ್ಟ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ೧ಕ್ಕೆ ರೂ. ೧-೪-೦ ಅಂಚೆಹಾಸಲು ಬೇರೆ.

ಪುಸ್ತಕಗಳು; ಊದುಬತ್ತಿ, ಗಂಧದಬಿಲ್ಲೆ ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು, ಚಿತ್ರಪಟಾದಿಗಳು; ದೊರೆಯುತ್ತವೆ. (ಪಟ್ಟಿ) ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇನೆ.

ವಿಳಾಸ.—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ

ಸ್ವದೇಶಿ! (ಸತ್ಯಮೇವಜಯತೆ) ಸ್ವದೇಶಿ!

22 ಗುಣವಾಗದಿದ್ದರೆ ಹಣವಾಪಸು.

ಮದನೋದ್ಭವ ಗುಳಿಗೆ.

ಈ ಗುಳಿಗೆಯ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪುಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭಿ ಟಾನಿಕ್, ಗುಪ್ತಪ್ರದೇಶದಲ್ಲಿ ಹುಟ್ಟಿರುವ ಎಲ್ಲಾ ಬಕ್ಕೆಗಳೂ, ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ಶೀಘ್ರಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವುವು. ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ. ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೪ ರೂ. ಗಳಿಗೆ ಕೊಡುವೆವು. ಟ. ಖ. ೪ ಆಣೆ ಬೇರೆ. ಅನುಭವಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು. ಅರ್ಧಾಣೆ ಸ್ಟಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು ವಿಳಾಸ.

ವೈದ್ಯ, ಜಿ. ಎಲ್. ಜೋಶಿ ಮತ್ತು ಕಂಪನಿ,
ಪೋಸ್ಟ್ ಬನವಾಸಿ,
ಜಿಲ್ಲ ಉತ್ತರಕನಡಾ

ಪಂಡಿತ ಎಸ್. ಗಂಗಪ್ಪರ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಚೌಕ ಮೈಸೂರು.

66 ಸುಖರೇಚನ ಮಾತ್ರೆ— ೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ. ೩೦ ಮಾತ್ರೆಗಳುಳ್ಳ ಸೀಸೆ ೧ ಕ್ಕೆ ಕ್ರಯ ೦-೪-೦.

ಜ್ವರಹರಮಾತ್ರೆ— ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಖಂಡಿತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು. ೧೦ ಮಾತ್ರೆ ಸೀಸೆ ೦-೩-೦, ೫೦ ಮಾತ್ರೆ ಸೀಸೆ ೦-೮-೦.

ಆರೋಗ್ಯಪ್ರಭಾಕರ— ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅಮೃತಕ್ಕೆ ಸಮಾನ. ೪೦ ಮಾತ್ರೆ ಸೀಸೆ ೧-೦-೦.

ಬಾಲಸಂಜೀವಿನಿ— ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ಸುಮಾರು ೫೦ ಸಲಕ್ಕೆ ಆಗುವ ಔಷಧಿ ಡಬ್ಬಿ ೦-೮-೦. ತೊಲೆ ೧ ಕ್ಕೆ ೧-೪-೦

ಪಚ್ಚಕರ್ಪೂರಮಾತ್ರೆ— ಇದರಿಂದ ಗರ್ಭವೇದ್ಯೆಯೂ ಕಾರಕವೂ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ. ೧೦ ಮಾತ್ರೆ ಸೀಸೆ ೦-೩-೦

ಅರ್ಶೋಹರ ರಸಾಯನ— ಮೂಲವ್ಯಾಧಿ ಹಿಡಿದವರಿಗೆ ಇದು ಸಂಜೀವನ. ಸೇರಿನ ಡಬ್ಬಿ ೧-೪-೦.

ಕ್ಷೀರಖಂಡಲೇಹ್ಯ— ಮೇಹವಾಡ್ಯಗಳಲ್ಲಿ ಬಹಳ ಖ್ಯಾತಿಯಾದ ಔಷಧಿ. ಸೇರಿನ ಡಬ್ಬಿ ೪-೦-೦. ೧೦ ದಿನಗಳ ಔಷಧಿ ೨-೦-೦.

ಸುಖಭೇದಿ ಮಾತ್ರೆ— ೧೦ ಮಾತ್ರೆಗಳನ್ನು ಸೇವಿಸುವುದರಿಂದ ೩-೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೫೦ ಮಾತ್ರೆ ಸೀಸೆ ೦-೬-೦

ಮಲಶೋಧನ ವಟಿಕಾ—ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು. ಬೆಳಿಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುವುದು. ೩೦ ಮಾತ್ರೆ ಸೀಸೆ ೦-೪-೦

ಕಸ್ತೂರಿಮಾತ್ರೆ— ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦ ಮಾತ್ರೆ ಸೀಸೆ ೦-೩-೦.

ಪುರುಷ ಸಂಜೀವಿನಿ— ೩೦ ಮಾತ್ರೆ ಸೀಸೆ ೨-೦-೦.
ಕಾಲರಾ ಮಾತ್ರೆ— ೩೦ ಮಾತ್ರೆ ಸೀಸೆ ೧-೦-೦.
ಕೆಮ್ಮಿನಮಾತ್ರೆ— ೩೦ ಮಾತ್ರೆ ಸೀಸೆ ೦-೪-೦.
ಅಜೀರ್ಣದಮಾತ್ರೆ— ೫೦ ಮಾತ್ರೆ ಸೀಸೆ ೦-೨-೦
ದಂತಶುದ್ಧಿ ಚೂರ್ಣ— ಡಬ್ಬಿ ೧ಕ್ಕೆ ೦-೩-೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರಕುವುವು. ಟಪಾಲು ಖರ್ಚನ್ನು ಅಲಾಹಿದಾ ಕೊಡಬೇಕು. ಇಷ್ಟಪಟ್ಟವರು ಮೇಲಿನ ವಿಳಾಸಕ್ಕೆ ಬರೆಯಿರಿ.

ಉತ್ತಮ ಗ್ರಂಥಗಳು.

14

ಶಿವಸ್ತವನಶಿರೋಮಣಿ—ಬೆಲೆ ವಿ.ಪಿ. ೪ ಆಣೆ ಇದು ಉತ್ತಮವಾದ ಸ್ತೋತ್ರವು ಕನ್ನಡಟಿಪ್ಪಣಿಯಿಂದ ಕೂಡಿದೆ ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ. ೩ ಆಣೆ. ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿಧೆ. ಸೋಸಲೆ ರೇವಣಾರಾಧ್ಯ ವಿರಚಿತಮಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು.

ಶಿವಪಂಚಸ್ತವ – ಬೆಲೆ ವಿ. ಪಿ. ೧-೬-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ. ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು.

ವೀರಶೈವ ಷಟ್ಸ್ಥಲಸಿದ್ಧಾಂತಂ— ಬೆಲೆ ವಿ. ಪಿ. ೪ ಆಣೆ. ಇದರಲ್ಲಿ ಅಷ್ಟಾವರಣಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ ಪಿ. ೧೦ ಆಣೆ. ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷಸೂಕ್ತಂ— ಬೆಲೆ ವಿ. ಪಿ ೬ ಆಣೆ ನಿರಂಜನ ಜಂಗಮಪರವಾದ ಕನ್ನಡ ಟೀಕಾ ಸಮೇತವಾಗಿದೆ

ಬಸವಲಿಂಗಸ್ವಾಮಿಗಳು, ಹೊಸಮಠ ಮೈಸೂರು.

ಪಾಳ್ಯದ ವೆಂಕಟಾಚಲ ಪಂಡಿತರ ಬಿದ್ಧೌಷಧಗಳು.

34 ಲೋಕಾಮಯಪರ ಕಸ್ತೂರಿ ಮಾತ್ರೆ—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಖು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಛೇಷ್ಮಜ್ವರ, ಜ್ವರ, ಹೊಟ್ಟೆಶೂಲೆ ಸಂದುಗಳ ನೋವು ಪ್ರಾ ಕಾಲು ಜೋಡತ (ಬಾತ), ಮೈನಡುಕ, ಶೀತವಾತಗಳ ಬಾಧೆ, ಅಜೀರ್ಣ ಅಗ್ನಿಮಾಂದ್ಯ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸಿದರೆ ಖಂಡಿತವಾಗಿ ಗುಣಪಡಿಸುತ್ತದೆ. ಎಂಥಹ ಆಹಾರವನ್ನಾದರೂ ಈ ಯೋಗಿಸುತ್ತಿದ್ದರೆ ಬಹಳ ಜೊತ್ತು ಸುವಾಸನೆಯಾಗಿರುತ್ತಾ, ಸೀ ಹೊಳೆಸಿ, ನಾಮಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಮುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ಸನ್ನಿಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ. ಇದನ್ನು ಸೇವಿಸುತ್ತಿರುವವರು ಖಂಡಿತವಾಗಿ ಪ್ಲೇಗಿನ ಬೊಂಕೆಗೆ ಗುರಿಯಾಗುವದಿಲ್ಲ. ಬಲ್ಲಶಕ್ತಿವರ್ಧಕವಾಗಿದೆ ೨೦೦ ಮಾತ್ರೆಗಳುಳ್ಳ ಕಪ್ಪಿಗೆ ೪ ಆಣೆ; ೫ ಕಪ್ಪಿಗೆ ೧ ಕಪ್ಪು ಹೆಚ್ಚು, ೧ ರಿಂದ ೧೦ ಕಪ್ಪುವರೆಗೆ ಪೋಸ್ಟೇಜು ೪ ಆಣೆ

ಶ್ರೀ ಪ್ಲೇಗಿನೌಷಧ—ಪ್ಲೇಗಿಗೆ ಔಷಧವು ಉಂಟು ಎಂದು ಅನುಮಾನಿಸದೆ ಈ ಸಿದ್ಧೌಷಧವನ್ನು ಕೊಡಿ. ನಂಬಿಕೆಯಾಗಿಯೂ ಜಾಗ್ರತೆಯಾಗಿಯೂ ಪ್ಲೇಗನ್ನೂ ವಿಷಜ್ವರಗಳನ್ನೂ ಗುಣಮಾಡುವ ಔಷಧವು ಇದೊಂದೇ ಸರ್ವೇಷಾಂಸಲ್ಲ ಗ್ಯಾರಂಟಿಯಿಂದ ಹೇಳಬಹುದು. ಒಂದೇ ಒಂದು ಸಲವನ್ನು ಮಾತ್ರ ನಮ್ಮ ಬಳಿಯಲ್ಲಿಡಿ ಹೋಗಲಿ. ತರಿಸಿ ನೋಡಿ. ಅನುಭವಪತ್ರ ಔಷಧಿ ಸಂಗಡಲೇ ಇರುತ್ತೆ. ಬೆಲೆ—ಪ್ಲೇಗಿನ ಔಷಧ ಕಪ್ಪು ೧ ಕ್ಕೆ ರೂ. ೧ ಮಾತ್ರ. ಹೆಚ್ಚು ತೊಗೆದುಕೊಂಡವರಿಗೆ ಸವರುವ ಡಬ್ಬಿ ೧ ಕ್ಕೆ ೮. ೪. ಎರಡರಿಂದ ಟಪಾಲ್ ಖರ್ಚು ೫ ಆಣೆ ಮಾತ್ರ.

ಯೋಗ್ಯತಾ ಪತ್ರಗಳು.

ತಮ್ಮ ಪ್ಲೇಗಿನ ಔಷಧವು ಅತ್ಯುತ್ತಮವಾದುದು. ಇದನ್ನು ಉಪಯೋಗಿಸಿದವರಿಗೆಲ್ಲರಿಗೂ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷಪಡುತ್ತೇನೆ. (ಸೈ) ರಾಜಮನ್ನಾರುನಾಯುಡು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಾಪುರಂ ಸರ್ಕಲ್.

ತಮ್ಮ ಔಷಧವು ಪ್ಲೇಗು ರೋಗಕ್ಕೆ ಸರ್ವೋತ್ತಮವಾದುದು ಕೊಟ್ಟವರಿಗೆಲ್ಲರಿಗೂ ಗುಣವಾಗಿರುತ್ತದೆ. (ಸೈ) ಲಕ್ಷ್ಮಿನಾರಾಯಣ, ಪಾರ್ಕ್ ಓವರ್‌ಸೀಯರ್, ಮೈಸೂರ್.

ನಮ್ಮ ವಿಳಾಸ ಪ್ರಕಾಶ, ನಾಗಿರಿ, ಮೈಸೂರು

ಪಿಮ್ಮ ಯಸು

೧೯೧೧ನೆಯ ಇಸವಿ ನವೆಂಬರ್ ತಾ॥ ೨೭ ರಿಂದ ೧೯೧೧ ನೆಯ ಡಿಸೆಂಬರ್ ತಾ॥ ೩ ರವರೆಗೆ ಸಲ್ಲುವ ಶಾಲಿವಾಹನ ಶಕ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಕಾರ್ತಿಕ ಮಾರ್ಗಶಿರ ಶು॥ ಷಷ್ಠಿಯಿಂದ ಮಾರ್ಗಶಿರ ಶು॥ ದ್ವಾದಶಿ ವರೆಗಿನ ಪಂಚಾಂಗ.

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ವೃಶ್ಚಿಕ ತೇದಿ
27	¹ ಸೋಮ	ಷ	18-50	ಶ್ರವ	14-48	12
28	² ಮಂಗ	ಸ	17-26	ಧನಿ	19 46	13
29	³ ಬುಧ	ಅ	19-.8	ಶತ	23-38	14
30	ಗುರು	ನ	20 16	ಪೂಭಾ	26-2	15
1	ಶುಕ್ರ	ದ	22 4	ಉತ್ತಭಾ	27-28	16
2	⁴ ಶನಿ	ಏ	19-58	ರೇ	27-58	17
3	⁵ ಭಾನು	ದ್ವಾ	17-20	ಅಶ್ವಿ	26 39	18

(1) ಚಂಪಾಷಷ್ಠಿವ್ರತಂ, ಸುಬ್ರಹ್ಮಣ್ಯನಲ್ಲಿ ರಥೋತ್ಸವ, ಇಷುಮೃತ್ಯುಸಿದ್ಧಿಯೋಗ. (2) ನಂದಸಪ್ತಮೀ. (3) ವ್ಯಾಸಜಯಂತೀ ಪುಣ್ಯದಿನ, ಮಾರ್ಗಶಿರ ಲಕ್ಷ್ಮೀವ್ರತಂ (4) ಸರ್ವತ್ರ ಏಕಾದಶೀ. (5) ದಗ್ಧಯೋಗ, ಶ್ರೀನಿವಾಸ ಜೋತಿಸೇಂದ್ರ ಬ್ರಹ್ಮತಂತ್ರಪರಕಾಲಸ್ವಾಮಿಗಳ ತಿರುನಕ್ಷತ್ರ.

ಮೈಸೂರು ಪ್ರೆಸ್ಸಿನಲ್ಲಿ ಅ! ...ಮೈಸೂರಿನವರಿಂದ ಪ್ರ...

REGISTERED No. M. 124

ಮೈಸೂರ್ ಸ್ಟಾರ್

ಪ್ರತಿ ಸೋಮವಾರ ಪ್ರಕಟಿಸಲ್ಪಡುವುದು.

ಮಹಿಶೂರಪುರೀಂದ್ರಾ ಪರಮಧಿಗತರಾಜಮಂಡಲಶಿತ್ರೈಯಾ ಘನಪಥಶ್ರೀತಾವಕೂರಾ ಪಶ್ಚಿಮ್ನ ವ ಪ್ರವೃತ್ತ [illegible] ॥
ಶ್ರೀಮತ್ಕೃಷ್ಣನೃಪಬಾಲನುತ್ತಮಕಲಾಲೋಲಂಸುಧೀಪುಂಗವ । ಸ್ತೋಮಾಭೀಷ್ಟದಶೀಲ ನಾಕಲಿತಗಾಢ್ಮಗ್ಯಾಲಮಾಲಂಪಾಲಂ ॥
ಸೀಮಾತೀತಯಶೋವಿಸ್ತಾರವಿಪುಲಂ ಸದ್ವೃತ್ತಮಾಲಾಂಕೃತಂ । ಪ್ರೇಮಂ [illegible] ಸದಾಭ್ಯೇತಿಗೆ [illegible] ॥

ಸಂಪುಟ ೨೮] ಮೈಸೂರ್ ಸ್ಟಾರ್ ಸನ್ [illegible] ನೆಯ ಇಸವಿ ಡಿಸೆಂಬರ್ [illegible] ನೆಯ [illegible] [ಸಂಚಿಕೆ [illegible]

೩೨

ಊದಬತ್ತಿಗಳು.

ವಿಧವಿಧವಾದ ಊದಬತ್ತಿಗಳು ಸೇರು ೧ಕ್ಕೆ [illegible]; [illegible]; [illegible]; [illegible]; ಕಸ್ತೂರಿ ಪಲ್ಲೆ ತೊಲಾ ೧ ಕ್ಕೆ [illegible]; ಹಸಿ ಗಂಧ ತೊಲಾ ೧ ಕ್ಕೆ [illegible] ಆಣೆ; ಪಠಾಣ ಗಧ್ಯ [illegible] ೧ ಕ್ಕೆ [illegible] ಆಣೆ; ಧೂಪದ ಗಟ್ಟಿ ೧ ಕ್ಕೆ [illegible] ಆಣೆ, ಪಾಲಗ್ರಹಧೂಪ ಟಿನ್ ೧ ಕ್ಕೆ [illegible] ಆಣೆ, ಅಪೇಕ್ಷೆಯುಳ್ಳವರು ತರಿಸಿಕೊಳ್ಳಬಹುದು.

ಟಿ. ಎಲ್. ಉಪಾಧ್ಯಾಯ,
ಮೈಸೂರು, ಸುಗಂಧಶಾಲೆ.

ಸಿಂಗಿರಾಜಪುರಾಣಂ

ಬಾಲಕರು ಕೂಡ ಓದಿಕೊಳ್ಳುವಂತೆ ಇರುವ ಸಿಂಗರಾಜಪುರಾಣದ ಕಥೆಗಳು ಪಡುಗಣ್ಣದನುವಿಗಳಿಂದ ಮೆರೆಯುವವು. ಈ ಪುರಾಣದಲ್ಲಿ ಶ್ರೀ ಬಸವೇಶ್ವರರ ಅರುವತ್ತುನಾಲ್ಕು ಪವಾಡಗಳ ಕಥೆಗಳು ಸಾಂಗವಾಗಿಯೂ, ಸಪ್ರಮಾಣವಾಗಿಯೂ, ಸ್ಪಷ್ಟಾರ್ಥವಿವರಣೆಯುಳ್ಳವಾಗಿಯೂ ಇರುವವು. ಮತ್ತು ಶ್ರೀ ಬಸವೇಶ್ವರರ ಈ ಭೂಲೋಕದಲ್ಲಿ ವೀರಶೈವ ಮತಧರ್ಮಗಳಾದ ಶಿವಭಕ್ತಿ, ಅಷ್ಟಾವರಣ, ಪಂಚಾಚಾರ, ಷಟ್ಸ್ಥಲ, ಲಿಂಗಾಂಗಸಾಮರಸ್ಯಗಳ ವಿಷಯಗಳನ್ನು ಯಾವರೀತಿಯಾಗಿ ಬೋಧಿಸಿ, ಯಾವರೀತಿ ಸ್ಥಾಪಿಸಿ, ಯಾವರೀತಿಯಾಗಿ ಆಚರಿಸಿದರೋ ಇದೆಲ್ಲವೂ ಸ್ಪಷ್ಟವಾಗಿ ವಿವರಿಸಿ ತೋರಿರುವದು. ಆದುದರಿಂದಲೇ ವೀರಶೈವ ಮತೀಯರೆಲ್ಲರೂ ಈ ಗ್ರಂಥವನ್ನು ಒಂದುವೇಳೆ ಪೂರ್ತಿಯಾಗಿ ಪಾರಾಯಣಮಾಡಿದ್ದೆ ಆದರೆ ವೀರಶೈವಮತಸಿದ್ಧಾಂತವು ಉದಾಹರಣೆಸಹಿತವಾಗಿ ಸ್ಪಷ್ಟಾರ್ಥಬೋಧೆಯಾಗುವುದು. ಸಂಶಯವಿಲ್ಲ, ಸಂದೇಹವಿಲ್ಲ. ಒಳ್ಳೆಯ ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಪ್ರಿಂಟಾಗಿ [illegible] ಪುಟಗಳುಳ್ಳ ಪ್ರತಿಯೊಂದಕ್ಕೆ ಅಂಚೆವೆಚ್ಚ ಸಹಿತವಾಗಿ [illegible] ರೂ. [illegible] ಆಣೆ.

ವಿಳಾಸ:—ಎಂ. ಬಸವಲಿಂಗಶಾಸ್ತ್ರಿ
ಹಳೆಅಗ್ರಹಾರ, ದಿವಿಪುಗೆರಿಬಾರಿ
ಮೈಸೂರು.

ಶರೀರಸುಖಕ್ಕೆ ಒಂದು ಸುಲಭ ಉಪಾಯವು. ಅಂದರೆ ಮಿಂಚಿನ ವಸ್ತು ಮೈಮೇಲೆ ಉಪಯೋಗಿಸುವದು.

ಯಾಕೆಂದರೆ ಮಿಂಚಿನಿಂದ ರಕ್ತದ ಜೀವನವಾಗುತ್ತದೆ ಮತ್ತು ರಕ್ತದಿಂದ ಮನುಷ್ಯನ ಜೀವನವಾಗುತ್ತದೆ.

ಮನುಷ್ಯನ ರಕ್ತವು ಹಗಲೂ ಇರುಳೂ ಇಡೀ ಶರೀರದೊಳಗೆ ತಿರುಗಾಡುತ್ತದೆ. ಇದಕ್ಕೆ ರಕ್ತಾಭಿಸರಣ ಅನ್ನುತ್ತಾರೆ. ಈ ರಕ್ತಾಭಿಸರಣದ ಕೆಲಸಕ್ಕೆ ವಿದ್ಯುಲ್ಲತೆಯ (ಮಿಂಚಿನ) ಸ್ಪರ್ಶವು [illegible] ಪರಿಣಾಮವಾಗುತ್ತದೆ. ಈಗಿನ ವಿದ್ಯುತ್ ಶಾಸ್ತ್ರದ ನಿಯಮದಂತೆ ಅನೇಕ ಧಾತುಗಳ [illegible] ದಿಂದ ವಿದ್ಯುಲ್ಲತೆಯು ಹುಟ್ಟುತ್ತದೆಂಬ ಮಾತು ಈಗ ಸರ್ವರಿಗೂ ಗೊತ್ತಾಗಿದೆ!!!

ಮಿಂಚಿನ ಪದಕವು. ಮಿಂಚಿನ ಉಂಗುರವು.



ರಕ್ತ ಕೆಟ್ಟದ್ದರಿಂದಉಂಟಾಗುವ ಎಲ್ಲ ರೋಗಗಳು—ಅಶಕ್ತಿ, ಅಜೀರ್ಣ, ಹೃದಯದುರ್ಬಲತೆ, ಸಂಧಿವಾತ, ಕಟಿವಾತ, ತಲೆನೋವು, ಅರತಲೆ ನೋವು, ಬೆನ್ನಿನ ಮತ್ತು ಸೊಂಟದ ಅಶಕ್ತಿ, ಪಕ್ಷಸಿದ್ಧ, ಮಲಬದ್ಧತೆ, ಮೂಲವ್ಯಾಧಿ, ಉಬ್ಬಸ, ಕೆಮ್ಮು, ನಪುಂಸಕತ್ವ, ಮೆದುಳಿನ ಜಾಡ್ಯ, ತ್ವಚೆಯ ವಿಕಾರ, ಕಜ್ಜಿ, ಗಜಕರ್ಣ, ಜ್ವರ, ಉದರವಾತ, ಕಿವಿಯ ವ್ಯಾಧಿ, ಸ್ತ್ರೀಯರ [illegible] ರೋಗ, ತಲೆ ತಿರುಗುವಿಕೆ ಅಪಸ್ಮಾರ, ಅರ್ಧಾಂಗವಾಯು, ತಿಳಿಯದೆ ಆಗುವ ಧಾತುಸ್ರಾವವು, ಸ್ಮರಣಶಕ್ತಿಯ ನಾಶತೆ ಇತ್ಯಾದಿ ಅನೇಕ ಉಪಹತಿಗಳು ಮೇಲೆ ಕಾಣಿಸಿದ ವಸ್ತುಗಳ ಉಪಯೋಗದಿಂದ ಗುಣ ಹೊಂದುತ್ತವೆ.

ಉಪಯೋಗ—ಪದಕವು ಎದೆಯಮೇಲೆ ಜೋಲುಬೀಳುವಂತೆ ಕೊರಳಿಗೆ ದಾರದಿಂದ ಕಟ್ಟಬೇಕು. ಪದಕದ ಸ್ಪರ್ಶವು ಎದೆಯ ತ್ವಚೆಗೆ ಆಗಿ ಅದರಿಂದ ಹುಟ್ಟುವ ಮಿಂಚಿನ ಗುಣವು ಇಡೀ ಶರೀರ ರಕ್ತಕ್ಕೆ ಪ್ರಾಪ್ತವಾಗುವುದು. ಉಂಗುರವು ಯಾವಾಗಲೂ ಒಂದೇ ಬೆರಳಿಗೆ ಕಾಯಮ್ಮಾಗಿ ಇಟ್ಟುಕೊಳ್ಳಬೇಕು. ಕ್ರಯ: ಪ್ರತಿ ೧ ಪದಕಕ್ಕೆ [illegible] ಮತ್ತು ಪ್ರತಿ ಒಂದು ಉಂಗುರಕ್ಕೆ ಕ್ರ. [illegible]. ಪೋಸ್ಟ ಖರ್ಚು [illegible], ಒಮ್ಮೆಲೆ [illegible] ನಗಗಳನ್ನು ತರಿಸಿಕೊಳ್ಳುವವರಿಗೆ ೧ ನಗ [illegible] ಕಳಿಸುವೆವು. ಒಮ್ಮೆಲೆ [illegible] ನಗಗಳನ್ನು ತರಿಸಿಕೊಳ್ಳುವವರಿಗೆ [illegible] ನಗಗಳನ್ನು ಜೆಚ್ಚಾಗಿ ಕಳಿಸುತ್ತೇವೆ. ಈ ವಸ್ತುಗಳು ಬಹು ಸುಂದರವಾಗಿವೆ.

ಸೂಚನೆ—ಉಂಗುರ ತರಿಸುವಾಗ ಬೆರಳಿನ ಅಳತೆ ಕಳಿಸತಕ್ಕದ್ದು. ಉಪಹತಿಯು ಗುಣ ಹೊಂದಿದನಂತರ ಮುಂದೆ ೧ ಯಾ ೨ ತಿಂಗಳುವರೆಗೆ ಈ ವಸ್ತು ಮೈಮೇಲೆ ಉಪಯೋಗಿಸುವದಕ್ಕೆ ತಪ್ಪಬಾರದು. ಸಾಧಾರಣ ಪ್ರಕೃತಿಯವರಿಗೆ ಮೇಲಿನ ೨ ಜಾತಿಯ ಒಂದೊಂದೇ ವಸ್ತು ಸಾಕಾಗಿವೆ. ಸ್ಥೂಲ ಕ್ಷಣ್ಣಪ್ರಕೃತಿಯುಳ್ಳವರು ಮೇಲಿನ ಒಂದಕ್ಕಿಂತ ಹೆಚ್ಚು ವಸ್ತುಗಳನ್ನು ಉಪಯೋಗಿಸುವದು ಅಗತ್ಯವು. ೭ ವರುಷದ ಕೆಳಗಿನ ಚಿಕ್ಕಮಕ್ಕಳವರಿಗೆ ರಾತ್ರಿಯಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆ ಸಾಕಾಗಿದೆ. ವಿ. ಪಿ. ಯಿಂದಲೂ ಕಳುಹಿಸುವೆವು.

ವಿಠಲದಾಸ ಮಾಧಗಾವಕರ ಮರ್ಚಂಟ್.
ಹೊನ್ನಾವರ, ಉತ್ತರ ಕಾನಡಾ ಜಿಲ್ಲಾ,
[illegible] N. Kanara District

[illegible] ಪ್ರಕಾಶಿಕಾ. (ಪುಟ [illegible])

[illegible] ಶಕ್ತಿ ವಿಶಿಷ್ಟಾದ್ವೈತಮತತತ್ವಸಾರವಾಗಿ [illegible] ಶ್ರೀ ರುದ್ರಸೂಕ್ತಕ್ಕೆ [illegible] ಬರೆಯಲ್ಪಟ್ಟಿರುತ್ತದೆ. [illegible] ನಿತ್ಯಪಾರಾಯಣಕ್ಕೆ [illegible]

ಮೈಸೂರ್ ಸ್ಟಾರಾಫೀಸಿನಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	[illegible]
ಶರಣಾದಿಗಳಾಂಕಿತಾರಾವಳಿ	[illegible]
ಬಾದುಶೀಲಿ ಚರಿತ್ರೆ	[illegible]
ಕರಪ್ರಾಂಶ	[illegible]
ಸಟೀಕಶಿವಾರ್ಚನಕಷ್ಟಮಂಜರಿ	[illegible]
ಸಟೀಕ ನಂದೀವ್ರತ	[illegible]
ಸಟೀಕ ವಿವಾಹವಿಧಿ	[illegible]
ವ್ರತಮಂಜರಿ	[illegible]
ವಿವೇಕಮಂಜರಿ	[illegible]
ಷಟ್ಸ್ಥಲವಿದ್ಯಾ (ಮುಕ್ತಿಸಾಧನ)	[illegible]
ಗುರುಶಂಕರೇಶ್ವರಶತಕಂ	[illegible]

[illegible]

ಉತ್ತಮ ಗ್ರಂಥಗಳು.

[illegible] ಬಾಲಕರು [illegible] ಓದಿಕೊಳ್ಳುವಂತೆ [illegible] ಕಥೆಗಳು [illegible]

[illegible] ಕಥೆಗಳೆಲ್ಲ ಬಿಡುಗನ್ನಡದಲ್ಲಿಯೂ ಬರೆಯಲ್ಪಟ್ಟಿವೆ.

ಮಲ್ಲರಾಜನ [illegible] — ಇದು ವೀರಶೈವಮತದ [illegible] ಚರಿತ್ರೆ ೧ ನೆಯ ಪ್ರಕರಣಕ್ಕೆ [illegible] ನೆಯ ಪ್ರಕರಣಕ್ಕೆ [illegible].

ವೀರಶೈವ ಧರ್ಮಶಿರೋಮಣಿ.— [illegible] ವೀರಶೈವ ಮತತತ್ವಗೂಢವೂ [illegible] ವಿವರಿಸಲ್ಪಟ್ಟಿವೆ. (ಸವ್ಯಾಖ್ಯಾನ)

[illegible] ಪುರಾಣ — [illegible] ಅನೇಕ [illegible]

ಸಟೀಕ ತತ್ವಪ್ರಕಾಶಿಕಾ. [illegible] ಆಣೆ [illegible] ತತ್ವಗಳ ಸ್ವರೂಪವು ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ.

ಸಟೀಕ ಶತಸೂತ್ರರತ್ನ.— [illegible] ಲಕ್ಷಣವು, ಮೋಕ್ಷವು [illegible] ಸಂಗತಿಯೂ [illegible] ವಾಗಿ ವಿವರಿಸಲ್ಪಟ್ಟಿದೆ. [illegible] ಆಣೆ.

ಸಟೀಕ ದೀಕ್ಷಾವಿಧಿ— ವಿಶೇಷ ವಿಷಯಗಳಿಂದ ಕೂಡಿದೆ. [illegible] ಆಣೆ.

[illegible] ಸಂಗ್ರಹ.— [illegible] ಆಣೆ.

[illegible] ಆಣೆ [illegible] ಆಣೆ.
ವೀರಶೈವ ಗ್ರಂಥಪ್ರಕಾಶಿಕಾ — [illegible] ಶೈವ ಗ್ರಂಥಗಳನ್ನು ಪ್ರಕಟಿಸುವ ಮಾಸಪತ್ರಿಕೆ ಪ್ರತಿ ತಿಂಗಳ [illegible]

[illegible]
[illegible] ಮೈಸೂರು.

ಜಂಗೀ ಕುಸ್ತಿಗಳು! ಜಂಗೀ ಕುಸ್ತಿಗಳು!!

ನವಲಗುಂದದಲ್ಲಿ ಜರಗುವ ಕಾರೋನೇಶನ್ ದರಬಾರದ ಜಾಹೀರಾತು.

ಇದರ ಮೂಲಕ ಎಲ್ಲಾ ಜನರಿಗೆ ತಿಳಿಸುವದೇನಂದರೆ,—

ನಮ್ಮನ್ನು ಆಳುವ ಹಿಂದುಸ್ಥಾನದ ಚಕ್ರವರ್ತಿಗಳಾದ ಪರಮಪೂಜ್ಯ ಪಂಚಮ ಜಾರ್ಜ ಬಾದಶಹಾ ಮತ್ತು ಚಕ್ರವರ್ತಿನಿಯಾದ ಮೇರಿ ಮಹಾರಾಣೀ ಸಾಹೇಬರ ರಾಜ್ಯಾರೋಹಣದ ದರ್ಬಾರದ ಉತ್ಸವದ ದೆಸೆಯಿಂದ ನವಲಗುಂದದಲ್ಲಿ ತಾ॥ ೭ನೇ ಡಿಸೆಂಬರ ೧೯೧೧ನೇ ಯ ಇಸ್ವಿ ಬಂಧವಾದರಿಂದ ತಾ॥ ೧೩ ಡಿಸೆಂಬರ ೧೯೧೧ನೇಯ ಇಸ್ವಿ ಸೋಮವಾರದವರೆಗೆ ಜಂಗೀ ಕುಸ್ತಿಗಳನ್ನು ಆಡಿಸಿ, ಬಂಗಾರ, ಬೆಳ್ಳಿಯ ಕಡಗಳು, ಶಾಲು, ನಗದಾವಸ್ತ್ರ ಗಳು ಕುಸ್ತಿ ಆಡುವವರ ಯೋಗ್ಯತೆಯ ಮೇರೆಗೆ ಇನಾಂ ಕೊಡುವದರಲ್ಲದೆ ಮತ್ತು ಸದರ ತಾ॥ ೭ರಿಂದ ೧೨ ಡಿಸೆಂಬರ ವರೆಗೆ ಬಾಲಬಾಲಕಿಯರ ಆಟನೋಟಗಳು, ಗಾಯನ, ನರ್ತನ, ಮದ್ದು ಹಾರಿಸುವದು, ದೀಪೋತ್ಸವ ಬಡಜನರಿಗೆ ಅನ್ನವಸ್ತ್ರ ಕೊಡುವದು ಮುಂತಾದ ಸಮಾರಂಭಗಳು ಜರಗುವವು. ಆದ್ದರಿಂದ ಕುಸ್ತಿ ಆಡತಕ್ಕವರೂ, ನೋಡತಕ್ಕವರೂ ಈ ಮಹೋತ್ಸವದ ಸಂಬಂಧವಾಗಿ ಕೆಳಕೊಟ್ಟವರ ಅಗತ್ಯವಾಗಿ ಬಂದು ಮನಸ್ಸಿಗೆ ವ ನೇತ್ರಗಳಿಗೆ ಆನಂದವನ್ನು ಉಂಟುಮಾಡಿಕೊಳ್ಳಬೇಕೆಂದು ನಮ್ಮ ವಿನಯದ ಸೂಚನೆಯುಂಟು. ನವಲಗುಂದದಲ್ಲಿ ಈಗ ಪ್ಲೇಗು ಶಾಂತವಾಗಿದೆ, ಮತ್ತು ನೀರಿನ ಸಮೃದ್ಧಿಯುಂಟು. ತಾ॥ ೨೦-೧೧-೧೯೧೧.

ಕಮಿಟಿಯ ಮೆಂಬರರುಗಳು

ರಾವಸಾಹೇಬ ರಾಮರಾವ ಕೇಶವ ಕಟಗೇರಿ ಮಾಮಲೇದಾರ
ಮಿ॥ ಕೊಟ್ರಬಸಪ್ಪಾ ಗುರುಸಿದ್ದಪ್ಪಾ ಭಾವಿಕಟ್ಟಿ ಸ್ಪೆಷಲ್ ಟಿ॥ ಕಾ॥
„ ದತ್ತಾತ್ರಯ ಶಿವರಾಮ ಶಿರಾಳಿ ಹೆಡ್ಡಕಾರಕೂನ.
„ ಬಾಪುರಾವ ಬೆಟಗೇರಿ ಪೋಲೀಸ ಸಬ್ ಇನ್ಸ್ಪೆಕ್ಟರ್.
„ ನಾನಾಸಾಹೇಬ ಗಾಂಧಿ ವಾಣ ಯಾಕ್ಸ್ಯೂಟ ಇ॥
„ ಕೃಷ್ಣರಾವ ಯಾವಗಿರಿ ಸಬ್ಬ ರಿಜಿಸ್ಟರ.
„ ಲಕ್ಷ್ಮಣರಾವ ಚಿತ್ತೂರಕರ ಸಬ್ಬ ಅಸಿಸ್ಟಂಟ ಸರ್ಜನ.

ಮುನ್ಸಿಪಲ್ ಮೆಂಬರರು.

೧ ಮಿ॥ ಕೃಷ್ಣಪ್ಪಾ ದೇಸಾಯಿ.
೨ „ ಸಂಗಪ್ಪಾ ಶಿದ್ರಾಮಶೆಟ್ಟಿ.
೩ „ ಬಸಪ್ಪ ಶಿದ್ರಾಮಶೆಟ್ಟಿ.
೪ „ ಅಡಿವೆಪ್ಪಾ ಅಮರಶೆಟ್ಟಿ.
೫ „ ಶಿದ್ದಪ್ಪಾ ಸುಬೇದಾರ.
೬ „ ಬಸನಗೌಡ ಪಾಟೀಲ.
೭ „ ನೂರುಸಾಬ ಕಾಜಿ.

ಲೋಕಲ್ ಬೋರ್ಡ ಮೆಂಬರರು

೮ ಮಿ॥ ಹನುಮಂತಗೌಡ ಪಾಟೀಲ
೯ „ ಹುಸನಮಿಯಾ ಗವಸುಸಾಬ ಖುದಾವಂದ.
೧೦ „ ಕಲ್ಲಪ್ಪಾ ಕಂಬಳದ.
೧೧ „ ರಾಮಚಂದ್ರ ಕೃಷ್ಣ ಬಮ್ಮಿಗಟ್ಟಿ

ಊರೊಳಗಿನ ಪ್ರಮುಖ ಜನರು.

೧೨ ಮಿ॥ ಗುರುಪ್ಪಾ ಜೀವರೀಯಾ ಅಬಕಾರಿ ಕಂಟ್ರಾಕ್ಟದಾರ
೧೩ „ ಕೃಷ್ಣಪ್ಪಾ ಭಾರವಾಡ.
೧೪ „ ಭಗವಾನ ಮೊರಬಾದ.
೧೫ „ ನಂದಾರಾಮ ಮಾರವಾಡಿ.
೧೬ „ ಮಾರ್ತಾಂಡಪ್ಪಾ ಆನಿಗುಂದಿ.

ದಿಲ್ಲಿಯ ದರ್ಬಾರು.

ಬಾದಶಹಾಯಿ ಮೇಳ.

ಈ ಅಪೂರ್ವವಾದ ಮೇಳವು ದಿಲ್ಲಿಯ ಕೋಟೆಯ ಕೆಳಗೆ ಹರಿಯುತ್ತಿರುವ ಯಮುನಾ ನದಿಯ ದಡದಮೇಲೆ ಯುಧಿಷ್ಠಿರ (ಧರ್ಮರಾಯ) ನು ಅಶ್ವಮೇಧಯಾಗವನ್ನು ಮಾಡಿದಂಥ ಮತ್ತು ಮೊಗಲ ಚಕ್ರವರ್ತಿಗಳು ವಿನೋದೋತ್ಸವಗಳನ್ನು ನಡೆಯಿಸಿದಂಥ ವಿಶಾಲವಾದ ಬೈಲಿನಲ್ಲಿ ಈ ತಾ॥ ೧ ರಿಂದ ಆರಂಭಿಸಲ್ಪಟ್ಟಿರುವುದು. ದರ್ಬಾರು ನಡೆಯುವ ಮತ್ತು ಅತಿಥಿಗಳಿಳುಕೊಂಡಿರುವ ಸ್ಥಳಗಳಿಂದ ಪ್ಯಾಸೆಂಜರ ರೈಲು ಸ್ಟೇಶನ್ನಿಗೂ, ಇಲ್ಲಿಂದಲ್ಲಿಗೂ ರೈಲುಬಂಡಿಯು ಪದೇಪದೇ ಓಡಾಡುತ್ತಿರುವುದು. ಈ ಮೇಳದಲ್ಲಿ ಬಹು ಮುಖ್ಯವಾದ ಮತ್ತು ಪ್ರೇಕ್ಷಣೀಯವಾದ ಭಾಗಗಳು ತಾ॥ ೧೮ ರಲ್ಲಿ ಆರಂಭವಾಗಿ ೧೯ ರ ವರೆಗೂ ನಡೆಯುವವು. ವಿಲಕ್ಷಣ ಸ್ಪರ್ಧೆಯಿಂದ ನಡೆಯುತಕ್ಕ ಕುಸ್ತಿ ...ನವರಿಗೆ ಇನಾಮು ಕೊಡುವದು; ಮೊದಲಾದ ಆಟಗಳು ಪ್ರತಿನಿತ್ಯದಲ್ಲೂ ನಡೆಯುವುವಲ್ಲದೆ, ದೊಡ್ಡ ಜಾತ್ರೆಯ ಕಾಲದಲ್ಲಿ ಆಗುವಂತೆ ನಾಟಕ, ಬಯಾಸ್ಕೋಪು, ಸರ್ಕಸ್ಸು, ವಿಚಿತ್ರವಾದ ಪ್ರಾಣಿಗಳ ಪ್ರದರ್ಶನ ಮೊದಲಾದ ನೋಟಗಳು ನಿತ್ಯದಲ್ಲೂ ಆಗುವವು. ಹೊತ್ತು ಹೋದರೂ ವಿನೋದಗಳನ್ನು ನೋಡಲು ಜನಸ್ತೋಮದಿಂದ ಜನರು ಬೇಸತ್ತಿರುವುದಿಲ್ಲ. ಆದರೆ ದರ್ಬಾರು ಹಾಕಿದವರೂ ಉಳಿದುಕೊಳ್ಳಗೂ ವಾಸಿಸತಕ್ಕ ಜನರುಮಾತ್ರ ನೋಡಲವಕಾಶವಿರುವುದು. ತಾ॥ ೧೩ ರಲ್ಲಿ ಮೇಳದ ಮುಖ್ಯವಾದ ಭಾಗಗಳು ಜರುಗುವವು. ಈ ದಿವಸ ಸೇಕಗ್ಗೆ ಹಿಂದೂ, ಸಿಕ್, ಮಹಮ್ಮದೀಯ, ಜೈನ, ಆರ್ಯಸಮಾಜ ಈ ಮತಗಳ ಪ್ರತಿನಿಧಿಗಳು ತಂತಮ್ಮ ದೇವತಾರಾಧನೆಯನ್ನು ತೀರಿಸಿಕೊಂಡು ಎಲ್ಲರೂ ಒಟ್ಟುಗೂಡಿ ವಾದ್ಯವಿಶೇಷದೊಡನೆ, ಮೇಳವು ನಡೆಯುತಕ್ಕ ಬೈಲಿನಲ್ಲಿ ಉತ್ಸವಗೊಂಡು ಬರುವರು. ಈ ಭಾಗವು ಅತ್ಯಂತ ಆಹ್ಲಾದಕರವೂ, ಪ್ರೇಕ್ಷಣೀಯವೂ ಆಗಿರುವುದು. ಮಧ್ಯಾಹ್ನದಲ್ಲಿ ರಾಜಚಕ್ರವರ್ತಿದಂಪತಿಗಳು ಹಿಂದೆ ಮಹಮ್ಮದೀಯ ಚಕ್ರವರ್ತಿಗಳು ಪ್ರಜೆಗಳಿಗೆ ದರ್ಶನವನ್ನು ಕೊಡಲು ಬಂದು ಕುಳಿತುಕೊಳ್ಳುತ್ತಿದ್ದ ಝರೋಖಾ ಎಂಬ ವಿಶಾಲವಾದ ಚಪ್ಪರಿಯಲ್ಲಿ ಮಂಡಿಸುವರು. ಆಗ ಪಂಜಾಬ ಡಿಸ್ಟ್ರಿಕ್ಟಗಳ ಮತ್ತು ಸಂಯುಕ್ತಪ್ರಾಂತಗಳ ಹಾಗೂ ನೆರೆಯ ದೇಶೀಯ ಸಂಸ್ಥಾನಗಳ ಪ್ರತಿನಿಧಿಗಳು ಅನಂತಾನಂತ ಜನರನ್ನು ಹಿಂದಿಟ್ಟುಕೊಂಡು ಉತ್ಸವವೈಭವದಿಂದ ಪ್ರಭುದಂಪತಿಗಳ ಮುಂಗಡೆ ಹೊರಡುವರು. ಸಾಧ್ಯವಾದ ಮಟ್ಟಿಗೆ ಪ್ರೇಕ್ಷಕ ಜನರೆಲ್ಲರಿಗೂ ಚಕ್ರವರ್ತಿ ದಂಪತಿಗಳ ದರ್ಶನಾನಂದವು ಉಂಟಾಗಲೆಂಬುದರಮೇಲೆ ಈ ರೀತಿ ನಿರ್ಮಿಸಲ್ಪಟ್ಟಿರುವುದಾಗಿದೆ. ದುಡ್ಡನ್ನು ಕೊಡತಕ್ಕ ಪ್ರೇಕ್ಷಕರಿಗೆ ಈ ಮೇಳದಲ್ಲಿ ಕುಳಿತುಕೊಳ್ಳಲು ಆಸನಗಳು ದೊರಕುವವು. ಪಟಿಯಾಲಾ ಮತ್ತು ರಾಂಪುರ ಸಂಸ್ಥಾನಗಳ ರಾಜರುಗಳು ತಮ್ಮ ದೇಶದ ಸರ್ಕಸ್ಸುಗಳೂ, ನಾಟ್ಯಗಳೂ ಪ್ರತಿದಿನ ಮಧ್ಯಾಹ್ನದಲ್ಲಿ ನಡೆಯುವಂತೇರ್ಪಡಿಸಿರುವರು. ಸಾಯಂಕಾಲ ೪ ಗಂಟೆಯಿಂದ ೬ ಗಂಟೆಯ ವರೆಗೂ ಮದ್ದಿನ ವಿನೋದವು ನಡೆಯುವುದು. ತಾ॥ ೧೩ ರಲ್ಲಿ ನಡೆಯುವ ವನವಿಹಾರೋತ್ಸವದಲ್ಲಿ ಎಲ್ಲ ದೇಶೀಯರಾಜರುಗಳ ಬ್ಯಾಂಡುವಾದ್ಯಗಳು ಆಗುವವು. ಈದಿವಸಮಾತ್ರ ಆಟಗಳ ಸ್ಪರ್ಧೆಯು ನಡೆಯುವುದಿಲ್ಲವು. ಆದರೆ ಇತರ ದಿವಸಗಳಲ್ಲಿ ಪಂಜಾಬು ಮತ್ತು ಸಂಯುಕ್ತಪ್ರಾಂತಗಳಿಂದ ಬಂದಿರತಕ್ಕ ಅತ್ಯಂತ ಪ್ರಸಿದ್ಧರಾದ ಪೈಲ್ವಾನರುಗಳ ಕುಸ್ತಿಗಳು, ಕಬಡಿ, ನೀಮಂಚಿಪಕ್ಕ, ಟೆಕಾರ್ಡ್, ಧೋಡ, ಗಟ್ಕವರಿ, ದಂಡ ಬಗರುಕಾಳಗ, ಟಗರುಗಳನ್ನು ಹಾರಿಸುವುದು, ಗುಡ್ಡಾಪಸಿಗಳ ಕುಣಿತ, ಹಗ್ಗವನ್ನು ಕೊಯ್ಯುವುದು, ಸಂಗೀತ, ನರ್ತನ, ಡೊಂಬರಾಟ, ಹಾವಾಡಿಗರ ಪ್ರದರ್ಶನ, ಕತ್ತಿ-ದೊಣ್ಣೆ ಮೊದಲಾದವುಗಳ ಪಟುವರ್ಗ, ಸಾಕಿದಾಕಿ ಪಕ್ಷಿಗಳನ್ನು ಹಾರಿಸುವುದು ಮುಂತಾದ ವಿನೋದಗಳು ನಡೆಯುವುವು. ಕುಸ್ತಿಗಳನ್ನು ನೋಡಲು ದುಡ್ಡನ್ನು ಕೊಡಬೇಕಾಗಿದೆಯೇ ಹೊರತು ಇತರ ವಿನೋದಗಳನ್ನೋಡಲು ಏನನ್ನೂ ಕೊಡಬೇಕಾದುದಿಲ್ಲವು. ಇದೇ ಸಂದರ್ಭದಲ್ಲಿ ಅನೇಕ ನಾಟಕಗಳು, ಬಯಾಸ್ಕೋಪುಗಳು, ಮೆರಿಗೋರೌಂಡು ಎಂಬ ಆಟವು, ಮಾಯಾಗನ್ನಡಿಯನ್ನು ತೋರಿಸುವುದು ಮೊದಲಾದ ವಿನೋದಗಳು ನಡೆಯುವುವು. ಪಟಿಯಾಲಾ ಮತ್ತು ರಾಂಪುರ ಸಂಸ್ಥಾನಗಳ ಸರ್ಕಸ್ಸಿನವರು ತೋರಿಸುವ ಅದ್ಭುತವಾದ ಅಂಗಸಾಧನೆಯ ಚಮತ್ಕಾರಗಳು ಅತ್ಯಂತ ಪ್ರೇಕ್ಷಣೀಯವಾಗಿರುವುವು. ತಾ॥ ೮ ಮತ್ತು ೯ ರಲ್ಲಿ ಸಿಂಧಿಯಾ ಮಹಾರಾಜರು ನಾಟಕದ ಸಂಸ್ಥಾನದ ಮೆ॥ ಕರ್ನಲ್ ರಾಜಕುಮಾರ ವೀರ ವಿಕ್ರಮಸಿಂಗರವರ ಸಹಾಯದಿಂದ ಕೋಟೆಗೆ ಮುತ್ತಿಗೆ ಹಾಕುವುದನ್ನು ತೋರಿಸುವರು. ಈ ಮೇಳವು ನಡೆಯುತಕ್ಕ ಸ್ಥಳದಲ್ಲಿ ಆನೆಗಳು ಸಿದ್ಧವಾಗಿರುವುವು. ದುಡ್ಡನ್ನು ಕೊಟ್ಟು ಇವುಗಳ ಮೇಲೆ ಕುಳಿತುಕೊಂಡು ಆ ಬೈಲಿನಲ್ಲೆಲ್ಲ ಸುತ್ತಿ ವಿನೋದಗಳನ್ನೋಡಬಹುದು. ಇದಲ್ಲದೆ ನೋಡುವರ ಸೌಲಭ್ಯಕ್ಕಾಗಿ ಟ್ರಾಂ ಬಂಡಿಗಳು ಆ ಬೈಲಿನಲ್ಲಿ ವಿನೋದೋತ್ಸವಗಳು ನಡೆಯುತಕ್ಕ ಸ್ಥಳಗಳಲ್ಲೆಲ್ಲ ಚಕ್ರಾಕಾರವಾಗಿ ಓಡಾಡುತ್ತಿರುವುವು. ಇಲ್ಲಿ ಜನರ ಕಣ್ಮನಗಳನ್ನು ಸೆಳೆಯುವ ವಿಚಿತ್ರವಾದ ಪದಾರ್ಥಗಳ ದೊಡ್ಡ ದೊಡ್ಡ ಅಂಗಡಿಗಳು ಇಡಲ್ಪಟ್ಟಿವೆ.

ತಾ॥ ೧೦ ರಿಂದ ಪರಸ್ಥಳೀಯರು ಈ ಮೇಳ ನಡೆಯುತಕ್ಕ ಸ್ಥಳದ ಸಮೀಪದಲ್ಲಿ ತಂತಮ್ಮ ಬಂಡಿಗಳ ಸಮೇತ ಇಳಿದುಕೊಳ್ಳಲು ಸ್ಥಳವು ಬಿಟ್ಟಿಯಾಗಿ ಕೊಡಲ್ಪಡುವುದು. ಮತ್ತು ಗುಡಿಸಲುಗಳನ್ನು ಕಟ್ಟಿಕೊಳ್ಳಲು ಬಾವೆ, ಗಳ, ಹುಲ್ಲು ಮೊದಲಾದ ಪದಾರ್ಥಗಳು ಅಲ್ಲೇ ಮಾರಾಟಕ್ಕಿಡಲ್ಪಟ್ಟಿರುವುವು. ಪಟಿಯಾಲಾ ಸಂಸ್ಥಾನದ ಮಹಾರಾಜರವರು ಈ ಮೇಳ ನಡೆಯುತಕ್ಕ ಸ್ಥಳದಲ್ಲಿ ದೀಪಗಳನ್ನು ಹೊತ್ತಿಸಲು, ಬಂದ್ ಸಂಸ್ಥಾನದ ರಾಜರು ಜನರಿಗೆ ಔಷಧೋಪಚಾರವನ್ನು ಮಾಡಲು ಮತ್ತು ಸರದಾರ್ ನಾರಾಯಣಸಿಂಗರವರು ಕುಡಿಯುವ ನೀರನ್ನೊದಗಿಸಲು ತಮ್ಮ ಸ್ವಂತ ಖರ್ಚಿನಿಂದ ಒಪ್ಪಿಕೊಂಡಿರು! ಜನ ಸಿವಿಲ್ ಆಸ್ಪತ್ರೆಯ ಡಾ॥ ಜನರಲ್‌ರವರು ಜನರ ಆರೋಗ್ಯಕ್ಕಾಗಿ ಬಹು ಉತ್ಕೃಷ್ಟವಾದ ವಿಚಾರಣೆಯನ್ನು ಮಾಡಿರುವರು. ಒಡೆಯವರಿಗೆ ಅನ್ನವನ್ನು ಹಾಕಲು ಬಹು ಅಗಾಧವಾದ ವಿಚಾರಣೆಯು ಇಡಲ್ಪಟ್ಟಿರುವುದು. ಇದಕ್ಕಾಗಿ ಚಕ್ರವರ್ತಿಯವರು ವಿಶೇಷ ಹಣವನ್ನು ದಯಪಾಲಿಸಿರುವರಲ್ಲದೆ ಅನೇಕ ಅನ್ನದಾತರುಗಳು ಬೇರೆ ಬೇರೆ ಜಾತಿಯ ಜನರಿಗೆ ಭೋಜನವನ್ನು ಮಾಡಿಸಲುದ್ಯುಕ್ತರಾಗಿರುವರು. ಜಯಪುರದ ಮಹಾರಾಜರವರು ದಿಲ್ಲಿಯ ಪಟ್ಟಣದ ಬಾಗಿಲಿನ ಹೊರಗಿರುವ ಕೋಟ್ಲಾ ಫಿರೋಜಷಾ ಎಂಬಲ್ಲಿ ತಮ್ಮ ಆನೆಗಳಿಂದ ಅನೇಕ ವಿಧವಾದ ಚಮತ್ಕಾರಗಳನ್ನು ಮಾಡಿಸುವವರಾಗಿರುವರು. ತಾ॥ ೧೬ ರಲ್ಲಿ ಚಕ್ರವರ್ತಿ ದಂಪತಿಗಳು ದರ್ಬಾರು ಮುಗಿದಮೇಲೆ ದಯಮಾಡಿರುವಾಗಲೂ, ಅಲ್ಲಿಂದ ಬಿಡಾರಕ್ಕೆ ಹಿಂತಿರುಗುವಾಗಲೂ ನಡೆಯುತಕ್ಕ ಉತ್ಸವಗಳ ವೀಕ್ಷಿಸಲು ಪ್ರತಿನಿಧಿಗಳಿಗೆ ಪ್ರತ್ಯೇಕವಾದ ಸ್ಥಳಗಳು ಕಾದಿಟ್ಟಿರುವವಲ್ಲದೆ, ೧೨ ೦೦ ಜನರು ಕುಳಿತುಕೊಳ್ಳಲು ಒಂದು ಸ್ಥಳವು ಗೊತ್ತುಮಾಡಲ್ಪಟ್ಟಿದೆ ಮತ್ತು ಇತರರೂ ಉತ್ಸವ ಜರಗತಕ್ಕ ಮಾರ್ಗದ ಇಕ್ಕೆಲದಲ್ಲೂ ನಿಂತುಕೊಳ್ಳಲು ಅವಕಾಶವು ಕಲ್ಪಿಸಲ್ಪಟ್ಟಿರುತ್ತದೆ.

ಚಕ್ರವರ್ತಿದಂಪತಿಗಳು ಮಂಡಿಸುವ ಸಿಂಹಾಸನಗಳು.

ದಿಲ್ಲಿಯ ದರ್ಬಾರು ಮಹೋತ್ಸವದಲ್ಲಿ ಚಕ್ರವರ್ತಿದಂಪತಿಗಳು ಮಂಡಿಸುವುದಕ್ಕಾಗಿ ೪ ಸಿಂಹಾಸನಗಳು ಸಿದ್ಧಗೊಳಿಸಲ್ಪಟ್ಟಿರುತ್ತವೆ. ಇವುಗಳಲ್ಲಿ ಎರಡು ಸಿಂಹಾಸನಗಳು ಮಾತ್ರ ದರ್ಬಾರಿನಲ್ಲುಪಯೋಗಿಸಲ್ಪಡುವುವಾದುದರಿಂದ ೯೦೦೦೦ ರೂಪಾಯಿಗಳು ಕರಗಿಸಲ್ಪಟ್ಟು ಮಾಡಲ್ಪಟ್ಟಿರುತ್ತವೆ. ಉಳಿದೆರಡು ಸಿಂಹಾಸನಗಳಿಗೆ ಬೆಳ್ಳಿಯ ಗಿಲೀಟು ಮಾಡಲ್ಪಟ್ಟಿರುತ್ತವೆ. ಈ ಸಿಂಹಾಸನಗಳ ಒಳಗಡೆ ಅಮೋಘವಾದ ಮಕಮಲ್ಲು ಒಟ್ಟಿಗಳು ಹಾಕಲ್ಪಟ್ಟು ಅವುಗಳಿಗೆ ಕಲಾಬತ್ತಿನ ಸರಿಗೆಯಿಂದ ಅತ್ಯಂತ ಶ್ಲಾಘ್ಯವಾದ ಕಸೂತಿಯ ಕೆಲಸವು ಮಾಡಲ್ಪಟ್ಟಿರುತ್ತದೆ.

ಈಗ ದಿಲ್ಲಿಯ ಪಟ್ಟಣಕ್ಕೆ ಪ್ರತಿನಿತ್ಯದಲ್ಲೂ ೪೦ ವೇಳೆಗಿಂತಲೂ ಹೆಚ್ಚಾಗಿ ರೈಲು ಬಂಡಿಗಳು ಬರುತ್ತಿವೆ. ಕಳೆದ ತಾ॥ ೨೬ ರಲ್ಲಿ ಆಗ್ರಾದಿಂದ ಬಂದ ಹೆಚ್ಚುಗಟ್ಟಳೆಯ ಬಂಡಿಯಲ್ಲಿ ಯೂರೋಪು ಮತ್ತು ಅಮೇರಿಕಾ ದೇಶಗಳ ಪ್ರಸಿದ್ಧ ಪತ್ರಿಕಾಕರ್ತರು, ಶ್ರೀಮಂತರು, ಪ್ರಖ್ಯಾತರಾದ ಚಿತ್ರಕಾರರು ಮೊದಲಾದ ೧೬೯ ಜನ ದೇಶಸಂಚಾರಕರು ಬಂದರು. ಇವರೆಲ್ಲರೂ ಚಕ್ರವರ್ತಿದಂಪತಿಗಳ ಸ್ವಾಗತಕ್ಕಾಗಿ ಮಾಡಲ್ಪಡುತ್ತಿರುವ ಅದ್ಭುತ ಸಿದ್ಧತೆಯನ್ನೂ, ಡೇರೆಗಳಿಂದಲೇ ಒಂದು ಪಟ್ಟಣವು ನಿರ್ಮಾಣವಾಗಿರುವುದನ್ನು ನೋಡಿ ಪರಮಾಶ್ಚರ್ಯಭರಿತರಾದರು. ಮತ್ತು ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸುವುದರಿಂದ ಇಂಗ್ಲಂಡಿನ ರಾಜಮನೆತನದವರಿಗೆ ತಮ್ಮ ಭಾರತ ಪ್ರಜೆಗಳಮೇಲೆ ಎಷ್ಟೊಂದು ಪ್ರೇಮಾತಿಶಯವಿರುವುದೆಂಬುದನ್ನು ಪ್ರದರ್ಶಿಸುವುದು. ಚಕ್ರವರ್ತಿಗಳನ್ನು ಬರಮಾಡಿಕೊಳ್ಳುವ ಸಂಪ್ರದಾಯಗಳಿಗಾಗಿ ದೇಶೀಯ ರಾಜರುಗಳಿಗೂ, ಭಾರತ ಪ್ರಜೆಗಳಿಗೂ ವಿಶೇಷ ದ್ರವ್ಯವ್ಯಯವಾಗುತ್ತಿರುವುದರಲ್ಲಿ ಸಂದೇಹವಿಲ್ಲವು. ಆದರೆ ನಮ್ಮಗಳ ಪ್ರಕೃತ ಜೀವಮಾನದ ಪ್ರಾರಂಭಕಾಲದಿಂದ ಇದುವರೆಗೂ ಇಷ್ಟು ದರ್ಬಾರದ ವೈಭವವನ್ನು ನೋಡಿರಲಿಲ್ಲದೆ ಲಕ್ಷ್ಯ ಮೊದಲಾದಕಡೆ ಸಂಚಾರ ಹೊರಡಬೇಕಾಗಿರುವುದಕ್ಕಾಗಿ ಚಿಂತಿಸುತ್ತೇವೆ. ಎಂದು ಪತ್ರಿಕಾ ಪ್ರತಿನಿಧಿಗಳಿಗೆ ತಿಳುಹಿದರು.

ವೈಸ್ರಾಯರು ಕಳೆದ ವಾರವೆಲ್ಲ ದಿಲ್ಲಿಯಲ್ಲಿ ನಡೆಯುತಕ್ಕ ಪ್ರತಿಯೊಂದು ಕಾರ್ಯವನ್ನೂ ಪ್ರತ್ಯಕ್ಷವಾಗಿ ಪರಾಮರಿಸುವುದರಲ್ಲಿ ವ್ಯಗ್ರರಾಗಿದ್ದು ತಾ॥ ೩೦ ರಲ್ಲಿ ಮುಂಬಯಿಗೆ ಪ್ರಯಾಣಮಾಡಿದರು. ಅಲ್ಲಿ ಚಕ್ರವರ್ತಿ ದಂಪತಿಗಳ ಸ್ವಾಗತವನ್ನು ಮಾಡಿ ತಾ॥ ೭ ರಲ್ಲಿ ದಿಲ್ಲಿಗೆ ಹಿಂತಿರುಗಿ ಬರುವರು. ಉತ್ತರ ಹಿಂದುಸ್ಥಾನದಲ್ಲಿ ಮಳೆಯೂ, ಹಿಮಾಲಯದಲ್ಲಿ ಹಿಮವೂ ಬೀಳುವುದು ನಿಂತುಹೋಗಿರುವುದರಿಂದ, ದಿಲ್ಲಿಯ ಪಟ್ಟಣದಲ್ಲೂ ನೆರೆಯ ಜಿಲ್ಲೆಗಳಲ್ಲೂ ಹಗಲೆಲ್ಲ ಚೆನ್ನಾಗಿ ಬಿಸಿಲುಕಾಯುತ್ತ ರಾತ್ರಿಯಲ್ಲಿ ಚಳಿಯಾಗುವುದು. ಜನಾರೋಗ್ಯವು ಚೆನ್ನಾಗಿದೆ. ಮತ್ತು ಸಿಡುಬು, ಪ್ಲೇಗು ಮೊದಲಾದ ಸಾಂಕ್ರಾಮಿಕ ರೋಗಗಳು ಪ್ರಸ್ತುತವಾಗದಿರಲು ಕಠಿನತರವಾದ ವಿಚಾರಣೆಯು ಇಡಲ್ಪಟ್ಟಿರುತ್ತದೆ. ದರ್ಬಾರಾವರಣದ ಅಂಚೆಯ ಮನೆಯಲ್ಲಿ ಕೆಲಸವು ವಿಪರೀತವಾಗಿ ಹೆಚ್ಚುತ್ತಿದೆ. ಈಗ ನಿತ್ಯದಲ್ಲೂ ೩೦,೦೦೦ ದಿಂದ ೪೦,೦೦೦ ವರೆಗೂ ಕಾಗದ ಮೊದಲಾದ ಪದಾರ್ಥಗಳು ವಿಲೆಮಾಡಲ್ಪಡುತ್ತಿವೆ. ಚಕ್ರವರ್ತಿ ದಂಪತಿಗಳು ಕಲಕತ್ತಾಕ್ಕೆ ದಯಮಾಡಿಸುವ ವೇಳೆಯಲ್ಲಿ ಅಂದರೆ ಜನವರಿ ತಾ॥ ೭ ರಲ್ಲಿ ರೈಲು ಪ್ರವೇಶದಲ್ಲಿ ದೀಪೋತ್ಸವವೂ ಮದ್ದಿನ ವಿನೋದವೂ ತಾ॥ ೬ ರಲ್ಲಿ ಊರಿನಲ್ಲೆಲ್ಲಾ ದೀಪೋತ್ಸವವೂ ನಡೆಯುವುವು. ಜನರು ತಂತಮ್ಮ ಮನೆಗಳ ಮೇಲೆ ದೀಪೋತ್ಸವವನ್ನು ಮಾಡುವುದಲ್ಲದೆ, ಸರ್ಕಾರಿಯ ಕಟ್ಟಡಗಳ ಮೇಲೆ ೬೦೦೦೦ ದೀಪಗಳು ಹೊತ್ತಿಸಲ್ಪಡುವುವು. ಪ್ರೇಕ್ಷಕ…

(ಅಪೂರ್ಣ)

ನ್ ದೇವಾಲಯಗಳು ಇವುಗಳೆಲ್ಲವುಗಳು ವಿದ್ಯುಚ್ಛಕ್ತಿಯ ದೀಪಗಳಿಂದಲಂಕರಿಸಲ್ಪಡುವವು. ಈ ಪಟ್ಟಣದಲ್ಲಿ ನಡೆಯುವ ಕ್ರೀಡೋತ್ಸವವೂ, ಮದ್ದಿನ ವಿನೋದವೂ ಅತ್ಯಾಶ್ಚರ್ಯಕರವಾಗಿರುವುವು. ಕಲಕತ್ತಾ, ದಿಲ್ಲಿ ಬರ್ಮಾ ಮೊದಲಾದ ಸ್ಥಳಗಳಲ್ಲಿ ಹೊತ್ತಿಸಲ್ಪಡುವುದಕ್ಕಾಗಿ ೮೦ ಟನ್ ಮದ್ದಿನ ಪದಾರ್ಥಗಳು, ದೀಪಗಳು, ದರ್ಬಾರು ಕಾಲದಲ್ಲಿ ಚಕ್ರವರ್ತಿ ದಂಪತಿಗಳು ಕುಳಿತುಕೊಳ್ಳುವ ರಥದ ಕುದುರೆಗಳ ಸಲಕರಣೆ ಮೊದಲಾದ ಸಾಮಗ್ರಿಗಳು, ಸಿವಿಲ್ ಮತ್ತು ಮಿಲ್ಟರಿ ಅಧಿಕಾರಿಗಳು ದರ್ಬಾರಿನ ಕಾಲದಲ್ಲಿ ಧರಿಸಿಕೊಳ್ಳತಕ್ಕಂಥ ಉಡುಪುಗಳು ಮೊದಲಾದ ಸಾಮಗ್ರಿಗಳನ್ನು ತುಂಬಿಕೊಂಡು ಸೀಮೆಯಿಂದ ಬರುತ್ತಿದ್ದ ದೋಣಿ ಎಂಬ ಹಡಗು ಕೊಲಂಬೋ ಆದ ಮೇಲೆ ಸ್ವಲ್ಪ ದೂರದಲ್ಲಿ ಒಂದು ಬಂಡೆಗೆ ತಗಲಿತೆಂಬ ವರ್ತಮಾನವು ಬಂದಿರುವುದರಿಂದ, ಆ ಹಡಗು ದರ್ಬಾರಿನ ಕಾಲಕ್ಕೆ ಭರತಖಂಡವನ್ನು ತಲುಪುವಂತಿಲ್ಲವೆಂದು ವರ್ತಮಾನವಿದೆ. ದಾಗೆ ಅದು ಬಾರದೆಹೋದಲ್ಲಿ ಮದ್ದಿನ ವಿನೋದವು ನಡೆಯಲು ಅವಕಾಶವಿಲ್ಲದಂತಾಗುವುದು.

ದಿಲ್ಲಿಯ ಪಟ್ಟಣಪ್ರವೇಶವು

ಈ ತಾ॥ ೭ ನೆಯ ಗುರುವಾರ ಬೆಳಿಗ್ಗೆ ೧೦ ಗಂಟೆಯಲ್ಲಿ ಚಕ್ರವರ್ತಿ ದಂಪತಿಗಳು ದಿಲ್ಲಿಯ ಕೋಟೆಯ ಸಮೀಪದಲ್ಲಿರುವ ಸ್ಟೇಷನ್ನಿನಲ್ಲಿ ಬಂದಿಳಿದ ಕೂಡಲೆ, ಅವರುಗಳನ್ನು ಗೌರ್ನರ್ ಜನರಲ್ ದಂಪತಿಗಳು ಇದಿರುಗೊಂಡು ಸುಸ್ವಾಗತವನ್ನು ಬಯಸಿ ಮರ್ಯಾದೆಮಾಡುವರು. ಸೈನಿಕರ ಮರ್ಯಾದೆಯೂ, ವಾದ್ಯವೂ ಆಗುವುವು. ಮತ್ತು ೧೦೧ ಗುಂಡುಗಳು ಹಾರಿಸಲ್ಪಡುವುವು. ಕೋಟೆಯಿಂದ ದಿವಾನರ ಪರೆಗೂ ಮಾರ್ಗದ ಇಕ್ಕೆಲದಲ್ಲೂ ನಿಂತಿರುವ ಸೈನಿಕರು ೩೩ ಗುಂಡುಗಳಾದಮೇಲೊಂದಾವೃತ್ತಿ, ೩೩ ಗುಂಡುಗಳಾದಮೇಲೆ ಮತ್ತೊಂದಾವೃತ್ತಿ, ೩೩ ಗುಂಡುಗಳಾದಮೇಲೆ ಮೂರನೆ ದೊಂದಾವೃತ್ತಿ ಈ ಪ್ರಕಾರವಾಗಿ ಕೋವಿಗಳನ್ನು ಹಾರಿಸುವರು. ಇಂಡಿಯಾ ಕೌನ್ಸಿಲ್ ಮೆಂಬರುಗಳು, ಬೊಂಬಾಯಿ ಮತ್ತು ಮದ್ರಾಸು ಅಧಿಪತ್ಯಗಳ ಗೌರ್ನರುಗಳು ಪಂಜಾಬಿನ ಲೆ॥ ಗೌರ್ನರು, ಕಮ್ಯಾಂಡರ್ ಇನ್ ಚೀಫ್‌ರವರು, ಬಂಗಾಳಾ, ಬರ್ಮಾ, ಪೂರ್ವಬಂಗಾಳಾ ಮತ್ತು ಅಸ್ಸಾಂ ಮತ್ತು ಸಂಯುಕ್ತಪ್ರಾಂತಗಳು ಇವುಗಳ ಲೆ॥ ಗೌರ್ನರುಗಳು, ಬಂಗಾಳಾದ ಚೀಫ್ ಜಸ್ಟಿಯವರು, ಗೌರ್ನರ್ ಜನರಲ್‌ರವರ ಎಕ್ಸಿಕ್ಯೂಟಿವ್ ಕೌನ್ಸಿಲಿನ ಮೆಂಬರುಗಳು, ನೌಕಾಸೇನೆಯ ಕಮ್ಯಾಂಡರ್ ಇನ್ ಚೀಫ್‌ರವರು, ದಕ್ಷಿಣದ ಸೇನೆಯ ಕಮ್ಯಾಂಡಿಂಗ್ ಜನರಲ್ ಆಫೀಸರು, ಜನರಲ್ ಸ್ಟ್ಯಾಫಿನ ಚೀಫ್‌ರವರು, ಉತ್ತರದ ಸೇನೆಯ ಕಮ್ಯಾಂಡಿಂಗ್ ಆಫೀಸರು, ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳ ರೆಸಿಡೆಂಟರು ಮೊದಲಾದ ಇಂಡ್ಯಾಸರ್ಕಾರದ ಅಧಿಕಾರಿಗಳ ಪರಿಚಯವನ್ನು ಗೌರ್ನರ್ ಜನರಲ್‌ರವರು ಚಕ್ರವರ್ತಿದಂಪತಿಗಳಿಗೆ ಮಾಡಿಸುವರು. ಅನಂತರ ಚಕ್ರವರ್ತಿದಂಪತಿಗಳು ಸೇನೆಯವರ ಮರ್ಯಾದೆಯನ್ನು ಕೈಗೊಂಡು ಗೌರ್ನರ್ ಜನರಲ್ ಮತ್ತು ಕಮ್ಯಾಂಡರ್ ಇನ್ ಚೀಫರುಗಳೊಡನೆ ಪಾದಚಾರಿಗಳಾಗಿ ಕೋಟೆಯೊಳಗೆ ಏರ್ಪಡಿಸಿರುವ ಡೇರೆಗೆ ದಯಮಾಡಿಸುವರು. ಅಲ್ಲಿ ಇವರುಗಳ ಆಗಮನವನ್ನು ನಿರೀಕ್ಷಿಸಿಕೊಂಡಿರುವ ದೇಶೀಯ ಸಂಸ್ಥಾನಾಧೀಶ್ವರರುಗಳು ಚಕ್ರವರ್ತಿಯವರಿಗೆ ಪರಿಚಯಮಾಡಿಸಲ್ಪಡುವರು. ಅನಂತರ ಚಕ್ರವರ್ತಿಗಳು ಅಶ್ವಾರೂಢರಾಗಿ ಸವಾರಿ ಮರ್ಯಾದೆಗಳೊಡನೆ ಸೈನಿಕರೂ, ಪೋಲೀಸರೂ, ಸಾಲುಸಾಲಾಗಿ ನಿಂತಿರುವ, ಜನರು ಇಕ್ಕೆಲದಲ್ಲೂ ಕಿಕ್ಕಿರಿದು ನಿಂತಿರುವ ಮತ್ತು ಧ್ವಜಪತಾಕೆಗಳಿಂದಲೂ, ತೋರಣ ಕಮಾನುಗಳಿಂದಲೂ ವಿಶೇಷವಾಗಿ ಶೃಂಗರಿಸಲ್ಪಟ್ಟಿರುವ ಮಾರ್ಗದಲ್ಲಿ ಅಂದರೆ ದಿಲ್ಲಿಯ ಗೇಟಿನಿಂದ ಹೊರಟು ಜುಮ್ಮಾ ಮಸೀದಿಯನ್ನು ಬಳಸಿಕೊಂಡು ಎಸ್ಪ್ಲನೇಡು ರೋಡು, ಚಾಂದನಿಚೌಕ, ಪತ್ತೇಪೂರ್ ಸೇಟ್, ಕ್ವೀನ್ಸ್ ರೋಡು, ಡಫರಿನ್ ಬ್ರಿಡ್ಜ್, ಮೋರಿಗೇಟ್, ಚೌಬುರ್ಜ್ ರೋಡು, ರಾಜಾಪುರ ರೋಡು, ಬೇಲಾ ರೋಡು ಈ ಮಾರ್ಗಗಳಲ್ಲಿ ಬಂದು ದಿವಾನರನ್ನು ಸೇರುವರು. ಉತ್ಸವದಲ್ಲಿ ಚಕ್ರವರ್ತಿಗಳ ಮುಂಗಡೆ, ಮದ್ಯಪ್ರಾಂತಗಳ ಚೀಫ್ ಕಮೀಷನರು, ಪಂಜಾಬಿನ ಲೆ॥ ಗೌರ್ನರು ಮದರಾಸು ಮತ್ತು ಬೊಂಬಾಯಿಗಳ ಗೌರ್ನರುಗಳು ಅಶ್ವಾರೂಢರಾಗಿ ಹೋಗುವರು. ಹಿಂದುಗಡೆ ಅಶ್ವಾರೂಢರಾದ ಗೌರ್ನರ್ ಜನರಲ್ ಲಾರ್ಡ್ ಹಾರ್ಡಿಂಜ್‌ರವರೂ, ಸ್ಟೇಟ್ ಸೆಕ್ರಟರಿ ಲಾರ್ಡ್ ಕ್ರೂಯವರೂ, ಅವರ ಹಿಂದುಗಡೆ ಚಕ್ರವರ್ತಿನಿಯವರು ರಥಾರೂಢರಾಗಿಯೂ, ಈ ರಥದ ಎರಡು ಪಕ್ಕದಲ್ಲೂ ಅಂಗರಕ್ಷಕರ ಕಮಾಂಡೆಂಟರು ಮತ್ತು ಇಂಪೀರಿಯಲ್ ಸೇನೆಯ ಅಸಿಸ್ಟೆಂಟ್ ಕಮಾಂಡೆಂಟರೂ, ಈ ರಥದ ಹಿಂದೆ ಸೇನೆಯೂ, ಇವರ ಹಿಂದೆ ೬ ನೆಯ ರಥದಲ್ಲಿ ಗೌರ್ನರ್ ಜನರಲ್‌ರವರ ಪತ್ನಿಯವರು, ಇವರ ಹಿಂದುಗಡೆ ೩೮ ಮತ್ತು ೫ ನೆಯ ರಥಗಳಲ್ಲಿ ಚಕ್ರವರ್ತಿದಂಪತಿಗಳ ಜೊತೆ ಬಂದಿರುವವರನ್ನು, ಇವರ ಹಿಂದುಗಡೆ ಸೈನ್ಯವೂ ಇವರ ಹಿಂದುಗಡೆ ಬೆಂಗಾವಲಿನ ಸವಾರರು ಮತ್ತು ಪೊಲಿಟಿಕಲ್ ಆಫೀಸರುಗಳು ಇವರುಗಳೊಡನೆ ಮೈಸೂರು ಮಹಾರಾಜರವರು, ಹೈದರಾಬಾದಿನ ನೈಜಾಂರವರು, ಬರೋಡಾದ ಗಾಯಕವಾಡರು, ಮೈಸೂರಿನ ಮಹಾರಾಜರವರು, ಕಾಶ್ಮೀರ ಮಹಾರಾಜರು, ಗ್ವಾಲಿಯರ್, ಇಂದೂರು ಮತ್ತು ರಜಪುಟಾನ, ಮಧ್ಯಹಿಂದೂಸ್ಥಾನ, ಮದ್ರಾಸು ಮತ್ತು ಬೊಂಬಾಯಿ ಅಧಿಪತ್ಯಗಳ ರಾಜರುಗಳೂ ಇವರ ಹಿಂದುಗಡೆ ಸೈನಿಕರೂ ಈ ಪ್ರಕಾರದ ಮೆರವಣಿಗೆಯು ದಿವಾನ್ ಈ ಉತ್ಸವವು ದಿಲ್ಲಿಯ ಬಳಿ ಬರುತಲೆ ಗೌರ್ನರು ಮೊದಲಾದವರು ಬ್ರಿಟಿಷ್ ಇಂಡಿಯಾ ಪ್ರಾಂತಗಳೊಡನೆ ತಂತಮ್ಮ ಆಸನಗಳಲ್ಲಿ ಕುಳಿತುಕೊಂಡಿದ್ದು ಚಕ್ರವರ್ತಿದಂಪತಿಗಳ ಸವಾರಿಯು ದಿಲ್ಲಿಯ ಸಮೀಪಕ್ಕೆ ದಯಮಾಡಿಸಿದಾಗ ಎಲ್ಲರೊಡನೆ ಎದ್ದು ನಿಂತುಕೊಳ್ಳುವರು. ಚಕ್ರವರ್ತಿನಿಯವರ ರಥವು ಚಕ್ರವರ್ತಿಯವರ ಸಮೀಪಕ್ಕೆ ಬಂದು ನಿಂತುಕೊಳ್ಳುವುದು. ಆಗ ದಿಲ್ಲಿಯ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರು ಚಕ್ರವರ್ತಿದಂಪತಿಗಳಿಗೆ ಸ್ವಾಗತಪತ್ರವನ್ನು ಒಪ್ಪಿಸಿರುವ ವಿಜ್ಞಾಪನಪತ್ರವನ್ನೋದಿ ಒಪ್ಪಿಸುವರು. ಚಕ್ರವರ್ತಿಯವರು ಎಂದಿನಂತೆ ಪ್ರತ್ಯುತ್ತರವಾಗಿ ಅದನ್ನು ಅಂಗೀಕರಿಸಿ ತಮ್ಮ ಬಿಡಾರಕ್ಕೆ ಚಿತ್ತೈಸುವರು. ಅನಂತರ ದೇಶೀಯ ಸಂಸ್ಥಾನಾಧೀಶ್ವರರುಗಳು ಉತ್ಸವದೊಡನೆ ತಂತಮ್ಮ ಬಿಡಾರಕ್ಕೆ ತೆರಳುವರು.

ದರ್ಬಾರು ನಡೆಯುವ ಕ್ರಮವು

ಈ ತಾ॥ ೧೨ನೆಯ ಮಂಗಳವಾರ ಬೆಳಿಗ್ಗೆ ೧೧ ಗಂಟೆಯಲ್ಲಿ ಚಕ್ರವರ್ತಿದಂಪತಿಗಳು ನಾಲ್ಕು ಕುದುರೆಗಳ ಪಲ್ಲಕಿಯ ರಥಾರೂಢರಾಗಿ ಸಕಲ ಸೇನೆಯೊಡನೆ ಅಲಂಕೃತವಾದ ಮಾರ್ಗದಲ್ಲಿ ಉತ್ಸವಪೂರಿತ ದರ್ಬಾರುಮಂಟಪದ ಒಳಗೆ ದಯಮಾಡಿಸುತಲೆ, ಸಮಸ್ತರು ವಾದ್ಯಗಾರರು ಜಯಶಬ್ದವನ್ನು ದಂಪತಿಗಳ ಶ್ರೇಯಸ್ಸಿನರ್ಥವಾಗಿ ಕೀರ್ತನೆಯನ್ನು ಮಾಡಲಾರಂಭಿಸಿ, ಚಕ್ರವರ್ತಿದಂಪತಿಗಳು ಮಂಟಪದೊಳಗೆ ಪ್ರವೇಶಿಸಿ ಆಸನಾಸೀನರಾದಮೇಲೆ ನಿಲ್ಲಿಸುವರು. ಆಗ ಸೈನಿಕರು ತಂತಮ್ಮ ಸ್ಥಾನಗಳಲ್ಲಿ ಕ್ರಮವರಿತು ನಿಂತುಕೊಳ್ಳುವರು. ದರ್ಬಾರಿನ ಕಾರ್ಯನಿರ್ವಾಹಕನು ದರ್ಬಾರನ್ನು ಪ್ರಾರಂಭಿಸಲು ಚಕ್ರವರ್ತಿಯವರಪ್ಪಣೆಯನ್ನು ಪಡೆದು ಕೊಂಡಮೇಲೆ ದರ್ಬಾರು ಆರಂಭವಾದುದು ತಮಟೆಗಳ ಮತ್ತು ತುತೂರಿಗಳ ಧ್ವನಿಗಳಿಂದ ಸೂಚಿಸಲ್ಪಡುವುದು. ತರುವಾಯ ಸರ್ಕಾರಿಯ ದೊಡ್ಡ ದೊಡ್ಡ ಅಧಿಕಾರಿಗಳೂ, ದೇಶೀಯ ಸಂಸ್ಥಾನಾಧೀಶ್ವರರುಗಳೂ ಮುಂದೆ ಬಂದು ಚಕ್ರವರ್ತಿದಂಪತಿಗಳಿಗೆ ಕಾಣಿಕೆ ಸಮರ್ಪಿಸಿ ಮಾಡುತ್ತಿರುವಾಗ್ಗೆ ಬ್ರಾಂಡಿನವರು ಉತ್ತಮವಾದ ರಾಗಗಳನ್ನು ನುಡಿಸುತ್ತಿರುವರು. ಇದಾದಮೇಲೆ ಸೈನಿಕರು ತಂತಮ್ಮ ಆಯುಧಗಳನ್ನು ಬಗ್ಗಿಸಿ ಹಿಡಿದುಕೊಳ್ಳುವಂತೆ ಅಪ್ಪಣೆಯಾಗುವುದು. ಚಕ್ರವರ್ತಿದಂಪತಿಗಳು ಮೊದಲು ಮಂಡಿಸಿದ್ದ ಸ್ಥಳವನ್ನು ಬಿಟ್ಟು ಉತ್ಸವದೊಡನೆ ಸಿಂಹಾಸನದ ಬಳಿಗೆ ಚಿತ್ತೈಸಿ ಸಿಂಹಾಸನಗಳ ಆರೋಹಣವನ್ನು ಮಾಡುವರು. ಅವರಿಗೆ ವಾದ್ಯಗಳು ಮೊಳಗುತ್ತಿರುವುವು. ರಾಜದೂತರು ಮುಂಚಿನ ಪಂಕ್ತಿಗಡೆ ತುತ್ತೂರಿಯನ್ನೂದುವವರು ಮತ್ತು ತಮಟೆಗಳನ್ನು ಬಡಿಯುವವರ ಕೂಡ ಧ್ವನಿಯನ್ನು ಮಾಡಿ ಮುಂದಿನ ಭಾಗಕ್ಕೆ ಬಂದು ಅಲ್ಲಿ ಮತ್ತೊಂದುಮೇಳ ತುತ್ತೂರಿ ಮತ್ತು ತಮಟೆಗಳ ಧ್ವನಿಯನ್ನು ಮಾಡಿ, ಅಲ್ಲಿಂದ ಮುಂದಲೆಡೆಗೆ ಬಂದು ಅಲ್ಲಿ ಮಗದೊಂದುಮೇಳ ಧ್ವನಿಯನ್ನು ಮಾಡಿ, ಅನಂತರ ಚಕ್ರವರ್ತಿದಂಪತಿಗಳು ಸಿಂಹಾಸನಾರೋಹಣಮಾಡಿದ ಪ್ರಕಟನಪತ್ರಿಕೆಯನ್ನೋದುವನು. ಓದುವುದು ಮುಗಿದಮೇಲೆ ತುತ್ತೂರಿಗಳ ಮತ್ತು ತಮಟೆಗಳ ಧ್ವನಿಯು ದಿಗ್ದಿಗಂತವನ್ನು ವ್ಯಾಪಿಸುವಂತೆ ಮಾಡಲ್ಪಡುವುದು. ಕಡೆಯಲ್ಲಿ ವಾದ್ಯಗಾರರೆಲ್ಲರೂ ಮಂಗಳವನ್ನು ನುಡಿಸುವರು. ಸೈನಿಕರು, ಜಯಘೋಷವನ್ನು ಮಾಡುವರು ಮತ್ತು ೧೦೧ ಗುಂಡುಗಳು ಹಾರಿಸಲ್ಪಡುವುವಲ್ಲದೆ, ಸೈನಿಕರು ಕೋವಿಗಳನ್ನು ಹಾರಿಸುವರು. ಗೌರ್ನರ್ ಜನರಲ್‌ರವರು ಚಕ್ರವರ್ತಿಯವರ ಅಪ್ಪಣೆಯನ್ನು ಪಡೆದು ಸಭಾವಿಸರ್ಜನೆಗಾಗಿ ಸೂಚನೆಯನ್ನು ಕೊಡಲು ತುತ್ತೂರಿಯವರೂ, ತಮಟೆಯವರೂ ಧ್ವನಿಯನ್ನು ಮಾಡುವರು. ಮತ್ತು ರಾಜದೂತರು ತಮ್ಮ ಬಿಟ್ಟಿಗೆಯನ್ನು ತೆಗೆದು ನೆಲದಿಂದ ಪಥಕಾರ ಮತ್ತು ನಿಕ್ಷೇಪರೊಡನೆ ಚಕ್ರವರ್ತಿಯವರ ಜಯದಿಂದ ಪೂರ್ವದಂತೆ ಜಯಘೋಷವನ್ನು ಮಾಡಿದನಂತರ ಚಕ್ರವರ್ತಿನಿಯವರ ಜಯದಿಂದ ಮೂರಾವೃತ್ತಿ ಜಯಘೋಷವನ್ನು ಮಾಡುವರು. ತರುವಾಯ ಚಕ್ರವರ್ತಿದಂಪತಿಗಳು ಮುಖಮಂಟಪದ ಸಕಲ ಮರ್ಯಾದೆಯೊಡನೆ ಉತ್ಸವದೊಡನೆ ತಮ್ಮ ಬಿಡಾರಕ್ಕೆ ಸೇರುವರು.

ದಿಲ್ಲಿಗೆ ಬಂದಿರತಕ್ಕ ಸಂಸ್ಥಾನಾಧೀಶ್ವರರುಗಳು

ಮೈಸೂರಿನ ಸಂಸ್ಥಾನಾಧೀಶ್ವರರು, ಬರೋಡದ ರಾಜರು, ಕೊಚ್ಚಿನ ಮಹಾರಾಜರು, ಕೋಟಾ ಮಹಾರಾಜರು, ನಾಭಾರಾಜರು, ಸಿರಗುಂಜದ ಮಹಾರಾಜರು, ಸಿಂಧಿಯಾ ಮಹಾರಾಜರು, ಬಿಕಾನೇರ ಮಹಾರಾಜರು, ಪಟಿಯಾಲಾ ಮಹಾರಾಜರು, ಜೋಧಪುರದ ಮಹಾರಾಜರು, ರತ್ನಾಮ್ ಮಹಾರಾಜರು, ಇಂದೂರು ಸಂಸ್ಥಾನಾಧೀಶ್ವರರುಗಳು, ಜೈಸಲ್ಮೀರದ ಮಹಾರಾಜರು, ಭಾವನಗರದ ಮಹಾರಾಜರು, ಕೊಲ್ಹಾಪುರದ ಮಹಾರಾಜರು, ಜಾಮನಗರದ ಮಹಾರಾಜರು, ಕಾಪುರ್ತಲದ ಮಹಾರಾಜರು, ರೇವಾ ಮಹಾರಾಜರು, ಇದರೂರಿನ ಹೋಳ್ಕರ್ ಮಹಾರಾಜರು, ಬೋರ್ಚಂದದ ಮಹಾರಾಜರು, ವಿಜಯಪುರದ ರಾಜರು, ಭಾವನಗರದ ನವಾಬರು, ಹಿಲ್‌ತಿಪ್ರಾದ ಮಹಾರಾಜರು, ತಿಹೇರಿಯ ಮಹಾರಾಜರು, ಪಾಲನಪುರದ ನವಾಬರು, ಭೋಪಾಲಿನ ಬೇಗಮ್‌ರವರು, ಕಾಶ್ಮೀರ ಮಹಾರಾಜರು, ಟ್ರಾವಂಕೂರಿನ ಮಹಾರಾಜರು, ಮಯೂರಭಂಜದ ಮಹಾರಾಜರು, ಮಂಡಿಯ ರಾಜರು, ಸಿಂಧ್ಯಾ ಮಹಾರಾಜರು, ಕಾಶಿಯ ಮಹಾರಾಜರು, ರಾಮಪುರದ ನವಾಬರು, ಜೇಪೂರದ ಮಹಾರಾಜರು, ಜಿಂದಿನ ಮಹಾರಾಜರು, ಉದಯಪುರದ ಮಹಾರಾಜರು, ಸಿರೋಹಿ ಮಹಾರಾಜರು, ಆಳ್ವಾರದ ಮಹಾರಾಜರು ಮತ್ತು ಭರತಪುರದ ಮಹಾರಾಜರು ತಮ್ಮ ಪರಿವಾರದೊಡನೆ ದಿಲ್ಲಿಯ ಪಟ್ಟಣಕ್ಕೆ ಬಂದಿರುತ್ತಾರೆ. ಇವರಲ್ಲಿ ದೊಡ್ಡ ಸಂಸ್ಥಾನಗಳ ಮಹಾರಾಜರುಗಳು ಹೆಚ್ಚು ಗಟ್ಟಲೆಯ ಬಂದಿಯಲ್ಲಿ ತಂತಮ್ಮ ದೇಶದ ಅತಿ ಘಿಗಳನ್ನು ಕರೆದುಕೊಂಡು ಬಂದಿರುವರು.

ಕಳೆದ ತಾ॥ ೨೩ ರಲ್ಲಿ ಶ್ರೀಮಂತ ಸಂಪತರಾವ್ ಗಾಯಕವಾಡರವರು, ದಿವಾನ್ ಮಿ॥ ಸೀತಲವಾಡ್‌ರವರು, ಡಾ॥ ನ್ಯಾಯರವರು, ಕ್ಯಾಪ್ಟನ್ ನಿಂಬಾಲ್ಕರ್‌ರವರು, ಮಹಾರಾಣಿ ರವರು, ರಾಜಕುಮಾರಿ ಇಂದಿರಾರಾಜಕುಮಾರಿಯವರು, ಸೇನಾಸಾಹೇಬ ಮತ್ತು ಪರಿವಾರದವರೊಡನೆ ಬರೋಡಾ ಮಹಾರಾಜರವರು ಹೆಚ್ಚು ಗಟ್ಟಲೆಯ ಬಂದಿಯಲ್ಲಿ ದಯಮಾಡಿಸಿದರು. ಇವರ ಜಿತಾರದ ಮಹಾಬಾರಾರಿಗೆ ಕನೇಲ್ ವಿಲ್ ಎ ಜಿ ಯವರು ನಿಯಮಿಸಲ್ಪಟ್ಟಿರುತ್ತಾರೆ. ತಾ॥ ೨೩ರಲ್ಲಿ ಪರಿವಾರರು, ವಿಶೇಷರವರು ನೆತ್ತಿ ಬರುವವರು ಮೊದಲಾದವರೊಡನೆ ಹೈದರಾಬಾದಿನ ನೈಜಾಂರವರು ಹೆಚ್ಚು ಗಟ್ಟಲೆಯ ಬಂದಿಯಲ್ಲಿ ಬಂದರು. ತಾ॥೨೫ರಲ್ಲಿ ದಿವಾನ್ ಮಿ॥ ಎ ಆರ್ ಬಾನರ್ಜಿಯವರು, ಚೀಫ್ ಇಂಜನೀರು, ಚೀಫ್ ಮೆಡಿಕಲ್ ಆಫೀಸರು, ಎಕ್ಸೈಜ್ ಕಮಿಷನರ್ ಮತ್ತು ಸೂಪರಿಂಟೆಂಡೆಂಟರು ಮೊದಲಾದವರೊಡನೆ ಮೈಸೂರು ಸಂಸ್ಥಾನದ ಮಹಾರಾಜರು ಹೆಚ್ಚು ಗಟ್ಟಲೆಯ ಬಂದಿಯಲ್ಲಿ ಬಂದರು.

ಚಕ್ರವರ್ತಿ ದಂಪತಿಗಳು ಭರತಖಂಡಕ್ಕೆ ಪ್ರಯಾಣಮಾಡಿದ ಹಡಗು

ಚಕ್ರವರ್ತಿ ದಂಪತಿಗಳು ಪ್ರಯಾಣಮಾಡುತ್ತಿರುವ ಮೆಡೀನಾ ಹಡಗು ಕಳೆದ ನವಂಬರ್ ತಾ॥ ೧೧ ರ ಬೆಳಿಗ್ಗೆ ಪೋರ್ಟ್ ಸೈಯಿದ್ ಪಟ್ಟಣವನ್ನು ಸುರಕ್ಷಿತವಾಗಿ ಸೇರಿತು. ಇಜಿಪ್ಟ್ ದೇಶದ ರಾಜಪ್ರತಿನಿಧಿಯವರು ಬಂದು ಇದಿರ್ಗೊಂಡರು. ವಿದಾಯದ ಸ್ವಲ್ಪ ನ ರೆಸಿಡೆಂಟರವರು ಮೆಡೀನಾ ಹಡಗಿಗೆ ಹೋಗಿ ಚಕ್ರವರ್ತಿ ದಂಪತಿಗಳ ಸ್ವಾಗತವಾಕ್ಯಗಳನ್ನು ಮಾಡಿಕೊಂಡು ಬಂದರು. ಮಧ್ಯಾಹ್ನದಲ್ಲಿ ಚಕ್ರವರ್ತಿ ದಂಪತಿಗಳು ಹಡಗನ್ನು ಇಳಿದು ದಡದ ಮೇಲೆ ಮನೋಹರವಾಗಿ ಶೃಂಗರಿಸಿದ್ದ ಪಟ್ಟಣವನ್ನು ನೋಡಿ ದಯಮಾಡಿಸಿ ಅಲ್ಲಿ ಏರ್ಪಡಿಸಿದ್ದ ವಿದಾಯವಾದ ಔತಣವು ಅನಂತರ ಪಿಟ್ಟಣದ ರಸ್ತೆಯಲ್ಲಿ ಸವಾರಿ ಹೊರಟು ಜನಸ್ತೋಮದ ಸ್ವಾಗತದೊಡನೆ ಧ್ವಜಪತಾಕೆಗಳಿಂದಲೂ, ತೋರಣ ಕಮಾನುಗಳಿಂದಲೂ, ಶಾಸನಾಕ್ಷರಗಳಿಂದಲೂ ಅಲಂಕೃತವಾಗಿದ್ದ ಮಾರ್ಗಗಳಲ್ಲಿ ಉತ್ಸವಪೂರ್ವಕವಾಗಿ ಸೈಂಟ್ ಎಂಬ ಮಂದಿರಕ್ಕೆ ದಯಮಾಡಿಸಿದರು. ಈ ಮಂದಿರದ ಸಮೀಪದಲ್ಲಿ ನಿರ್ಮಿಸಿದ್ದ ಕಮಾನಿನ ಬಳಿ ಗುಜರಾತಿ ಪಾಠಶಾಲೆಯ ವಿದ್ಯಾರ್ಥಿಗಳು ಚಕ್ರವರ್ತಿ ದಂಪತಿಗಳ ಶ್ರೇಯಸ್ಸಿನರ್ಥವಾಗಿ ಪದ್ಯವನ್ನು ಗುಜರಾತಿಯಲ್ಲಿ ಹಾಡಿದರು. ಜನರು ದಾರಿಯುದ್ದಕ್ಕೂ ಕಿಕ್ಕಿರಿದು ನಿಂತು ಪ್ರಭುದಂಪತಿಗಳ ದರ್ಶನವನ್ನು ಮಾಡಿ ಆನಂದಭರಿತರಾದರು. ಚಕ್ರವರ್ತಿಯವರು ರೆಸಿಡೆಂಟ್ ಮಂದಿರದಲ್ಲಿ ಪುರಪ್ರಮುಖರು ಒಪ್ಪಿಸಿದ ವಿಜ್ಞಾಪನ ಪತ್ರಿಕೆಯನ್ನು ಏಕಾಗ್ರಚಿತ್ತದಿಂದ ಸ್ವೀಕರಿಸಿ, ತಕ್ಕ ಉತ್ತರವನ್ನು ದಯಪಾಲಿಸಿದಮೇಲೆ ರೆಸಿಡೆಂಟನ್ನಿಗೆ ದಯಮಾಡಿಸಿ ಅಲ್ಲಿ ಔತಣವನ್ನು ಮಾಡಿ ಸಾಯಂಕಾಲ ೪ ಗಂಟೆಯಲ್ಲಿ ಮೆಡೀನಾ ಹಡಗಿಗೆ ದಯಮಾಡಿಸಿದರು. ಸಾಯಂಕಾಲ ೬ ಗಂಟೆಗೆ ಮೆಡೀನಾ ಹಡಗು ಭರತಖಂಡವನ್ನು ಕುರಿತು ಹೊರಟಿತು.

ಈ ಚಕ್ರವರ್ತಿದಂಪತಿಗಳು ಸುಕ್ಷೇಮದಿಂದ ಬೊಂಬಾಯಿಯ ರಾಜಧಾನಿಗೆ ವಿಜಯಮಾಡಿಯವರೆಂದು ಬೊಂಬಾಯಿ ಸರ್ಕಾರದವರೂ, ಪ್ರಜೆಗಳೂ ಅತ್ಯಂತ ಭಯಭಕ್ತಿಯಿಂದ ದೇಶ ಕೊಳ್ಳುವುದನ್ನು ಇವರ ಬರುವಿಕೆಯನ್ನು ನಿರೀಕ್ಷಿಸಿಕೊಳ್ಳುತ್ತಿರುವ ಮಿ॥ ಬೊಂಬಾಯಿ ಗೌರ್ನರ್ ಸರ್ ಜಾರ್ಜ್ ಕ್ಲಾರ್ಕ್‌ರವರು ಹೆಣ್ಣಿಗೆ ಆಡಿಯನ್ನು ಕೊಟ್ಟಿದ್ದಕ್ಕೆ ಚಕ್ರವರ್ತಿಯವರು ಏಡನ್ನಿನಿಂದ ಶ್ರೀಘ್ರದುಲ್ಲಾಸವಾಗಿ ತಮ್ಮ ಸ್ವಾಗತವನ್ನು ಮಾಡುವುದಕ್ಕಾಗಿ ಸಿದ್ಧರಾಗಿರುವ ತಮಗೆ ನಿಮ್ಮ ಮತ್ತು ಬೊಂಬಾಯಿ ರಾಜಧಾನಿಯ ನಿವಾಸಿಗಳ ವಂದನೆ ಆಪ್ತಮಿತ್ರತ್ವದ "ಸ್ಟೇಟ್" ಎಂದು ತಂತಿಯ ಮೂಲಕ ಉತ್ತರವನ್ನು ದಯಪಾಲಿಸಿದರು. ಮತ್ತು

೬ ನೇಯ ಎಡ್ವರ್ಡರ ಭರತಖಂಡದ ಸಾರ್ವಜನಿಕ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷರು, “ ಕಲಕತ್ತಾದ ಸಾರ್ವಜನಿಕ ಮಹಾಸಭೆಯ ಸ್ವಾಗತಸಂಘದವರು ಭರತಖಂಡಕ್ಕೆ ಶ್ರೀ ರಾಜಚಕ್ರವರ್ತಿದಂಪತಿಗಳ ಸ್ವಾಗತವನ್ನು ಅತಿ ವಿನಯತೆಯಿಂದಮಾಡಿ, ಚಕ್ರವರ್ತಿದಂಪತಿಗಳಲ್ಲಿಯೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯೂ ನಮಗಿರತಕ್ಕ ಅಚಂಚಲವಾದ ರಾಜಭಕ್ತಿ ವಿಶ್ವಾಸವನ್ನು ಪ್ರಕಟಿಸುವುದಲ್ಲದೆ, ಭರತಖಂಡ ಆಗಮನದಿಂದ ಚಕ್ರವರ್ತಿದಂಪತಿಗಳ ಮನಸ್ಸಿಗಾನಂದವೂ, ಭಾರತ ಪ್ರಜೆಗಳಿಗೆ ಶಾಶ್ವತವಾದ ಕಲ್ಯಾಣವೂ ಉಂಟಾಗುವುದೆಂದು ಪ್ರಾರ್ಥಿಸುತ್ತೇವೆ” ಎಂದು ವಿದ್ಯುತ್ ತಂತಿಯ ಮೂಲಕ ಬಿನ್ನೈಸಿಕೊಂಡಿರಲು “ಭರತಖಂಡದ ಸಾರ್ವಜನಿಕ ಮಹಾಸಭೆಯ ಸ್ವಾಗತ ಸಂಘದವರು ತಮಗೆ ಚಕ್ರವರ್ತಿದಂಪತಿಗಳಲ್ಲಿಯೂ, ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಯೂ ಇರುವ ರಾಜಭಕ್ತಿಯನ್ನು ತಂತಿಯಮೂಲಕ ತಿಳಿಸಿರುವುದಕ್ಕಾಗಿ ಅವರುಗಳನ್ನು ಚಕ್ರವರ್ತಿದಂಪತಿಗಳು ವಂದಿಸುತ್ತಾರಲ್ಲದೆ, ತಮ್ಮ ಆಗಮನದಿಂದ ಭಾರತ ಪ್ರಜೆಗಳಿಗೆ ನಿರಂತರವಾದ ಶ್ರೇಯಸ್ಸು ಉಂಟಾಗುವುದೆಂದು ಮನಃಪೂರ್ವಕವಾಗಿ ನಂಬುತ್ತಾರೆ.” ಎಂಬುದಾಗಿ ಪ್ರೈವೇಟ್ ಸೆಕ್ರೆಟರಿಯವರು ಸ್ವಾಗತ ಸಂಘಾಧ್ಯಕ್ಷರಿಗೆ ಉತ್ತರವನ್ನು ಕೊಟ್ಟಿರುವರು.

ಚಕ್ರವರ್ತಿದಂಪತಿಗಳ ಪ್ರಯಾಣಗಮನವು.

ಶ್ರೀ ರಾಜಚಕ್ರವರ್ತಿಯವರಾದ ೫ ನೇಯ ಜಾರ್ಜ್ ಪ್ರಭುಗಳೂ, ಚಕ್ರವರ್ತಿನಿಯವರೂ ಭಾರತ ರಾಜಧಾನಿಯ ಕಳೆದ ನವೆಂಬರ್ ತಾ॥ ೧೧ ರಲ್ಲಿ ಪೋರ್ಟ್ಸ್ಮತ್ ಎಂಬ ರೇವಿನಿಂದ ನಾನಾ ರಾಜಬಂಧುಗಳಿಂದಲೂ, ಮಂತ್ರಿಗಳಿಂದಲೂ ಕೂಡಿಕೊಂಡು ಸಕಲ ಪರಿವಾರದೊಡನೆ ಲಂಡನ್ ನಗರದಿಂದ ಪೋರ್ಟ್ಸ್ಮತ್ತಿನವರೆಗೆ ರೈಲು ಬಂಡಿಯಲ್ಲಿ ಬಂದು ಅಲ್ಲಿಂದ ಮೆಡೀನಾ ಎಂಬ ಹಡಗಿನಲ್ಲಿ ಪ್ರಯಾಣಮಾಡಿ, ಮಧ್ಯಮಾರ್ಗದಲ್ಲಿ ಜಿಬ್ರಾಲ್ಟರ್, ಪೋರ್ಟ್‌ಸೈದ್, ಮತ್ತು ಏಡೆನ್ ಈ ರೇವುಪಟ್ಟಣಗಳಲ್ಲಿ ಜನರು ಮಾಡಿದ ಸತ್ಕಾರವನ್ನು ಸ್ವೀಕರಿಸಿ ಈ ತಾ॥ ೨ ನೇಯ ಶನಿವಾರ ಬೆಳಿಗ್ಗೆ ೧೦ ಗಂಟೆಗೆ ಬೊಂಬಾಯಿಯನ್ನು ಸುರಕ್ಷಿತವಾಗಿ ತಲುಪಿದರು. ಇವರ ಆಗಮನಸೂಚಕವಾದ ೧೦೧ ಗುಂಡುಗಳು ಹಡಗಿನಿಂದ ಹಾರಿಸಲ್ಪಟ್ಟುವು. ಗೌರ್ನರ್ ಜನರಲ್‌ರವರು ತಮ್ಮ ಪ್ರೈವೇಟ್ ಸೆಕ್ರೆಟರಿ, ಎಡಿಕಾಂಗ್ ಮೊದಲಾದ ಅಧಿಕಾರಿಗಳೊಡನೆ ಅಪೋಲೋ ಬಂದರದಿಂದ ನಾವೆಯಲ್ಲಿ ಕುಳಿತು ಮೆಡೀನಾ ಹಡಗಿಗೆ ಹೋದರು. ಅನಂತರ ಕಮ್ಯಾಂಡರ್ ಇನ್ ಚೀಫರು ತಮ್ಮ ಪರಿವಾರದೊಡನೆಯೂ, ಬೊಂಬಾಯಿ ಗೌರ್ನರು ತಮ್ಮ ಸೆಕ್ರೆಟರಿ, ಎಡಿಕಾಂಗರು, ಚೀಫ್ ಜಸ್ಟಿಸ್‌ರವರು, ಲಾರ್ಡ್ ಬಿಷಪ್ಪರು ಮೊದಲಾದವರೊಡನೆಯೂ ಮೆಡೀನಾ ಹಡಗಿಗೆ ಹೋಗಿ ಗೌರ್ನರ್ ಜನರಲ್‌ರವರಿಂದ ಚಕ್ರವರ್ತಿದಂಪತಿಗಳಿಗೆ ಪರಿಚಯಮಾಡಿಸಲ್ಪಟ್ಟು ಕುಶಲಪ್ರಶ್ನೆಯಾದನಂತರ ಹಿಂತಿರುಗಿದರು. ಗೌರ್ನರ್ ಜನರಲ್‌ರವರು ಚಕ್ರವರ್ತಿದಂಪತಿಗಳ ಕೂಡ ಭೋಜನವನ್ನು ಮಾಡಿ ಅಪೋಲೋಬಂದರಿಗೆ ಹಿಂತಿರುಗಿದರು. ಚಕ್ರವರ್ತಿದಂಪತಿಗಳು ಸಾಯಂಕಾಲ ೨ ಗಂಟೆಗೆ ತಮ್ಮ ಪರಿವಾರದೊಡನೆ ಮೆಡೀನಾ ಹಡಗನ್ನು ಬಿಟ್ಟು ನಾವೆಯ ಮೂಲಕ ಅಪೋಲೋ ಬಂದರಿಗೆ ದಯಮಾಡಿಸಿದರು. ಆಗ ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಚಕ್ರವರ್ತಿ ದಂಪತಿಗಳನ್ನು ಗೌರ್ನರ್ ಜನರಲ್‌ರವರು, ಬೊಂಬಾಯಿ ಗೌರ್ನರ್‌ದಂಪತಿಗಳು ಮತ್ತು ಕಮ್ಯಾಂಡರ್ ಇನ್ ಚೀಫರು ಇದಿರ್ಗೊಂಡು ಬಂದರ ಮೇಲ್ಭಾಗದ ಅತ್ಯಂತ ಸುಂದರವಾಗಿ ಶೃಂಗರಿಸಲ್ಪಟ್ಟ ಮಂಟಪಕ್ಕೆ ಕರೆದುಕೊಂಡು ಹೋದರು. ಅಲ್ಲಿ ಬೊಂಬಾಯಿ ಮ್ಯುನಿಸಿಪಾಲಿಟಿಯ ಪ್ರೆಸಿಡೆಂಟರಾದ ಸರ್. ಪಿ. ಎಂ. ಮೆಹತಾರವರು ಓದಿ ಬೆಳ್ಳಿ ಬಂಗಾರದ ಕರಂಡಕದಲ್ಲಿಟ್ಟು ಅರ್ಪಿಸಿದ ಸ್ವಾಗತಪತ್ರಕ್ಕೆ ಚಕ್ರವರ್ತಿಗಳು ಉತ್ತರ ಕೊಟ್ಟರು. ಅನಂತರ ಮುನಿಸಿಪಲ್ ಮೆಂಬರುಗಳನ್ನೂ ಚಕ್ರವರ್ತಿದಂಪತಿಗಳಿಗೆ ಪರಿಚಯಮಾಡಿಕೊಡಲ್ಪಟ್ಟಿತು. ಚಕ್ರವರ್ತಿ ದಂಪತಿಗಳು ಅಲ್ಲಿಂದ ಹೊರಟು ರಾಜಮಾರ್ಗವಾಗಿ ಬೊಂಬಾಯಿ ಪಟ್ಟಣದೊಳಗೆ ಅಪೋಲೋ ಬಂದರ್ ರೋಡು, ಎಸ್ಪ್ಲನೇಡ್ ರೋಡು ಮೊದಲಾದ ಮಾರ್ಗಗಳಲ್ಲಿ ಸಂಚರಿಸಿಕೊಂಡು ಅಪೋಲೋಬಂದರಿಗೆ ಹಿಂತಿರುಗಿ ಬಂದು ಅಲ್ಲಿಂದ ಮೆಡೀನಾ ಹಡಗಿಗೆ ದಯಮಾಡಿಸಿದರು. ಆಗ ೧೦೧ ಗುಂಡುಗಳು ಹಾರಿಸಲ್ಪಟ್ಟುವು. ಜನರು ಮಂದೆಮಂದೆಯಾಗಿ ಬೆಳಿಗ್ಗೆ ೭ ಗಂಟೆಯಿಂದಲೂ ಅಪೋಲೋಬಂದರ ಬಳಿಗೆ ಬಂದು ಸೇರಿಕೊಂಡು, ಜನರ ಸಮೂಹವನ್ನೂ, ಮನೆಮನೆಗಳನ್ನೂ ಅಲಂಕರಿಸಿ ಚಕ್ರವರ್ತಿದಂಪತಿಗಳ ಆಗಮನವನ್ನೇ ಪ್ರತೀಕ್ಷಿಸುತ್ತಿದ್ದರು. ಇದಲ್ಲದೆ ಯೂರೋಪ್ಯ ಮಹಿಳೆಯರು ಹಡಗು ಬಂದ ಬಳಿಕ ಬೆಟ್ಟದ ಮೇಲಿರುವ ಮನೆಗಳ ಬಾಲ್ಕನಿಗಳಲ್ಲಿಯೂ ಮರದ ಕೊಂಬೆಗಳಲ್ಲಿಯೂ ಇದ್ದು, ಚಕ್ರವರ್ತಿದಂಪತಿಗಳು ಬಂದರಿನ ಮೇಲೆ ಇಳಿದ ದರ್ಶನವನ್ನು ಮಾಡಿ ಪರಮಾನಂದಭರಿತರಾದರು. ಚಕ್ರವರ್ತಿಗಳು [illegible] ಸಮ್ಮತಿಸಿದರು. ಇನ್ನುಳಿದ ಚಕ್ರವರ್ತಿದಂಪತಿಗಳ ಸ್ವಾಗತವು ನಡೆಯುವ ದೆಹಲಿಗೆ ಬರ

ಸಿದ ವೇಳೆಯಲ್ಲಿ ಜನರು ಮಾರ್ಗಗಳುದ್ದಕ್ಕೂ ಕಿಕ್ಕಿರಿದು ನಿಂತು ದರ್ಶನವನ್ನು ಮಾಡಿ ಆನಂದಪರವಶರಾದರು. ಚಕ್ರವರ್ತಿದಂಪತಿಗಳು ತಾ॥ ೭ ರಲ್ಲಿ ದೆಹಲಿಗೆ ದಯಮಾಡಿಸುವ ವರೆಗೂ ಬೊಂಬಾಯಿಯಲ್ಲೇ ಇದ್ದರು. ಮತ್ತು ತಾ॥ ೬-೫ ರಲ್ಲಿ ಬೊಂಬಾಯಿಯಲ್ಲಿ ನಡೆಯುವ ಉತ್ಸವಗಳನ್ನು ಪೂರೈಸಿಕೊಂಡು ದಿಲ್ಲಿಗೆ ಪ್ರಯಾಣವಾಗುವರು.

ತುರ್ಕಿ—ಇಟಲಿಗಳ ಯುದ್ಧವು.

ನವೆಂಬರ್ ತಾ॥ ೨೮—ಡಾರ್ಡನೆಲ್ಸಿನ ಹತ್ತಿರ ಸಮುದ್ರಮಾರ್ಗವು ಬಹು ಕಿರಿದಾಗಿರುವುದರಿಂದ, ಅಲ್ಲಿ ಹತೋಟಿಯನ್ನು ಕಟ್ಟಿದರೆ, ತುರ್ಕಿಯ ನಾವೆಗಳು ತಿರುಗಾಡಲಿಕ್ಕಿಲ್ಲವಾಗಿ ತುರ್ಕಿಯವರು ಒಡಂಬಡಿಕೆಯನ್ನು ಮಾಡಿಕೊಳ್ಳಲೊಪ್ಪುವರೆಂದು ಇಟಲಿಯವರು ಯೋಚಿಸಿದರು. ಆದರೆ ಇಟಲಿಯವರ ಇಂತಹ ಪ್ರಯತ್ನದಿಂದ ತುರ್ಕಿಯವರಿಗೆ ಯಾವ ತೊಂದರೆಯಾಗುವಂತಿಲ್ಲವು ಮತ್ತು ಅವರು ಒಡಂಬಡಿಕೆಗೆ ಬರುವದಿಲ್ಲವು. ಇಟಲಿಯವರಿಗೆ ಅವರ ಈ ವಿಧವಾದ ಪ್ರಯತ್ನವು ೧೮೫೬ರಲ್ಲಿ ನಡೆದಿರುವ ಒಡಂಬಡಿಕೆಗೆ ವಿರುದ್ಧವಾಗಿದೆಯೆಂದು ರಷ್ಯಾದವರು ತಿಳಿಯ ಅವರನ್ನು ಆಕ್ಷೇಪಿಸಲು, ಅದಕ್ಕೆ ಇಟಲಿಯವರು ರಷ್ಯನರ ಸರಕುಗಳ ಹಡಗುಗಳು ಡಾರ್ಡನೆಲ್ಸು ಮಾರ್ಗವಾಗಿ ತಿರುಗಾಡಲೊಪ್ಪಿಕೊಂಡರು. ಆಗ ಡಾರ್ಡನೆಲ್ಸು ಮಾರ್ಗದಲ್ಲಿ ಹಡಗುಗಳು ತಿರುಗದಂತೆ ಇಟಲಿಯವರು ಅಡಚಣೆಯನ್ನು ಮಾಡುವುದಾದರೆ ಗ್ರೇಟ್ ಬ್ರಿಟನ್ನು ತಾನು ವಹಿಸಿರುವ ತಾಟಸ್ಥ್ಯವನ್ನು ಬಿಡಬೇಕಾಗುತ್ತದೆ ಎಂದು ಬ್ರಿಟಿಷು ರಾಜ್ಯಭಾರಿಯು ಇಟಲಿಯವರಿಗೆ ತಿಳಿಸಿದನು. ತಾ॥ ೨೬ರಲ್ಲಿ ಟ್ರಿಪೋಲಿಯಲ್ಲೂ, ಬೆರ್ನ್ಯಾದಲ್ಲೂ ಘೋರಯುದ್ಧವಾಯಿತು. ಡೆರ್ನಾದಲ್ಲಾದ ಕದನದಲ್ಲಿ ಇಟಲಿಯವರಲ್ಲಿ ೫೦ ಜನರು ಗಾಯವಾಗಿದರು. ೧೨ ಜನರು ಮಡಿದರು. ತಾ॥ ೨೬ರಲ್ಲಿ ಇಟಲಿಯವರು ಮುಂದುವರಿದು ಬಂದು ಟ್ರಿಪೋಲಿಯ ಹತ್ತಿರವಿರುವ ಎರಡು ಕೋಟೆಗಳನ್ನು ಸ್ವಾಧೀನಪಡಿಸಿಕೊಂಡರು. ಟ್ರಿಪೋಲಿ ಮತ್ತು ಡೆರ್ನಾಗಳಲ್ಲಿ ದಿವಸವೆಲ್ಲಾ ಯುದ್ಧವು ನಡೆದು ಇಟಲಿಯವರ ಕಡೆ ಟ್ರಿಪೋಲಿಯ ಹತ್ತಿರ ೧೧೮ ಜನರು ಗಾಯವಡೆದರಲ್ಲದೆ ೧೬ ಜನರು ಸತ್ತರು ಮತ್ತು ಡೆರ್ನಾ ಹತ್ತಿರ ಸತ್ತವರು ಮತ್ತು ಗಾಯವಡೆದವರು ಸಹ ೬೦ ಜನರಾಗುವರು. ತಾ॥ ೨೯—ಬೆಂಗಾಜಿಯಲ್ಲಿದ್ದ ಇಟಲಿಯವರ ಒಂದು ಪಂಗಡದವರು ಕೆಲ ಅರಬ್ಬಿಯವರಮೇಲೆ ಬಿದ್ದು ಅವರ ಕೂಡ ಘೋರವಾಗಿ ಕಾದಾಡಿದರು. ಇದರಿಂದ ಅರಬ್ಬಿಯವರೆಲ್ಲರೂ ನಾಶವಾದರು ಮತ್ತು ಇಟಲಿಯವರ ಕಡೆ ೩೦ ಜನರಿಗೆ ಗಾಯವಾಗಿ ೧೦ ಜನರು ಸತ್ತರು. ತಾ॥ ೩೦—ಡರ್ನಾದ ಹತ್ತಿರ ಒಂದು ಮಸೀದಿಯಲ್ಲಿ ಬಚ್ಚಿಟ್ಟುಕೊಂಡಿದ್ದ ೧೭ ಜನರಲ್ಲಿ ಕೆಲರು ಬಹು ಕ್ರೂರವಾಗಿ ಕತ್ತರಿಸಲ್ಪಟ್ಟರು. ಉಳಿದವರು ಜೀವಸಹಿತ ಸುಟ್ಟು ಹಾಕಲ್ಪಟ್ಟರೆಂದು ಗೊತ್ತಾಗಿ ಜನರಲ್ಲಿ ಅತ್ಯಂತ ಕೋಪೋದ್ರೇಕವನ್ನುಂಟುಮಾಡಿರುತ್ತದೆ. ಇಟಲಿಯವರ ಯುದ್ಧನಾವೆಗಳು ಸಿಂಕಿಯೋನ್ [illegible] ಟಲ್ಲಿ ಮೋಟಾರ್ ಬೋಟಿನ ಘಿರಂಗಿಗಳನ್ನು ಒಡೆದು ಹಾಕಿವೆ. ಟ್ರಿಪೋಲಿಯ ಕದನದಲ್ಲಿ ಗಾಯವಡೆದು ಅಸ್ವಸ್ಥರಾಗಿರುವ ತುರ್ಕಿಯ ಸೈನಿಕರ ಸಹಾಯಾರ್ಥವಾಗಿ ಚಂದಾ ಹಣವನ್ನು ಕೊಡಿಸಬೇಕೆಂದು ಅಫಘಾನಿಸ್ಥಾನದ ಅಮೀರರು ಅಪ್ಪಣೆ ಮಾಡಿರುವುದಾಗಿಯೂ, ಅಫಘಾನಿಸ್ಥಾನದ ಒಬ್ಬ ನ್ಯಾಯಾಧಿಕಾರಿಯು ಚಂದಾದ್ರವ್ಯವನ್ನು ವಸೂಲುಮಾಡಬೇಕೆಂದು ಕಾಬೂಲಿನಲ್ಲಿರುವ ಸಿವಿಲ್ ಮತ್ತು ಮಿಲ್ಟರಿ ಅಧಿಕಾರಿಗಳನ್ನೂ, ಧನಾಢ್ಯರನ್ನೂ ಪ್ರಾರ್ಥಿಸಿರುವುದಾಗಿಯೂ ವೃತ್ತಪತ್ರಿಕೆಯ ಒಬ್ಬ ಸುದ್ದಿಗಾರನು ಬರೆದಿರುತ್ತಾನೆ.

ಮೈಸೂರ್ ಸ್ಟಾರ್

೧೯೧೧ ನೇಯ ಡಿಸೆಂಬರ್ ತಾ॥ ೪ ನೇಯ ಸೋಮವಾರ.

ಮೈಸೂರು ಸಂಸ್ಥಾನದಲ್ಲಿ ಲೋಹಮಾರ್ಗಾಭಿವೃದ್ಧಿಯು

ಶ್ರೀಮನ್ಮಹಾರಾಜರವರು ತಮ್ಮ ದೇಶದ ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕೆಂಬ ಸತ್ಸಂಕಲ್ಪದಿಂದ, ಅಭಿವೃದ್ಧಿಯ ಮಾರ್ಗಗಳನ್ನು ಕಂಡುಹಿಡಿಯುವುದಕ್ಕಾಗಿ ಸರಕಾರಿ ಯುರೋಪಿಯನ್ ಮತ್ತು ದೇಶೀಯ ಉದ್ಯೋಗಿಗಳನ್ನೂ ಕೃಷಿ, ವಾಣಿಜ್ಯ ಮತ್ತು ಕೈಗಾರಿಕೆಗಳಲ್ಲಿ ಪರಿಶ್ರಮವುಳ್ಳ ಅನಧಿಕಾರಿಗಳಾದ ದೊಡ್ಡ ಮನುಷ್ಯರುಗಳನ್ನೂ ಸೇರಿಸಿ ಒಂದು ಸಭೆಯನ್ನೇರ್ಪಡಿಸಿರುವುದನ್ನು ಮತ್ತು ಈ ಸಭೆಯವರು ತತ್ಸಂಬಂಧವಾಗಿ ಈವರೆಗೆ ಮಾಡಿರುವ ಕಾರ್ಯಕ್ರಮಗಳನ್ನು ಕುರಿತು ನಾವು ಈ ಪತ್ರಿಕೆಯಲ್ಲಿ ಆಗಾಗ್ಗೆ ಪ್ರಸ್ತಾಪಿಸಿರುತ್ತೇವಲ್ಲದೆ, ಈ ದೇಶದ ಮುಖ್ಯಸ್ಥಳಗಳನ್ನು ಲೋಹಮಾರ್ಗಗಳಿಂದ ಸಂಬಂಧಿಸಿ, ಆ ಸ್ಥಳಗಳಲ್ಲಾಗತಕ್ಕ ಉತ್ಪನ್ನಗಳು ಇತರ ಕಡೆಗೂ, ಇತರ ಕಡೆಯ ಪದಾರ್ಥಗಳು ಆ ಸ್ಥಳಗಳಿಗೂ ಸುಲಭವಾಗಿ ಹೋಗಿ ಬರುವಂತೆ ಮಾಡತಕ್ಕದು ದೇಶದ ಸಂಪದಭಿವೃದ್ಧಿಗೆ ಅತ್ಯಾವ

ಶ್ಯಕ ಸಾಧಕವಾದುದೆಂದು ಈ ಮೊದಲೇ ಅಭಿಪ್ರಾಯಪಟ್ಟಿರುತ್ತೇವೆ. ಕೈಗಾರಿಕೆ ಮತ್ತು ವಾಣಿಜ್ಯ ಸಂಬಂಧವಾಗೇರ್ಪಟ್ಟಿರುವ ಸಂಘದ ಅಧ್ಯಕ್ಷರಾದ ಚೀಫ್ ಇಂಜನೀರ್ ಮ॥ ಎಂ. ವಿಶ್ವೇಶ್ವರಯ್ಯನವರೂ ನಮ್ಮಂತೆಯೇ ದೇಶದ ಸಂಪದಭಿವೃದ್ಧಿಗೆ ಲೋಹಮಾರ್ಗಾಭಿವೃದ್ಧಿಯು ಮುಖ್ಯವಾದುದೆಂಬ ಅಭಿಪ್ರಾಯವುಳ್ಳವರಾಗಿ ಈ ಮೈಸೂರ ಸಂಸ್ಥಾನದ ಲೋಹಮಾರ್ಗವನ್ನಭಿವೃದ್ಧಿಗೊಳಿಸುವ ಕಾರ್ಯಕ್ರಮವನ್ನೂ, ಅದಕ್ಕಾಗಿ ತಗಲುವ ವೆಚ್ಚವನ್ನೂ, ಈಗ ಸದ್ಯದಲ್ಲಿ ಯಾವ್ಯಾವ ಸ್ಥಳಗಳಿಗೆ ಮಾರ್ಗಗಳನ್ನು ಹಾಕಬೇಕಾಗಿರುವುದೆಂಬುದನ್ನೂ ಬರೆದು ಸಿದ್ಧಗೊಳಿಸಿ ಸರ್ಕಾರದವರ ಪರ್ಯಾಲೋಚನೆಯ ಬಗ್ಗೆ ಕಳುಹಿಸಿಕೊಟ್ಟಿದ್ದುದನ್ನು ಈ ಸ್ಟಾರ್ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಯಥಾವತ್ತಾಗಿ ಕೊಟ್ಟಿರುತ್ತೇವೆ.

ನಮ್ಮ ಸರ್ಕಾರದವರು ಮ॥ ವಿಶ್ವೇಶ್ವರಯ್ಯನವರ ಸೂಚನೆಯನ್ನು ಚೆನ್ನಾಗಿ ಪರ್ಯಾಲೋಚಿಸಿ, ಈ ದೇಶದ ಲೋಹಮಾರ್ಗಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಸಂಕಲ್ಪಮಾಡಿ, ಅರಸೀಕೆರೆಯಿಂದ ಹಾಸನದಮೇಲೆ ಮೈಸೂರಿಗೂ, ನಂಜನಗೂಡಿನಿಂದ ಚಾಮರಾಜನಗರಕ್ಕೂ, ಸರಕಾರದ ಮೂಲಕವಾಗಿಯೂ, ಮತ್ತು ಬೌರಿಂಗ್‌ಪೇಟೆಯಿಂದ ಕೋಲಾರಕ್ಕೂ, ಚಿಕ್ಕಜಾಜೂರಿಂದ ಚಿತ್ರಕಲ್ ದುರ್ಗಕ್ಕೂ, ಕಡೂರಿನಿಂದ ಚಿಕ್ಕಮಗಳೂರಿಗೂ ಮತ್ತು ಬೆಂಗಳೂರಿಂದ ಚಿಕ್ಕಬಳ್ಳಾಪುರಕ್ಕೂ ಡಿಸ್ಟ್ರಿಕ್ಟ್ ಬೋರ್ಡುಗಳ ಮೂಲಕವಾಗಿಯೂ ಲೋಹಮಾರ್ಗಗಳನ್ನು ಹಾಕಿಸತಕ್ಕದೆಂದು ಗೊತ್ತುಮಾಡಿರುತ್ತಾರಲ್ಲದೆ, ಇದಕ್ಕಾಗಿ ೧೦೫ ಲಕ್ಷ ರೂ ಗಳನ್ನು ೭ ವರ್ಷಗಳಲ್ಲಿ ಕೊಡುವುದಾಗಿ ಒಪ್ಪಿರುತ್ತಾರೆ. ಈ ಮೊಬಲಗಿನಲ್ಲಿ ೧೮ ಲಕ್ಷ ರೂ ಗಳು ಡಿಸ್ಟ್ರಿಕ್ಟ್ ಬೋರ್ಡಿನವರ ಸಹಾಯಕ್ಕಾಗಿ ಕೊಡಲ್ಪಡುವುದು. ಸರ್ಕಾರದವರು ಈ ಕಾರ್ಯಾರಂಭಕ್ಕಾಗಿ ಒಂದು ಸ್ಪೇಟ್ ರೈಲ್ವೆಯ ಶಾಖೆಯು ಏರ್ಪಡಿಸಲ್ಪಟ್ಟು ಅದರ ಮೇಲ್ವಿಚಾರಣೆಗೆ ಒಬ್ಬ ಸೂಪರಿಂಟೆಂಡಿಂಗ್ ಇಂಜನೀರು ನಿಯಮಿಸಲ್ಪಡತಕ್ಕದೆಂದು ಅಪ್ಪಣೆ ಮಾಡಿರುವರಲ್ಲದೆ, ಬೌರಿಂಗ್‌ಪೇಟೆ, ಚಿತ್ರಕಲ್‌ದುರ್ಗ ಮತ್ತು ಕಡೂರುಗಳಿಂದ ಹಾಕಲ್ಪಡುವ ಮಾರ್ಗಗಳ ಸರ್ವೆಯ ಕೆಲಸವನ್ನು ಕೂಡಲೆ ಆರಂಭಿಸಿ, ಈ ಮಾರ್ಗಗಳನ್ನು ಹಾಕಲು ಬೇಕಾದ ದ್ರವ್ಯವನ್ನೊದಗಿಸುವ ವಿಚಾರವಾಗಿ ತಮ್ಮ ಸೂಚನೆಗಳನ್ನು ಕಳುಹಿಸತಕ್ಕದೆಂದು ಡಿ॥ ಬೋರ್ಡುಗಳ ಪ್ರೆಸಿಡೆಂಟರುಗಳಿಗೆ ತಿಳಿಸಿರುತ್ತಾರೆ.

ಕಳೆದ ೧೦ ವರ್ಷಗಳಿಂದಲೂ, ಮೈಸೂರ ಸಂಸ್ಥಾನದಲ್ಲಿ ಪ್ರತಿ ೧೦೫೪೫ ಜನರಿಗೆ ಒಂದು ಮೈಲಿಯ ಪ್ರಕಾರ ಲೋಹಮಾರ್ಗವಿರುತ್ತದೆ, ಆದರೆ ಬ್ರಿಟಿಷ್ ಇಂಡಿಯಾದೇಶದಲ್ಲಿ ಮಾತ್ರ ಪ್ರತಿ ೭೯೩೨ ಜನರಿಗೆ ಒಂದು ಮೈಲಿಯ ಪ್ರಕಾರವಿರುತ್ತದೆ. ಹೀಗೆ ಮೈಸೂರ ಸೀಮೆಯು ಲೋಹಮಾರ್ಗಾಭಿವೃದ್ಧಿಯಲ್ಲಿ ಹಿಂದೆ ಬಿದ್ದುದರಿಂದ, ೧೯೧೦ರಲ್ಲಿ ಮೈಸೂರಿಂದ ಅರಸೀಕೆರೆಗೆ ಆಗುವ ೧೦೩ ಮೈಲಿಯವರೆಗೂ, ನಂಜನಗೂಡಿನಿಂದ ಈರೋಡಿಗೆ ಸಂಬಂಧಿಸಲು ಮೈಸೂರ ಸೀಮೆಯಲ್ಲಿಯವರೆಗೂ ಲೋಹಮಾರ್ಗಗಳನ್ನು ಇಂಡಿಯಾ ಸರಕಾರದವರು ಕಟ್ಟಿಸಿದಲ್ಲಿ ಹಾಕಬೇಕೆಂಬ ಯೋಚನೆಯು ಹುಟ್ಟಿ ಈಗ ಕಾರ್ಯರೂಪವಾದುದಕ್ಕಾಗಿ ಸಂತೋಷಪಡಬೇಕಾಗಿದೆ. ಸ್ವದೇಶಾಭಿಮಾನವನ್ನೇ ಮೂಲಮಂತ್ರವನ್ನಾಗಿಟ್ಟುಕೊಂಡಿದ್ದರೆಂದು ಹೇಳಿಕೊಳ್ಳುತ್ತಿದ್ದ ಸರ್ ಪಿ. ಎನ್. ಕೃಷ್ಣಮೂರ್ತಿಯವರ ದಿವಾನಗಿರಿಯಲ್ಲಿ ಸಹ ಒಂದು ಮೈಲಿಯಷ್ಟು ಲೋಹಮಾರ್ಗಾಭಿವೃದ್ಧಿಯಾಗಲಿಲ್ಲವು. ಅವರನಂತರ ಬಂದ ಮ॥ ವಿ. ಪಿ. ಮಾಧವರಾಯರ ದಿವಾನಗಿರಿಯಲ್ಲಾದರೂ ಲೋಹಮಾರ್ಗಾಭಿವೃದ್ಧಿಯಾಗುತ್ತದೆಂಬ ಭರವಸೆಯು ಹುಟ್ಟಿದ್ದಿತಾದರೂ, ವಿಚಾರಣೆಯಿಂದಲೋ ಅವರ ಕಾಲದಲ್ಲೂ ಅದಕ್ಕೆ ಅವಕಾಶವಾಗಲಿಲ್ಲವು. ಆದರೆ ಈಗಿನ ದಿವಾನರಾದ ಮ॥ ಟಿ. ಆನಂದರಾಯರ ಕಾಲದಲ್ಲಿ ಮೈಸೂರ ದೇಶದ ಸಂಪದಭಿವೃದ್ಧಿಗೆ ಅತ್ಯಾವಶ್ಯಕವಾದ ಲೋಹಮಾರ್ಗಾಭಿವೃದ್ಧಿಯಾಗಲು ಅವಕಾಶವಾದುದಕ್ಕಾಗಿಯೂ, ಇದರಂತೆಯೇ ಸಂಪದಭಿವೃದ್ಧಿಗೆ ಕಾರಣವಾದ ನೂತನ ಜಲಾಶಯ ನಿರ್ಮಾಣಕಾರ್ಯವು ಆರಂಭಿಸಲ್ಪಟ್ಟಿರುವುದಕ್ಕಾಗಿಯೂ ಮೈಸೂರ ದೇಶೀಯರೆಲ್ಲರೂ ಮ॥ ಆನಂದರಾಯರಿಗೆ ಕೃತಜ್ಞರಾಗಿರುತ್ತಾರೆ. ಗತಿಸಿದ ಸರ್ ಕೆ. ಶೇಷಾದ್ರಿ ಅಯ್ಯರ್‌ರವರು ಮಾಡಿಕೊಟ್ಟಿರುವ ಕೆಲಸವನ್ನೂ, ಕಾವೇರೀ ನದಿಯ ಜಲಪಾತದಿಂದ ಹುಟ್ಟುವ ವಿದ್ಯುಚ್ಛಕ್ತಿಯ ಕೆಲಸಗಳನ್ನೂ ನಿರ್ಮಿಸಿದಂತೆ ಚಿರಸ್ಥಾಯಿಯಾದಂತೆ ಮ॥ ಆನಂದರಾಯರೂ ಮೇಲ್ಕಂಡ ಕಾರ್ಯಗಳಿಂದ ಶಾಶ್ವತವಾದ ಕೀರ್ತಿಗೆ ಭಾಜನರಾದರೆಂಬುದರಲ್ಲಿ ಸಂದೇಹವಿಲ್ಲವು. ಕನ್ನಂಬಾಡಿಯ ಹತ್ತಿರ ಆರಂಭಿಸಲ್ಪಟ್ಟಿರುವ ನೂತನ ಜಲಾಶಯ ನಿರ್ಮಾಣಕ್ಕೂ ಪ್ರಕೃತದ ಲೋಹಮಾರ್ಗಾಭಿವೃದ್ಧಿಗೂ ತಕ್ಕ ಸೂಚನೆಯನ್ನೂ, ಅವುಗಳ ಸಾಧನೆಯ ವಿಚಾರದಲ್ಲಿ ಭರವಸೆಯನ್ನೂ ಕೊಟ್ಟಿರುವ ಚೀಫ್ ಇಂಜನೀರ್ ಮ॥ ವಿಶ್ವೇಶ್ವರಯ್ಯನವರು ತಮ್ಮ ದೇಶದ ಜನರಿಗೂ, ಪ್ರೀತಿಗೂ ಪಾತ್ರರಾಗಿರುವರೆಂದು ಈ ಸಂದರ್ಭದಲ್ಲಿ ತಿಳಿಸುತ್ತೇವೆ. ನಮ್ಮ ಸ

ರ್ತವ್ಯವಾಗಿದೆ. ಮಿ॥ ವಿಶ್ವೇಶ್ವರಯ್ಯನವರಂತೆ ಸ್ವದೇಶಕ್ಕೆ ಶಾಶ್ವತವಾದ ಪ್ರಯೋಜನವನ್ನುಂಟುಮಾಡಿದವರು ಈಚಿನ ಸ್ವದೇಶೀಯರಾದ ಅಧಿಕಾರಿಗಳಲ್ಲಿ ಮತ್ತಾರೂ ಇಲ್ಲವೆಂದರೆ ಅತಿಶಯೋಕ್ತಿಯಾಗದು. ಇವರನ್ನನುಸರಿಸಿ ಸ್ವದೇಶದ ರಾದ ಅಧಿಕಾರಿಗಳು ಇವರ ಮೇಲು ಪಙ್ತಿಯನ್ನನುಸರಿಸಿ ನಡೆವರಾಗಲೆಂದು ಇಚ್ಛಿಸುತ್ತೇವೆ.

ಒಳದೇಶದ ವೃತ್ತಾಂತಗಳು.

ಜಾರ್ಜ್ ಪ್ರಭುಗಳ ಮಾತೃಶ್ರೀಯವರಾದ ಅಲೆಕ್ಸಾಂಡ್ರಾ ಮಹಾರಾಣಿಯವರ ಜನ್ಮದಿನೋತ್ಸವದುದ್ದೇಶ್ಯ ಕಳೆದ ತಾ॥ ೧೮ ರ ಬೆಳಿಗ್ಗೆ ರಾಜಧಾನಿಯಲ್ಲಿ ೩೧ ಗುಂಡುಗಳು ಹಾರಿಸಲ್ಪಟ್ಟವು.

ರಾಜಧಾನಿಯಲ್ಲಿ ಪ್ರತಿವರ್ಷವೂ ಶ್ರೀಮತ್ಸಂಸ್ಥಾನದ ಅರಮನೆಯಿಂದ ನಡೆಸಲ್ಪಡುವ ಧಾತ್ರೀಹವನವು ಈ ತಾ॥ ೧೧ ರಲ್ಲಿ ಮಧುವನದಲ್ಲಿ ನಡೆಸಲ್ಪಡುವುದಾಗಿ ಗೊತ್ತಾಗಿರುವುದು.

ಶ್ರೀಮನ್ ಮಹಾರಾಜರವರು ಡಿಲ್ಲಿಯ ದರ್ಬಾರಿನ ಮಹೋತ್ಸವದಲ್ಲಿ ತಮ್ಮ ಸ್ವಂತ ಇಂಪೀರಿಯಲ್ ಸರ್ವಿಸ್ ಸೇನೆಯ ನಾಯಕತ್ವವನ್ನು ವಹಿಸಿಕೊಳ್ಳುವಾಗ್ಗೆ ಧರಿಸಲು ಕರ್ನಲ್ ಉಡುಪನ್ನು ಮಾಡಿಸಿರುವರು.

ವೈಟ್‌ಫೀಲ್ಡ್ ಸಮೀಪದಲ್ಲಿರುವ ತರಹೊಣ್ಣೆ ಎಂಬ ಗ್ರಾಮದಲ್ಲಿ ಮುನಿಸ್ವಾಮಿ ಎಂಬ ರೈತರು ಹೊಲದಲ್ಲಿ ಹುಲ್ಲನ್ನು ಕೊಯ್ಯುತ್ತಿರುವಾಗ್ಗೆ ನಾಗರಹಾವಿನಿಂದ ಕಡಿಯಲ್ಪಟ್ಟು, ಔಷಧೋಪಚಾರವು ಮಾಡಲ್ಪಟ್ಟಾಗ್ಯೂ ಬದುಕದೆ ಸತ್ತುಹೋದರು.

ಕಾವೇರಿ ಕಪಿಲಾ ನದಿಗಳ ಪ್ರವಾಹದಿಂದ ಮುಳುಗಿಹೋದ ಟಿ. ನರಸೀಪುರ ತಾಲ್ಲೋಕುಗಳಲ್ಲಿ ವಿಪತ್ಪರಾದ ಜನರ ಸಹಾಯಾರ್ಥವಾಗಿ ರಾಜಧಾನಿಯಲ್ಲೇರ್ಪಡಿಸಿರುವ ಫಂಡಿಗೆ ಕಳೆದ ನವೆಂಬರ್ ತಾ॥ ೨೮ ರ ವರೆಗೆ ೧೧೦೧೭-೩-೪ ಸೇರಿರುವದಾಗಿರುತ್ತದೆ.

ಶ್ರೀಮನ್ಮಹಾರಾಜರವರ ಮೋಟಾರುಬಂಡಿಗಳು ರೈಲು ಮಾರ್ಗವಾಗಿ ಡಿಲ್ಲಿಗೆ ಸಾಗಿಸಲ್ಪಡುವಾಗ್ಗೆ ರಾಯಚೂರು ಬಳಿ ೧೩೦೦೦ ರೂ ಬೆಲೆಯ ಒಂದು ದೊಡ್ಡ ಮೋಟಾರು ಬಂಡಿಯು ಹೇಗೋ ಬೆಂಕಿಯಿಂದ ಹೊತ್ತಿಕೊಂಡು ಸುಟ್ಟುಹೋಯಿತೆಂದು ತಿಳಿಯಬರುತ್ತದೆ.

ಡಾಕ್ಟರ್ ಎಂ. ಶ್ರೀನಿವಾಸರಾವ್, ಎ. ಎ., ಎಂ. ಬಿ., ಬಿ. ಎಸ್. ಸಿ., ಯವರು ಮೈಸೂರ ಆರೋಗ್ಯಶಾಖೆಯ ಸಹಾಯಕ ಸೂಪರಿಂಟೆಂಡೆಂಟರಾಗಿಯೂ, ರಸಾಯನ ಪದಾರ್ಥಶೋಧಕ (ಕೆಮಿಕಲ್ ಎಕ್ಸಾಮಿನರ್) ರಾಗಿಯೂ ತಿಂಗಳೊಂದಕ್ಕೆ ೧೦೦ ರೂ. ಸಂಬಳದಮೇಲೆ ಸರ್ಕಾರದವರಿಂದ ನಿಯಮಿಸಲ್ಪಟ್ಟಿರುತ್ತಾರೆ.

ಕೋಲಾರದಲ್ಲಿ ಕೊಲೆಯನ್ನು ಮಾಡಿದ ಅಪರಾಧಕ್ಕಾಗಿ ಕಳೆದ ಫೆಬ್ರವರಿಯಿಂದಲೂ ಬೆಂಗಳೂರ ಸೆಂಟ್ರಲ್ ಜೈಲಿನಲ್ಲಿ ಕಾರಾಗೃಹವಾಸ ಶಿಕ್ಷೆಯನ್ನನುಭವಿಸುತ್ತಿದ್ದ ವೆಂಕಟಸ್ವಾಮಿ ಎಂಬುವವರು ಕಳೆದ ತಾ॥ ೨೮ ರ ಬೆಳಿಗ್ಗೆ ತಾನಿದ್ದ ಗವಾಕ್ಷಿಯ ಕಂಬಿಗೆ ಹಗ್ಗವನ್ನು ಕಟ್ಟಿ ಅದನ್ನು ತನ್ನ ಕುತ್ತಿಗೆಗೆ ಬಿಗಿದು ನೇಣುಹಾಕಿಕೊಂಡು ಸತ್ತುಹೋದರು.

ಶ್ರೀರಂಗಪಟ್ಟಣದಲ್ಲಿ ಪ್ರಕಟವಾಗುತ್ತಿರುವ ವಿವೇಕೋದಯವೆಂಬ ಮಾಸಿಕ ಪುಸ್ತಕವು ಚಕ್ರವರ್ತಿ ದಂಪತಿಗಳ ಕಿರೀಟಧಾರಣ ಮಹೋತ್ಸವ ದಿನದಿಂದ ಅಂದರೆ ಈ ತಾ॥ ೧೨ ರಿಂದ ಸಾಪ್ತಾಹಿಕ ಪತ್ರಿಕೆಯಾಗಿ ಮಾರ್ಪಡಿಸಲ್ಪಡುವುದಾಗಿಯೂ, ರಾಜಧಾನಿಯಲ್ಲಿರುವ ಆರ್ಯಬಾಲಸಮಾಜದವರು ಕಿರೀಟಧಾರಣ ಮಹೋತ್ಸವದ ಜ್ಞಾಪಕಾರ್ಥವಾಗಿ ಒಂದು ಮಾಸಿಕ ಪುಸ್ತಕವನ್ನು ಹೊರಡಿಸುವುದಾಗಿಯೂ ಕೇಳುತ್ತೇವೆ.

ಬೆಂಗಳೂರ ತಾ॥ ವರ್ತೂರ ಸಮೀಪದಲ್ಲಿರುವ ಚೆನ್ನಪ್ಪನ ಹಳ್ಳಿಯಲ್ಲಿ ಒಬ್ಬ ರೈತನೂ, ಅವನ ಹೆಂಡತಿಯೂ ತಮ್ಮ ೩ ವರ್ಷದ ಗಂಡು ಹುಡುಗನನ್ನು ಬಿಟ್ಟಿದ್ದ ಮನೆಯಲ್ಲಿ ಬಿಟ್ಟು ಹೊಲದ ಕೆಲಸಕ್ಕಾಗಿ ಹೋಗಿದ್ದರು. ಆ ಹುಡುಗನು ಗುಡಿಸಲಿನೊಳಗೆ ಕಾಲನ್ನು ಹುರಿಯುತ್ತಿರುವಾಗ್ಗೆ ಹೇಗೋ ಮಡ್ಡಿಗೆ ಬೆಂಕಿಯು ಬಿದ್ದು ಗುಡಿಸಲು ಹೊತ್ತಿಕೊಂಡು ನಾಶವಾಯಿತು. ಒಳಗಿದ್ದ ಹುಡುಗನೂ ಸುಟ್ಟುಹೋದನು. ತಂದೆತಾಯಿಗಳು ಹೊಲದಿಂದ ಹಿಂತಿರುಗಿ ಬಂದಾಗ ತಮ್ಮ ಗುಡಿಸಲು ಸುಟ್ಟು ಭಸ್ಮವಾಗಿರುವುದನ್ನೂ, ಮಗನ ದೇಹವು ಸುಟ್ಟು ಇದ್ದಿಲಾಗಿರುವುದನ್ನೂ ನೋಡಿ ಅತ್ಯಂತವಾಗಿ ವ್ಯಸನಪಟ್ಟರು.

ಬೆಂಗಳೂರಲ್ಲಿ ಸ್ಥಾಪಿತವಾಗಿರುವ ವರ್ತಕ ಸಂಘದವರು, ಕಳೆದ ತಾ॥ ೨೨ ರಲ್ಲಿ ಬೆಂಗಳೂರ ಪೇಟೆ ತರಗುಪೇಟೆಯಲ್ಲಿರುವ ನಿತ್ಯ ಹರಿಯಣ್ಣನವರ ಮಂಡಿಯಲ್ಲಿ ಸಭೆ ಸೇರಿದ್ದು ಈ ಸಂಘಕ್ಕೆ ಮಿ॥ ಹರಿಯಣ್ಣನವರು ಪ್ರೆಸಿಡೆಂಟರಾಗಿಯೂ, ಮಿ॥ ತಿರುವೆಂಗಡಾಚಾರ್, ಎಂ. ಎ., ಯವರು ವೈಸ್‌ಪ್ರೆಸಿಡೆಂಟರಾಗಿಯೂ, ಮಿ॥ ಕೆ. ಆರ್. ಕೃಷ್ಣಯ್ಯರ್‌ರವರು ಸೆಕ್ರೆಟರಿಗಳಾಗಿಯೂ, ಮಿ॥ ರಾಮಚಂದ್ರರಾವ್ ಸಿಂಧೆಯವರು ಟ್ರೆಷರರಾಗಿಯೂ, ಮಿ॥ ಗಳಿಷದ ಚೆನ್ನಸ್ವಾಮಿ ಶೆಟ್ಟಿರು, ಸಂಜೀವಿರಾಯರು, ಬಿ. ಆದಪ್ಪನವರು, ಮೊತ್ತಾ ಮಹಮದ್ ಅಬ್ದುಲ್ ಕರೀಂ, ಎಕ್ಸಿಕ್ಯೂಟಿವ್ ಕಮಿಟಿಯ ಮೆಂಬರರಾಗಿಯೂ ನೇಮಿಸಲ್ಪಟ್ಟರು. ಈ ಸಂಘಕ್ಕೆ ಈವರೆಗೆ ೫೦ ಜನರು ಮೆಂಬರುಗಳಾಗಿ ಸೇರಿರುವರು.

ಶ್ರೀಮನ್ಮಹಾರಾಜರು, ಮಹಾಮಾತೃಶ್ರೀ ವಾಣೀವಿಲಾಸಸನ್ನಿಧಾನ, ಸಿ. ಐ., ಯವರು, ಯುವರಾಜರವರು, ಪ್ರೈವೇಟ್ ಸೆಕ್ರೆಟರಿ ಮಿ॥ ಕ್ಯಾಂಬಲ್‌ರವರು, ಕರ್ನಲ್ ದೇಸರಾಜ ಅರಸಿನವರು, ಮಿ॥ ರಾಜಾಶೇಖರು, ಮಿ॥ ಗಳಿಷದ ಗೋಪಾಲರಾಜ ಅರಸಿನವರು, ಚಾಮಯ್ಯಾಜಿ ಅರಸಿನವರು, ಬಿ. ಪುಟ್ಟಯ್ಯಾಜಿ ಅರಸಿನವರು, ಎಚ್. ನಂಜುಂಡರಾಜ ಅರಸಿನವರು, ಎಚ್. ಲಿಂಗರಾಜ ಅರಸಿನವರು, ಲಕ್ಷ್ಮೀಕಾಂತರಾಜ ಅರಸಿನವರು, ಗೋಪಾಲಕೃಷ್ಣ ಅರಸಿನವರು, ಸುಬ್ರಹ್ಮಣ್ಯರಾಜ ಅರಸಿನವರು, ಮುದ್ದುರಾಜ ಅರಸಿನವರು, ಹುಜೂರ್ ಸೆಕ್ರೆಟರಿ ಪಿ. ರಾಘವೇಂದ್ರರಾಯರು, ಡಾಕ್ಟರ್ ಪಿ. ವಿ. ಜರ್ನಲ್ ಇನ್ಸ್‌ಪೆಕ್ಟರ್‌ರವರು, ಡಾ॥ ಎಫ್. ರಂಗಾಚಾರ್ಯರು ಇವರುಗಳೊಡನೆ ಶ್ರೀಮನ್ಮಹಾರಾಜರವರು ಕಳೆದ ತಾ॥ ೨೮ ನೆಯ ಮಂಗಳವಾರ ರಾತ್ರಿ ಡಿಲ್ಲಿಗೆ ಸ್ಪೆಷಲ್ ರೈಲು ಬಂಡಿಯಲ್ಲಿ ಪ್ರಯಾಣಮಾಡಿ ಕಳೆದ ತಾ॥ ೧ ರಲ್ಲಿ ಡಿಲ್ಲಿಯ ಪಟ್ಟಣವನ್ನು ಸುರಕ್ಷಿತವಾಗಿ ಸೇರಿದರು.

ರಾಜಧಾನಿಯಲ್ಲಿರುವ ಶ್ರೀಮಂತ ನೀಲಗಿರಿ ದೊಡ್ಡ ಬಾಪಣ್ಣನವರ ಕುಮಾರರು ಪುಟ್ಟಣ್ಣ (ವೆಂಕಟಣ್ಣ) ನವರನ್ನು ಡಿಲ್ಲಿಯ ದರ್ಬಾರಿಗೆ ಅತಿಥಿಗಳಾಗಿ ಕಳುಹತಕ್ಕದೆಂದು ಮೈಸೂರ ಚೀಫ್ ಕಮಿಷನರು ಶ್ರೀಮನ್ ಮಹಾರಾಜರವರಿಂದ ತಂತಿಯ ಕಾಗದ ಬಂದಿದ್ದುದರಿಂದ, ಮಿ॥ ಪುಟ್ಟಣ್ಣನವರು ತಮ್ಮ ಭಾವನವರಾದ ಮಿ॥ ಮಲ್ಲಯ್ಯ ಮುತ್ತಿ ಇಬ್ಬರು ಸೇವಕರೊಡನೆ ಕಳೆದ ತಾ॥ ೨ ರಲ್ಲಿ ಡಿಲ್ಲಿಗೆ ಪ್ರಯಾಣಮಾಡಿದರು. ಈ ಶ್ರೀಮಂತರು ಕಳೆದ ೩ನೆಯ ವರ್ಷದಲ್ಲಿ ರಾಜಧಾನಿಯಲ್ಲಿ ಪ್ಲೇಗು ಬಹು ಉಲ್ಬಣವಾಗಿರುವಾಗ್ಗೆ ನಾನಾ ಬಡ ಜನರಿಗೆ ಬಟ್ಟೆ, ದುಡ್ಡು, ಅಕ್ಕಿ ಮುತಾದ ಸಾಮಗ್ರಿಗಳನ್ನು ಕೊಟ್ಟು ಇನಾಕ್ಯುಲೇಷನನ್ನು ಮಾಡಿಸಿರುವುದರಲ್ಲಿ ೯೦೦೦ ಸಾವಿರ ರೂಪಾಯಿಗಳನ್ನು ಉದಾರವಾಗಿ ವೆಚ್ಚಮಾಡಿದ ಸಂಗತಿಯು ಸರ್ವಶ್ರುತವಾಗಿದೆ. ಇಂತಹ ಪ್ರಜೋಪಕಾರಿಗಳಿಗೆ ಶ್ರೀಮನ್ ಮಹಾರಾಜರವರಿಂದ ಯಾವುದೊಂದು ಸನ್ಮಾನವೂ ದೊರೆಯಲಿಲ್ಲವೆಂದು ಜನರಿಗೆ ಅಸಮಾಧಾನವುಂಟಾಗಿದ್ದಿತು. ಆದರೆ ಪ್ರಭುಗಳು ಶ್ರೀಮಂತರನ್ನು ತಮ್ಮ ಅತಿಥಿಗಳನ್ನಾಗಿ ಡಿಲ್ಲಿಯ ದರ್ಬಾರಿಗೆ ಬರಮಾಡಿಕೊಂಡಿರುವುದು ಅವರಿಗೆ ವಿಶೇಷವಾದ ಮರ್ಯಾದೆಯನ್ನು ಕೊಟ್ಟಂತಾಗಿರುವುದಲ್ಲದೆ, ರಾಜಧಾನಿಯ ನಿವಾಸಿಗಳೆಲ್ಲರಿಗೂ ಪರಮಸಂತೋಷವಾಗಿ ಪರೋಪಕಾರವೇ ಕಾರ್ಯಗಳನ್ನು ಮಾಡತಕ್ಕವರಿಗೆ ಶ್ರೀಮನ್ ಮಹಾರಾಜರವರಿಂದ ಸನ್ಮಾನವು ದೊರೆಯದೆ ಇರುವುದಿಲ್ಲವೆಂಬುದಕ್ಕೆ ಪ್ರತ್ಯಕ್ಷ ಸಂದರ್ಭವೂ ಪ್ರಬಲಪ್ರಮಾಣವಾಗಿದೆ.

ವರ್ತಮಾನ ಸಂಗ್ರಹವು.

ಸ್ಟ್ರೇಟ್ ಸೆಟ್ಲ್‌ಮೆಂಟಿನಲ್ಲಿ ಒಬ್ಬನು ಮೋಟಾರು ವೈಸಿಕಲ್ಲಿನಮೇಲೆ ಸವಾರಿಮಾಡಿಕೊಂಡು ಹೋಗುತ್ತಿರುವಾಗ ಮಾರ್ಗದಲ್ಲಿ ಇದಿರಾಗಿ ಬರುತ್ತಿದ್ದ ಒಂದು ಆನೆಗೆ ತಾಕಿ ಬಿದ್ದು ವೈಸಿಕಲ್ಲು ಆನೆಯ ಬಳಿ ಬಹುದೂರ ಹೋಗಿ ಬಿದ್ದಿತು. ಇದರಿಂದ ವೈಸಿಕಲ್ಲು ಮುರಿದುಹೋಯಿತು. ಆದರೆ ಸವಾರನಿಗೆ ಮಾತ್ರ ಅಪಾಯವೇನೂ ಆಗಲಿಲ್ಲ.

ಲಂಡನ್ ಪಟ್ಟಣದಲ್ಲಿರುವ ಪಬ್ಲಿಕ್ ಸಂಸ್ಥಾನದ ಯುವರಾಜರ ಒಂದು ಆಫೀಸ್ ಪಾರ್ಸಲ್ ಸಂಸ್ಥೆಯ ಉದ್ಯೋಗದಿಂದ ಮೋಟಾರು ಬಂಡಿಯಲ್ಲಿ ಹೊರಟು ಗೊತ್ತಾದ ಸ್ಥಳದಲ್ಲಿ ಬಂಡಿಯಿಂದ ಕೆಳಗಿಳಿಯುವಾಗ್ಗೆ ಕಾಲುಜಾರಿ ಕೆಳಗೆ ಬಿದ್ದರು. ಅದರಿಂದ ಅವರಿಗೆ ಕೆಲಕಾಲ ಸ್ವಲ್ಪ ನೋವು ಇದ್ದಿತ್ತೇ ಹೊರತು ಅಪಾಯವೇನೂ ಆಗಲಿಲ್ಲ.

ಚಕ್ರವರ್ತಿಯವರ ಕೌನ್ಸಿಲ್ ಸದಸ್ಯರಾಗಿ ಇರುವ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಕ್ರೂ ರವರು ಕಲಕತ್ತಾಕ್ಕೆ ಪ್ರಯಾಣಮಾಡಿದ ವೇಳೆಯಲ್ಲಿ ಲೆಪ್ಟಿನೆಂಟ್ ಗವರ್ನರ್‌ರವರು ನಾನಾ ಕಡೆಗೆ ಪ್ರಯಾಣಮಾಡುವುದರಿಂದ ಮಹಾರಾಜರು ಸ್ವಾಗತಕ್ಕೆ ಅವಕಾಶವಿಲ್ಲದೆ ಲಾರ್ಡ್‌ರವರಿಗೆ ಆಮಂತ್ರಣವನ್ನು ತಂತಿಯ ಮೂಲಕ ಕೊಟ್ಟಿದ್ದುದಕ್ಕಾಗಿ ಅವರು ತಮ್ಮ ವಂದನೆಯನ್ನು ತಿಳಿಸಿರುತ್ತಾರೆ.

ಕಳೆದ ತಾ॥ ೨೮ರ ರಾತ್ರಿ ಅಲಹಾಬಾದಿನಲ್ಲಿ ಒಬ್ಬ ಐರೋಪ್ಯ ವರ್ತಕನು ತನ್ನ ಅಂಗಡಿಯನ್ನು ಮುಚ್ಚಿ ಮನೆಗೆ ಹೋಗುವುದರಲ್ಲಿ, ಆ ವರ್ತಕನ ಸೇವಕರು ಅಂಗಡಿಯೊಳಗೆ ಹೋಗಿ ನಾಲ್ಕು ಪೆಟ್ಟಿಗೆಗಳನ್ನು ಎತ್ತಿ ಕೊಂಡು ಹೊರಡಲು ಸಿದ್ಧರಾಗಿರುವಾಗ ಆ ಪೆಟ್ಟಿಗೆಗಳಲ್ಲಿ ಅವರ ಪ್ರಯೋಜನಕ್ಕೆ ಬೀಳುವ ವಸ್ತುಗಳಿಲ್ಲದ್ದರಿಂದ ಅವನ್ನು ಬೀದಿಯಲ್ಲೇ ಬಿಟ್ಟು ೩೦೦೦ ರೂ. ಆ ವರ್ತಕನ ಮೇಜಿನಮೇಲೆ ಇದ್ದ ಹಣವನ್ನು ತೆಗೆದುಕೊಂಡು ಹೋದರು. ಇದುವರೆಗೂ ಕಳ್ಳರು ಸಿಕ್ಕಲಿಲ್ಲ. ಆದರೆ ಕಳ್ಳರು ಬಿಟ್ಟು ಹೋದ ಪೆಟ್ಟಿಗೆಗಳಲ್ಲಿ ನಾನಾ ಸಾಮಾನುಗಳೂ ಅವರ ನಿರೀಕ್ಷೆಯಂತೆ ಬೆಲೆ ಕಟ್ಟುವುದಾಗಿ ಹೊರಡಿಸಲ್ಪಟ್ಟಿದ್ದ ಸುಮಾರು ೧೦೦೦೦ ರೂ. ವರೆಗೆ ಅವರು ರುಪಿಸಿ ದ್ದವು ಕಳ್ಳರು ಇನ್ನೂ ಸಿಕ್ಕಿಲ್ಲವೆ.

ಹಿಂದೂ ವಿಶ್ವವಿದ್ಯಾಲಯ ಸಂಬಂಧವಾಗಿ ಆಲೋಚಿಸಲು ಕಳೆದ ತಾ॥ ೨೮ ರಲ್ಲಿ ಅಲಹಾಬಾದಿನಲ್ಲಿ ದರ್ಭಾಂಗ್ ಮಹಾರಾಜರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದಿತು. ಈ ಸಭೆಗೆ ಅನೇಕ ಹಿಂದೂ ಪ್ರಮುಖರು, ಮಿ॥ ವಿ. ಪಿ. ಮಾಧವರಾಯರು ಮೊದಲಾದ ದೊಡ್ಡ ಮನುಷ್ಯರುಗಳು ದಯಮಾಡಿಸಿದ್ದರು. ದರ್ಭಾಂಗ ಮಹಾರಾಜರ ಸಮ್ಮುಖದಿಂದ ಅನೇಕ ಪ್ರಮುಖರು, ಆನರಬಲ್ ಪಂಡಿತ ಸುಂದರಲಾಲ್‌ಯವರು ಡಾಕ್ಟರ್ ರಾಸ್‌ಬಿಹಾರಿ ಘೋಷ್‌ರವರು, ಕಾಸಿಂ ಬಜಾರಿನ ಮಹಾರಾಜರವರು, ಮಿ॥ ಎ. ಚೌಧರಿಯವರು, ಆನರಬಲ್ ಸರ್ದಾರ್ ಸುಂದರ್‌ಸಿಂಗ್‌ರವರು, ಬಾಬು ಮನೀಂದ್ರ ಚಂದ್ರ ನಂದಿ ಚೌಧರಿಯವರು, ಭಗವತಿಯವರು, ಮಿ॥ ವಿ. ಪಿ. ಮಾಧವರಾಯರು, ಆನರಬಲ್ ವಿ. ಕೃಷ್ಣಸ್ವಾಮಿ ಅಯ್ಯರ್‌, ಜೋಧಪುರದ ಮಹಾರಾಜರು, ಆನರಬಲ್ ಮಿ॥ ಶೇಷಗಿರಿ ಅಯ್ಯರ್‌ರವರು, ಆನರಬಲ್ ಹರಿಚಂದರಾಯ್ ವಿಷ್ಣುದಾಸರವರು, ಲಾಲಚಂದ್ ರಾಯ್ ಬಹದ್ದೂರ್‌ರವರು, ಲಾಲ ಹರಿಕೃಷ್ಣಲಾಲರವರು, ಆನರಬಲ್ ಲಾಲ ಹರಿಚಂದ್‌ರವರು, ಆನರಬಲ್ ಲಾಲ ಸುಲ್ತಾನ್ ಸಿಂಗ್‌ರವರು, ಬಾಬಾ ಗುರುಭಕ್ಷ್ ಸಿಂಗ್‌ರವರು, ಸರ್ದಾರ್ ಜೋಗೇಂದ್ರಸಿಂಗ್‌ರವರು, ಆನರಬಲ್ ಮಿ॥ ಆರ್. ಎನ್. ಮುಧೋಳ್ಕರ್‌ರವರು, ಮಿ॥ ವಿ. ಆರ್. ಪಂಡಿತರವರು, ರಾವಲ್ ಪಿಂಡಿಯ ರಾಜಾ ಸಿಂಗ್‌ರವರು, ಆನರಬಲ್ ರಾಜಾ ರಾಮ್‌ಪಾಲ ಸಿಂಗ್‌ರವರು, ಆನರಬಲ್ ಬಾಬು ಗಂಗಾಪ್ರಸಾದವರ್ಮರವರು, ಆನರಬಲ್ ರಾಯ್ ಶ್ರೀರಾಮ ಬಹದ್ದೂರ್‌ರವರು, ಆನರಬಲ್ ಲಾಲ ಸುಖಬೀರ ಸಿಂಗ್‌ರವರು, ಬಾಬು ಮೋತಿಚಂದರವರು, ಮಹಾಮಹೋಪಾಧ್ಯಾಯ ಶಿವಕುಮಾರ ಶಾಸ್ತ್ರಿಯವರು, ಪಂಡಿತ ಗೋಕರ್ಣನಾಥ ಮಿಶ್ರರವರು, ರಾಯ್ ಬಹದ್ದೂರ್ ಚಕ್ರರಾಜ ಅಯ್ಯರ್‌ರವರು, ಶಿವಪುರದ ರಾಜಾ ರಾಮಪಾಲಸಿಂಗ್ ಬಹದ್ದೂರ್‌ರವರು, ಆನರಬಲ್ ರಾಜಾ ಪ್ರತಾಪ ಬಹದ್ದೂರ್ ಸಿಂಗ್‌ರವರು, ಬಾಬು ಲಿಂಗತ ಸಿಂಗ್‌ರವರು, ತಾರಕೇಶ್ವರದ ಮಹಂತರವರು, ಮುನ್ಷಿ ರಾಯ್ ಬಹದ್ದೂರ್ ಬದ್ರಿಪ್ರಸಾದರವರು ಇಂತಿವರು ದೊಡ್ಡ ಮನುಷ್ಯರುಗಳು ವೈಸ್‌ರಾಯರ ಕಾರ್ಯಸರ್ವಾಧಿಕಾರಿ ಸ್ಥಾನದಲ್ಲಿ ವಿದ್ಯಾಶಾಖಾ ಸಂಬಂಧವಾಗಿ ಸೇರಿದ್ದ ಆನರಬಲ್ ಮಿ॥ ಬಟ್ಲರ್‌ರವರನ್ನು ಕಂಡು ಹಿಂದೂ ವಿಶ್ವವಿದ್ಯಾಲಯಕ್ಕಾಗಿ ಸರ್ಕಾರದ ಅನುಮತಿಯನ್ನೂ, ಸಹಾಯವನ್ನೂ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳಬೇಕಾಗಿ ಗೊತ್ತುಮಾಡಲ್ಪಟ್ಟಿತು.

ಪತ್ರಿಕೆ.

'ಊರು ಇದ್ದಲ್ಲಿ ಹೊಲಗೇರಿ ಇರುತ್ತದೆ' ಎಂಬ ನಾಣ್ಣುಡಿಗನುಸಾರವಾಗಿ ನಮ್ಮ ದೇಶದಲ್ಲಿ ಎಲ್ಲಿ ನೋಡಿದರೂ ಧರ್ಮದೇವತೆಯ ಆಲಯಗಳೂ, ಸಮಾಜಗಳೂ ತಲೆದೋರಿ ಅದರ ಬಲ ಕುಗ್ಗಿಹೋಗಿ, ಇರುವವೆಂದು ಗೊತ್ತಾಗುತ್ತದೆ. ವಿವರವಾಗಿ ಹೇಳುವುದಾದರೆ ಕೆಲವು ಸ್ವಾಮಿಗಳು ಧರ್ಮಶಾಸ್ತ್ರವನ್ನೇ ಮರೆತು ಸಭೆಯ ಶಾಸ್ತ್ರ ಸನ್ನಾಹವು ನಿರರ್ಥಕ ಒಳ್ಳೆಯ ಸಂಭ್ರಮದಿಂದ ನಡೆಯುತ್ತಿದ್ದಾಗ್ಯೂ, ಬೇರೆ ಕಡೆ ಕಟ್ಟುವ ಶಾಲೆಗಳು ಪ್ಲೇಗಿನಿಂದ ಕೆಲವು ದಿನ ಮುಚ್ಚಿದ್ದಾಗ್ಯೂ ಯಾರೋ ಪುಣ್ಯಾತ್ಮರು 'ಸ್ತ್ರೀ ವಿದ್ಯಾಭಿವೃದ್ಧಿ' ಯನ್ನೂ ಸಭೆಯಲ್ಲಿ ಹೇಳುತ್ತಾರೆ. 'ಬಂದಾರು ಬರಲಿ' ಎಂದು ಹಾರಿ ಸ್ಥಳಗಳಿಗೆ ವಿವೇಕವಿಲ್ಲದೆ ಸ್ವಾಮಿಗಳನ್ನು ಹಿರಿ ತಮ್ಮ ಅಂತರಂಗವನ್ನು ತೃಪ್ತಿಪಡಿಸಿಕೊಳ್ಳುತ್ತಿರುವರು. ಗುಪ್ತವಾಗಿದ್ದ ತೇಜಸ್ಸಿನ ಲಾಭಕರವಾದ ಮುಂದೆ ವಿದ್ಯಾರ್ಥಿಗಳ ಯಾವ ಶಾಸ್ತ್ರಗಳೂ ನಿಲ್ಲಲಾರವು. ಈ ಸಮಾಜ ಧುರಂಧರರು ಇಂತಹ ದುಷ್ಟತನವನ್ನು ಸ್ವತಃ ನೋಡಿ ಯಾವ ಪುರುಷಾರ್ಥವನ್ನು ಪಡೆಯುವರೋ ದೇವರೇ ಬಲ್ಲ!

ಸನಾತನ ಬಾಂಧವರೇ! ನಿಮ್ಮ ಈ ಮುದ್ದತಿ ನಡಿಯುವಾಗ ಮಹಾಸಭೆಯ ವಿಶೇಷವಾಗಿ ಬರಮಾಡುವುದು. ಮುಂದಿನ ಮಹಾಸಭೆಯ ಪ್ರಯತ್ನ ಸಿದ್ಧವಾದ ಹಿತಸ್ಥಾನದಿಂದ ನಡೆಸಿರುವರು. ಪಟ್ಟಕ್ಕೆ ಇಲ್ಲಿ ಪ್ಲೇಗು ಇಲ್ಲ ಒಂದು ವೇಳೆ ಪ್ಲೇಗಿನ ಗತಿವಿಧಿಯಾದರೂ ಕೂಡ ಅದಕ್ಕೆ ಪ್ರತ್ಯೇಕವಾದ ಸ್ಥಳ ಭಯಪ್ರಮುಖರು, ಧರ್ಮಶಾಲೆ, ಪದಾರ್ಥಗಳು ಇವೆಲ್ಲವುಗಳಿಗಾಗಿ ಅಪರಾಧಕ್ಕೆ ಒಳಗಾಗದಂತೆ ಬರೆ ಒಪ್ಪಿಕೆ ರಚಿಸಲ್ಪಟ್ಟಿರುವುದು. ಅದುದರಿಂದ ಯಾರೂ ಯಾವ ವಿಧವಾದ ಸಂಶಯಕ್ಕೂ ಅವಕಾಶವಿಲ್ಲದೆ ಮಹಾಸಭೆಯ ಕಾರ್ಯಕ್ಕೆ ದಯಮಾಡಿಸಿ ಕೃತಾರ್ಥರಾಗಬೇಕೆಂದು ಪ್ರಾರ್ಥಿಸುತ್ತೇನೆ.

ಭಕ್ತ ಸೇವಕ ಶಾಸ್ತ್ರಿ.

ಪತ್ರವ್ಯವಹಾರ.

ಧಾರವಾಡ

ವೀರಶೈವ ಕೊಣ್ಣೂರ ಕರ್ನಾಟಕದ ಸಂಗೀತ ನಾಟಕ ಮಂಡಳಿಯವರು ಧಾರವಾಡಕ್ಕೆ ಬಂದು ಇಲ್ಲಿ ಕೆಲವು ದಿವಸಗಳ ವರೆಗೆ ತಮ್ಮ ಆಟಗಳನ್ನು ಬಹು ಶ್ಲಾಘ್ಯವಾಗಿ ಆಡಿ ಇಲ್ಲಿಯ ಜನರಿಗೆ ಬಹು ಸಂತೋಷವನ್ನುಂಟುಮಾಡಿದರು. ಈ ನಾಟಕಮಂಡಳಿಯ ಸಂಚಾಲಕರಾದ ಶ್ರೀ ಶಿವಮೂರ್ತಿ ಸ್ವಾಮಿ ಕಣಬರಗಿ ಮಠ ಇವರು 'ಕಲ್ಯಾಣಕ್ಷೇತ್ರ ಧಾರವಾಡ ವೀರಶೈವ ಲಾಯಬ್ರರಿಗೆ' ತಮ್ಮ ಸುಪ್ರಸಿದ್ಧವಾದ 'ಬಸವೇಶ್ವರ' ಆಖ್ಯಾನವೆಂಬ ಒಂದು ಆಟವನ್ನು ತಮ್ಮ ಮಂಡಳಿಯವರ ಕಡೆಯಿಂದ ತಾ॥ ೧೪-೧೧-೧೯೦೯ ರ ದಿವಸ ಆಡಿಸಿ ಅದರಿಂದ ಬಂದ ಉತ್ಪನ್ನವನ್ನು ಧರ್ಮಾರ್ಥವಾಗಿ ಅಗಣಿತ ಉದಾರಮನಸ್ಸಿನಿಂದ ಕೊಟ್ಟರು. ಧಾರವಾಡದ ವೀರಶೈವ ನಿವಾಸಿಗಳು ಸದರಿ ನಾಟಕ ಮಂಡಳಿಯವರಿಗೆ ಬಹು ಪ್ರೇಮದಿಂದ ಸನ್ಮಾನಮಾಡಿದರು. ಆಡಿಸಿದ್ದರ ಆದಾಯ ೩೩೨ ರೂ. ಗಳ ಟಿಕೇಟುಗಳನ್ನು ಧಾರವಾಡ ವೀರಶೈವ ಮಹಾಭಿಮಾನಿಗಳು ತಮ್ಮಿಂದಾದಷ್ಟು ಕೊಂಡು ತಮ್ಮ ನಿವಾಸದಲ್ಲಿ ವಿಕ್ರಯಮಾಡಿಸಿದ್ದಾರೆ. ಈ ಹಣವು ಬಂದಬಂದ ಹಾಗೆ ಧಾರವಾಡದ ಸೇವಿಂಗ್ಸ್ ಬ್ಯಾಂಕಿನಲ್ಲಿ ಸದರಿ ಲಾಯಬ್ರರಿಯ ಟ್ರಜರರಾದ ಮಿ| ಕರವೀರಪ್ಪ ಜೋಕರ್ಣಿ ವಕೀಲ ಧಾರವಾಡ ಇವರು ಇಡುವರೆಂದು ಗೊತ್ತಾಗಿದೆ.

ಎಸ್. ವಿ. ಮೊಗಸಿಸಶೆಟ್ಟಿ,
ಎಲ್. ಇ. ಎಫ್. ಕಮಿಟಿ ಸೆಕ್ರೆಟರಿ.

ವಿಜಾಪುರಪತ್ರಿಕಾ.

ಈ ಕಡೆಗೆ ರಾಜಾ ಮಾಡಿರುವ ಬಳ್ಳಾರಿ ಜಿಲ್ಲಾ ಕಸಬಾ ಹರಪನಹಳ್ಳಿಯಲ್ಲಿರುವ ವ್ಯಾಪಾರಸ್ಥರುಗಳಿಂದ ನಾವುಗಳು ಅತ್ಯಂತ ವಿನಯಪೂರ್ವಕವಾಗಿ ಸ್ತುತಿಸುವುದೇನೆಂದರೆ—

ನಾವು ನಮ್ಮ ಸ್ವದೇಶವನ್ನು ಬಿಟ್ಟು ವ್ಯಾಪಾರಾರ್ಥವಾಗಿ ಈ ಗ್ರಾಮಕ್ಕೆ ಬಂದು ಸುಮಾರು ೩೦ ವರುಷಗಳಾಗುತ್ತಾ ಬಂದು ಈವರೆಗೂ ಯಾವ ತೊಂದರೆಯಿಲ್ಲದೆ ದೇವರ ಅನುಗ್ರಹದಿಂದ ಸುಖವಾಗಿ, ಜೀವಿಸುತ್ತಾ ಬಂದೆವು ಪಕ್ಕದಲ್ಲಿ ಇಲ್ಲಿ ಪ್ಲೇಗು ಪ್ರಾರಂಭವಾಗಿ ನಮ್ಮ ಜನರ ಪ್ರಾಣ ಹಬ್ಬುತ್ತಿಗೆ ತಗಲದ್ದರಿಂದ ನಾವು ತುಂಬಾ ವ್ಯಸನದಿಂದವರಾಗಿ ಇಲ್ಲಿ ಕ್ಯಾಂಪುಗಳನ್ನು ಹಾಕಿಕೊಂಡು ಇರಬೇಕೆಂದರೆ ನಾವು ದೂರದೇಶವಾಸಿಗಳಾದ್ದರಿಂದ ಇರುವದಕ್ಕೆ ಯಾರಿಗೂ ಮನಸ್ಸುಗಳಿಲ್ಲ. ಮತ್ತು ನಮ್ಮ ದೇಶಕ್ಕೆ ಹೋಗಬೇಕೆಂದರೆ ನಮ್ಮ ಅಂಗಡಿಗಳಲ್ಲಿರುವ ಯಾವತ್ತು ಮಾಲನ್ನು ರೈಲ್ವೆ ಮೂಲಕ ಸಾಗಿಸಿಕೊಂಡು ಹೋಗಬೇಕೆಂದರೆ ಯಾರಿಗೂ ಸಾಧ್ಯವಿಲ್ಲದೆ ಹೋಯಿತು. ಇದು ಅಲ್ಲದೆ ಇಲ್ಲಿ ಯಾವತ್ತು ಮಾಲನ್ನು ಇಟ್ಟು ಹೋಗಬೇಕೆಂದರೆ ಅಂಥಾ ನಂಬಿಕೆ ಆಗದೆ ತುಂಬಾ ವ್ಯಸನವುಳ್ಳವರಾಗಿರುವ ಕಾಲದಲ್ಲಿ ಇದೇ ಗ್ರಾಮದಲ್ಲಿ ಸತ್ಪುರುಷರುಗಳು [illegible] ಪರೋಪಕಾರ ನಿರತರಾಗಿ [illegible] ವರ್ತಕ ಶ್ರೇಷ್ಠರಾಗಿರುವ [illegible] ಅನಾಥರಾದ ನಮ್ಮನ್ನು ಆ ವಿಪತ್ತಿನಲ್ಲಿ ತಮ್ಮ ಸ್ವಪುತ್ರರಂತೆ ಭಾವಿಸಿ, ಕಾಪಾಡಿಕೊಂಡು ಬಂದುದಕ್ಕಾಗಿ ದೇವರು ಸದರಿ ಮಹನೀಯರಿಗೂ ಅವರ ಕಳತ್ರಪುತ್ರಮಿತ್ರಾದಿಗಳಿಗೂ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನು ಕೊಟ್ಟು ರಕ್ಷಿಸಲಿ ಎಂದು ಪ್ರಾರ್ಥನೆಮಾಡಿಕೊಳ್ಳುತ್ತೇವೆ.

[illegible] ಪ್ರಾಂತ — [illegible]

ಬೆಳಗಾಂವಿಯಲ್ಲಿ ಕೂಡುವ ೩ ನೇ [illegible] ವೀರಶೈವ ಮಹಾಸಭೆಯು

ಕಳೆದ ವಾರ ೨೨ ರ ನಮ್ಮ ಈ ಪ್ರಿಯ ಸ್ಟಾರ್ ಪತ್ರದಲ್ಲಿ ಈ ಮಹಾಸಭೆಯವರ [illegible] ಗ ಕಮಿಟಿಯ ಮೆಂಬರರ, ಜಿಲ್ಲಾ, ತಾಲ್ಲೂಕು, ಗ್ರಾಮಗಳಲ್ಲಿ ಕಮಿಟಿ [illegible] ಮತ್ತು ದೇಶೀಯರ [illegible] ಗಳನ್ನು ಕಳಿಸಬೇಕೆಂದು ವಿನಂತಿ ಮಾಡಿಕೊಂಡದ್ದು ನಮ್ಮ ಸಮಾಜ ಸ್ವಂಡದ [illegible] ಪತ್ರಿಕಾ [illegible] ಬೇಕಾಗಿ [illegible] ಶ್ರೀ ಮಹಾ [illegible] ರಾ ಜಯದೇವ [illegible] ಮಹಾಸ್ವಾಮಿಗಳವರ [illegible] ಸ್ವಾಮಿಗಳಿಗೂ, ಸಂಸ್ಥಾನಿಕರಿಗೂ, ಜಿಲ್ಲಾ ಕಮಿಟಿಯ ಮೆಂಬರರಿಗೂ, ಇತರ ಮಹನೀಯರಿಗೂ ತಿಳಿಸುವುದೇನಂದರೆ [illegible] ಗಳನ್ನು ಕಳಿಸುವ ಕೃಪೆ ಆಗ ಬೇಕೆಂದು ಪ್ರೇಮದಿಂದ ವಿಜ್ಞಾಪನೆ ಮಾಡಿಕೊಳ್ಳುತ್ತೇವಲ್ಲದೆ, [illegible] ಗಳನ್ನು ಕಳಿಸಬೇಕೆಂದು ಪ್ರಾರ್ಥನೆ [illegible] ತಕ್ಕ [illegible] ಯಲ್ಲಿ ಹೊಂದಿ ತಿಳಿಸುವ

ನ್ನು ಕೊಟ್ಟುದಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿದ್ದೇವೆ ಎಂದು ತಿಳಿಸಿಕೊಳ್ಳುವೆವು

No 1077.

ಶ್ರೀಮನ್ಮಹಾರಾಜಾ ವಿರಾಜಿತ ಜಗದ್ಗುರು ಪಂಚಾಚಾರ್ಯರೆಂದು ಮಹಾಸ್ವಾಮಿಗಳವರ—

ರಾಜಮಾನ್ಯ ರಾಜಶ್ರೀ ವೀರಶೈವ ಮಹಾಸಭೆಯ ಚೇರ್ ಸೆಕ್ರೆಟರಿ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರಿಗೆ— ಚಿತ್ರದುರ್ಗದ ॥ ॥ ಸಿಂಹಾಸನದಿಂದ—ನಿಮ್ಮ ಪತ್ರಿಕೆಯಲ್ಲಿ ಪ್ರಸಿದ್ಧಿಸಿದ ವಿಷಯ ಮಹಾಸಂಸ್ಥಾನದ ಗಮನಕ್ಕೆ ಬಂದಿದೆ. ನಮ್ಮ ಮಹಾಸ್ವಾಮಿಗಳವರಿಗೆ ಅಧಿಕಾರವಾದ ಎಂಟು ಮಠಗಳಲ್ಲಿ ನಡೆಯುವ ವಿದ್ಯಾಭಿವೃದ್ಧಿ, ಶ್ರೀ ಮಠಕ್ಕೆ ಅದಕ್ಕೆಮಾಡಬೇಕಾದ ಕಟ್ಟಳೆ ಮೊದಲಾದ ಪ್ರತಿಯೊಂದು ಕಾರ್ಯದ ಆದಾಯವ್ಯಯಗಳ ಲೆಕ್ಕವನ್ನು ಆಯಾ ಕಾರ್ಯದ ಮಹತ್ವದ ವಿಷಯದಲ್ಲಿ ವಿವರವಾಗಿ ತಿಳಿಸುವರು ಅವಕ್ಕೆ ತೋರುವುದರಿಂದ, ಇದಕ್ಕಾಗಿ ನಿಧಾನ ಒಂದು ತಿಂಗಳಕಾಲ ಬೇಕಾಗುತ್ತದೆ. ಪ್ರಯುಕ್ತ ಡಿಸೆಂಬರ್ ತಾ॥ ೩೦ ರ ಒಳಗೆ ನಿರೀಕ್ಷಿಸಬೇಕಾಗಿ ವಿಜ್ಞಾಪಿಸುವದಲ್ಲದೆ ಸಾಧ್ಯವಾದಷ್ಟು ತೀವ್ರ ಕಳಿಸುತ್ತೇವೆ."

ಮುಕ್ಕಾಮು ಚಿತ್ರದುರ್ಗ
ತಾಲ್ಲೂಕು ಕೆಳಗಿನಕೋಟೆ
ತಾ॥ ೨೪-೧೧-೧೯೦೯. } (ಸಹಿ) Lingapa Agent

ಮೇಲ್ಕಂಡ ಪತ್ರವನ್ನು ನೋಡಿ ಇಂಥಹ ಜಗದ್ಗುರುಗಳಿಗೆ ಸಾವಿರಾರು ಲೆಕ್ಕಗಳಿದ್ದರೂ ಈ ವಿಷಯದ ಕಡೆಗೆ ಹೆಚ್ಚಾಗಿ ಲಕ್ಷ್ಯ ಗಮನಿಸಿಕೊಟ್ಟು ಉತ್ತರರೂಪದಿಂದ ಆಶೀರ್ವಾದಿಸಿದರು, ನಾವು ಕೈಕೊಂಡು ಶ್ರಮಕ್ಕೆ ತಕ್ಕ ಫಲವು ದೊರಕದೆ ಇರಲಾರದೆಂಬ ಭರವಸೆಯನ್ನುಂಟುಮಾಡಿದೆ. ಅವರ ವಿಷಯಗಳ ಕೇಳಿದ ತಾ॥ ೩೦-೧೨-೧೯ ಮಧ್ಯದ ಬಳಕೆವಾಗಿದಾಗ್ಯೂ ಸ್ವಲ್ಪ ಕಾಲ ಬೇಕೆಂದು ತಿಳಿದು ಒಪ್ಪಲಿಕ್ಕೆ ನಮಗೆ ತುಂಬಾ ಹರ್ಷವಾಗಿದೆ. ಇದರಂತೆಮಾತ್ರ ಉಳಿದವರು ದಯಮಾಡಿ ಮುಂದೆ ಬರುವ ೩ ನೆಯ ಡಿಸೆಂಬರದೊಳಗಾಗಿ ತಂತಮ್ಮ ಭಾಗದ ವಾರ್ಷಿಕ ರಿಪೋರ್ಟುಗಳನ್ನು ಕಳಿಸಬೇಕು. ಇದನ್ನು ಸರ್ವ ಮಠಾಧಿಕಾರಿಗಳು ಸಹ ಗಮನಿಸತಕ್ಕದ್ದು. ಈ ಸಭೆಗೆ ಸ್ವಾಗತಕಮಿಟಿಯ ಮೆಂಬರರು ಮುಖ್ಯವಾಗಿ ಬರುವ ಕೃಪೆಮಾಡಬೇಕು.

ಯಾವತ್ತು ಡೆಲಿಗೇಟ್ಸ—ಪ್ರತಿನಿಧಿಗಳಿಗೆ ಒಂದೇ ಸ್ಥಳದಲ್ಲಿ ಇಳಿಸಿಕೊಳ್ಳಲು ಬರುವಂತೆ ವ್ಯವಸ್ಥೆ ಮಾಡಿರುತ್ತದೆ. ಅದರಿಂದ ಅವರ ಅನುಕೂಲ್ಯ ಹೇಳಿಯು ಬರುವ ಹೋಗುವದರಲ್ಲಿ ವ್ಯರ್ಥ ಹೋಗದಂತೆ ಸಭಾಮಂಟಪಕ್ಕೂ, ಇಳಿಸಿಕೊಳ್ಳುವ ಸ್ಥಳಕ್ಕೂ, ಭೋಜನಾಲಯಕ್ಕೂ ೩೦ ಗಜಗಳ ಅಂತರ ಇಟ್ಟಿರುತ್ತದೆ. ಅದರಿಂದ ಸಮಾಜದ ಕೆಲಸ ಬಹು ಚನ್ನಾಗಿ ಆಗುವ ಸಂಭವವಿದೆ. ಮಹಾಸಭೆಯಲ್ಲಿ ವ್ಯಾಖ್ಯಾನಕೊಟ್ಟವರನ್ನು ಹೇಳುವನ್ನ ಕಳಿಯಿಂದ ಹೊರಡ ವಿಷಯಗಳನ್ನು ಅನುಭವದಲ್ಲಿ ತರುವದೂ, ತಂದದ್ದು ಹ್ಯಾಗೆ ನಡೆಯುತ್ತವೆ ಅದನ್ನು ನೋಡುವದೂ, ಅದರಲ್ಲಿ ವಿಚಾರಣೆ ಕೊಟ್ಟು ಕಡಿಮೆ ಮಾಡುವದೂ ಇದರಲ್ಲಿ ಹೆಚ್ಚು ಫಲ ಕಳಿಯದು ಅವಕ್ಕೆ, ಯಾವತ್ತು ಪ್ರಾಂತಿಕ ಕಮಿಟಿಯ ಮೆಂಬರರೂ, ಸಂಸ್ಥಾನಿಕರೂ, ಸಿಂಹಾಸನಾಧಿಪತಿಗಳೂ, ಮಹಾಸಂಪತ್ತಿವರೂ ಅಗತ್ಯ ಬರಬೇಕು. ಧರ್ಮದ ವಿಷಯಗಳು ನಡೆಯುವದಿಲ್ಲಂತಾ ಕೆಲವರು ವಿವಾದಪಟ್ಟು ಪತ್ರಗಳನ್ನು ಬರೆದಿರುವರು, ಅದು ಬಾಗಲ್ಲ ಹಿಂದೆ ಮಹಾಸಭೆಗಳಲ್ಲಿ ಬಂದಿರುವ ವಿಷಯಗಳಲ್ಲಿ ಈ ವಿಷಯವು ಬಂದೇ ಬರುವದು ಹೊರಗಾಗಿ ವೀರಶೈವ ಧರ್ಮದ ಮೂಲತತ್ವಗಳು, ಅದರ ಉದಾತ್ತ ವಿಚಾರಗಳು ಈ ವಿಷಯವು ಮುಖ್ಯವಾಗಿ ಸಭೆಯಲ್ಲಿ ನಡೆಯುವದು. ಹೆಚ್ಚಿನ ಧರ್ಮದ ವಿಷಯಗಳನ್ನು ಶ್ರೀ ಶಿವಯೋಗಮಂದಿರದಲ್ಲಿ ಪ್ರತಿ ವರ್ಷ ಕೂಡತಕ್ಕ ಸಭೆಯಲ್ಲಿ ನಡಿಸುವದು ಹೆಚ್ಚು ಶ್ರೇಯಸ್ಕರವಾಗಿದೆ. ಆ ಮಂತ್ರವು ಇತ್ತೀಚೆಯ ಮುಕ್ತೊಂದು ಕಡೆ ಕೊಡಲ್ಪಟ್ಟಿರುವುದು. ಅದನ್ನು ಸಮಾಜ ಪ್ರಿಯರಾದ ನಮ್ಮ ವೀರಶೈವ ಬಂಧುಗಳು ನೋಡಿಕೊಂಡು ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ಕೋರುವೆವು. ಪ್ರೇಕ್ಷಕರಾಗಿ ಬರುವ ಬಂಧುಗಳು ತಮಗೆ ವಾಸಸ್ಥಳದ ಅನಾನುಕೂಲತೆ ಆಗುವಂತೆ ಕಂಡುಬಂದಲ್ಲಿ ನಮಗೆ ಮುಂದಾಗಿ ಪತ್ರಬರೆದಲ್ಲಿ ಅವರ ಯೋಗ್ಯ ವ್ಯವಸ್ಥೆಯನ್ನು ಆನಂದದಿಂದ ಮಾಡುವೆವು. ಅವರು ಪತ್ರವನ್ನು ಮುಂಚಿತವಾಗಿ ಬರೆಯದೆ ಇದ್ದ ಪಕ್ಷದಲ್ಲಿ ಮಾತ್ರ ನಮ್ಮನ್ನು ನಿಕ್ಕಬಿಲ್ಲವು.

ಶ್ರೀ ಬೀಳೂರ ಸ್ವಾಮಿಗಳು ಈ ವಾರದಲ್ಲಿಯೇ ಬೆಳಗಾಂವಿಗೆ ಒಂದಿವಸಬಂದಾಗಿ ಬರವಸೆಕೊಟ್ಟಿರುವರು. ಅವರು ಆದರಂತೆ ಬಂದು ಸಭೆಯ ಕೆಲ್ಸವು ಪೂರ್ಣವಾಗುವವರೆಗೆ ನಿಲ್ಲುವರು. ಶ್ರೀಮದ್ವಿರಾಜಿತ ವಾಸವಗಳ ಕಂದಕಮಠದ ಸ್ವಾಮಿಗಳು ಕೆಲವು ಅನಿವಾರ್ಯ ಕೆಲಸಗಳಿರುವುದರಿಂದ ತಾವು ಬೆಳಗಾಂವಿಗೆ ಬರಲಾಗದಿದ್ದುದಕ್ಕೆ ವಿಷಾದವನ್ನು ಸೂಚಿಸಿ ಸಭೆಕೂಡುವ ಮುಂಚೆ ಒಂದು ವಾರದಮೊದಲಾಗಿ ಬರುವೆವು. [illegible] ಕೃಪೆಯಿಂದ ಸಭಾಮಂಟಪ

ವರೆಲ್ಲವು ಭರದಿಂದ ನಡೆದಿವೆ. ಅದು ಬೆಳಗಾಂವಿಯ ಅಗ್ರಹಾರ ದಿಕ್ಕಿಗೆ ಸ್ಟೇಷನ್ನದಿಂದ ಅಂದಾಜು ಒಂದುಮೈಲು ದೂರವಾಗಿ ಯೂ, ಶಹಾಪುರ, ವಡಗಾವಿ ಗ್ರಾಮಗಳ ಪ್ರಾರಂಭಕ್ಕೂ ಇರುವ ಅತ್ಯುತ್ತಮ ಸ್ಥಳದಲ್ಲಿ ಗೊತ್ತಾಗಿದೆ. ಅದರ ಸಮೀಪದಲ್ಲಿಯ ಅತ್ಯುತ್ತಮ ಅಮೃತ ಸ್ಥಳಗಳೆಂದ ಕಟ್ಟಿಗೆ ಇಂಬಾಗಿ ತೋರುವ ಉದ್ಯಾನದೊಳಗೇ ಕೇವಲ ಪವಿತ್ರವಾಗಿರುವ, ಅಂದರೆ ಕೊರತೆಯಾದ ಭೋಜನಾಲಯವನ್ನೂ, ಅದಕ್ಕೆ ಸಮೀಪಿಸಿ ಪ್ರತಿನಿಧಿಗಳೆಂಬ ಪರಿಷತ್ತಿನ ಗೃಹಗಳನ್ನೂ ನಿರ್ಮಾಣ ಮಾಡಿಸಲಾಗಿದೆ. ಅಲ್ಲಿಗೆ ತಾಗುವಂತೆಯೂ, ಹಾಗೆಯೇ ನೀರಿನಮಠವೂ ತಾಗಿ ಇರುವದರಿಂದ ಅಡಿಗೆ [illegible] ತೀರ ಹೊತ್ತಿನಲ್ಲಿ ಬರೆದು ತಿಳಿಸುವುದಕ್ಕಿಂತ ಬಂದು ನೋಡುವದೇ ಉತ್ತಮ ಪಕ್ಷವೆಂದು ಬರೆಯುವದನ್ನು ಬಿಟ್ಟಿರುವೆವು.

ಕಾರಣ ಮೇಲಿನ ವಿನಂತಿಯನ್ನು ಸರ್ವರೂ ಸ್ವೀಕರಿಸಿ ತಂತಮ್ಮ ಕರ್ತವ್ಯವನ್ನು ತಕ್ಕಸಮಯದಲ್ಲಿ ಮಾಡಿ ಕೀರ್ತಿಗೆ ಭಾಜನರಾಗುವರೆಂದು ಕೋರುವ ವಿಶ್ವಪ್ರಿಯರಾದ

ಶಿವಮೂರ್ತಿಸ್ವಾಮಿ ಕಣಬರಗಿಮಠ
ಚೇರ್ ಸೆಕ್ರೆಟರಿ ೩ ನೇ ವೀರಶೈವ
ಮಹಾಸಭೆ ಬೆಳಗಾಂ.

೩ ನೆಯ ಶ್ರೀವೀರಶೈವ ಮಹಾಸಭೆಯು.

ಬೆಳಗಾಂವ

ಸಕಲ ವೀರಶೈವ ಮಹನೀಯರಿಗೆ ಪ್ರೇಮಪೂರ್ವಕ ಆಮಂತ್ರಣವು

ಈ ವರ್ಷ ಬೆಳಗಾಂವಿಯಲ್ಲಿ ೩ ನೇ ಶ್ರೀವೀರಶೈವ ಮಹಾಸಭೆಯನ್ನು ಇದೇ ವರ್ಷ ಡಿಸೆಂಬರ ತಿಂಗಳ ೨೯-೩೦-೩೧ ಬುಧವಾರ, ಗುರುವಾರ, ಶುಕ್ರವಾರ ಮಾಡಿಸುವದನ್ನು ಗೊತ್ತುಮಾಡಿದ್ದು ತಮ್ಮೆಲ್ಲರಿಗೆ ನಮ್ಮ ಪ್ರಿಯ ಮೈಸೂರ ಸ್ಟಾರಪತ್ರದ ಮುಖಾಂತರ ಗೊತ್ತಿರುವದಷ್ಟೇ. ಧಾರವಾಡ, ಬೆಂಗಳೂರ, ಸೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ ಪಟ್ಟಣಗಳಲ್ಲಿ ಈ ಮಹಾ ಸಭೆಗಳು ಆಗಿ ಹಾವೆಲ್ಲರೂ ತಮ್ಮ ಮಹತ್ವದ ಕೆಲಸಗಳ ಕಡೆಗೂ, ತಾತ್ಪುರತ ಕಡೆಗೂ, ಹಣದ ಕಡೆಗೂ ಲಕ್ಷಕೊಡದೆ ಕೇವಲ ನಮ್ಮ ಸಮಾಜದ ಹಿಂದಕ್ಕೆ ಸರ್ವವಿಷಯಗಳಲ್ಲಿ ಪ್ರವೀಣತೆಯನ್ನು ಹೊಂದಿದ್ದು, ಇನ್ನಿಕಡೆಗೆ ಧರ್ಮಗ್ಲಾನಿ, ವಿದ್ಯೆಯ ಉಪೇಕ್ಷೆ, ಕೈಗಾರಿಕೆಯಲ್ಲಿ ಹಿಂದಾಗಿ, ವ್ಯಾಪಾರದಲ್ಲಿ ಬಿರಾಸೀನತೆಯುಳ್ಳದ್ದಾಗಿ, ಒಕ್ಕಲತನದಲ್ಲಿ ಆಲಸ್ಯವುಳ್ಳದ್ದಾಗಿ ಇವೇ ಮೊದಲಾದ ಸ್ಥಿತಿಗೆ ಬಂದುದನ್ನು ನೋಡಿ ನಮ್ಮ ಸಮಾಜದ ಮುಂದಿನ ಕೆಳವಳಿಕೆಯು ಅದರ ಜೀರ್ಣೋದ್ಧಾರ ಮಾಡುವ ಕುರಿತು ಬಗೆಬಗೆಯ ಕೋರಿಕೆಗಳನ್ನು ಮಾಡಿದ್ದರಲ್ಲಿ, ಈ ಪ್ರಕಾರದ ಸಭೆಗಳನ್ನು ಕೂಡಿಸಿ ನಮ್ಮ ಸಮಾಜದ ಜಾಗೃತಿಯನ್ನು ಪಡಿಸುವ್ದು ಮಹತ್ವದ್ದಾಗಿದೆ ಎಂಬುದರಲ್ಲಿ ಹಿಂದಾದ ಸಭೆಗಳವರ [illegible] ಸಂದೇಹವಿಲ್ಲದ್ದಾಗಿದೆ. ಈ ಸಭೆಗಳಿಂದ ಅನೇಕ ಪ್ರಕಾರದ ಲಾಭಗಳಾದಾಗ್ಯೂ, ಆಗ ಸ್ಥಿರವಾದಾಗ್ಯೂ, ಪ್ರತಿವರ್ಷ ಕೆಲವು [illegible] ಸಭೆಯನ್ನು ಕೂಡಿಸುವದು ಅವಶ್ಯಕವು [illegible] ಸಮಾಜದ ಅಭಿಮಾನಿಗಳೂ, ಹಿತಚಿಂತಕರಿಗೂ ಕಂಡುಬಂದದರಿಂದ ಈ ವರ್ಷ ಬೆಳಗಾಂವಿಯಲ್ಲಿ ಕೂಡತಕ್ಕ ಈ ಆರನೇ ಸಭೆಯ [illegible] ಮಹತ್ವದ ವಿಷಯಗಳ ನಿರ್ಣಯವಾಗಿ [illegible] ಕೆಳಗೆ [illegible] ಪರಂಪರೆಯಾಗಿ ಬೆಳೆಯುವ ಮಾರ್ಗ ವನ್ನು ತೋರಿಸಿ ಈ ಮಹಾಸಭೆಗಳ ಪರವಾಗಿ ಹಿಂದೆ ಪಾಸಾದ ವಿಷಯಗಳು ಅನುಭವದಲ್ಲಿ ಬರುವ ಕುರಿತು ತಕ್ಕ ವಿಚಾರಗಳನ್ನು ತಮ್ಮೆಲ್ಲರ ಅಮೂಲ್ಯ ವಿಚಾರಗಳಿಂದಲೂ, ಸೂಚನೆಗಳಿಂದಲೂ ಗೊತ್ತು ಮಾಡತಕ್ಕದ್ದಿದೆ. ಕಾರಣ ವಿದ್ಯಾವಂತರೂ, ಸಮಾಜ ಶುಭಚಿಂತಕರೂ, ಪಂಡಿತರೂ, ಅಭಿಮಾನಿಗಳೂ ಅದ ನೀವೆಲ್ಲ ಮಹನೀಯರೂ ಈ ಸಭೆಗೆ ತಪ್ಪದೆ ಬರುವರೆಂದು ಅಪೇಕ್ಷಿಸುವೆವು.

೧ ಈ ಸಭೆಯನ್ನು ಇನ್ನೂ ಹೆಚ್ಚಿನ ವಿಷಯಗಳ ಸ್ತುತಿ ಅಗ್ರಿಕಲ್ಚರ ಅಸೋಸಿಯೇಶನ್, ಭೂಮಿಗಳನ್ನು ಉತ್ತಮರೀತಿ ಸಾಗುವಮಾಡುವದು, ಗೋವುಗಳ ಪಾಲನೆ, ದನಗಳ ಸಂಗೋಪನೆ, ಬೀಜಗಳ ಉತ್ಪತ್ತಿ ಇವುಗಳ ಮಾಹಿತಿ ಯನ್ನು ಕೊಡುವದಕ್ಕಾಗಿ ನಮ್ಮ ಶಿಕ್ಷಿತ ವೀರಶೈವರ ಸಮಾಜದ ಬೆಳಗಿ ಪಣಿಕರ [illegible] ಪುಣೆಯ ಅಗ್ರಿಕಲ್ಚರಲ್ ಕಾಲೇಜದ ಪ್ರಿನ್ಸಿಪಾಲರಾದ (ಪಂಡಿತ) ಪ್ರೊಫೆಸರ್ ಅವರ ದೇಶಲ್ಲಿ ವ್ಯಾಖ್ಯಾನವುಳ್ಳ ಬಾಂಬೆಗವರ್ನಮೆಂಟಿನ, ಸ್ಟೇಟ್ ಮತ್ತು ಕೋಆಪರೇಟಿವ್ ಕ್ರೆಡಿಟ ಸೊಸಾಯಿಟಿಗಳ ಪರವಾಗಿ ಮೋಟಗುಪ್ಪ ಸಿ. ಎಲ್. ಕ್ಯಾಂಪ್‌ಬೆಲ್ ಸಾ. ಬಾ. ಸಿ. ಸಿ. ಏಸ್., ರವರ ಪರವಾಗಿ ಕೆಲವು ಪ್ರವೀಣ ವ್ಯಾಖ್ಯಾತೃಗಳು ಬರಲು ಪ್ರೇಮದಿಂದ ಒಪ್ಪಿಕೊಂಡಿರುವರು.

೩. ಈ ಮಹಾಸಭೆಯು ಇದೇ ಡಿಸೆಂಬರ ತಿಂಗಳ ೨೯, ೩೦, ೩೧ ದಿವಸ ಕೂಡತಕ್ಕದ್ದಿರುವದರಿಂದ, ನಾವು ಮತ್ತು ಸಹಿ [illegible] ಸೂಚನೆಗಳನ್ನು ಇಲ್ಲಿ ಸಭೆಗಳನ್ನು ಕೂಡಿಸಿ ಪ್ರತಿನಿಧಿಗಳನ್ನು ಆರಿಸಿ ತಾ. ೧೦ ನೇ ಡಿಸೆಂಬರ [illegible] ದೊಳಗಾಗಿ ಬಾಕಿ ಇರುವ ನಮೂನೆಗಳಲ್ಲಿ ಪ್ರತಿನಿಧಿಗಳ

ಳ ಹೆಸರನ್ನು ಬರೆದು ಅಧ್ಯಕ್ಷರ ಸಹಿಯಿಂದ ಚೀಫ ಸೆಕ್ರೆಟರಿಗಳ ಕಡೆಗೆ ಕಳಿಸುವ ವ್ಯವಸ್ಥೆಯಾಗಬೇಕು. ಪ್ರತಿನಿಧಿಗಳಾಗಿ ಬಾರದವರು ಪ್ರೇಕ್ಷಕರಾಗಿಯಾದರೂ ತಪ್ಪದೆ ಬರುವಂತೆ ಅನುಗ್ರಹಿಸಬೇಕು.

೬. ಈ ಸಭೆಯಲ್ಲಿ ಯಾವ ಕೆಲಸಕ್ಕೋಸ್ಕರವಾಗಿ ಯೂ ವರ್ಗಣಿರೂಪದಿಂದ ಹಣವನ್ನು ಎತ್ತುವಂತಿಲ್ಲ. ಇದನ್ನು ಮಾತ್ರ ತಾವು ದಯವಿಟ್ಟು ಮರೆಯಬಾರದು

೭. ಯಾವದೇ ಪ್ರಕಾರದ ರಾಜಕೀ ವಿಷಯಗಳ ಚರ್ಚೆಯನ್ನು ಈ ಸಭೆಯಲ್ಲಿ ಮಾಡಲಿಕ್ಕೆ ಅಪ್ಪಣೆಯು ಸರ್ವಥಾ ದೊರೆಯಲಾರದು.

೮. ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಹಾಗು ಉಪನ್ಯಾಸ ಕೊಡತಕ್ಕ ಪಂಡಿತರು ಇವರುಗಳಿಗಾಗಿ ನೇಮುಗಳನ್ನು ಇದರಡಿಯಲ್ಲಿಯೇ ಕೊಟ್ಟಿರುತ್ತದೆ ಅದನ್ನು ತಾವೆಲ್ಲರೂ ದಯವಿಟ್ಟು ಅವಲೋಕಿಸಬೇಕು

೯. ಮೈಸೂರು ಸ್ಟಾರಿನಲ್ಲಿ ತಾ. ೧೩-೧೧-೧೯೧೧ ರಲ್ಲಿ ಸಂಚಿಕೆ ೪೬ ಯಲ್ಲಿ ಈ ಸಭೆಯ ಪರವಾಗಿ ನಮ್ಮ ಸಮಾಜದ ಅಭಿಮಾನಿಗಳಿಗೆ ಮಾಡಿದ ವಿನಂತಿಯನ್ನು ಮನ್ನಿಸಿ ಅನುಗ್ರಹಿಸುವಿರೆಂದು ಆಶಿಸುವೆವು.

೧೦. ಈ ಆರನೇ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವದಕ್ಕೆ ಶ್ರೀಮಂತ ಸರದಾರ ಬುಳ್ಳಪ್ಪಾ ಬಸವಂತರಾವ ದೇಸಾಯಿ ಸಂಸ್ಥಾನ ಹಂದಿಗನೂರ ತಾಲೂಕ ಹಾವೇರಿ ಜಿಲ್ಲಾ ಧಾರವಾಡ ಇವರು ಪ್ರೇಮದಿಂದ ಒಪ್ಪಿಗೆಯನ್ನು ಕೊಟ್ಟಿರುವರೆಂದು ತಿಳಿಸಲು ನಮಗೆ ತುಂಬಾ ಆನಂದವಾಗುತ್ತದೆ.

೧೧. ಸಭೆಯು ತಮ್ಮದು. ತಾವು ಸಮಾಜಸುಧಾರಕರೂ ಶಾಸ್ತ್ರಕೋವಿದರೂ ಇರುವದರಿಂದ ಸಮಾಜಹಿತಕ್ಕಾಗಿ ಈ ಮಹಾಸಭೆಗೆ ತಾವು ತಪ್ಪದೆ ಬಂದು, ಸಭೆಯ ಕಾರ್ಯವನ್ನು ನೆರವೇರಿಸಿ ಇಹಪರ ಕೀರ್ತಿಗೆ ಭಾಜನರಾಗುವಿರೆಂದು ಅಪೇಕ್ಷಿಸುವ ತಮ್ಮ ಪ್ರೀತ್ಯಾಸ್ಪದರಾದ,

ಚೆಯರಮನ್.—(೧) ಶ್ರೀ. ಸಿದ್ಧಲಿಂಗಸ್ವಾಮಿ ಪಟ್ಟದ್ದೇವರು ಹಿರೇಮಠ. ವೈಸ್‌ಚೆಯರಮನ್‌‌—(೨) ವೀರಭದ್ರಗೌಡಪ್ಪಾ ಸರನಾಯಕ ಬಸಪ್ಪಗೌಡ ದೇಸಾಯಿ ಬಾಚಿಗೇರ. (೩)ಚನಬಸಪ್ಪಾ ಗುರುಸಿದ್ದಪ್ಪಾ ದೋಳೆಮಲ್ಲ (೪)ಚನಮಲ್ಲಪ್ಪಾ ಶಿವಲಿಂಗಪ್ಪಾ ಕಿತ್ತೂರ (೫)ಶಿವಮೂರ್ತಯ್ಯಾ ಗದಿಗಯ್ಯಾ ಕುಂದಗೋಳಮಠ. (೬) ಗುಂಡಪ್ಪಾ ವೀರುಪಾಕ್ಷಪ್ಪಾ ಹೊಸ್ಕೋಟಿ. (೭) ಶಿವಲಿಂಗಪ್ಪಾ ಮಲ್ಲಪ್ಪಾ ಇಟಗಿ. (೮) ಪರಮಶೆಟ್ಟಿ ಶಾಂತಪ್ಪಾ ಪಾಟೀಲ (೯) ವೀರಭದ್ರ ನಿರವಾಣೆಪ್ಪಾ ಘೋಡಗೇರಿ. (೧೦) ಚನಬಸಪ್ಪಾ ಬಸೆಟ್ಟೆಪ್ಪಾ ಲಕ್ಕಶೆಟ್ಟಿ. ಎಕ್ಸ್ ಅಫಿಸಿಯೋ—(೧) ವಿ ಹಾಲಿಂಗಸ್ವಾಮಿ ಕೆಣಬರಗಿ ಮಠ. ಟ್ರಿಯುರರ ಜಾಯಿಂಟ ಸೆಕ್ರೆಟರಿ ಚೀಫ ಸೆಕ್ರೆಟರಿ.—(೧)ಶಿವಮೂರ್ತಿಸ್ವಾಮಿ ಕೆಣಬರಗಿಮಠ

೬ ನೇ ಶ್ರೀವಮ್ವೀರಶೈವ ಮಹಾಸಭೆಯಲ್ಲಿ ನಡೆಯತಕ್ಕ ವಿಷಯಗಳು.

೧ ಹಿಂದಿನ ೫ ಸಭೆಗಳಲ್ಲಿ ಪಾಸಾದ ವಿಷಯಗಳ ಅವಲೋಕನೆಮಾಡಿ. ಅವುಗಳಲ್ಲಿ ಎಷ್ಟು ಬಂದಿರುತ್ತವೆ, ಅವು ಹ್ಯಾಗೆ ನಡದವು, ಅವುಗಳಲ್ಲಿ ವಿನಾದರೂ ಮಹಾಸಭೆಯು ವತಿಯಿಂದ ಹೆಚ್ಚು ಕಡಿಮೆ ಮಾಡುವದಿರುವದೋ ಹ್ಯಾಗೆ? (೩) ಅವುಗಳಲ್ಲಿ ಬಾರದೆ ನಿಂತ ವಿಷಯಗಳ ಅವಲೋಕನೆ ಮಾಡಿ, ಅವು ಎಷ್ಟು, ಯಾಕೆ ನಿಂತವು? ಅವುಗಳ ಯೋಗ್ಯ ನಿರ್ಣಯಮಾಡುವದು.

೨. ವೀರಶೈವ ಮತದ ಮೂಲತತ್ವಗಳು ಅದರ ಉದಾತ್ತ ವಿಚಾರಗಳು.

೩. ವೀರಶೈವ ಸಮಾಜಕ್ಕೆ ಬೇಕಾದ ವಿದ್ಯೆ—(ಅ) ಪ್ರಾಥಮಿಕ ಶಿಕ್ಷಣ, ಇಂಗ್ಲೀಷ ರಾಜಭಾಷೆ (ಬ) ಕರ್ನಾಟಕ ಪ್ರಾಂತದಲ್ಲಿ ಆರ್ಟ್ಸ ಕಾಲೇಜದ ಅವಶ್ಯಕತೆ. (ಕ) ವಿದ್ಯಾರ್ಥಿಗಳ ಭೋಜನ, ವಸತಿಗೃಹಗಳ ಅವಶ್ಯಕತೆ. (ಡ) ಸ್ತ್ರೀ ಶಿಕ್ಷಣದ ಅವಶ್ಯಕತೆ. (ಈ) ದಾನಪದ್ಧತಿ, ಅದರ ಉಪಯುಕ್ತತೆ ಮತ್ತು ಪರಿಣಾಮ

೪. ವೀರಶೈವ ಸಮಾಜದವರ ವ್ಯಾಪಾರ—(ಅ) ಸಂಘಶಕ್ತಿ—ಸಮಾಯಿಕ ಭಾಂಡವಲದಿಂದ ಮಾಡುವ ವ್ಯಾಪಾರ. (ಬ) ಪರದೇಶಗಳ ಕೂಡ ಮಾಡುವ ವ್ಯಾಪಾರ ಪದ್ಧತಿ. (ಕ) ಕೋಆಪರೇಟಿವ್ಹ ಕ್ರೆಡಿಟ ಸೋಸಾಯಿಟಿಗಳ ಸ್ಥಾಪನ. (ಡ) ಕೋಆಪರೇಟಿವ್ಹ ಸ್ಟೋರುಗಳು, ಅವುಗಳ ಪ್ರಸಾರ. (ಈ) ನೀಪ್ಲಸರ್ಸ, ಕೋಆಪರೇಟಿವ್ಹ ಅರ್ಬೋಸಿಯೇಶನ್. (ಎಫ್) ಬ್ಯಾಂಕುಗಳು ಅಥವಾ ದ್ರವ್ಯನಿಧಿಗಳ ಉಪಯೋಗ. (ಜಿ) ಯಂತ್ರಗಳಿಂದ ಮಾಡಿಸುವ ಕೆಲಸಗಳು.

೫. ವೀರಶೈವ ಸಮಾಜದವರ ಒಕ್ಕಲತನ.—(ಅ) ಅಗ್ರಿಕಲ್ಚರ ಅಸೋಸಿಯೇಶನಗಳ ಅವಶ್ಯಕತೆ. (ಬ) ಹೊಸ ಯಂತ್ರಗಳಿಂದ ಹೊಲಗಳನ್ನು ಸಾಗುಮಾಡುವದು. (ಕ) ತರತರದ ಗೊಬ್ಬರಗಳ ಅವಶ್ಯಕತೆ. (ಡ) ಒಕ್ಕಲತನದ ಸಿರ್ಪಾ ಶಾಸ್ತ್ರ ಮಾಹಿತಿಯು, ದನಗಳ ಸಂಗೋಪನ ಅವುಗಳ ಸಂ

೬. ವೀರಶೈವದ ಪತಿಯಿಂದ ಜರುಗುತ್ತಿರುವ ಮೈಸೂರ ದರ್ಬಾರಪತ್ರವು—(ಅ) ಈ ಪತ್ರದ ಮಾಲಿಕರಿಗೆ ಪ್ರತಿವರ್ಷ ಆಗುತ್ತಿರುವ ಹಾನಿ, ಚಂದಾದಾರರ ಉದಾಸೀನತೆ, ಪತ್ರದಲ್ಲಿ ಆವಶ್ಯವಿರುವ ಮಟ್ಟಿಗೆ ಸುಧಾರಣೆ ಮತ್ತು ಪ್ರೋತ್ಸಾಹದ ವಿಚಾರವು (ಬ) ಮೇಲಿನ ೨, ೩, ೪ ವಿಷಯಗಳನ್ನು ಕುರಿತು ಈ ಪತ್ರದ ಮೂಲಕ ಸರಕಾರಕ್ಕೆ ತಿಳಿಸಿ ಅವರ ಸಹಾನುಭೂತಿಯನ್ನೂ, ಅವಶ್ಯವಿರುವ ಮಟ್ಟಿಗೆ ಸಹಾಯವನ್ನೂ ಪಡೆಯುವ ಏರ್ಪಾಟು ಮಾಡುವದು

ಮಹಾಸಭೆಯ ಕಾರ್ಯ ಕ್ರಮ.

೧ ಸಬ್ಜೆಕ್ಟ್ಸ್ ಕಮಿಟಿಯು ಮೆಂಬರರು ವಿಷಯವನ್ನು ಯಾವುಕೆ ಕಮಿಟಿಯವರಾಗಿ ಒಂದು ದಿವಸ ಮುಂಚಿತವಾಗಿ ಕೂಡಿ, ಹಿಂದಿನ ಸಭೆಗಳಲ್ಲಿ ಪಾಸಾದ ವಿಷಯಗಳ ಚರ್ಚೆ, ಆವೆ ೧೦, ನಿಕಾಲಿಪಾಡಿ ರಿಪೋರ್ಟ ತಯಾರಿಸಿ, ಮರು ಈ ಸಭೆಯಲ್ಲಿ ಅವುಗಳನ್ನು ತರುವದೂ, ಉಪನ್ಯಾಸ ಕೊಡುವವರನ್ನು ಗೊತ್ತುಮಾಡುವದು ಅದಲ್ಲದೆ ಮುಂದಿನ ಸಬ್ಜೆಕ್ಟ್ಸ್ ಕಮಿಟಿಯು ಅಧ್ಯಕ್ಷರೂ, ಮೆಂಬರರೂ, ಭಾಷಣಮಾಡತಕ್ಕವರೂ, ಸಭೆಯ ಪರವಾಗಿ ಇತರ ಉಪಯುಕ್ತ ಸೂಚನೆಗಳನ್ನು ಕೊಡುವಂಥ ಮಹನೀಯರು ಮುಂಚಿತವಾಗಿ ವೇಳೆ ನಮೂದಿಸಿದಂತೆ ದಯಮಾಡಿ ಬರಬೇಕು

೨ ಭಾಷಣಮಾಡತಕ್ಕವರು ತಮ್ಮ ಭಾಷಣಗಳನ್ನು ಸ್ಪಷ್ಟವಾಗಿ ಒಳ್ಳೇ ಕಾಗದದ ಮೇಲೆ ಮಾರ್ಜಿನ ಬಿಟ್ಟು ಒಂದೇ ಮಗ್ಗಲಿಗೆ ಬರೆದು ತಾ ೧೫ ನೇ ಡಿಸೆಂಬರದೊಳಗಾಗಿ ಸಭೆಯ ಚೀಫ ಸೆಕ್ರೆಟರಿಗಳ ಕಡೆಗೆ ಕಳಿಸಬೇಕು. ವ್ಯಾಖ್ಯಾನಕಾರರು ನಿರರ್ಥಕ ವಿಷಯಗಳನ್ನು ಬರೆದು ಬೆಳೆಸದೆ ಅಚ್ಚುಕಟ್ಟಾಗಿಯೂ, ವಿಷಯಾಂತರವಾಗದಂತೆಯೂ ತಾವು ಕೈಕೊಂಡ ವಿಷಯವು ಪೂರ್ಣವಾಗಿರಬೇಕು. ಇದನ್ನು ದಯಮಾಡಿ ಮರೆಯಕೂಡದು

೩ ವಿಷಯ ನಿಯಾಮಕ ಕಮಿಟಿಯವರ ಅಪ್ಪಣೆಯ ಹೊರತು ಯಾರಿಗೂ ಭಾಷಣಮಾಡಲಿಕ್ಕೆ ಅಥವಾ ನಿಬಂಧಗಳನ್ನು ಓದಲಿಕ್ಕೆ ಅಧಿಕಾರವಿಲ್ಲ.

೪ ಮಹಾಸಭೆಯು ಕೆಲಸವು ತಾ. ೨೬ ಡಿಸೆಂಬರ ದಿವಸ ಮಧ್ಯಾಹ್ನದ ೨ ಗಂಟೆಗೆ ಪ್ರಾರಂಭವಾಗಿ, ಸ್ವಾಗತಕಮಿಟಿಯ ಚೆಯರಮನ್ನರ ಭಾಷಣವಾಗಿ, ಮಹಾಸಭೆಗಾಗಿ ಅಧ್ಯಕ್ಷರ ಆರಿಸುವಿಕೆಯಾಗಿ, ಅವರ ಭಾಷಣವು ನಡೆದು ಮುಂದೆ ವೇಳೆ ಉಳಿದಲ್ಲಿ ವಿಷಯನಿಯಾಮಕ ಕಮಿಟಿಯವರು ನಿಶ್ಚಯಿಸಿದ ಪ್ರಕಾರ ಕೆಲಸಗಳು ನಡೆಯುವವು. ಹಾಗು ಮುಂದಿನ ದಿವಸಗಳ ಸಭೆಯ ಕಾಲವನ್ನು ಅವರೇ ಗೊತ್ತುಪಡಿಸುವರು.

ಅಗತ್ಯದ ಸೂಚನೆ

ವೇಳೆಯ ಮಹತ್ವವನ್ನು ತಿಳಿಕೊಂಡು ನಿಯಮಿಸಿದ ವೇಳೆಗೆ ಮಾತ್ರ ಸಭೆಗೆ ಅಗತ್ಯ ಬರುವ ವ್ಯವಸ್ಥೆಯಾಗಬೇಕು.

ಪ್ರತಿನಿಧಿಗಳಿಗಾಗಿ ನೇಮುಗಳು

೧ ಬೇರೆ ಬೇರೆ ಗ್ರಾಮದವರು ತಮ್ಮಲ್ಲಿ ಸಭೆಗಾಗಿ ಪ್ರತಿನಿಧಿಗಳನ್ನು ನೇಮಿಸಿ ಅವರ ಹೆಸರುಗಳನ್ನು ೧೫ ನೇ ಡಿಸೆಂಬರದೊಳಗಾಗಿ ಚೀಫ ಸೆಕ್ರೆಟರಿಯವರ ಕಡೆಗೆ ಬರೆದು ತಿಳಿಸಬೇಕು.

೨. ಪ್ರತಿನಿಧಿಗಳು ೫ ರೂಪಾಯಿ ಮತ್ತು ಪ್ರೇಕ್ಷಕರು ೨ ರೂಪಾಯಿ ಪ್ರವೇಶ ಫೀ ಕೊಟ್ಟು ಟಿಕೀಟುಗಳನ್ನು ಸಂಪಾದಿಸತಕ್ಕದ್ದು ಟಿಕೀಟುಗಳು ಇಲ್ಲದವರಿಗೆ ಸಭಾ ಪ್ರವೇಶ ಮಾಡಲಿಕ್ಕೆ ಯಾರಿಗೂ ಸಿಗಲಾರದು.

೩. ಮಹಾಸಭೆಯ ಸಬ್ಜೆಕ್ಟ್ಸ್ ಕಮಿಟಿಯು ಅಧ್ಯಕ್ಷರ ಕಡೆಗೆ ವರ್ಗಣಿಯನ್ನು ಕೊಟ್ಟವರು ಅವರ ಸರಟಿಫಿಕೇಟನ್ನು ಹಾಜರಪಡಿಸಬೇಕು.

೪ ಪ್ರತಿನಿಧಿಗಳಿಗಾಗಿ ಕಾದಿಟ್ಟ ಸ್ಥಳಗಳಲ್ಲಿಯೇ ಅವರು ಕೊಡ್ರತಕ್ಕದ್ದು. ಅಲ್ಲಿ ಪ್ರೇಕ್ಷಕರ ಪ್ರವೇಶವಾಗಕೂಡದು. ಪ್ರೇಕ್ಷಕರಿಗಾಗಿ ಗೊತ್ತುಮಾಡಿದ ಸ್ಥಳವನ್ನು ಅವರು (ಪ್ರೇಕ್ಷಕರು) ಆಕ್ರಮಿಸತಕ್ಕದ್ದು

೫ ಮಹಾಸಭೆಗಾಗಿ ಬರತಕ್ಕ ಎಲ್ಲ ಪ್ರತಿನಿಧಿಗಳು ತಮಗೆ ಆವಶ್ಯವಿರುವ ಹಾಸಿಗೆ ಹೊದಿಕೆ ಕಂಬಳಿ ಮುಂತಾದ ಪಾತ್ರೆಗಳನ್ನು ತಮ್ಮ ಸಂಗಡ ತರತಕ್ಕದ್ದು. ಇವರಿಗೆ ಭೋಜನವೂ, ಇಳಕೊಳ್ಳುವ ಸ್ಥಳವೂ, ಮಹಾಸಭೆಯ ವ್ಯವಸ್ಥೆ ಕರಿಂದ ಫೀ ಇಲ್ಲದೆ ಪೂರೈಸಲ್ಪಡುವವು.

೬ ಸ್ವಾಗತ ನೇಮಕರಾಗಬಲ್ಲಿಕ್ಕೆ ಅಪೇಕ್ಷಿಸುವ ಗೃಹಸ್ಥರು ತಾ೫ ೧೫-೧೧-೧೯೧೧ ರೊಳಗಾಗಿ ಚೀಫ ಸೆಕ್ರೆಟರಿಗಳ ಕಡೆಗೆ ತಮ್ಮ ಅರ್ಜಿಯನ್ನು ಕಳಿಸಬೇಕು. ಪಸಂತಮಾಡಿದ ಜನರಿಗೆ ಉತ್ತರ ಮತ್ತು ಸರಟಿಫಿಕೇಟು ಕಳಿಸಲ್ಪಡುವುದು. ಅವರೇ ತಾರೀಖು ೨೨ ನೇ ದಿವಸ ಹಾಜರಾಗತಕ್ಕದ್ದು ಮತ್ತು ಕಮಿಟಿಯವರು ನೇಮಿಸಿದ ಕೆಲಸಗಳನ್ನು ಮಹಾಸಭೆಯ ಮುಗಿಯುವ ವರೆಗೂ ಮಾಡತಕ್ಕದ್ದು.

೭ ಸಭೆಯ ಕೆಲಸಗಳು ಸುಭಾವದಿಂದ ನಡೆ

ಮಾಡಿ ಸಾಧ್ಯವಾದಮಟ್ಟಿಗೆ ಏಕಮತ್ಯ, ಪ್ರೀತಿ, ಸಹಿಷ್ಣುತಾಭೂತಿಯನ್ನು ತೋರಿಸಿ, ಹಿಡಿದ ಕಾರ್ಯವನ್ನು ಸಾಂಗಗೊಳಿಸುವಿರೆಂದು ಕೋರುವೆವು

೮ ಸಿಂಹಾಸನಾಧಿಪತಿಗಳಿಗೂ, ವಿರಕ್ತ ಮಹಾಸ್ವಾಮಿಗಳಿಗೂ ಅವರವರ ಮರ್ಯಾದೆಗನುಸರಿಸಿ ಸ್ವಾಗತ, ಲಿಂಗಾರ್ಚನೆ, ಭೋಜನ, ವಾಸಸ್ಥಳದ ಒಳ್ಳೇ ರೀತಿಯಾಗಿ ವ್ಯವಸ್ಥೆ ಮಾಡಿರುತ್ತದೆ.

೬ ನೇ ಶ್ರೀಮದ್ವೀರಶೈವ ಮಹಾಸಭೆಯ ವ್ಯವಸ್ಥಾಪಕ ಕಮಿಟಿಯವರ ಅಪ್ಪಣೆಯ ಮೇರೆಗೆ—

ಶಿವಮೂರ್ತಿಸ್ವಾಮಿ ಕೆಣಬರಗಿಮಠ,

ತಾ|| ೨೪-೧೧-೧೧. ಚೀಫ ಸೆಕ್ರೆಟರಿ,

ಬೆಳಗಾಂವ.

ಮೈಸೂರು ಸ್ಟಾರ್ ಚಂದಾನಿರ್ಣಯ.

೧ ವರ್ಷಕ್ಕೆ ೧ ಪ್ರತಿಗೆ ೧ ರೂಪಾಯಿ ಒಂದಕ್ಕಿಂತ ಹೆಚ್ಚು ಪ್ರತಿಗಳನ್ನು ತರಿಸಿಕೊಳ್ಳುವವರಿಗೆ ಪ್ರತಿ ೧ ಕ್ಕೆ ೧ ರೂಪಾಯಿಯಂತೆ ಚಂದಾ ಬೀಳುವುದಿಲ್ಲವೆ ಅಂಚೆಯ ವೆಚ್ಚವನ್ನು ಬೇರೆ ಈ ಕೆಳಗೆ ಕಂಡಂತೆ ಕೊಡಬೇಕಾಗುವುದು

ಅಂಚೆಯ ವೆಚ್ಚ

೧ ಪ್ರತಿಗೆ ೧ ವರ್ಷಕ್ಕೆ ೦—೧೪—೦.

೨ ರಿಂದ ೪ ರವರಿಗೆ ೧—೧೦—೦.

ಇದರಂತೆ ಮುಂದೆ ಪ್ರತಿಯೊಂದು ಪ್ರತಿಗೂ ೧—೧೦—೦ ಯಂತೆ.

ಪ್ರಕಟನೆಯ ದರ.

ಕಾಲು ಕಾಲಮ್ಮಿಗಿಂತಲೂ ಕಡಮೆಯಾಗಿ ನಾಲ್ಕಾವೃತ್ತಿಗೆ ಕಡಮೆಯಾಗಿ ಪ್ರಕಟನೆಯನ್ನು ಪ್ರಕಟಿಸುವುದಕ್ಕೆ ಮೊದಲನೇ ಆವೃತ್ತಿ ಪಙ್ಕ್ತಿ ೧ ಕ್ಕೆ ೩ ಆಣೆ; ಎರಡನೇ ಆವೃತ್ತಿಯಿಂದ ಪಙ್ಕ್ತಿ ೧ ಕ್ಕೆ ೨ ಆಣೆ ಕಾಲುಕಾಲಮ್ಮಿಗಿಂತಲೂ ಹೆಚ್ಚಾದ ಪ್ರಕಟನೆಗಳನ್ನು ೪ ವಾರಕ್ಕೆ ಮೀರಿ ಪ್ರಕಟಿಸಬೇಕಾದರೆ ಅವುಗಳ ದರವನ್ನು ಪ್ರತ್ಯೇಕವಾಗಿ ಬರೆದು ತಿಳಿದುಕೊಳ್ಳಬಹುದು. ಅಲ್ಲಿ ಅನುಕೂಲವಾಗಿ ಡಿಸ್ಕೌಂಟ್ ಕೊಡಲ್ಪಡುವುದು. ಭಾಷಾಂತರಿಸಿ ಪ್ರಕಟಿಸಬೇಕಾದರೆ ದ್ವಿಗುಣವಾಗಿ ದರವು ಬೀಳುವುದು.

12

ಸೂಚನಾ.

(ಪತ್ರವ್ಯವಹಾರ ಮಾಡಬೇಕಾದರೆ ಉತ್ತರದ ಆ ಕ್ಷರಗಳಿಂದ ಬರೆಯಬೇಕು.)

ಅಂಬ್ರೋಸಿಯಾರ್ಕಪವು — ಇದರ ಸೇವನೆಯಿಂದ ಮೈಯೊಳಗಿನ ಉಷ್ಣತೆಯು ಹೋಗಿ ಧಾತು ಪುಷ್ಟಿಕರವಾಗುತ್ತದೆ ಮತ್ತು ಕಾಮೋದ್ರೇಕವು ಹೆಚ್ಚಾಗಿ ಸ್ತ್ರೀ ಸುಖದಾನಂದ ಸೌಖ್ಯವಾದ ರಾಮ ಬಾಣವಾಗುತ್ತದೆ ಕಸವಿಸುವುದರಿಂದ ಅಥವಾ ಯಾವಾಗಿದ್ದರೂ ಕಾರಣದಿಂದ ಸೆಡುವೆ ನವುಂಸಕತ್ವವಾದರೆ ಇದರಿಂದ ಬಾತ್ರಿಯಾಗಿ ನೆಟ್ಟಗಾಗುತ್ತದೆ ಸಣ್ಣ ಹುಡುಗರಿಗೆ, ಅನ್ನ, ಅಥವಾ ಹಾಲು ಪಚನವಾಗದಿದ್ದರೆ ಹೊಟ್ಟೆಯು ಬೋಡ್ಡಾಗಿ ಕೈ ಕಾಲು ಸಣ್ಣವಾಗುತ್ತವೆ ಇಂಥ ಹುಡುಗರಿಗೆ ಈ ಔಷಧವನ್ನು ಕೊಡುವುದರಿಂದ ಅನ್ನ, ಹಾಲು, ಮುಂತಾದ ಪದಾರ್ಥಗಳು ಪಚನವಾಗಿ ಸಶಕ್ತ ಮತ್ತು ಕಾಂತಿಯುಕ್ತರಾಗುತ್ತಾರೆ. ಕ್ರಯ; ೧ ಬಾಟ್ಲಿಗೆ, ೧—೧೦—೦ ರೂ ೨ ಬಾ, ೨—೧೦—೦ ರೂ ೩ ಬಾ, ೩—೧೪—೦ ರೂ, ಮಿಸ್ಕಿಗಲೇ ೧ ಡಜನ್ ಬಾಟ್ಲಿ ತರಿಸುವವರಿಗೆ ೧೪ ರೂ. ಪೋಲೆ ಬಾಟ್ಲಿ ಇನಾಮು ಪ ಮ ಬೇರೆ.

ವಿದ್ಯಾಂಗಿಣಿಚೂರ್ಣವು — ಇದರಿಂದ ಸ್ವಪ್ನಾವಸ್ಥೆಯೂ ಬಂದಾಗಿ ಧಾತು ಶುದ್ಧವಾಗುತ್ತದೆ. ಮೂತ್ರವಿಸರ್ಜನದ ಮುಂಚೆ ಅಥವಾ ತರುವಾಯ ಹೋಗುವ ಧಾತು ಬಂದಾಗುತ್ತದೆ. ಹಸಿವೆಯು ಚನ್ನಾಗಿ ಆಗುತ್ತದೆ. ಮಲಮೂತ್ರವಿಸರ್ಜನೆಯು ಸಾಫ ಆಗುತ್ತವೆ ಹೊಟ್ಟೆಯುಬ್ಬುವದಿಲ್ಲ. ಕ್ರಯ ೧ ಡಬ್ಬಿಗೆ ೧ ರೂ. ೬ ಡಬ್ಬಿಗೆ ಒಂದು ಡಬ್ಬಿ ಇನಾಮು ಪ. ಮ. ಬೇರೆ.

ಮಲಮೂಲ— ಇದರಿಂದ ಇಸಬು, ಗಜಕರ್ಣ, ಇಸಬು ತುರಿಕೆ, ದದ್ದು ಬಾತ್ರಿಯಿಂದ ನೆಟ್ಟಗಾಗುವದು. ೧ ಡಬ್ಬಿಗೆ ೪ ಆಣೆ. ೬ ಡಬ್ಬಿಗೆ ೧ ಡಬ್ಬಿ ಇನಾಮು ಪ. ಮ. ಬೇರೆ.

"ಅಮೃತ ಔಷಧ."

("ಉಪದಂಶನಾಶಕ ಔಷಧವು")

ಇದರ ಸೇವನೆಯಿಂದ ಮರ್ಮರೋಗವು ನೆಟ್ಟಗಾಗಿ ಮತ್ತು ಲಘು ಮೂತ್ರ ವಿಸರ್ಜನೆಯು ಸಾಫ ಆಗುತ್ತದೆ. ಹೊಟ್ಟೆಯುಬ್ಬುವದಿಲ್ಲ. ಹಸಿವೆಯು ಚನ್ನಾಗಿ ಆಗುತ್ತದೆ ಕ್ರಯ ಒಂದು ಡಬ್ಬಿಗೆ ಒಂದು ರೂಪಾಯಿ ಎಂಟು ಆಣೆ, ೪ ರೂಪಾಯಿಗೆ ಇನಾಮು ಏಳು ಡಬ್ಬಿ. ೧ ರೂ. ೪ ಆಣೆ. ಪ ಮ ಬೇರೆ.

ಎ. ಶಾ. ೬ ಅಂಬೋಸಿಯಾ ಔಷಧ ಶಾಲಾ"

೩೦ ಕಥೆಗಳು.   ಸಚಿತ್ರ.   ೫೧೦ ಪುಟಗಳು

ನೀತಿ ಸಂಸ್ಕೃತಿ ಕಥೆಗಳು.

36

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು, (೨) ಜ್ಞಾನ, ಧ್ಯಾನ, ಯೋಗ ಮುಂತಾದ ಮೋಕ್ಷಾಂತ ಅನುಷ್ಠಾನಗಳನ್ನು, (೩) ಸ್ತ್ರೀ ಪಾತಿವ್ರತ್ಯಧರ್ಮ, ವರ್ಣಾಶ್ರಮ ಧರ್ಮ, ಲೋಕಾನುಭವ, ವಿವಿಧನೀತಿ ಮುಂತಾದವನ್ನು, ಕಿರಿಯರಿಂದ ಸಮಸ್ತ ಸ್ತ್ರೀಪುರುಷರು, ಬಾಲಕಬಾಲಕಿಯರೂ ಅವಶ್ಯಕವಾಗಿ ಓದಬೇಕಾದ ಗ್ರಂಥ (೪) ವೇದಶಾಸ್ತ್ರ ಪ್ರತಿಪಾದ್ಯ ಸಕಲಕರ್ಮಗಳ ಸಂಗ್ರಹವಾಗಿ ಹೇಳಿದೆ (೫) ಸ್ಪಷ್ಟವಾದ ವಾಕ್ಯಬಂಧದಿಂದ ನವರಸಾಲಂಕೃತವಾಗಿ ರುವದು (೬) ಚಿತ್ರಕಲಾಚಮತ್ಕಾರ ಶೋಭಿತವಾಗಿ ಪಂಡಿತಪಾಮರರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಈಗಿನ ಲೋಕಾನುಭವಕ್ಕೆ ಅನುಸಾರವಾದ ಪುಣ್ಯ ಕಥೆಗಳವೆ (೮) ಕಥಾಸಂದರ್ಭಾನುಸಾರ ಭಾವವನ್ನೆ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ಒಕ್ಕೆ ರೂ ೧೪೦ ಅಂಚೆಖರ್ಚು ಪ್ರತ್ಯೇಕ

ಪುಸ್ತಕಗಳು, ಊದುಬತ್ತಿ, ಗಂಧದಬಿಲ್ಲೆ, ಪ್ಲೇಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು, ಚಿತ್ರಪಟ ಸಾಮ್ರಾಗ್ರಿಗಳು; ದೊರೆಯುತ್ತವೆ (ಪಟ್ಟಿ)ಕ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ.

ವಿಳಾಸ—ವಿಜಯಕೇಸರಿ ಕಂಪನಿ,
ಬೆಂಗಳೂರು ಸಿಟಿ

ಸ್ವದೇಶ !   (ಸತ್ಯವೆ (ನಾಯಕ)   ಸ್ವದೇಶ !

24   ಗುಣವಾಗದಿದ್ದರೆ ಹಣವಾಪಸ

ಮದನೋದ್ಭವ ಗುಳಿಗೆ.

ಈ ಗುಳಿಗೆಯು ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಪ್ರಮೇಹ, ಸ್ವಪ್ನಾವಸ್ಥೆ ಇವು ಗುಣವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಗರ್ಭದಾತಿ ಗುಪ್ತಸ್ಥಳದೊಳಗೆ ಹುಟ್ಟಿರುವ ಎಲ್ಲಾ ಬಕ್ಕೆಗಳೂ ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ವಾತರೋಗ, ಮುಂತಾದವು ಅತಿ ತ್ವರ್‍ಯಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೩೦ ಗುಳಿಗೆಗಳವರೆಗೆ ಬೇಕಾಗುವವು ಕಿಮ್ಮತ್ತು ೧೦ ಗುಳಿಗೆಗಳಿಗೆ ೧ ರೂ ಒಮ್ಮೆಲೆ ೩೦ ಗುಳಿಗೆಗಳನ್ನು ತರಿಸಿಕೊಂಡರೆ ೩ ರೂ ಗಳಿಗೆ ಕೊಡುವೆವು ಟ ೬ ೪ ಆಣೆ ಬೇರೆ. ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು ಅರ್ಧಾಣೆ ಸ್ಟ್ಯಾಂಪು ಕಳಿಸಿದರೆ ಸರ್ವಸಾಮಾನಿನ ಕ್ಯಾಟಲಾಗ್ ಪುಕಟ ರವಾನಿಸುವೆವು   ವಿಳಾಸ

ವೈದ್ಯ, ವಿ. ಎಲ್ ಜೋಶಿ ಮತ್ತು ಕಂಪನಿ,
ಪೋಸ್ಟ್ ಸಿರಸಿ,
ಜಿಲ್ಲಾ ಉತ್ತರಕನಡಾ

ಪಂಡಿತ ಎಸ್. ಗರಳಪುರಿ ಇವರ

ಕಿರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಹತ್ತಿರ
67   ಮೈಸೂರು

ಗೊರೋಚನ ಮಾತ್ರೆ — ೧೦ ಮಾತ್ರೆಗಳನ್ನು ಕೊಟ್ಟರೆ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತವೆ ೩೦—೪೦ ಮಾತ್ರೆಗಳುಳ್ಳ ಸೀಸೆ ಒಕ್ಕೆ ಕ್ರಯ ೦—೬—೦

ಜ್ವರದಮಾತ್ರೆ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಶೀಘ್ರವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯುಂಟಾಗುವುದು ೧೦ ಮಾತ್ರೆ ಸೀಸೆ ೦—೪—೦, ೫೦ ಮಾತ್ರೆ ಸೀಸೆ ೦—೮—೦

ಆರೋಗ್ಯಪ್ರಭಾಕರ — ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಜನಿಸುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು. ಇದು ಅವ್ಯತಕ್ಕೆ ಸಮಾನ ೪೮ ಮಾತ್ರೆ ಸೀಸೆ ೧—೦—೦

ಬಾಲಸಂಜೀವಿನಿ — ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ ಸುಮಾರು ೫೦ ದಿವಸಕ್ಕೆ ಆಗುವ ಔಷಧ ಡಬ್ಬಿ ೦—೪—೦ ಡಜನ್ ಒಕ್ಕೆ ೧—೮—೦

ಪತ್ರಿಕರ್ಪೂರದಮಾತ್ರೆ — ಇದರಿಂದ ಗರ್ಭವೇಷ್ಟಯೂ ಉದರಶೂಲೆ ಕಡಿಮೆಯಾಗಿ ದೇಹಕ್ಕೆ ತಂಪಾಗುತ್ತದೆ ೧೬ ಮಾತ್ರೆ ಸೀಸೆ ೦—೩—೧

ಅಶೋಕದರ ರಸಾಯನ — ಮೂಲವ್ಯಾಧಿ ಪೀಡಿತರಿಗೆ ಇದು ಸಂಜೀವನ ಸೇರಿನ ಡಬ್ಬಿ ೧—೮—೦

ಕ್ರಿಮಿಂದಲೇಹ್ಯ — ಮೇಹಜಾಡ್ಯಗಳಲ್ಲಿ ಬಹಳ ಖಾತರಿಯಾದ ಔಷಧಿ ಸೇರಿನ ಡಬ್ಬಿ ೩—೦—೦, ೧೦ ದಿನಗಳ ಔಷಧಿ ೨—೦—೦

ಸುಖಭೇದಿ ಮಾತ್ರೆ — ೧೦ ಮಾತ್ರೆಗಳನ್ನು ಸೇವಿಸುವುದರಿಂದ ೩—೪ ಆವೃತ್ತಿ ಸುಖವಾಗಿ ಭೇದಿಯಾಗುತ್ತದೆ ೫೦ ಮಾತ್ರೆ ಸೀಸೆ   ೦—೬—೦.

ಮಲಶೋಧನ ವಟಿಕಾ — ರಾತ್ರಿ ಮಲಗುವಾಗ ತೆಗೆದುಕೊಳ್ಳತಕ್ಕದ್ದು ಬೆಳಗ್ಗೆ ಏಳುವಾಗ್ಗೆ ಒಂದೆರಡಾವೃತ್ತಿ ಮಲವಿಸರ್ಜನೆಯಾಗುತ್ತೆ ೩೦ ಮಾತ್ರೆ ಸೀಸೆ ೦—೪—೦

ಕಸ್ತೂರಿಮಾತ್ರೆ — ತಾಂಬೂಲದೊಡನೆ ಉಪಯೋಗಿಸತಕ್ಕದು. ೩೦೦ ಮಾತ್ರೆ ಸೀಸೆ ೦—೬—೦.

ಪುರುಷ ಸಂಜೀವಿನಿ — ೩೦ ಮಾತ್ರೆ ಸೀಸೆ ೨—೦—೦.

ಕಾಲರಾ ಮಾತ್ರೆ — ೩೦ ಮಾತ್ರೆ ಸೀಸೆ ೧—೦—೦.

ಕೆಮ್ಮಿನಮಾತ್ರೆ — ೩೦ ಮಾತ್ರೆ ಸೀಸೆ ೦—೪—೦

ಅಜೀರ್ಣದಮಾತ್ರೆ — ೫೦ ಮಾತ್ರೆ ಸೀಸೆ ೧—೧೨—೦.

ದಂತಶುದ್ಧಿ ಚೂರ್ಣ — ಡಬ್ಬಿ ಒಕ್ಕೆ   ೦—೨—೦.

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಬಗೆಯ ಆಯುರ್ವೇದ ಮತ್ತೂ ಇಂಗ್ಲೀಷು ಔಷಧಿಗಳು ಸುಲಭಕ್ರಯಕ್ಕೆ ದೊರೆಕುವವು. ಪಟ್ಟಿಯು ಬೇಕಾದವರು ಅರ್ಧಾಣೆ ಸ್ಟಾಂಪ್ ಕೊಡಬೇಕು. ಇತರ ಪತ್ರವ್ಯವಹಾರವು ಮೇಲಿನ ವಿಳಾಸಕ್ಕೆ ಬರೆಯಿರಿ

೧೯೧೧ನೆ ಇಸ್ವಿ ೯ನೆ ತಾರೀಖು ರಿಂದ ೧೯೧೧ನೆಯ ಡಿಸೆಂಬರ್ ತಾ ೧೫ ರವರೆಗೆ ಸಲ್ಲುವ ಶಾಲಿವಾಹನ ಶಕೆ ೧೮೩೩ ನೆಯ ವಿರೋಧಿಕೃತು ಸಂವತ್ಸರದ ಮಾರ್ಗಶಿರ ಶುದ್ಧ ತ್ರಯೋದಶಿಯಿಂದ ಮಾರ್ಗಶಿರ ಬ ಪಂಚಮಿವರೆಗಿನ ಪಂಚಾಂಗ

ತಾ॥	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ	ಕೃಷ್ಣ ಶುದ್ಧ
4	[1] ಸೋಮ	ತ್ರ	14 24	ಭ	24 29	19
5	[2] ಮಂಗಳ	ಚ	9 38	ಕೃ	20 36	20
6	ಬುಧ	ಪೌ	4 40	ರೋಹಿ	15 4	21
7	[3] ಗುರು	೧	೨೭ ೨೫	ಮೃ	14 24	22
8	[4] ಶುಕ್ರ	ತಿ	47 24	ಆರ್ದ್ರ	10 14	23
9	[5] ಶನಿ	ಚ	41 23	ಪುನ	6 2	24
10	ಭಾನು	ಪಂ	26 2	ಪುಷ್ಯ	2 4	25

(1) ಹನುಮಂತ ಜಯಂತಿ, ಕೃತ್ತಿಕಾದೀಪೋತ್ಸವ, ಶಿವಪೂಜೆ, ಬಾಹುರಾಜೇಶ್ವರ ರಥ (2) ಕಾಮಾರಾಪೂರ್ಣಿಮಾವ್ರತಂ, ದತ್ತಾತ್ರೇಯ ಜಯಂತಿ (3) ಮೃತ್ಯುಯೋಗ, ಮಾಗಾ ಶಿರಲಕ್ಷ್ಮೀವ್ರತಂ (4) ಪರಶುರಾಮಜಯಂತಿ (5) ಸಂಕಷ್ಟಚತುರ್ಥಿ, ಶ್ರೀಪ್ರಯೋಗ

ಮೈಸೂರ್ ಸ್ಟಾರ್ ಮುದ್ರಾಕ್ಷರಶಾಲೆಯವರಿಂದ ಪ್ರಕಾಶಕರ ಪರವಾಗಿ ಮುದ್ರಿಸಲ್ಪಟ್ಟಿತು.

ಉತ್ತಮ ಗ್ರಂಥಗಳು.

ಶಿವಸ್ತವರತ್ನಮಾಲೆ—ಬೆಲೆ ವಿ.ಪಿ ೬ ಆಣೆ ಇದು ಉತ್ತಮವಾದ ಸ್ತೋತ್ರವು ಕನ್ನಡಟಿಪ್ಪಣಿಯಿಂದ ಕೂಡಿದೆ

ಪರಮಾತ್ಮಪ್ರಕಾಶಿಕೆ— ಬೆಲೆ ವಿ. ಪಿ ೬ ಆಣೆ. ಸ್ವಸ್ವರೂಪ ಪ್ರಕಾಶಕಾಸಹಿತವಾಗಿದೆ. ಸೋನಲೆ ರೇವಣಾರಾಧ್ಯ ವಿರಚಿತವಾದದ್ದು. ವೇದಾಂತಿಗಳಿಗೂ, ವೀರಶೈವರಿಗೂ ಅತ್ಯವಶ್ಯಕವಾದದ್ದು.

ಶಿವಪಂಚಸ್ತವ— ಬೆಲೆ ವಿ.ಪಿ ೧-೮-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳು ಮಾತ್ರ ಉಳಿದಿರುತ್ತವೆ ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಸ್ವಲ್ಪ ಅರ್ಧ ಬೆಲೆಗೆ ಕೊಡಲ್ಪಡುತ್ತದೆ ಆದರೆ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಸಬೇಕು

ವೀರಶೈವ ಷಟ್ಸ್ಥಲಸಿದ್ಧಾಂತ— ಬೆಲೆ ವಿ ಪಿ ೪ ಆಣೆ ಇದರಲ್ಲಿ ಅಷ್ಟಾವರಣವೂ ಹಿವೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ನಿರೂಪಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ— ಬೆಲೆ ವಿ ಪಿ. ೧೧ ಆಣೆ ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷ ಸೂಕ್ತಂ— ಬೆಲೆ ವಿ ಪಿ. ೬ ಆಣೆ ನಿರಂಜನ ಜಂಗಮರವಾದ ಕನ್ನಡ ಟೀಕಾ ಸಮೇತವಾಗಿದೆ

ಬಸವಲಿಂಗಸ್ವಾಮಿಗಳು, ಜೋಡುಮಠ ಮೈಸೂರು

ವೈದ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

33

ಕಳೆದ ತಾ|| ೧೨ ನೇ ಮಂಗಳವಾರವು ಈ ಭರತಖಂಡಕ್ಕೆ ಸುದಿನವಷ್ಟೆ. ಆ ದಿವಸ ಇಲ್ಲಿನ ಸ್ಕೂಲಿನಲ್ಲಿ ಈ ಗ್ರಾಮದ ಮುಖಂಡರು ಮುಂತಾದ ಮಹನೀಯರು ಸಭೆಸೇರಿ ಶ್ರೀ ಚಕ್ರವರ್ತಿಯವರ ಛಾಯಾಚಿತ್ರವನ್ನು ಅತ್ಯಂತ ವಿಜೃಂಭಣೆಯಿಂದ ಉತ್ಸವಗೈಸಿದರು. ಅಲ್ಲದೆ ಇಲ್ಲಿಯ ಸ್ಕೂಲ್ ಮಾಸ್ಟರವರು ಅತಿ ಸರಳತರವಾಗಿ ಸ್ಕೂಲ್ ರೀಡರ್ಸನ್ನು ಓದಿ ಚಕ್ರವರ್ತಿ ಸಂದರ್ಭೋಚಿತವಾದ ಗುಣಕಥನವನ್ನು ಮಾಡಿದರು. ಬಾಲಕರ ಸುಶ್ರಾವ್ಯವಾದ ಗಾನವು ಜರಗಿದನಂತರ ಗೌರವಾರ್ಹವಾದ ತೋಪು ಹಾರಿಸಲ್ಪಟ್ಟು ಸಕಲರಿಗೂ ಗಂಧಪುಷ್ಪ ಮಿಠಾಯಿ ತಾಂಬೂಲಾದಿಗಳು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು. ಸ್ಕೂಲ್ ಮಾಸ್ಟರವರು ಈ ವಿಷಯದಲ್ಲಿ ತುಂಬಾ ಮುತುವರ್ಜಿವಹಿಸಿಮಾಡಿಸಿದ್ದ ವಿಚಾರವು ತುಂಬಾ ಕೊಂಡಾಡತಕ್ಕದ್ದಾಗಿರುತ್ತೆ. ಇವರಿಗೆ ಗ್ರಾಮಾಧಿಕಾರಿಗಳೂ ಸಹಾಯವಾಗಿದ್ದುದ್ದು ಇತೋಪ್ಯತಿಶಯವಾದ ಉತ್ಸವನಡೆಯುತ್ತಿತ್ತು.

ಒಬ್ಬ ಪ್ರೇಕ್ಷಕ.

ಅರಸೀಕೆರೆ ತಾ|| ಬಾಣಾವಾರ.

ಈ ಗ್ರಾಮದಲ್ಲಿರುವ ಉರಿಯಪುರಕ್ಕಂತೆ ಸಾಹುಕಾರ್ ಚೆನ್ನಬಸಪ್ಪ ಶಿವಪ್ಪ ಇವರ ಪ್ರತಿನಿಧಿಯಾದ ಮುರಿಗೆಪ್ಪನವರು ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ತೋರ್ಪಡಿಸಲು ಈ ಸಂತೋಷಪ್ರದವಾದ ತಾ|| ೧೨ ನೆಯ ಮಂಗಳವಾರ ತಮ್ಮ ಮುಂದಿಯನ್ನು ರಾಜರಾಜೇಶ್ವರ ಕದಳೀ ಸ್ತಂಭಗಳಿಂದಲೂ ತಳಿರುತೋರಣಗಳಿಂದಲೂ, ಬಾವುಟಗಳಿಂದಲೂ ವಿಚಿತ್ರವಾಗಿ ಅಲಂಕರಿಸಿ ತಮ್ಮ ಸ್ವಗೃಹದಲ್ಲಿ ಮಂತೆರಲ್ಲಿದ್ದ ಎಲ್ಲಾ ಕೋಮಿನ ಜನಗಳು ಮತ್ತು ಆನೇಕ ಬಡಜನಗಳು ಅನಾಥರೇ ಮೊದಲಾದವರನ್ನು ಅತಿ ಆದರದೊಡನೆ ಬರಮಾಡಿಕೊಂಡು ಘೃತಪಕ್ವ ಪಕ್ವಾನ್ನ ಸುಭೋಜನ ಒಂದು ಸಾವಿರ ಜನಗಳ ಮಟ್ಟಿಗೆ ಮಧ್ಯಾಹ್ನ ೧೨ ಗಂಟೆಯಿಂದ ರಾತ್ರಿ ೪ ಗಂಟೆಯವರೆಗೆ ಸುಭೋಜನ ಮಾಡಿಸಿ, ಚಕ್ರವರ್ತಿಯವರನ್ನು ಕೊಂಡಾಡಿ ತಮ್ಮ ಪರಭಕ್ತಿ ಪ್ರಕಾಶಪಡಿಸಿದ್ದಾರೆ. ಈ ಬಗೆಗೆ ಇವರು ಮಾಡಿದ ಏರ್ಪಾಡುಗಳು ಬಹಳ ಶ್ಲಾಘನೀಯವಾಗಿರುತ್ತದೆ. ಮಾರನೆಯ ತಾ|| ೧೩ ರ ಸಾಯಂಕಾಲ ಈ ಗ್ರಾಮದ ಸ್ಕೂಲಿನಲ್ಲಿ ಈ ಮಹೋತ್ಸವ ಸಂಬಂಧವಾಗಿ ಸಭೆಯು ಸೇರಿದ್ದ ಕಾಲದಲ್ಲಿ ಅಗ್ರಾಸನಾಧಿಪತಿಗಳಾಗಿದ್ದ ಮಿ|| ಅರಸೀಕೆರೆ ತಾ|| ಅಮಲ್ದಾರರವರು ಈ ಮುರಿಗೆಪ್ಪನವರನ್ನು ಕರೆಸಿಕೊಂಡು ಅವರು ಮಾಡಿದ್ದ ಏರ್ಪಾಡುಗಳನ್ನು ಸ್ತೋತ್ರಯ ಅಧಿಕಾರಿಗಳಿಂದಲೂ, ಗ್ರಾಮದ ಮುಖಂಡರಿಂದಲೂ ಬಹಳ ಸಂತೋಷಪಟ್ಟರು. ಇಂತಹ ಧರ್ಮಕಾರ್ಯವನ್ನು ಅಪಾರವಾದ ಮನಸ್ಸಿನಿಂದ ಮಾಡಿದ ಮಿ|| ಮುರಿಗೆಪ್ಪನವರ ಉದಾರಗುಣವನ್ನು ಎಷ್ಟು ಹೇಳಿದರೂ ಸಾಲದು

ಬಿ ಕೃಷ್ಣಪ್ಪ

ಶಿವಮೊಗ್ಗ ತಾ|| ಮುಂಗುಳಿಹಳ್ಳಿ.

ಈ ಗ್ರಾಮದ ಮುಖಂಡರಾದ ಮಿ|| ರಾ|| ಪಟೇಲ್ ಪರ್ವತಪ್ಪನವರು, ಚನ್ನಪ್ಪನವರು, ಚನ್ನವೀರಪ್ಪನವರು, ರಂಗಪ್ಪನವರು, ವಲ್ಲಪ್ಪನವರು ಮುಂತಾದವರು ಶ್ರೀಮನ್ಮಹಾರಾಜ ಚಂದ್ರಾಹಣ ಪಟ್ಟಾಭಿಷೇಕವನ್ನು ಹೊಂದಿದ ಚಕ್ರವರ್ತಿಗಳವರ ಕಿರೀಟಧಾರಣ ಮಹೋತ್ಸವದಿಂದುಂಟಾದ ಸಂತೋಷವನ್ನು ಪ್ರದರ್ಶಿಸಲು ನಮ್ಮ ದಯಾಳು ಮೈಸೂರು ಸರ್ಕಾರದವರು ಈ ಗ್ರಾಮದವರ ಪ್ರಾರ್ಥನೆಯಂತೆ ಹೊಸದಾಗಿ ಕಟ್ಟಿರುವ ಪಾಠಶಾಲೆಯ ಕಟ್ಟಡವನ್ನು ೧೨ ನೇ ಮಂಗಳವಾರ ತಳಿರುತೋರಣಗಳಿಂದಲೂ, ಚಿತ್ರವಿಚಿತ್ರಗಳಾದ ಛಾಯಾಚಿತ್ರಗಳಿಂದಲೂ ಅಲಂಕರಿಸಿ ದೇವಸ್ಥಾನಗಳಲ್ಲಿ ದೀಪೋತ್ಸವವೂ ಮತ್ತು ಮಂಗಳಾರತಿಯೂ ನಡೆಯಲ್ಪಟ್ಟಿತು. ಸ್ಕೂಲಿನಲ್ಲಿ ಸಭೆಸೇರಿದ ಕಾಲದಲ್ಲಿ ಹೆಡ್ ಉಪಾಧ್ಯಾಯರಾದ ಮಿ||. ಪ್ರಭುಸ್ವಾಮಯ್ಯನವರು ವಿದ್ಯಾಭ್ಯಾಸದ ಮ[redacted] ಮಕ್ಕಳನ್ನು ಸ್ಕೂಲಿಗೆ ಕ್ರಮ

ವಾಗಿ ಕ [illegible] ಸಿ ಕಳುಹಿಸಬೇಕೆಂಬುದಾಗಿ

ಯೂ [illegible] ದೆ ಚಕ್ರವರ್ತಿಗಳವರ [illegible]

ದಿಸಿ ಗ್ರಾಮಸ್ಥರು ತಮ್ಮ ತಮ್ಮ ಮಕ್ಕಳನ್ನು ಸ್ಕೂಲಿಗೆ ತಪ್ಪದೆ ಕಳುಹಿಸಿಕೊಡುತ್ತೇವೆಂತಲೂ, ಕಾರಣವಿಲ್ಲದೆ ಮಕ್ಕಳನ್ನು ನಿಲ್ಲಿಸಿಕೊಂಡಲ್ಲಿ ಅಂಥಾ ಬಾಲಕರ ಪೋಷಕರು ಸರ್ಕಾರಕ್ಕೆ ಪತ್ರ್ಯ ರೂಪಾಯಿ ಕೊಡಬೇಕಾಗಿಯೂ ಮುಚ್ಚಳಿಕೆ ಸಹ ಬರೆಯಲ್ಪಟ್ಟಿತು. ಅನಂತರದಲ್ಲಿ ಚಕ್ರವರ್ತಿಗಳ ಶ್ರೇಯಃಪ್ರಾರ್ಥನೆಯೂ, ದೇವರ ಸಂಕೀರ್ತನೆಯೂ, ಉಪಾಧ್ಯಾಯರಿಂದಲೂ, ವಿದ್ಯಾರ್ಥಿಗಳಿಂದಲೂ ಕರ್ಣಾನಂದಕರವಾಗಿ ನಡೆಸಲ್ಪಟ್ಟಮೇಲೆ ಗಂಧ, ಪುಷ್ಪ, ತಾಂಬೂಲ, ಫಲಾಹಾರ ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಜಯ್. ಕೆ

ಬಿಜಾಪುರ ಡಿ|| ಆಲಮೇಲ.

ಕಳೆದ ತಾ|| ೧೧ ರಲ್ಲಿ ವಿದ್ಯಾರ್ಥಿಗಳಿಂದ ಕ್ರಿಕೆಟ್, ಕುಸ್ತಿ, ಹಗ್ಗಜಗ್ಗುವುದು ಮೊದಲಾದ ಆಟಗಳು ಆಡಿಸಲ್ಪಟ್ಟವು. ತಾ|| ೧೨ ರಲ್ಲಿ ಸರಕಾರಿ ಚಾವಡಿ ಮತ್ತು ಶಾಲೆಗಳು ಮಾವಿನ ತಳಿರುಗಳಿಂದಲೂ, ತರತರದ ಬಣ್ಣದ ಕಾಗದಗಳ ಹೂವಗಾಳಿಗಳಿಂದಲೂ ಅಲಂಕರಿಸಲ್ಪಟ್ಟಿದ್ದವು. ಶೃಂಗರಿಸಲ್ಪಟ್ಟ ಚಾವಡಿಯಲ್ಲಿ ಭವ್ಯವಾದ ಮಂಟಪವು ಏರಿಸಲ್ಪಟ್ಟು ಅದರಲ್ಲಿ ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರ ತಸಬೀರು ಇಡಲ್ಪಟ್ಟಿತ್ತು. ಕನ್ನಡ ಹಾಗೂ ಹಿಂದುಸ್ಥಾನಿ ಶಾಲೆಗಳ ವಿದ್ಯಾರ್ಥಿಗಳು ತಂತಮ್ಮ ಪಟ್ಟದ ಪ್ರೋಷಾಕವನ್ನು ಹಾಕಿಕೊಂಡು ಚಾವಡಿಯಮುಂದೆ ಡ್ರಿಲ್‌ಮಾಡುತ್ತಿದ್ದರು. ಊರ ಜನರೆಲ್ಲರೂ ಕೆರೆದಮೇಲೆ ಚಕ್ರವರ್ತಿಯವರ ತಸಬೀರು ಪಲ್ಲಕ್ಕಿಯೊಳಗಿರಿಸಲ್ಪಟ್ಟು ಹಾಡುವವರ ನಾಗೂ ವಾದ್ಯಗಳ ಸಮೇತ ಊರಲ್ಲೆಲ್ಲ ಉತ್ಸವಮಾಡಿಕೊಂಡು ಬಾರು ೧೨ ಗಂಟೆಯಲ್ಲಿ ಚಾವಡಿಯೊಳಗಿರುವ ಮಂಟಪದಲ್ಲಿರಿಸಲ್ಪಟ್ಟಮೇಲೆ ರಾವಸಾಹೇಬ ದೇಶಮುಖ ಆಲಮೇಲ ಇವರು ಇಂಗ್ಲೀಷರ ಆಳಿಕೆಯಿಂದುಂಟಾಗಿರುವ ಮುಖ್ಯ ಪ್ರಯೋಜನವನ್ನು ಸಭಿಕರೆಲ್ಲರಿಗೂ ತಿಳಿಯಹೇಳಿದ ಮೇಲೆ ಪ್ರೊಕ್ಲೆಮೇಶನ್ ಮಾಮಲೇದಾರರು ಜಾಹೀರನಾಮೆಯನ್ನು ಓದಿದರು. ಸಭಿಕರೆಲ್ಲರೂ ಬಹು ವಿಶ್ವಾಸದಿಂದ ಕೇಳಿ ಜಯಘೋಷವನ್ನು ಮಾಡಿದ ತರುವಾಯ ಹಿಂದಿನ ದಿವಸ ಆಟದಲ್ಲಿ ಗೆದ್ದವರಿಗೆ ಇನಾಮುಗಳೂ, ಶಾಲೆಯ ಹುಡುಗರಿಗೆ ಪುಸ್ತಕಗಳೂ ಬಾದಶಹರ ರಾಜ್ಯಾರೋಹಣದ ಪದಕಗಳೂ ಕೊಡಲ್ಪಟ್ಟು ಊರಿನ ಬಡಬಗ್ಗರಿಗೆ ಧೋತ್ರಗಳೂ, ಸೀರೆ ಕುಪ್ಪಸಗಳೂ, ಕೊಡಲ್ಪಟ್ಟವು. ಮತ್ತು ೩೦೦—೫೦೦ ಬಡಜನರಿಗೆ ಅನ್ನವು ಹಾಕಲ್ಪಟ್ಟಿತು. ರಾ|| ರಾ|| ದೇಶಮುಖರ ವಾಡೆಯಲ್ಲಿ ಸೇರಿದ್ದ ೫೦೦—೬೦೦ ಸ್ತ್ರೀಯರಿಗೆ ದೇಶಮುಖರ ಪತ್ನಿಯವರು ಇಂಗ್ಲೀಷ್ ಪ್ರಭುಗಳಿಂದಾಗಿರುವ ಉಪಕಾರಗಳನ್ನು ಕುರಿತು ಭಾಷಣಮಾಡಿದರು. ರಾತ್ರಿ ಊರಿನ ಎಲ್ಲಾ ದೇವಸ್ಥಾನಗಳಲ್ಲೂ, ಚಾವಡಿಯಮುಂದೆಯೂ ದೀಪೋತ್ಸವವು ನಡೆದು ಮದ್ದು ಸುಡಲ್ಪಟ್ಟಿತು.

ಪ್ರೇಕ್ಷಕ.

ಚಿಕ್ಕಲಗೂಡು ತಾ|| ಬಸವಾಪಟ್ಟಣ

ಕಳೆದ ತಾ|| ೧೨ ರ ಬೆಳಗ್ಗೆ ಈ ಊರ ಎಲ್ಲಾ ಬೀದಿಗಳೂ, [illegible] ಗಳಿಂದಲೂ, ತಳಿರುತೋರಣಗಳಿಂದಲೂ, ಬಾಳೆಯ ಕಂಭಗಳಿಂದಲೂ ಶೃಂಗರಿಸಲ್ಪಟ್ಟಿತ್ತು. ಮತ್ತು ದೇವಸ್ಥಾನಗಳಲ್ಲಿ ಅಭಿಷೇಕಾರ್ಚನೆಯು ನಡೆದಿತು. ಚಕ್ರವರ್ತಿದಂಪತಿಗಳ ಚಿತ್ರಪಟವು ಇಡಲ್ಪಟ್ಟಿದ್ದ ಮಂಟಪವು ಅತಿ ವಿಜೃಂಭಣೆಯಿಂದ ಊರಿನೊಳಗೆಲ್ಲಾ ಮೆರೆಸಲ್ಪಟ್ಟು, ಶೃಂಗರಿಸಲ್ಪಟ್ಟಿದ್ದ ಚಪ್ಪರದಲ್ಲಿರಿಸಲ್ಪಟ್ಟಿತು. ಈ ಮಹೋತ್ಸವದ ಜ್ಞಾಪಕಾರ್ಥವಾಗಿ ಸ್ಕೂಲ್ ಕಟ್ಟಡದ ಮುಂಭಾಗದಲ್ಲಿ ಒಂದು ಕಲ್ಪವೃಕ್ಷವು ಹೆಡ್‌ಮಾಸ್ತರಿಂದ ನೆಡಲ್ಪಟ್ಟಿತು. ಉತ್ಸವವು ಬೀದಿಗಳಲ್ಲಿ ಬರುವಾಗ್ಗೆ ಜನರು [illegible] ಯವರುಗಳಿಗೆ ಸಕ್ಕರೆಯನ್ನು ಹಂಚಿದರು. ಸಾಯಂಕಾಲ ೪ ಗಂಟೆಯಲ್ಲಿ ವಿದ್ಯಾರ್ಥಿಗಳಿಂದ ಸ್ಕೂಲ್ ಮುಂಭಾಗದಲ್ಲಿ ಆಟವನ್ನಾಡಿಸಿ ಗೆದ್ದವರಿಗೆ ಮಾ|| ಹಿರಿಯ [illegible] ಮಾ|| ವಿ ಮರೆಂಗೌಡರು ಬಹುಮಾನಗಳನ್ನು ಕೊಟ್ಟರು. ಅನಂತರ ೫ ಗಂಟೆಯಲ್ಲಿ ಮಿ|| ಮುಖ್ಯ [illegible] ಅಧ್ಯಕ್ಷತೆಯಲ್ಲಿ ವೈದಿಕರು, ಲೌಕಿಕರು ಮೊದಲಾದವರ ಸಭೆಯು ಸೇರಿತ್ತು. ಆಗ ಮಾ|| ಮೂ|| ನಾಗಪ್ಪನವರು ಬ್ರಿಟಿಷ್ ರಾಜ್ಯಭಾರದಿಂದ ಭರತಖಂಡಕ್ಕುಂಟಾಗಿರುವ ಉಪಕಾರವನ್ನು ಕುರಿತು ಭಾಷಣಮಾಡಿದಮೇಲೆ ಅಧ್ಯಕ್ಷರು ದೈವಭಕ್ತಿ, ರಾಜಭಕ್ತಿ ಮುಂತಾದ ಪ್ರಕೃತ [illegible] ವಿಷಯಗಳ ಮೇಲೆ ಸರಸವಾಗಿ ಉಪನ್ಯಾಸವನ್ನು ಮಾಡಿದರು. ತರುವಾಯ ಬಾಲಕಬಾಲಿಕೆಯರುಗಳು ಚಕ್ರವರ್ತಿದಂಪತಿಗಳ ಮತ್ತು ನಮ್ಮ ಮಹಾರಾಜರವರ ಶ್ರೇಯಃಪ್ರಾರ್ಥನೆಯ [illegible] ಗಳನ್ನು ಹೇಳಿದರು. ಅಧ್ಯಕ್ಷರು [illegible] ಪರಿಷೇಚನ [illegible]

ನಾರ[redacted] [illegible]

[illegible] ಹಂಚಲ್ಪಟ್ಟಿತು. [illegible]

[illegible]

[illegible]

ಳಿಂದ ನೂರಾರು ಜನರು ಬಂದಿದ್ದರು. ಈ ವಿಜೃಂಭಣೆಯೆಲ್ಲವೂ ಶೇಕದಾರ್ ಮಿ|| ಲಿಂಗಪ್ಪನವರ ಪ್ರಯತ್ನವಿಶೇಷದಿಂದ ನಡೆದಿರುತ್ತದೆ.

ಚಂದಾದಾರ.

ಧಾರವಾಡ ಡಿ|| ನರಗುಂದ

ಇಲ್ಲಿಯ ಮ್ಯುನಿಸಿಪಾಲಿಟಿ ಕೌನ್ಸಿಲರರಾದ ರಾ|| ರಾ|| ಎಲ್ಲಪ್ಪ ಓಮಣ್ಣ ಅಣ್ಣಾ ಆನಿಗುಂದಿ ಮತ್ತು ವೀರಪ್ಪ ನಾಗಪ್ಪ ಅಣ್ಣಾ ಕೌದಿಕೆ ಮುಂತಾದ ಪ್ರಮುಖರು ಚಕ್ರವರ್ತಿ ಸಾರ್ವಭೌಮರವರ ಕಿರೀಟಧಾರಣ ಮಹೋತ್ಸವವನ್ನು ಅತಿ ಸ್ವಾನಂದದಿಂದ ಆಚರಿಸಿದರು. ಕಳೆದ ತಾ|| [illegible] ದ ತಾ|| ೧೨ ರ ವರೆಗೆ ಊರನ್ನು ನಾನಾವಿಧ [illegible] ಗರಿಸಿದ್ದಲ್ಲದೆ, ಪರ್ವತದ ಸುಂದರವಾದ [illegible] ರಚಿಸಲ್ಪಟ್ಟಿದ್ದ [illegible] ಮಂಟಪದಲ್ಲಿ ಪ್ರಭುಗಳ ಛಾಯಾಚಿತ್ರವು [illegible]. ತಾ|| ೧೨ ರ ದಿವಸ ಮಂಟಪದಲ್ಲಿ ಈ ಊರ [illegible] ಮಹಾಲ್ಕರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು. ಈ ಸಭೆಗೆ ಪ್ರಮುಖ [illegible] ರು, ಶ್ರೀಮಂತರು ವರ್ತಕರು ಮೊದಲಾದವರು ಒಳ್ಳೆಯ [illegible] ಉಡಿಗೆಗಳನ್ನು ಧರಿಸಿಕೊಂಡು ಬಂದಿದ್ದರು. ರಾ|| ವಿ [illegible] ಅಣ್ಣಾ ಇವರು ಸಭೆಯ ಉದ್ದೇಶವನ್ನು [illegible] ಮಾಡಿದಮೇಲೆ ಪ್ರಭುಗಳ ಚರಿತ್ರೆ [illegible] ಭಾಷೆಗಳಲ್ಲಿ ಸಭಿಕರಿಗೆ ತಿಳಿಸಿ [illegible] ಸರಸವಾಗಿ ಓದಿ ತೋರಿಸಿದರು. ಅನಂತರ [illegible] ಬಾಲಕಬಾಲಿಕೆಯರುಗಳು ರಾಷ್ಟ್ರಗೀತವನ್ನು [illegible] ಅವರುಗಳಿಗೆ ಅಧ್ಯಕ್ಷರ ಹಸ್ತದಿಂದ [illegible], ಪದಕಗಳೂ ಹಂಚಲ್ಪಟ್ಟವು. ಈ ಗ್ರಾಮದ [illegible] ಚಿದಾನಂದ ಶಾಸ್ತ್ರಿಗಳು ಪ್ರಭುದಂಪತಿಗಳಿಗೆ ಕಲ್ಯಾಣವಾಗಲೆಂದು [illegible] ಸಂಸ್ಕೃತದಲ್ಲಿ ಭಾಷಣಮಾಡಿದಮೇಲೆ ರಾ|| ರಾ|| ಸಣ್ಣವೀರಪ್ಪ ಜವಳಿ ಇವರು ಚಕ್ರವರ್ತಿಯವರ ಮತ್ತು ಚಕ್ರವರ್ತಿನಿಯವರು [illegible] ದಯಮಾಡಿಸಿರುವುದು ಭಾರತಪ್ರಜೆಗಳ ಭಾಗ್ಯೋದಯಕ್ಕಾಗಿಯೂ, ಪ್ರಜೆಗಳ ಸುಖಸಂಪತ್ತಿಗೂ ವಿದ್ಯಾಭಿವೃದ್ಧಿಗೂ, ನೆಮ್ಮದಿಗೂ ಕಾರಣವಾದ ಬ್ರಿಟಿಷರ ಆಳಿಕೆಯು ನಮ್ಮಮೇಲೆ ಚಿರಕಾಲವಿರಲೆಂದೂ ಭಾಷಣ ಮಾಡಿದಮೇಲೆ ಸಭಿಕರಿಗೆ ಅತ್ತರು ಪಾನಸುಪಾರಿಯು ಹಂಚಲ್ಪಟ್ಟು ಸಭೆಯು ಮುಕ್ತಾಯವಾಯಿತು

ಶಿವಪ್ಪ [illegible] ಮುದಿಗನ್ನ.

ನೆಲಮಂಗಲ ತಾ|| ದಾಬಸಪೇಟೆ

ಈ ದಿನ ಪಾಠಶಾಲೆ ಇಲ್ಲಿನ [illegible] ಸ್ಕೂಲ್ ಮತ್ತು ಟ್ರಾವೆಲರ್ಸ್ ಬಂಗ್ಲೆ ಯು ಕಟ್ಟಡಗಳು ಕದಳೀಸ್ತಂಭಗಳಿಂದಲೂ, ತೋರಣಗಳಿಂದಲೂ, ಅಲಂಕರಿಸಲ್ಪಟ್ಟಿದ್ದವು. ಸ್ಕೂಲ್ ಕಟ್ಟಡ [illegible] ವಿದ್ಯಾರ್ಥಿಗಳ ಆಟ [illegible] ಶ್ರೀ ಚಕ್ರವರ್ತಿಗಳವರ ಶ್ರೇಯಃಪ್ರಾರ್ಥನೆಗಾಗಿ ದೇವಾಲಯಗಳಲ್ಲಿ ಪೂಜೆಗಳು ನಡೆಯಲ್ಪಟ್ಟವು. ತರುವಾಯ ಶ್ರೀ ಸಾರ್ವಭೌಮರವರ ಛಾಯಾಪಟವನ್ನು ಮಂಗಳವಾದ್ಯಗಳಿಂದಲೂ, [illegible] ರಿಂದಲೂ ರಾಜಬೀದಿಗಳಲ್ಲೆಲ್ಲಾ ಮೆರವಣಿಗೆಮಾಡಿಕೊಂಡು ಬಂದು [illegible] ಮಧ್ಯಾಹ್ನ ೩ ಗಂಟೆಗೆ ಸಭೆಯು ಸೇರಲ್ಪಟ್ಟಿತು. ಗ್ರಾಮದ ಮುಖಂಡರೂ, ಸ್ಕೂಲ್ ವಿದ್ಯಾರ್ಥಿಗಳೂ [illegible] ಬಂದಿದ್ದರು. [illegible] ತರುವಾಯ [illegible] ಮಂಗಳಾರತಿಯು ಮಾಡಲ್ಪಟ್ಟಿತು. [illegible] ಗಂಧ [illegible] [illegible]

ಮುಸಲ್ಮಾನ ಮಹಾಜನಗಳೂ, ಪಟೇಲ್ ಶಾನುಭೋಗರೂ, ಸಾಹುಕಾರರೂ ಸಹ ತಮ್ಮ ರಾಜಭಕ್ತಿಯನ್ನು ಪ್ರಕಟಿಸಿದರು.

ಚಾಮರಾಜನಗರ ತಾ॥ ಹೊನ್ನೂರಿನಲ್ಲಿ.

ತಾ॥ ೧೨ ರಲ್ಲಿ ಈ ಗ್ರಾಮದ ವೀರಶೈವ ವೈದಿಕ ಮತ್ತು ಲೌಕಿಕ ಜನರು ನಿಷ್ಠೆಯಿಂದ ತಮ್ಮ ಮನೆಗಳನ್ನು ಶೃಂಗರಿಸಿ ದೇವಸ್ಥಾನಕ್ಕೆ ಹೋಗಿ ಪಂಚಾಮೃತದಿಂದಲೂ, ಅಷ್ಟೋತ್ತರ, ಗಣಹೋಮ, ದೇವರ ಹಸ್ರ ನಾಮಗಳಿಂದಲೂ ಅಭಿಷೇಕವನ್ನೂ, ಷೋಡಶೋಪಚಾರಗಳನ್ನೂ ಮಾಡಿಸಿ ಗುರುಸ್ವಾಮಿಯವರನ್ನು ಶೃಂಗರಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ನಾನಾ ಬಗೆಗಳಿಂದಲೂ, ತಳಿರುತೋರಣಗಳಿಂದಲೂ, ಕದಳೀಸ್ತಂಭಗಳಿಂದಲೂ ಅಲಂಕೃತವಾದ ಬೀದಿಗಳಲ್ಲಿ ನಂದಿಧ್ವಜ ಮೊದಲಾದ ಬಿರುದುಗಳಿಂದ ದೇವಸ್ಥಾನಕ್ಕೆ ಬಂದು ನೆರೆದಿದ್ದ ಜನರೆಲ್ಲ ಪ್ರಸಾದವನ್ನು ವಿನಿಯೋಗ ಮಾಡಿದಮೇಲೆ ಶ್ರೀ ಜಾರ್ಜ್ ಸಾರ್ವಭೌಮರ ಮತ್ತು ಮೇರಿ ಮಹಾರಾಣಿಯವರ ಹಾಗೂ ನಮ್ಮನ್ನಾಳುವ ಶ್ರೀಮನ್ ಮಹಾರಾಜರವರುಗಳ ಶ್ರೀಮನ್ ಯುವರಾಜದಂಪತಿಗಳ ಮಾತೃಶ್ರೀ ವಾಣೀವಿಲಾಸ ಸನ್ನಿಧಿಯವರ ಮತ್ತು ರಾಜಕುಮಾರಿಗಳ ಶ್ರೇಯಾಭಿವೃದ್ಧಿಯನ್ನು ಕೋರಿ ಪ್ರಾರ್ಥನೆ ಮಾಡಿದರು. ಆ ರಾತ್ರಿ ಉತ್ಸವವನ್ನೂ, ಮದ್ದಿನ ವಿನೋದವನ್ನೂ ಅತಿ ವೈಭವದಿಂದ ನೆರವೇರಿಸಿ ಚಕ್ರವರ್ತಿಗಳಲ್ಲಿಯೂ ಮಹಾರಾಜರವರಲ್ಲಿಯೂ ಪ್ರಜೆಗಳಿಗಿರುವ ಅತಿಶಯವಾದ ರಾಜಭಕ್ತಿಯನ್ನು ಪ್ರದರ್ಶಿಸಿದರು. ಈ ಉತ್ಸವ ಸಮಾರಂಭದಲ್ಲಿ ಈ ಗ್ರಾಮದ ಎಲ್ಲಾ ಜಾತಿಯ ಜನರೂ ಭಾಗಿಗಳಾಗಿದ್ದು ತಮ್ಮ ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಪ್ರತ್ಯಕ್ಷದರ್ಶಿ.

ಧಾರವಾಡದ ಟಿ ಅಣ್ಣಿಗೇರಿ.

ಕಳೆದ ತಾ॥ ೧೨ ರಲ್ಲಿ ಊರೆಲ್ಲಾ ಚಿನ್ನವಾಗಿ ಅಲಂಕರಿಸಲ್ಪಟ್ಟದ್ದಲ್ಲದೆ, ಸರ್ಕಾರಿಯ ಚಾವಡಿಯ ಮತ್ತು ಶಾಲೆಗಳ ಮುಂದೆ ಭವ್ಯವಾದ ಕಮಾನುಗಳು ಅತ್ಯಂತ ಶೋಭಾಯಮಾನವಾಗಿ ಕಟ್ಟಲ್ಪಟ್ಟದ್ದವು. ಮಧ್ಯಾಹ್ನ ೧೨ ಗಂಟೆಗೆ ಮನೋಹರವಾಗಿ ಶೃಂಗರಿಸಲ್ಪಟ್ಟಿದ್ದ ಸ್ಕೂಲ್ ಕಟ್ಟಡದಲ್ಲಿ ಪರಮಪ್ರಿಯರೂ ಪೂಜ್ಯರೂ ಆದ ಚಕ್ರವರ್ತಿ ಸಾರ್ವಭೌಮರ ಮತ್ತು ಮೇರಿ ರಾಣಿಯವರ ಭಾವಚಿತ್ರಗಳು ಇರಿಸಲ್ಪಟ್ಟು, ಊರ ಪ್ರಮುಖಜನರ ಸರ್ಕಾರಿ ಉದ್ಯೋಗಸ್ಥರ ಸಭೆಯು ಸೇರಿದ್ದು ಬಾದಶಹರ ಜಾಹೀರನಾಮೆಯೋದಲ್ಪಟ್ಟಿತು. ಸಾಯಂಕಾಲದಲ್ಲಿ ಚಕ್ರವರ್ತಿ ದಂಪತಿಗಳ ಚಿತ್ರಪಟವು ಪಲ್ಲಕ್ಕಿಯಲ್ಲಿಡಲ್ಪಟ್ಟು ಛತ್ರಚಾಮರ ಮೊದಲಾದ ಬಿರುದುಗಳಿಂದಲೂ, ವಾದ್ಯ ನರ್ತನಗಳಿಂದಲೂ ಮದ್ದಿನ ವಿನೋದದಿಂದಲೂ ಅತಿ ವಿಜೃಂಭಣೆಯಿಂದ ಸ್ಕೂಲು ಕಟ್ಟಡದಿಂದ ಚಾವಡಿಗೆ ಒಯ್ಯಲ್ಪಟ್ಟಿತು. ಈ ಉತ್ಸವದ ದಿವಸ ಮಧ್ಯಾಹ್ನ ಸ್ಕೂಲು ಹುಡುಗರಿಗೆ ವಸ್ತ್ರಗಳನ್ನೂ, ಫಲಾಹಾರವನ್ನೂ ಹಂಚಿದರು. ಸ್ತ್ರೀಯರಿಗೆ ಕಣಗಳನ್ನೂ, ಸ್ಕೂಲಿನ ಮಕ್ಕಳಿಗೆ ಪುಸ್ತಕಗಳನ್ನೂ, ರಾಜಭಕ್ತಿಯಿಂದ ಇವರು ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಕೊಟ್ಟರು. ಇವರು ವಿದ್ಯಾರ್ಥಿ ಮತ್ತು ವಿದ್ಯಾಭಿಮಾನಿಗಳಿಗೂ ಅಕ್ಕಪಕ್ಕದ ಊರಿನವರಿಗೂ ಈ ದಿನ ಬಹಳ ಸಂತೋಷವಾಯಿತು. ಇವರು ತಮ್ಮ ಸ್ವಂತ ವೆಚ್ಚದಿಂದ ಬಡವರಿಗೆ ಅನ್ನದಾನ ಮಾಡಿದರು. ರಾತ್ರಿ ದೀಪಾಲಂಕಾರವೂ, ಕಳಸಗಳು ತಮ್ಮ ಸ್ವಂತ ವೆಚ್ಚದಿಂದ ಚಾವಡಿ ಮುಂತಾದ ಸ್ಥಳಗಳಲ್ಲಿ ಮಾಡಲ್ಪಟ್ಟಿತು. ಈ ಮಹೋತ್ಸವದ ಶ್ರೇಯಸ್ಸು ಜನರ ಆದರಣೆಯಿಂದ ಪೂರ್ಣವಾಗಿ ಸಿದ್ಧಿಸಿತು. ಅರ್. ವಿ.

ಶಿವಮೊಗ್ಗ ಜಿಲ್ಲೆ ಸೊರಬ.

ತಾ॥ ೧೨ ರಂದು ಶ್ರೀಮನ್ ಇಂಡಿಯಾ ಚಕ್ರವರ್ತಿಯವರ ಪಟ್ಟಾಭಿಷೇಕ ಮಹೋತ್ಸವ ಸಂದರ್ಭದಲ್ಲಿ ಶೃಂಗರಿಸಲ್ಪಟ್ಟಿದ್ದ ಎ. ವಿ. ಸ್ಕೂಲ್ ಕಟ್ಟಡದಲ್ಲಿ ಬೆಳಗ್ಗೆ ೧೧ ಗಂಟೆಗೆ ಸ್ಕೂಲ್ ವಿದ್ಯಾರ್ಥಿಗಳೂ, ಸರ್ಕಾರಿ ಅಧಿಕಾರಿಗಳೂ, ಮೆಂಬರುಗಳೂ, ಊರಿನ ಪ್ರಮುಖರೂ ಸಮಾರಂಭಕ್ಕೆ ಸೇರಿದ್ದರು. ಆಗ ಶ್ರೀಮನ್ ಸಾರ್ವಭೌಮ ದಂಪತಿಗಳವರ ಭಾವಚಿತ್ರಪಟಗಳನ್ನು ಪುಷ್ಪಹಾರ ಗಂಧಗಳಿಂದ ಪೂಜಿಸಿ, ಬಾದಶಹರ ಜಾಹೀರನಾಮೆಯನ್ನು ಓದಿದ ಮೇಲೆ ಸಿಹಿ ಹಂಚಿ ಸಭೆಯವರೆಲ್ಲರೂ ಚಕ್ರವರ್ತಿ ದಂಪತಿಗಳಿಗೆ ಜಯಕಾರ ಮಾಡಿದರು ...

ಸಿ ಹಂಚಲಿಕ್ಕೆ ಬರುವವರಿಗೆ
ಆಯಾ ದಿವಸಕ್ಕೆ ಆದ ವ್ಯವಸ್ಥೆ

ಡ್ ಮಾಸ್ಟರ್ ಮುಂತಾದವರು ಓದಿ ಹೇಳಿದರು. ಆನಂತರ ಸ್ಕೂಲ್ ಬಾಲಕರು ಶ್ರೀಮನ್ ಜಾರ್ಜ್ ಚಕ್ರವರ್ತಿಯವರ ಮತ್ತು ಶ್ರೀಮನ್ ಮೈಸೂರು ಮಹಾರಾಜರವರ ಶ್ರೇಯೋಭಿವೃದ್ಧಿ ವಿಷಯಕವಾದ ಸಂಸ್ಕೃತ ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬರೆದಿದ್ದ ಶ್ಲೋಕಗಳನ್ನೂ ಹಾಡಿದರು. ಸಭಿಕರಿಗೆ ಗಂಧ ತಾಂಬೂಲ ಹಾರ ತುರಾಯಿಗಳು ಕೊಡಲ್ಪಟ್ಟವು. ಪಿ. ಅಮಲ್ದಾರ್ ಸಾಹೇಬರವರು, ಸ್ಕೂಲ್ ಬಾಲಕರುಗಳಿಗೆ ವಿತರಣೆ ಮಾಡುವ ಸಿಹಿ ಪದಾರ್ಥಗಳನ್ನು ಕೊಟ್ಟರು. ಸಭಿಕರೆಲ್ಲರೂ ಸಿಹಿ ಶ್ರೀಮನ್ ಚಕ್ರವರ್ತಿ ದಂಪತಿಗಳವರ ಮತ್ತು ಶ್ರೀಮನ್ ಮಹಾರಾಜರವರ ಭಾವಚಿತ್ರಪಟಗಳನ್ನು ಅತಿ ವೈಭವದಿಂದ ಊರಿನಲ್ಲೆಲ್ಲಾ ಉತ್ಸವಮಾಡಿಕೊಂಡು ಬಂದು ತಾ॥ ಕಛೇರಿಯಲ್ಲಿ ೧೧ ಗಂಟೆಗೆ ಸರಿಯಾಗಿ ಸಿಂಹಾಸನದ ಮೇಲೆ ಇರಿಸಿದರು. ಆ ದಿವಸ ಕಛೇರಿಯ ಮುಂದುಗಡೆ ಒಂದು ಶೃಂಗಾರವಾದ ಚಪ್ಪರದಲ್ಲಿ ಇವರಿಗಾಗಿ ನಿರ್ಮಿಸಿದ್ದ ಸ್ಥಳಗಳಲ್ಲಿ ಊಟದ ವ್ಯವಸ್ಥೆಯು ನಡೆಯಿತು. ಪಿ. ಅಮಲ್ದಾರ್ ಸಾಹೇಬರವರು ವಿವರಣೆ ಮಾಡಿಸಿದ್ದರು. ಪುನಃ ೫ ಗಂಟೆಗೆ ದರ್ಬಾರು ಆರಂಭವಾಗಲು ಗೌರವಾರ್ಹರಾದ ಗಣ್ಯರುಗಳು ಅವರವರ ಸ್ಥಳಗಳಲ್ಲಿ ಕುಳಿತರು. ಚಕ್ರವರ್ತಿಯವರ ಪಟ್ಟಾಭಿಷೇಕವನ್ನು ಪಿ. ಅಮಲ್ದಾರ್ ಸಾಹೇಬರವರು ಓದಿ ಹೇಳಿದರು. ಆ ವೇಳೆ ಕಛೇರಿಯ ಮುಂಭಾಗದಲ್ಲಿ ಫ್ಲೋರಲ್ ಮತ್ತು ಬಾಣ ಬಿರುಸುಗಳೂ ಮತ್ತು ಕದಳೀ ಸ್ತಂಭ ತೋರಣ ಮುಂತಾದ ಅಲಂಕಾರಗಳೊಡನೆ ಕೂಡಿದ್ದ ಬೀದಿಗಳಲ್ಲಿ ಸ್ಕೂಲ್ ಬಾಲಕರ ಆಟಗಳು ನಡೆದವು. ಸ್ಕೂಲ್ ಬಾಲಕರ ಓಟಗಳೂ ಆಟಗಳೂ ಪ್ರೋಗ್ರಾಂ ಪ್ರಕಾರ ನಡೆಸಲ್ಪಟ್ಟವು. ಈ ಆಟಗಳಲ್ಲಿ ಗೆದ್ದಂತಹ ಸ್ಕೂಲ್ ಬಾಲಕರುಗಳಿಗೆ ಪಿ. ಅಮಲ್ದಾರ್ ಸಾಹೇಬರವರಾದ ಜಿ. ಮುರುಡಯ್ಯನವರ ಹಸ್ತದಿಂದಲೇ ಬಹುಮಾನಗಳು ಕೊಡಲ್ಪಟ್ಟು ಮಂಗಳವಾದ್ಯಗಳೊಡನೆ ಕಛೇರಿಯ ಪಕ್ಕದ ಉದ್ಯಾನದಲ್ಲಿ ಫಲವೃಕ್ಷಗಳು ನೆಡಲ್ಪಟ್ಟವು. ರಾತ್ರಿ ಶ್ರೀಮನ್ ಜಾರ್ಜ್ ಚಕ್ರವರ್ತಿ ದಂಪತಿಗಳ ಮತ್ತು ಶ್ರೀಮನ್ ಮೈಸೂರು ಮಹಾರಾಜರವರ ಭಾವಚಿತ್ರಪಟಗಳೂ ಪಲ್ಲಕ್ಕಿಯಲ್ಲಿಡಲ್ಪಟ್ಟು ಅದು ದೇವರುಗಳ ಸಮೇತ ಉತ್ಸವವು ದೀಪೋತ್ಸವವು ಮಾಡಲ್ಪಟ್ಟದ್ದು ಪ್ರತಿದಿನಗಳಲ್ಲೂ ರಾತ್ರಿ ಕೊಂಡು ಕಛೇರಿಯನ್ನು ಬಂದು ಸೇರಿತು. ಇಷ್ಟಲ್ಲದೇ ಹೀರಕ್ಕಿಪ ಜನಾಂಗದವರು ಶ್ರೀಬಸವೇಶ್ವರದೇವರನ್ನು ಪಲ್ಲಕ್ಕಿಯಲ್ಲಿ ಮಂಗಳವಾದ್ಯಗಳೊಡನೆ ಮೆರವಣಿಗೆ ಹೊರಡಿಸಿದರು.

ಸಿ ಮುರುಡಯ್ಯ ಎ. ವಿ. ಸ್ಕೂಲ್ ಅ॥ ಮಾಸ್ಟರ್.

[೩ ನೇಯ ಪುಟವನ್ನು ನೋಡಿರಿ.]

ಮೈಸೂರ್ ಸ್ಟಾರ್

೧೯೧೧ ನೇಯ ಡಿಸೆಂಬರ್ ತಿಂ ೨೪ ನೇ ಸೋಮವಾರ.

ಮೈಸೂರು ಮತ್ತೂ ಬರೋಡಾ ಸಂಸ್ಥಾನಗಳಲ್ಲಿ ಯಾರಿಗೆ ಮೊದಲು ಮರ್ಯಾದೆಯಾಗತಕ್ಕದ್ದು?

ಭರತಖಂಡದಲ್ಲಿರುವ ದೇಶೀಯ ಸಂಸ್ಥಾನಗಳಲ್ಲಿ ಭೂವಿಸ್ತೀರ್ಣದಲ್ಲೂ, ಪ್ರಜಾಸಂಖ್ಯೆಯಲ್ಲೂ, ಉತ್ಪನ್ನದಲ್ಲೂ ಹೈದರಾಬಾದು ಮೊದಲನೆಯದಾಗಿಯೂ, ಮೈಸೂರು ಎರಡನೆಯದಾಗಿಯೂ, ಬರೋಡಾ ಮೂರನೆಯದಾಗಿಯೂ ಇರುತ್ತವೆ. ಅವುಗಳ ಪ್ರಕೃತಸ್ಥಿತಿಯಿಂದ ಗೊತ್ತಾಗುವುದು. ಹೀಗೆ ಹೈದರಾಬಾದು ಸಂಸ್ಥಾನಕ್ಕೆ ಎರಡನೆಯದಾದ ಮೈಸೂರು ಸಂಸ್ಥಾನವು ೨೯೪೩೩ ಚದರಮೈಲಿ ವಿಸ್ತೀರ್ಣವುಳ್ಳದ್ದಾಗಿ ೫೮ ಲಕ್ಷ ಪ್ರಜಾಸಂಖ್ಯೆಯನ್ನೂ, ೨,೩೩,೫೦,೦೦೦ ರೂ. ಗಳ ಉತ್ಪತ್ತಿಯನ್ನೂ ಉಳ್ಳದ್ದಾಗಿರುವುದರಿಂದ ೮೦೯೯ ಚದರಮೈಲಿ ವಿಸ್ತೀರ್ಣವನ್ನೂ, ೨೦ ಲಕ್ಷ ಪ್ರಜಾಸಂಖ್ಯೆಯನ್ನೂ, ೧,೫೫,೦೦,೦೦೦ ರೂ. ಗಳ ಉತ್ಪತ್ತಿಯನ್ನೂ ಉಳ್ಳ ಬರೋಡಾ ಸಂಸ್ಥಾನಕ್ಕಿಂತ ಮೊದಲು ಮರ್ಯಾದೆಯನ್ನು ಹೊಂದಬೇಕಾದುದು ಯುಕ್ತವಾಗಿರುವುದಷ್ಟೆ. ಆದರೆ ಕಳೆದ ತಾ॥ ೧೨ ರಲ್ಲಿ ಡಿಲ್ಲಿಯಲ್ಲಿ ಜರುಗಿದ ದರ್ಬಾರಿನಲ್ಲಿ ದೇಶೀಯ ಮಹಾರಾಜರುಗಳ ಮೆರವಣಿಗೆಯು ನಡೆಯುವಾಗ್ಗೆ ಪ್ರಥಮ ಸಂಸ್ಥಾನೀಕರಾದ ಹೈದರಾಬಾದಿನ ನೈಜಾಂರವರು ಮುಂದೆಯೂ ಬರೋಡಾ ಗಾಯಕವಾಡರವರ ಮೆರವಣಿಗೆಯು ನಡೆದು ಅನಂತರ ನಮ್ಮ ಮೈಸೂರ ಮಹಾರಾಜರವರ ಮೆರವಣಿಗೆಯು ನಡೆದುದನ್ನು ನೋಡಿದರೆ ಮೈಸೂರು ದೇಶೀಯರೆಲ್ಲರಿಗೂ ಬಹಳ ಆಶ್ಚರ್ಯವುಂಟಾಗಿದೆ. ಈ ಮೈಸೂರು ಸಂಸ್ಥಾನವು ಇತರ ದೇಶೀಯ ಸಂಸ್ಥಾನಗಳಲ್ಲೆಲ್ಲಾ ಶ್ರೇಷ್ಠವಾದ ...
ಆಡಳಿತದಲ್ಲಿ ಮುಂದಿರುವುದು
ಪಿ. ಆದರೆ ಮೈಸೂರು ಸಂಸ್ಥಾನ

ದ ರಾಜ್ಯದ ಮಹಾರಾಜರವರಿಗೆ ಉಚಿತವಾಗಿ ಒಪ್ಪಿಸಿದ ವೇಳೆ ಕೊಡಲ್ಪಟ್ಟಿರುವುದು. ಈ ಅಂಶದಲ್ಲಿ ಬರೋಡಾ ಸಂಸ್ಥಾನಕ್ಕೆ ಮೈಸೂರು ಸಂಸ್ಥಾನಕ್ಕಿಂತ ಮೊದಲೇ ಮರ್ಯಾದೆಯು ದೊರೆಯತಕ್ಕದ್ದಾಗಿದೆ" ಎಂದು ಲಂಡನ್ ಪತ್ರಿಕೆಗಳು ಮೊದಲಾದ ಪತ್ರಿಕೆಗಳಲ್ಲಿ ಕಾರಣವನ್ನು ಕೊಟ್ಟಿರುತ್ತವೆ. ಹಾಗೆ ಸಂಧಿಗೊಳಪಟ್ಟಿರುವುದರಿಂದಲೇ ಬರೋಡಾ ಸಂಸ್ಥಾನವು ಮೈಸೂರ ಸಂಸ್ಥಾನಕ್ಕಿಂತ ಮೊದಲು ಮರ್ಯಾದೆಯನ್ನು ಹೊಂದಿರುವುದೆನ್ನುವುದಾದರೆ, ಬರೋಡಾ ಸಂಸ್ಥಾನದಂತೆ ಸಂಧಿಗೊಳಪಟ್ಟಿರುವ ಉದಯಪುರ, ಡಿಲ್ಲಿ ಮೊದಲಾದ ಸಂಸ್ಥಾನಗಳು ಅನೇಕ ಇವೆ. ಹಿಂದೆ ಶಿವಾಜಿ ಮೊದಲಾದವರ ಕಾಲದಲ್ಲಿ ಮಾನ್ಯವಾದ ದೇಶೀಯ ಸಂಸ್ಥಾನಗಳ ಸಂಬಂಧವಾಗಿ ೧೮೭೭ ರಲ್ಲಿ ಇಂಡಿಯಾ ಗೌರ್ನಮೆಂಟಿನವರು ಮಾಡಿರುವ ನಿಯಮದಲ್ಲಿ ಒಂದು ಸಂಸ್ಥಾನವು ಪಡೆಯ ಬೇಕಾದ ಗೌರವ ನಿರ್ಧರಿಸಲ್ಪಟ್ಟಿದೆ. ಅವರ ಕಾಲಕ್ಕೆ ಸಂಧಿಗೊಳಪಟ್ಟಿದ್ದ ಮೈಸೂರಿನ ಕಾರ್ಯವು ೧೮೮೧ ರಲ್ಲಿ ಪ್ರಾರಂಭವಾದ ಸಂಸ್ಥಾನಗಳಿಗೆ ಇದೇ ಕ್ರಮದಲ್ಲಿ ಮರ್ಯಾದೆ ಸಲ್ಲುತ್ತಿದ್ದದ್ದು ಸ್ಪಷ್ಟವಾಗಿದೆ. ಈ ಬಗ್ಗೆ ನಮ್ಮ ಸಂಸ್ಥಾನದ ದಿವಾನರವರು ಪತ್ರ ರೂಪವಾಗಿ ಗವರ್ನ್ಮೆಂಟಿಗೆ ತಿಳಿಸಿದ್ದರು ...

ಮೈಸೂರ ಸಂಸ್ಥಾನವು ವಿಸ್ತೀರ್ಣದಲ್ಲೂ, ಜನಸಂಖ್ಯೆಯಲ್ಲೂ, ಉತ್ಪನ್ನದಲ್ಲೂ ಬರೋಡಾ ಸಂಸ್ಥಾನಕ್ಕಿಂತ ಎಷ್ಟೋ ದೊಡ್ಡದಾಗಿದ್ದಾಗ್ಯೂ, ಕಳೆದ ತಾ॥ ೧೨ ರಲ್ಲಿ ನಡೆದ ದರ್ಬಾರಿನಲ್ಲಿ ಚಕ್ರವರ್ತಿಯವರಿಗೆ ಗೌರವಾರ್ಪಣೆ ಮಾಡುವಾಗಲೂ, ಚಕ್ರವರ್ತಿಯವರಿಗೆ ಮಹಾರಾಜರುಗಳ ಪರಿಚಯ ಮಾಡಲ್ಪಡುವಾಗಲೂ, ಬರೋಡಾಕ್ಕೆ ದ್ವಿತೀಯ ಸ್ಥಾನವು ದೊರೆತು, ಮೈಸೂರಿಗೆ ತೃತೀಯಸ್ಥಾನವು ಕೊಡಲ್ಪಟ್ಟಿತು. ಕಾರಣವೇನೋ ಗೊತ್ತಾಗಲಿಲ್ಲ. ಈ ತಾರತಮ್ಯದಿಂದ ಶ್ರೀಮನ್ಮಹಾರಾಜರವರ ಮನಸ್ಸಿಗೆ ಅಸಮಾಧಾನವೂ ಉಂಟಾದರೂ ಸಮಾಧಾನವು ತೋರಿದ್ದಾಗ್ಯೂ, ಮೈಸೂರ ದೇಶದ ಪ್ರಜೆಗಳೆಲ್ಲರಿಗೂ ಸ್ವಲ್ಪ ಅಸಮಾಧಾನವಾಯಿತು. ಹಿಂದೆ ಉಂಟಾದದ್ದು ೧೯೦೩ ರಲ್ಲಿ ನಡೆದ ದರ್ಬಾರಿನಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರವರು ಭರತಖಂಡಕ್ಕೆ ದಯಮಾಡಿಸಿದ್ದ ವೇಳೆಯಲ್ಲಿ ಬೊಂಬಾಯಿ ಪಟ್ಟಣದಲ್ಲಿ ದೇಶೀಯ ರಾಜರುಗಳ ಪರಿಚಯವು ಚಕ್ರವರ್ತಿಯವರಿಗೆ ಮಾಡಿಸಲ್ಪಟ್ಟಾಗ, ಶ್ರೀಮನ್ಮಹಾರಾಜರವರಿಗೆ ಎರಡನೇ ಸ್ಥಾನವು ದೊರೆತಿತ್ತು. ಹೈದರಾಬಾದಿನ ನೈಜಾಮರವರೂ, ಬರೋಡಾದ ಗಾಯಕವಾಡರವರೂ ಅವರ ನಂತರ ಪರಿಚಯಮಾಡಿಸಲ್ಪಟ್ಟರು ...

ತಾರತಮ್ಯವನ್ನು ಗಮನಿಸಿ ಚಕ್ರವರ್ತಿಯವರ ದರ್ಬಾರಿನಲ್ಲಿ ನಮ್ಮ ಮಹಾರಾಜರವರಿಗೆ ಉಚಿತ ಸ್ಥಾನವು ಕೊಡಲ್ಪಡಬೇಕು. ... ೧೯೦೯ ರಲ್ಲಿ ಲಾರ್ಡ್ ಮಿಂಟೋ ಅವರು ಮೈಸೂರಿಗೆ ಬಂದಿದ್ದಾಗ ರಾಜೇಂದ್ರ ಪ್ರಭುಗಳಿಗೆ ದ್ವಿತೀಯಸ್ಥಾನವು ಕೊಡಲ್ಪಟ್ಟಿತ್ತು. ಇಂದಿನ ದರ್ಬಾರಿನಲ್ಲಿ ಹೀಗಾದ್ದಾಗ್ಯೂ, ಪ್ರಸಕ್ತ ದರ್ಬಾರಿನಲ್ಲಿ ನಮ್ಮ ಮಹಾರಾಜರವರಿಗೆ ತೃತೀಯಸ್ಥಾನವು ಕೊಡಲ್ಪಟ್ಟದ್ದು ಈ ದೇಶದ ಪ್ರತಿಯೊಬ್ಬನಿಗೂ ಸಂತಾಪಕರವಾಗಿದೆ. ಹಿಂದಿನ ಕಾಲದಲ್ಲಿ ಹಿಂದಿನ ಈಸ್ಟ್ ಇಂಡಿಯಾ ಕಂಪೆನಿಯವರಿಗೆ ಬರೋಡಾ ಸಂಸ್ಥಾನವು ಸಹಾಯ ಮಾಡಿದ್ದುದರಿಂದ, ಮೈಸೂರಿಗಿಂತಲೂ ಹೆಚ್ಚು ಮರ್ಯಾದೆಯನ್ನು ತೋರಿಸಲ್ಪಡುತ್ತಿರುವುದನ್ನು ಒಪ್ಪುವುದಾದರೆ, ಬರೋಡಾ ಸಂಸ್ಥಾನದಂತೆಯೇ ಆ ಕಾಲದಲ್ಲಿ ಸಹಾಯಮಾಡಿದ ತಿರುವನಂತಪುರ (ಟ್ರಾವನ್ಕೂರ್) ಮೊದಲಾದ ಸಂಸ್ಥಾನಗಳಿಗೆ ...

ಕಳೆದ ತಾ॥ ೧೬ ರಲ್ಲಿ ರಾಜಧಾನಿಯ ವೀರಶೈವರು ವಿದ್ಯಾಭಿವರ್ಧಕ ಸಂಘದಲ್ಲಿ ಪ॥ ಯಜಮಾನ್ ನಿರಂಜನಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದು ಶ್ರೀಮನ್ಮಹಾರಾಜರವರಿಗೆ ಕೆ. ಸಿ. ಎಸ್. ಐ. ಪ್ರಶಸ್ತಿಯೂ, ಮಾ॥ ಕೆ. ಪಿ. ಪುಟ್ಟಣ್ಣ ಚೆಟ್ಟಿಯವರಿಗೆ ದಿವಾನ್ ಬಹದ್ದೂರ್ ಪ್ರಶಸ್ತಿಯೂ, ಬಿಳಿಗಿರಿ ರಂಗ ಅಯ್ಯಂಗಾರ್ ರವರಿಗೆ ಸಿ. ಐ. ಇ. ...
ಎಂಬ ಪ್ರಶಸ್ತಿಯೂ ದೊ
ದಕ್ಕಾಗಿ ಅವರುಗಳಿಗೆ ತಾರಾ
ನವನ್ನೂ, ಅವರುಗಳಿಗೆ ಕೃ

ಮೈಸೂರಿಗಿಂತಲೂ ದೊಡ್ಡ ಸಂಸ್ಥಾನಾಸ್ತವೂ ಕೊಡಲ್ಪಡಬೇಕಾಗಿದ್ದಿತಲ್ಲವೆ? ಎಷ್ಟು ಶ್ರೀಮನ್ಮಹಾರಾಜರವರಿಗೆ ಈ ರೀತಿಯಾಗಿ ೩ ನೇಯ ಸ್ಥಾನವು ಕೊಡಲ್ಪಟ್ಟಿರುವ [illegible] ವನ್ನು ರಾಜಭಕ್ತಿಪರಾಯಣರಾದ ಪ್ರಜೆಗಳು [illegible] ಬಿಟ್ಟುಕೊಡಬಾರದೆಂಬುದು ನಮ್ಮ ಅಭಿಪ್ರಾಯವಾಗಿದೆ. ಈ ರೀತಿ ಅಭಿಪ್ರಾಯಪಡತಕ್ಕವರು ದೊಡ್ಡ ಅಧಿಕಾರಿಗಳಲ್ಲಲ್ಲದಿದ್ದರೂ ಪ್ರಜೆಗಳಲ್ಲನೇಕರಿರುವರೆಂದು ತಿಳಿಯುತ್ತೇನೆ. ಹಾಗಾದರೆ ಅದಕ್ಕೆ ತಕ್ಕ ಪ್ರಯತ್ನವನ್ನು ಮಾಡತಕ್ಕದು ನಮ್ಮ ಆದ್ಯ ಕರ್ತವ್ಯವಾಗಿದೆ. ಆದುದರಿಂದ ಪ್ರತಿಯೊಂದು [illegible] ಸ್ಥಳಗಳಲ್ಲಿ ಪ್ರಮುಖ ಜನರು ಸಭೆ ಸೇರಿ ನಮ್ಮ ಮೈಸೂರ ಶ್ರೀಮನ್ಮಹಾರಾಜರವರಿಗೆ ನೈಜಾಮರ ನಂತರದ ದ್ವಿತೀಯ ಸ್ಥಾನವನ್ನು ಕೊಡಿಸಬೇಕೆಂದು ಏ[illegible] ವಿಜ್ಞಾಪನಾ ಪತ್ರಿಕೆಗಳನ್ನು ಬರೆದು ಒಂದನ್ನು ಚಕ್ರವರ್ತಿಯವರಿಗೂ, ಮತ್ತೊಂದನ್ನು ವೈಸ್ರಾಯರಿಗೂ ಕಳುಹಿಸಿಕೊಡತಕ್ಕದು. ಶ್ರೀ[illegible] ಚಕ್ರವರ್ತಿಯವರು [illegible] ಹಿಂತಿರುಗುವುದರೊಳಗಾಗಿ ಈ ಪ್ರಯತ್ನವನ್ನು ಮಾಡಬೇಕಾಗಿದೆ. ಈ ವಿಚಾರವು [illegible] ಮಹಾರಾಜರವರಿಗೆ ಸಂಬಂಧಪಟ್ಟದ್ದಾದುದರಿಂದ, ಅವರು ಈ ಪ್ರಯತ್ನದಲ್ಲಿ ಆಸಕ್ತಿಯನ್ನು ತೋರಿಸುವದಿಲ್ಲ ಮತ್ತೂ ಅವರಿಗಿದು ಬೇಕಾಗೂ ಇಲ್ಲವೆಂದು ತೋರುತ್ತದೆ. ಆದರೂ ಶ್ರೀಮನ್ಮಹಾರಾಜರವರು ನಮ್ಮ ಮೈಸೂರ ಸಂಸ್ಥಾನಾಧೀಶ್ವರರಾಗಿ ದರ್ಬಾರಿಗೆ ದಯಮಾಡಿಸಿದ್ದರಾದುದರಿಂದ, ಅಲ್ಲಿ ಆ ಮರ್ಯಾದೆಯು ವಿಷಯವು ನಮ್ಮನ್ನು ಸೇರಿದುದಾಗಿ[illegible] ಆದುದರಿಂದ ಮೈಸೂರ ದೇಶದ ಪ್ರಜೆಗಳಾದ ನಾವುಗಳು ಅಧಿಕಾರಿಗಳ ಪ್ರೇರಣೆಯನ್ನು ನಿರೀಕ್ಷಿಸದೆ ಸ್ವತಃ ಪ್ರಯತ್ನಿಸಬೇಕಾಗಿದೆ. ಚಕ್ರವರ್ತಿಯವರು ಭರತಖಂಡಕ್ಕೆ ದಯಮಾಡಿಸಿರುವುದು ಅಭೂತಪೂರ್ವವಾದುದು. ಇಂತಹ ವೇಳೆಯಲ್ಲಿ ನಡೆದ ಸಂದರ್ಭವನ್ನು ಹಾಗೆಯೇ ಬಿಟ್ಟರೆ ಮುಂದೆ ಅದು ಪದ್ಧತಿಯಾಗಿ ನಿಲ್ಲುವುದಾದುದರಿಂದ, ನಾವು ಲೇಶವೂ ಕಾಲಹರಣಮಾಡದೆ ಚಕ್ರವರ್ತಿಯವರಲ್ಲೂ, ವೈಸ್ರಾಯರಲ್ಲೂ ಬಿನ್ನೈಸಿಕೊಂಡು ನಮ್ಮ ಮನೋಭೀಷ್ಟವನ್ನು ಪಡೆಯಬಿಸಿಕೊಳ್ಳಬೇಕಾಗಿದೆ.

ಬರೋಡಾ ಸಂಸ್ಥಾನಕ್ಕೆ ಮೊದಲು ಮರ್ಯಾದೆಯು ನ[illegible]ದು ಅನಂತರ ನಮ್ಮ ಸಂಸ್ಥಾನಕ್ಕೆ ನಡೆಯಬೇಕೆಂಬ ನಿರ್ಬಂಧವಿಲ್ಲವೆಂಬುದು ೧೮೭೭ ರಲ್ಲಿ ಆಗಿರುವ ನಿಯಮದಿಂದಲೂ, ೧೯೦೫ ರಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ರು ಬೆಂಗಳೂರಿಗೆ ದಯಮಾಡಿಸಿದ್ದ ವೇಳೆಯಲ್ಲೂ, ೧೯೦೩ರಲ್ಲಿ ನಡೆದ ದರ್ಬಾರಿನಲ್ಲೂ ಶ್ರೀ ಶ್ರೀ ಚಾಮರಾಜೇಂದ್ರ ಒಡೆಯರ್ ವರಿಗೆ ದೇಶೀಯ ಮಹಾರಾಜರುಗಳ ಪಙ್ಕ್ತಿಯಲ್ಲಿ ದ್ವಿತೀಯ ಸ್ಥಾನವು ಕೊಡಲ್ಪಟ್ಟಿದ್ದಿತೆಂದು ಮಿ ನೆಮ್ಮೊರವರ ಬರವಣಿಗೆಯಿಂದಲೂ ವ್ಯಕ್ತವಾಗುತ್ತದೆ. ಆದರೆ ಈ ವೇಳೆ ಮಾತ್ರ ನಮ್ಮ ಮಹಾರಾಜರವರಿಗೆ ತೃತೀಯಸ್ಥಾನವು ಒಪ್ಪಿಸಲ್ಪಟ್ಟದ್ದಕ್ಕೆ ಕಾರಣವೇನೋ ತಿಳಿಯದು. [illegible] ಪ್ರಜಾಕ್ಷೇಮ ಬೆಂತನೆಯಲ್ಲಿ ನಿರತರಾಗಿರುವ ನಮ್ಮ [illegible] ಈ [illegible]ರವಾದ ರಾಜ್ಯಪ್ರತಿಷ್ಠೆಗಳ ಕಡೆ ಮನಸ್ಸನ್ನು ಕೊಡತಕ್ಕವರಲ್ಲವು. ಮತ್ತೂ ಈ ದೇಶದ ದೊಡ್ಡ [illegible] ಗೆ ಗುರಿಯಾದವರು ಪ್ರಜೆಗಳಲ್ಲದೆ ಪ್ರಭುಗಳಲ್ಲವು. ಆದುದರಿಂದ ಮಿ ನೆಮ್ಮೊರವರು ಸೂಚಿಸಿರುವಂತೆ ಈ ದೇಶದ ಪ್ರತಿಯೊಂದು ಡಿಸ್ಟ್ರಿಕ್ಟಿನ ಮುಖ್ಯಸ್ಥಳಗಳಲ್ಲಿ ಪ್ರಮುಖ ಜನರು ಅಗತ್ಯವಾಗಿ ಸಭೆಸೇರಿ ಚಕ್ರವರ್ತಿಯವರಿಗೂ, ವೈಸ್ರಾಯರಿಗೂ ಬಹು ಭಯಭಕ್ತಿ ವಿಶ್ವಾಸಗಳಿಂದ ಬಿನ್ನೈಸಿಕೊಂಡು ಯಾವಕಾರಣದಿಂದಲೋ ಕಳೆದುಹೋಗಿರುವ ಮರ್ಯಾದೆಯು ಪುನಃ ಲಭ್ಯವಾಗುವಂತೆ ಮಾಡಿಕೊಳ್ಳುವವರಾಗಲೆಂದು ಇಚ್ಛಿಸುತ್ತೇವೆ.

ಬರೋಡಾ ಮಹಾರಾಜರು ಕ್ಷಮಾಪಣೆಯನ್ನು ಕೇಳಿರುವುದು.

ಕಳೆದ ತಾ|| ೧೨ ರಲ್ಲಿ ದಿಲ್ಲಿಯ ದರ್ಬಾರಿನ ಮಹೋತ್ಸವದಲ್ಲಿ ಬರೋಡಾ ಮಹಾರಾಜರವರು ಚಕ್ರವರ್ತಿಯವರಿಗೆ ನಮಸ್ಕರಿಸುವ ಮರ್ಯಾದೆಯನ್ನು ಮಾಡುವಾಗ್ಗೆ ಕೈಯಲ್ಲಿ ದಂಡವನ್ನು ಹಿಡಿದಿದ್ದರು. ಮತ್ತೂ ಮುಜರೆಯನ್ನು ಮಾಡಿದಮೇಲೆ ತಮ್ಮ ಸ್ಥಾನಕ್ಕೆ ನೆಟ್ಟಗೆ ಬಾರದೆ ಹಿಂಭಾ[illegible] ತಿರುಗಿದ್ದರಿಂದ ನಮ್ಮ ಸ್ಥಳಕ್ಕೆ ಹೋಗುವ [illegible] ಹೋಗಲು ಎಂದು ಕೇಳುತ್ತ ಸಿಂಹಾಸನದ ಕಡೆಗೆ ಪೃಷ್ಠಭಾಗವನ್ನು ತೋರಿಸಿಕೊಂಡು ಹೋದರು. [illegible] ಮಾಡುವುದು [illegible] ದೇಶದ ಮರ್ಯಾದೆಯು [illegible] ಮರ್ಯಾದೆಯನ್ನು ಚೆನ್ನಾಗಿ ಬಲ್ಲವರಾಗಿದ್ದರೂ, ಈ ರೀತಿ ಮಾಡಿರುದು ಸರ್ವಥಾ ತಪ್ಪು. ಅಲ್ಲದೆ ದರ್ಬಾರಿಗೆ ೨[illegible] ಜನಗಳ ಮುಂದೆ ಚಕ್ರವರ್ತಿಯವರ ವಿಚಾರದಲ್ಲಿ [illegible] ಈ ಸಭಾಪ್ರಭುಗಳನ್ನು ತೆಗೆದುಕೊಳ್ಳತಕ್ಕ ಸಮಯ [illegible] ರಾಜಪೀಠದಿಂದ ಚಕ್ರವರ್ತಿಯವರಿಗೇ ನೇರವಾಗಿ ಕಾಣಿಸುವ ಸ್ಥಳದಲ್ಲಿ [illegible] ಎಂಬುದು ಮೊದಲಾಗಿ [illegible] ವ್ಯಾಖ್ಯಾನವಾಗಿದ್ದುದರ ಮೇಲೆ ಗಾಯಕವಾಡರವರು ಇದರ ಸಮಾಧಾನಾರ್ಥವಾಗಿ ವೈಸ್ರಾಯರವರಿಗೆ ಬರೆದಿರುವುದರ ತಾತ್ಪರ್ಯವೇನೆಂದರೆ — ಚಕ್ರವರ್ತಿಯವರಿಗೆ ಅವಮಾನವಾಗುವಂತೆ, ಅಥವಾ ಚಕ್ರವರ್ತಿಯವರಲ್ಲೂ, ಅವರ ಸಿಂಹಾಸನದಲ್ಲೂ ನನಗಿರುವ ರಾಜಭಕ್ತಿವಿಶ್ವಾಸ ವಿಚಾರದಲ್ಲಿ ಚಕ್ರವರ್ತಿಯವರಿಗೆ ಸಂಶಯ ಉಂಟಾಗಲಿ ಅನುಮಾನಪಡುವಂತೆ ವರ್ತಿಸಲಿಲ್ಲವು. ಮತ್ತೂ ಮುಂದೆ [illegible] ಪರ್ತಿಸತಕ್ಕವನಲ್ಲವು. ಬರೋಡಾ ಸಂಸ್ಥಾನದ ಯಾವವಿಷಯಾಭಿವೃದ್ಧಿಗೂ ಬ್ರಿಟಿಷ್ ಸರ್ಕಾರವೇ ಕಾರಣವಾಗಿರುವುದರಿಂದ, ಆ ಸರ್ಕಾರಕ್ಕೆ ನಾನೂ, ನನ್ನ ಸಂಸ್ಥಾನವೂ ಸರ್ವದಾ ಕೃತಜ್ಞರಾಗಿರುವೆವು, ಸ್ವಾಮಿಭಕ್ತಿ ಮುಂದಲೂ ಇದೆ[illegible] ನನ್ನ ಮುಂದಲೆಯ ಕಾಲದಲ್ಲಿ ಸಿಂಹಾಸನದ ಬಳಿ ಹೋಗಿ ಬರುವಾಗ್ಗೆ ಮೊದಲೇ ಗೊತ್ತಾಗಿದ್ದ ಪ್ರಕಾರ ನಾನು ನ[illegible]ದೆಯಿಂದ ನಡೆದುಕೊಳ್ಳಲಿಲ್ಲವೆಂದು ಹೇಳುತ್ತಾರೆ. ಹಾಗೆ ನಡೆದದ್ದು ವಿಶ್ವದಲ್ಲಿ, ಅಂತಹ ಮಹೋತ್ಸವದಲ್ಲಿ, ಕುಮಾರ ಬ್ರಾಹ್ಮಣ ದಂಪತಿಗಳನ್ನೂ ನೋಡಿದರು ಬಂದಿರುವಾದ ಕಂಡ[illegible]ದಿಂದಲೂ, ಭಾವಭರಿಯಿಂದಲೂ ವರ್ತಿಸಿದುದಾಗಿದೆಯೋ ವಿನಾ ಅನ್ಯಥಾ ಇಲ್ಲವು. ನನಗೆ ಮೊದಲು ನೈಜಾಮರೊಬ್ಬರು ಮಾತ್ರ ಮುಜರೆಯನ್ನು ಮಾಡಿದ್ದರು. ಆದರೆ ಆಗ ನನಗುಂಟಾಗಿದ್ದ ಭಾವಭರಿಯಿಂದ ಅವರು ಯಾವರೀತಿಯಾಗಿ ಮಾಡಿದರೆಂಬುದನ್ನು ನೋಡಿ ತಿಳಿದುಕೊಳ್ಳಲವಕಾಶವಿಲ್ಲವಾಯಿತು. ಶಿರಬಾಗಿ ನಮಸ್ಕಾರವನ್ನು ಮಾಡಿದಮೇಲೆ, ಕೆಲವೆಜ್ಜೆಗಳ ಹಿಂದಕ್ಕೆ ಸರಿದು ನಾನು ಯಾವ ದಾರಿಯಲ್ಲಿ ಹೋಗಬೇಕೆಂದು ಕೇಳಲು ಸುತ್ತಲೂ ತಿರುಗಿದೆನು ನಾನೇನೋ ಸ್ವಮನಾದ ಧಾರಿಯಲ್ಲಿ ಇಳಿದುಬಂದೆನೆಂದು ತಿಳಿದುಕೊಂಡಿದ್ದೆನು ಆದರೆ ಹಾಗೆ ಬರಲಿಲ್ಲವಂತೆ. ಹಿಂತಿರುಗತಕ್ಕ ಮಾರ್ಗವನ್ನು ತಿಳಿಯುವುದಕ್ಕಾಗಿ ಸುತ್ತಲೂ ತಿರುಗುವಾಗ್ಗೆ ಮತ್ತಿಷ್ಟು ಭ್ರಾಂತನಾಗಿ ಮುಂದಕ್ಕೆ ಹೊರಟೆನು ಈ ನನ್ನ ಅದರ ರೀತ್ಯಾಕ್ಕಾಗಿ ನಾನು ಬಹು ಚಿಂತಾಕ್ರಾಂತನಾಗಿದ್ದೇನೆ. ನಾನು ಚಕ್ರವರ್ತಿಯವರ ದರ್ಶನವನ್ನು ತೆಗೆದುಕೊಳ್ಳಲು ಅನುಕೂಲವಾದ ಕಾಲವನ್ನು [illegible] ಚಕ್ರವರ್ತಿಯವರಿಗೆ ಒದಗುಕೆ [illegible] ಚಕ್ರವರ್ತಿಯವರ ಮನಸ್ಸಿಗೆ [illegible] ಮಾಡಿದೆನು [illegible] ಅವರ ಮನಸ್ಸಿಗೆ [illegible]ವನ್ನು [illegible] ನಾನು [illegible] ಬರೆದವನಲ್ಲ. ಚಕ್ರವರ್ತಿಯವರ ಭರತಖಂಡದ ಆಗಮನವನ್ನು ವಿಶೇಷ ಪ್ರಕಾರವಾಗಿ ಮಾಡುವಲ್ಲಿ ನನ್ನ ಶೈಲಾದ ಮಟ್ಟಿಗೆ ಪ್ರಯತ್ನಿಸಬೇಕೆಂಬ [illegible] ದಡಗೆಲೆ ಬರೆಯುತ್ತಿದ್ದೇನೆ. ಚಕ್ರವರ್ತಿಯವರು ನನಗೆ ತೋರಿಸಿರುವ ಪ್ರೀತಿವಿಶ್ವಾಸವು ನನ್ನ ಮನಸ್ಸಿನಲ್ಲಿ ನಾಟಿಹೋಗಿರುವುದು. ಆದುದರಿಂದ ತಾವು ಈ ಕಾಗದದ ಅಭಿಪ್ರಾಯವನ್ನು ಚಕ್ರವರ್ತಿಯವರಲ್ಲಿ ಬಿನ್ನೈಸಿ, ನಾನು ನಿಜವಾದ ರಾಜಭಕ್ತಿ ವಿಶ್ವಾಸದಿಂದ ನಡೆದುಕೊಳ್ಳತಕ್ಕವನೆಂಬ ಬಗ್ಗೆ ಅವರಿಗೆ ಭರವಸೆಯು ಹುಟ್ಟುವಂತೆ ಹೇಳಬೇಕೆಂದು ತಮ್ಮನ್ನು ಬೇಡುತ್ತೇನೆ.

ಈ ಕಾಗದವನ್ನು ಬರೆದಮೇಲೆ ಹಿಂದುಸ್ಥಾನದಲ್ಲಿ ಪ್ರಸಿದ್ಧವಾಗಿರುವ ಟೈಂಸ್ ಎಂಬ ಪತ್ರಿಕೆಯು, ಕಳೆದ ಜೂನ್ ತಿಂಗಳಲ್ಲಿ ಇಂಗ್ಲೆಂಡಿನಲ್ಲಿ ನಡೆದ ಪಟ್ಟಾಭಿಷೇಕ ಮಹೋತ್ಸವದಲ್ಲಿ ಬರೋಡಾ ಗಾಯಕವಾಡರವರು ಐರೋಪ್ಯರಂತೆ ಉಡುಪು ಧರಿಸಿ [illegible] ಮಾಡಿದರೆಂದೂ, ಒಬ್ಬ ಇಂಗ್ಲಿಷ್ ರಾಜಕೀಯ ಪುರುಷನಿಂದ ತಮ್ಮ ಸಂಸ್ಥಾನದಲ್ಲಿ ರಾಜನಿಂದಕಾರವಾದ ಪುಸ್ತಕವನ್ನು ಮುದ್ರಿಸಿದ್ದ ಮನುಷ್ಯನಿಗೆ ಸ್ಥಾನವನ್ನು ಕೊಟ್ಟಿರುವರೆಂದೂ, [illegible] ರವರಿಗೆ [illegible] ಸಂಸ್ಥಾನದಲ್ಲಿ [illegible] ಹೊರಡಿಸಲು [illegible] ಬರೆದಿದ್ದದ್ದಕ್ಕೆ, ಗಾಯಕವಾಡರವರ ಪ್ರೈವೇಟ್ ಸೆಕ್ರೆಟರಿ [illegible] ಸಂಸ್ಥಾನದಲ್ಲಿ [illegible]

ಅವಕಾಶವೇ ಇರಲಿಲ್ಲವು. ಶೈಸ್ಟ್ [illegible] ಅವರು ಬಹು ಕಾಲದಿಂದಲೂ ನೆಲೆಸಿಲ್ಲವು. ಮತ್ತು ಅವರಿಗೆ ಇಂತಹ [illegible] ಕ್ಷೇಮವಲ್ಲವೂ ಹುಟ್ಟಿರಲಿಲ್ಲ. ಅವರ [illegible]ದಲ್ಲಿ ರಾಜದ್ರೋಹಕಾರಕ ಪುಸ್ತಕವನ್ನು ಮುದ್ರಣ ಮಾಡುವ [illegible]ವನ್ನು ಹೊರಡಿಸುವಾಗ್ಗೆ ಪೋಲೀಸರಿಗೆ ಬೇಕಾದ ಸಹಾಯವು ಕೊಡಲ್ಪಟ್ಟಲ್ಲದೆ, ಆ ವಿವಾಹವು [illegible] ರೆಲ್ಲ ಆ ಮುದ್ರಣಾಲಯವನ್ನು ಸರ್ಕಾರಕ್ಕೆ [illegible] ಆ ಗ್ರಂಥಕರ್ತನನ್ನು ಕೊಡಲಿ ತಮ್ಮ [illegible] ತಮ್ಮ ರಾಜ್ಯದಲ್ಲಿ [illegible] ಕೊಟ್ಟಿದ್ದ [illegible] ಎಂದು ಉತ್ತರವನ್ನು ಕಳುಹಿತ್ತಾರೆ.

[illegible] ಮಹಾರಾಜರವರು [illegible] ಮೊದಲಾದ [illegible] ಸಂತೋಷಿಸಿ ನಾನಾ [illegible] ಬಲ್ಲವರೂ ಆಗಿರುವುದರಿಂದ [illegible] ಅವಮಾನವನ್ನುಂಟುಮಾಡಬೇಕೆಂದಾಗಲೀ, ಅಥವಾ ಅವರನ್ನು [illegible] ದರ್ಬಾರಿನ ಕಾ[illegible] ನಡೆದರೆಂದು [illegible] ಹೇಳುವುದಕ್ಕಾಗುವುದಿಲ್ಲ. [illegible] ಚಕ್ರವರ್ತಿ [illegible] ಬರುವುದಾದ [illegible] ನಮಗೆ ತೋರುವುದು [illegible] ಸಮಸ್ಕರಿಸುವ [illegible] ಚಕ್ರವರ್ತಿಯವರು ತಿರುಗಿ [illegible] ಎಂಬ [illegible] ಸ್ವದೇಶಾಭಿಮಾನವನ್ನೂ ಸಹಿಸದ ಕೆಲ ಜನರು [illegible] ಪ್ರತಿಗಳ [illegible] ಬರೆಯುತ್ತಿರುವರು. [illegible] ಬರೋಡಾ ಮಹಾರಾಜರವರಿಗೆ ಈ [illegible] ಅಸಮಾಧಾನವುಂಟಾದುದಕ್ಕಾಗಿ ನಾವು ಬಹಳ ವಿಷಾದಪಡುತ್ತೇವೆ.

ಶ್ರೀಮನ್ಮಹಾರಾಜರವರು ಉತ್ತರದೇಶದಲ್ಲಿ ಸಂಚಾರಮಾಡುವ ಕ್ರಮವು.—

ಈ ಡಿಸೆಂಬರ್ ತಾ|| ೨೦ ರಲ್ಲಿ ದಿಲ್ಲಿಯಿಂದ [illegible] ರಲ್ಲಿ ಲಾಹೋರಿಗೆ [illegible] ಮತ್ತು [illegible] ತಾ[illegible] ಬರುವರು [illegible] ಆಗ್ರಾ [illegible] ಲಾಹೋರಿನಲ್ಲಿ [illegible] ಆಗ್ರಾ [illegible] ಸಂಜೆ [illegible] ರಾತ್ರಿ [illegible] ಮಹಾ [illegible] ತಾ|| ೨೭ [illegible] ಗಂಟೆಗೆ [illegible] ಪ್ರಯಾಣವನ್ನು [illegible] ಅಹೋಬಿಲ [illegible] ರಾತ್ರಿ [illegible] ಗಂಟೆಗೆ ಪ್ರಯಾಣಮಾಡಿ ತಾ|| ೨೯ ರ ಬೆಳಗಿನ ೭ ಗಂಟೆಗೆ ಅಲಹಾಬಾದ್ (ಪ್ರಯಾಗ) ವನ್ನು ತಲುಪುವರು. ಪ್ರಯಾಗದಿಂದ ತಾ|| ೩೧ ರ ರಾತ್ರಿ ೩ ಗಂಟೆಗೆ ಹೊರಟು ತಾ|| ೩೧ ರ ಬೆಳಗಿನ ೫ ಗಂಟೆಗೆ ಕಾಶಿಯನ್ನು ಸೇರುವರು. ತಾ|| ೩೨ ರ ರಾತ್ರಿ [illegible] ಗಂಟೆಗೆ ಕಾಶಿಯನ್ನು ಬಿಟ್ಟು ತಾ|| [illegible] ರ ಬೆಳಗಿನ ೭ ಗಂಟೆಗೆ ಗಯಾಪಟ್ಟಣವನ್ನು [illegible] ಅಲ್ಲಿಂದ ತಾ|| [illegible] ರ ರಾತ್ರಿ [illegible] ಗಂಟೆಗೆ ಪ್ರಯಾಣಮಾಡಿ [illegible] ಗಂಟೆಗೆ ಕಲಕತ್ತಾ ಪಟ್ಟಣವನ್ನು [illegible] ನಲ್ಲಿ ಇಪ್ಪತ್ತು [illegible] ಗೊತ್ತಾಗಿರುವುದು.

ನೋಟೀಸ್

ಜನಗಳ ಪ್ರದರ್ಶನ

[illegible] ನೇಯ ಜನವರಿ ೩ ನೇ ಮತ್ತು [illegible] ನೇಯ ತಾರೀನು ಗುರುವಾರದ [illegible] ಬೆಂಗಳೂರಿನ ಪೇಟೆಯ ದರ್ಬಾರ ಹಾಲಿನಲ್ಲಿ [illegible] ರೋಡ್ [illegible] ನಲ್ಲಿ ಜನಗಳ ಪ್ರದರ್ಶನವು [illegible] ದನಕರುಗಳು, ಕೋಳಿ, ಆಡು, ಕುರಿ, ಕುದುರೆ ಮುಂತಾದುವುಗಳ [illegible] ಎಲ್ಲಾ ತರಹೆಯ [illegible] ಬಹುಮಾನ ಕೊಡಲ್ಪಡುತ್ತೆ. [illegible] ಪ್ರದರ್ಶನಕ್ಕೆ [illegible] ಪ್ರದರ್ಶನದ [illegible]

[illegible] ಇಲ್ಲಿ [illegible] ಬರೆಯ

ಮೈಸೂರ ಸಂಸ್ಥಾನದ ಬಹುಕಡೆಯಿಂದಲೂ ಜೋಗ[illegible]ದೆಯಿಂದಲೂ ಬಂದಿರುವ ಕೆಲಿವಿದ್ವಾಂಸರೊಡನೆ ಸಂಬಂಧವಾದ ಲೇಖನಗಳನ್ನು ಪ್ರಕಟಿಸಬೇಕೆಂದು ಇ[illegible] ಸದಸ್ಯರಿಗೆ [illegible] ಈ ಪತ್ರಿಕೆಯಲ್ಲಿ ಅವನ್ನೇ ವಿಶೇಷವಾಗಿ ಪ್ರಕಟಿಸಿರುವುದರಿಂದ, ವರ್ತಮಾನಗಳನ್ನು [illegible] ಅವಕಾಶವಿಲ್ಲದಾಯಿತು. ಇದಕ್ಕಾಗಿ ನಮ್ಮ ವಾಚಕ[illegible] [illegible] ಕೋರುತ್ತೇವೆ.

ಪಡುವ ಇತ್ಯಾದಿ	[illegible]	[illegible]	[illegible]	[illegible]	[illegible]
ಪ್ರಕಟಿಸಲ್ಪಡುವ	ಅಗ್ರಸ್ಥಾನ	ಬರೆಯಬೇಕು	[illegible]	[illegible]	[illegible]
ಬಾಳತ[illegible]		[illegible]	[illegible]		[illegible]

ದಂಬಳತಕೋಟೆ

"ಸ್ವದೇಶನಿವಾಸಿಯಾದ, ಸಕಲ ಪ್ರಜಾರಂಜಕರೂ, ಕೃಪಾವಿದಯಾಳುವೂ ಆದ ಶ್ರೀಮಂತ ಚಕ್ರವರ್ತಿ ೫ ನೆಯ ಜಾರ್ಜ ಪ್ರಭುವರ್ಯರ ಪಟ್ಟ ಧರ್ಮಪತ್ನಿಯವರ ಪಟ್ಟಾಭಿಷೇಕ ವೇಳೆಯಲ್ಲಿ ಈ ನಮ್ಮ ಭರತಖಂಡಕ್ಕೆ ದಯಮಾಡಿಸಿ ಅತ್ಯಪೂರ್ವವಾದ ವೈಭವದಿಂದ ಇದೇ ದಿಸೆಂಬರ ತಾರೀಖಿನ್ನು ಈ ದೇಶದ ಚಕ್ರವರ್ತಿತ್ವವು ಕಿರೀಟಧಾರಣ ಮಾಡಿಸುವದರಿಂದ ನಮ್ಮ ಈ ದೇಶದ ಪ್ರಜೆಗಳಿಗೆ ಸುಖತರದ ಆ ಆಂಗ್ಲ ರಾಜ್ಯಾಧಿಕಾರದ ... ಈ ದೇಶೀಯರೆಲ್ಲರೂ ... ಅಸಾಧಾರಣ ಸಂತೋಷವನ್ನು ಹೊಂದಿ, ಈ ಸಮಯದಲ್ಲಿ ತಮ್ಮ ರಾಜಭಕ್ತಿ ನಿಷ್ಠೆಗಳನ್ನು ಪ್ರಕಟಪಡಿಸುತ್ತಿರುವಲ್ಲಿ, ಶ್ರೀ ವೀರಶೈವ ಮತಸಂಪನ್ನರಾದ ... ಆಂಗ್ಲ ಸಾರ್ವಭೌಮರ ... ಈ ದೇಶದಲ್ಲಿ ಆಚಂದ್ರಾರ್ಕವಾಗಿರಲೆಂದು, ಪ್ರತ್ಯಕ್ಷ ಚಕ್ರವರ್ತಿಗಳಾದ ಶ್ರೀ ೫ ಜಾರ್ಜ ಸಾರ್ವಭೌಮರು ಅವರ ಸಹ ಧರ್ಮಿಣಿಯಾದ ಚಕ್ರವರ್ತಿನಿ ಮೇರಿರಾಣಿಯವರು ಸಹ ಚಿರಕಾಲ ಸದ್ಧರ್ಮದಿಂದ ರಾಜ್ಯವನ್ನಾಳುವಂತೆ ಅನುಗ್ರಹಿಸಬೇಕೆಂದೂ, ಈ ಭರತಖಂಡದ ಪ್ರಜಾವರ್ಗವು ಆ ಪ್ರಭುದಂಪತಿಗಳಿಗೆ ರುಜ್ಞರೂ ಸುಖಿಯಾಗಿ ರುವಂತೆ ಮಾಡಲೆಂದೂ, ... ಗೊತ್ತುಮಾಡಿದ್ದ ಪ್ರಕಾರ ಇದೇ ಮಠದಲ್ಲಿ ಶ್ರೀಗುರು ಬಸವೇಶ್ವರ ... ರುದ್ರಾಭಿಷೇಕ ಪೂರ್ವಕವಾದ ಸಮಗ್ರ ಸೇವೆಯೂ, ರಾತ್ರಿ ಆ ಮಠದಲ್ಲಿ ... ಇದೇ ತಾರೀಖು ... ಆರಾಧನೆಯೂ ನಡೆಯಿಸಲ್ಪಟ್ಟಿತು. ಮಧ್ಯಾಹ್ನ ... ಮಹಾಂತಮಠದ ... ಗುರುವೀರಪ್ಪನವರ ... ಅಧ್ಯಕ್ಷತೆಯಲ್ಲಿ ಸಭೆಸೇರಿಸಿದ್ದರು. ಮ|| ರಾ|| ... ಶ್ರೀಮಂತ ಆಂಗ್ಲ ಪ್ರಭುತ್ವದಿಂದ ಉಂಟಾಗಿರುವ ಸುಖಾಭ್ಯುದಯವನ್ನೂ, ಈಗಿನ ಜಾರ್ಜ ಪ್ರಭುದಂಪತಿಗಳ ... ಈಗ ನಡೆಯುತ್ತಿರುವ ಅವರ ಕಿರೀಟಧಾರಣ ಮಹೋತ್ಸವದ ವೈಭವವನ್ನೂ ... ಆ ... ಶ್ರೀಮಚ್ಚಕ್ರವರ್ತಿ ದಂಪತಿಗಳಿಗೆ ದೀರ್ಘಾಯುರಾರೋಗ್ಯ ಭಾಗ್ಯಗಳನ್ನು ಶ್ರೀಮದ್ಗುರು ... ಅನುಗ್ರಹಿಸಲೆಂದು ... ಶ್ರೀಮನ್ಮಹಾರಾಜರು ... ಶ್ರೀಮಂತ ... ಬಹದ್ದೂರ ... ಬಡವರಿಗೆ ... ಸಭೆ ... ಸರ್ವರಿಗೂ ... ಚಕ್ರವರ್ತಿ ದಂಪತಿಗಳ ಭಾವಚಿತ್ರವನ್ನು ಪುಷ್ಪಹಾರಗಳಿಂದ ಅಲಂಕರಿಸಿ ಸರ್ವರಿಗೂ ಗಂಧಪುಷ್ಪ ತಾಂಬೂಲಗಳು ಹಂಚಲ್ಪಟ್ಟವು. ಒಟ್ಟಿಗೆ ದೀಪೋತ್ಸವವು ಮಾಡಲ್ಪಟ್ಟಿತು.

ಬೆಳಗಾಂವಿ ಜಿಲ್ಲೆ ... ಸಂಸ್ಥಾನ.

ನಮ್ಮ ಇಂಡಿಯಾ ಸಾರ್ವಭೌಮರಾದ ೫ನೆಯ ಜಾರ್ಜ ಮಹಾರಾಜರ ಪಟ್ಟಾಭಿಷೇಕ ಮಹೋತ್ಸವವು ... ಸಂಸ್ಥಾನದ ... ವಿಶೇಷ ... ಸಂಸ್ಥಾನದ ... ಮತ್ತು ... ಧ್ವಜಪತಾಕೆಗಳಿಂದಲೂ, ... ಅಲಂಕರಿಸಲ್ಪಟ್ಟಿತ್ತು. ಪಟ್ಟಾಭಿಷೇಕ ... ಶ್ರೀಮಂತ ... ನಾನಾವಿಧ ... ಸಂಸ್ಥಾನದ ... ದೀಪಗಳಿಂದಲೂ, ಗುಂಡಿಗಳಿಂದಲೂ ... ಚಕ್ರವರ್ತಿಗಳ ... ಶ್ರೀಮಂತ ... ಸಭೆಯಲ್ಲಿ ... ಪ್ರಜೆಗಳಿಗೆ ... ಶ್ರೀಮಂತರ ... ಪಟ್ಟದ ... ಶ್ರೀಮಂತ ... ಹೊತ್ತಿನಲ್ಲಿ ... ಮುಂತಾದವರನ್ನು ... ಗುರುಗಳ ಮಾಂತ ...

ಕಲಬುರ್ಗಿ ಸಂಸ್ಥಾನದ ಮಾನ್ಯ ಗಿರಿ ಮಾದ್ಯಮ ವೈಭವಗಳಿಂದ ಸಾರ್ವಭೌಮರಾದ ... ದಿವ್ಯ ... ಶ್ರೀ ... ಮಹಾರಾಜರ ... ಅಭಿಷೇಕ ... ಸರ್ವರಿಗೂ ... ಪ್ರಜೆಗಳ ... ಶ್ರೀಮಂತರ ... ಸಭೆಯು ಅಲಂಕೃತವಾಯಿತು. ಇಲ್ಲಿಯ ಬಸವೇಶ್ವರ ದೇವಸ್ಥಾನದ ... ಪ್ರಜಾಪ್ರೇಮವನ್ನೂ ... ಮೊದಲನೇ ಮಾಸ್ತರ ... ಬಾಲಕರು ... ಮತ್ತೂ ಪೊಲೀಸ ಪಾಟೀಲ ಬಸವಣ್ಣನವರು ... ಎಲ್ಲರಿಗೂ ತಿಳಿಯುವಂತೆ ... ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು ... ಬಾಲಕರು ಬಾಲಿಕೆಯರು ... ಸಂಗೀತ ... ಅನಂತರ ಸಭಿಕರೆಲ್ಲರಿಗೂ ಹುಡುಗರಿಗೆ ಪುಸ್ತಕಗಳನ್ನೂ, ... ಮಹಾರಾಜರವರ ಪುತ್ಥಳಿಗಳನ್ನು ... ಅನಂತರ ಅತ್ತರ ಗುಲಾಬ ಮುಂತಾದ ಪರಿಮಳದ್ರವ್ಯಗಳೂ ತಾಂಬೂಲವೂ ಕೊಟ್ಟು ಸಭಿಕರನ್ನು ಆದರಿಸಿದನಂತರ ... ಸಭೆಯು ವಿಸರ್ಜನೆಯಾಯಿತು. ಮತ್ತು ... ಈ ಪಟ್ಟಾಭಿಷೇಕ ಉತ್ಸವದ ... ಶ್ರೀಮಂತ ... ಬಡವರಿಗೆ ... ಅನ್ನ ... ಮತ್ತು ಬಂಗರರಿಗೂ, ಗಂಡಸರಿಗೂ, ಹೆಣ್ಣುಮಕ್ಕಳಿಗೂ, ... ರಾಜಭಕ್ತಿಯನ್ನು ವ್ಯಕ್ತಗೊಳಿಸಿದರು. ಹಾಗೂ ಅವರ ... ಊರೊಳಗಿನ ಎಲ್ಲ ಜನರು ಹಬ್ಬದ ದಿವಸದಂತೆ ತಂತಮ್ಮ ಉದ್ಯೋಗಗಳನ್ನು ಬಿಟ್ಟು ಉತ್ಸವ ನೋಡಲಿಕ್ಕೆ ನಿಂತಿದ್ದರು. ಪಂಚಮಜಾರ್ಜ ಮಹಾರಾಜರವರ ... ಅನ್ನದಾನ ... ದಾನಗಳಿಂದಲೂ, ... ಅತ್ಯಾನಂದದಿಂದ ತಮ್ಮ ಇಂತಹ ... ರಾಜಭಕ್ತಿಯನ್ನು ಈ ಸಣ್ಣ ಸಂಸ್ಥಾನದಲ್ಲಿ ವ್ಯಕ್ತಪಡಿಸಿದ್ದು ಅಭಿನಂದನೀಯವೇ ಸರಿ.

ಗುರುಸಿದ್ದಪ್ಪ ಸಿದ್ದಾಪುರಪ್ಪ ತೋರಗಲ್ಲ.

ಬಂಕಾಪುರ ತಾ|| ಹುಲಗೂರು.

ತಾ|| ೧೨ ರಲ್ಲಿ ಊರೆಲ್ಲ ಧ್ವಜಪತಾಕೆಗಳಿಂದಲೂ, ತೋರಣಗಳಿಂದಲೂ ಮುಖ್ಯ ಮುಖ್ಯ ಸ್ಥಳಗಳಲ್ಲಿ ಕಟ್ಟಿದ ... ಬಾಳೆ ... ಕನ್ನಡಿಗಳಿಂದಲೂ ... ಶೃಂಗರಿಸಲ್ಪಟ್ಟಿತು ... ಊರಿನ ಪ್ರತಿ ಬೀದಿಗಳಲ್ಲಿ ... ಮಧ್ಯಾಹ್ನ ೩ ಘಂಟೆಯಿಂದ ... ಸಭೆ ... ರಾಜರಾಣಿಯರ ಭಾವಚಿತ್ರಗಳ ... ಮೆರವಣಿಗೆಯು ... ರಾತ್ರಿ ೧೦ ಗಂಟೆಯವರೆಗೆ ... ಶಾಲೆಗಳಲ್ಲಿಯೂ, ... ಭಾವಚಿತ್ರಗಳು ... ತಾ|| ೧೩ ರ ... ಶಾಲೆಯ ವಿದ್ಯಾರ್ಥಿಗಳ ... ಆಟಗಳು ... ಅನಂತರ ... ೩ ಘಂಟೆಗೆ ... ಶಾಲೆಯಲ್ಲಿ ಸ್ಕೂಲ ... ಧಾರವಾಡ ... ಇನಸ್ಪೆಕ್ಟರ ... ಅಧ್ಯಕ್ಷತೆಯಲ್ಲಿ ಸಭೆ ಕೂಡಿತ್ತು. ಚಕ್ರವರ್ತಿಯವರ ಭಾವಚಿತ್ರಕ್ಕೆ ... ಅಧ್ಯಕ್ಷರಿಂದ ಪಾರಿತೋಷಕ ... ಮಾಸ್ತರ ರಾ|| ರಾ|| ... ಮಹಾರಾಜರ ... ವಿದ್ಯಾರ್ಥಿಗಳಿಂದ ... ಶ್ರೀಕೃಷ್ಣಾ ... ಹಂಚಿ ... ಕನ್ನಡ ... ಮಾಸ್ತರರು ... ಬಹುಮಾನ ...

...ದಾದ ಬಾಳೆಗಳನ್ನು ತಂದಿತ ... ಶ್ರೀ ... ರ ಚನ್ನ ... ರಾ||

ಹೇಳ ನಾನೆಂಬುದನ್ನು ಓದಿ ... ಎಷ್ಟು ಪ್ರೀತಿಯುಳ್ಳವರಿದ್ದಾರೆಂಬುದನ್ನು ಸ್ಪಷ್ಟಮಾಡಿ ತೋರಿಸಿದರು. ... ಮಾಸ್ತರ ರಾ|| ರಾ|| ... ಬಾಯರ ... ಜಾರ್ಜ ಮಹಾರಾಜರವರ ಚರಿತ್ರೆಯನ್ನು ಓದಿ ಹೇಳಿದರು. ರಾ|| ರಾ|| ... ಇಂಗ್ಲೀಷರಾಳಿಕೆಯಲ್ಲಿ ... ರಾಜನಿಷ್ಠೆಯನ್ನೂ ... ಎಲ್ಲ ವಿದ್ಯಾರ್ಥಿಗಳಿಗೆ ... ಪುಸ್ತಕಗಳು ... ಹಣ್ಣು ... ಅತ್ತರ ... ತಾಂಬೂಲ ... ಸಭೆಯು ವಿಸರ್ಜನೆಯಾಯಿತು. ತಾ|| ... ಬುಧವಾರ ... ಸಾಯಂಕಾಲಕ್ಕೆ ... ಸಭೆಯು ... ಅಧ್ಯಕ್ಷಸ್ಥಾನವನ್ನು ... ರಾ|| ರಾ|| ... ಕುಲಕರ್ಣಿ ... ಇವರು ... ಅಧ್ಯಕ್ಷರು ... ಜಾರ್ಜ ಬಾದಶಹರ ... ಪ್ರಜೆಗಳ ಮೇಲೆ ... ಸಿದ್ಧಮಾಡಿ ... ಭಾಷಣಗಳಾದ ಬಳಿಕ ... ಸಭೆಯು ವಿಸರ್ಜನೆಯಾಯಿತು ... ಎಲ್ಲ ದೇವಸ್ಥಾನ ಮಸೀದಿಗಳಲ್ಲಿ ... ದೀಪೋತ್ಸವವು ಅತಿ ವಿಜೃಂಭಣೆಯಿಂದ ಜರುಗಿತು ಈ ಎಲ್ಲಾ ಕೆಲಸಗಳಲ್ಲಿ ಸಿದ್ದನಗೌಡ ಪೊಲೀಸ ಪಾಟೀಲ, ಎಲ್ಲಪ್ಪಗೌಡ ಮುಲ್ಕಿ ಪಾಟೀಲ, ಜೀವಾಜಿ ರಾಮಚಂದ್ರ ಕುಲಕರ್ಣಿ, ಶ್ರೀಮಂತ ಭಕ್ತೀರಪ್ಪ ಅಣ್ಣಾ ಅತ್ತಿಗೇರಿ ವಿಲೇಜ ಮುನಸಫ ಯಾವತ್ತು ಶಾಲಾ ಮಾಸ್ತರರು, ಗಡಿಗೆಪ್ಪ ಕಲ್ಯಾಣಿ ಮುರಿಗೆಪ್ಪ ... ಬಸಪ್ಪ ... ಸಂಗಪ್ಪ ... ಕಮತೊಳ್ಳಿ, ... ಕುಲಕರ್ಣಿ ಇವರುಗಳು ಬಹಳ ಶ್ರಮವನ್ನು ... ಈ ತಾಲ್ಲೂಕಿನಲ್ಲಿ ... ರಾಜನಿಷ್ಠೆಯನ್ನು ವ್ಯಕ್ತಪಡಿಸಿ ತೋರಿಸಿದರು.

ವೀರಭದ್ರಪ್ಪ ರುದ್ರಪ್ಪ ಅತ್ತಿಗೇರಿ.

೩ ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಕ್ಷರ ರಾ|| ಶ್ರೀ. ಶ್ರೀ. ವೀರಸಂಗಪ್ಪನವರ ಸ್ಮಾರಕ ಫಂಡು.

ಸಿಮಾಜಸುಧಾರಣೆಯಲ್ಲಿ ಬದ್ಧಕಂಕಣರಾಗಿದ್ದ ಶ್ರೀ ವೀರಸಂಗಪ್ಪನವರು ಮಠದ ... ವರ್ತಮಾನಪತ್ರಿಕೆಯು ಅತ್ಯಾವಶ್ಯಕವಾದದೆಂಬ ... ಸ್ಟಾರ ಪತ್ರವನ್ನು ... ವೀರಶೈವ ಸಮಾಜಕ್ಕೆ ಮಹೋಪಕಾರವನ್ನು ಮಾಡಿ ... ಸರ್ವಶ್ರುತವಾದ ಸಂಗತಿಯಾಗಿದೆ. ಈ ಸ್ಟಾರ ಪತ್ರಿಕೆಗೆ ... ವಿಪತ್ತುಗಳು ... ಈ ವಿಷಯವು ಮಹಾಸಭೆಯು ... ಈ ಕೆಳಗಿನ ಒಂದು ವಿಷಯವನ್ನು ವಿಜ್ಞಾಪಿಸಿಕೊಳ್ಳುತ್ತೇನೆ.

ಕೆಡೂರ ತಾ|| ... ಯಲ್ಲಿ ತಾ|| ... ರ ... ಮೊಗಳ ... ಹೆಡ್ಡ ಮಾಸ್ತರ ... ಬಸವಯ್ಯನವರ ... ಒಂದು ಸಭೆಯು ನೆರೆಯಿಸಲ್ಪಟ್ಟು ಸ್ಟಾರ ಪತ್ರದ ಚಿರಜೀವಿತಕ್ಕೆ ಸ್ಟಾರ ಫಂಡೊಂದನ್ನು ನಿರ್ಧರಿಸುವಂತೆ ನಿಶ್ಚಯಿಸಿ, ಆ ಸಭೆಯಲ್ಲಿಯೇ ... ರೂ. ಗಳು ... ಸ್ಟಾರ ಪತ್ರದ ... ವೀರಸಂಗಪ್ಪನವರ ಸ್ಮಾರಕ ಫಂಡೆಂಬುದಾಗಿ ಹೆಸರಿಟ್ಟು ... ಅದಕ್ಕೆ ... ರಾ. ... ಪ್ರೆಸಿಡೆಂಟರಾಗಿಯೂ, ... ಸೆಕ್ರೆಟರಿಗಳಾಗಿಯೂ, ... ಸೆಕ್ರೆಟರಿಗಳಾಗಿಯೂ, ... ಕಲ್ಲಪ್ಪಗೌಡರು ... ನಿಯಮಿಸಲ್ಪಟ್ಟರು. ಅವರು ... ರೂ. ಗಳು ... ಜನಗಳನ್ನು ಪ್ರೋತ್ಸಾಹಿಸಿ ಫಂಡು ... ಮಾಡಿಕೊಂಡು ... ಮುಂದೆ ... ಮಹಾಸಭೆಗೆ ... ಮತ್ತೂ ... ಪ್ರಯತ್ನ ... ವಿಚಾರಿಸಿ ...

ಇದರ ಮುಂದಿನ ಸಂಗತಿಗಳು ... ಪತ್ರದಲ್ಲಿ ಪ್ರಕಟವಾಗುವವು.

ಈ ಸಲದ ವಾರ್ಷಿಕ ಮಹಾಸಭೆಯು

ಬೆಳಗಾವಿನಗರದಲ್ಲಿ ಇದೇ ತಿಂಗಳಲ್ಲಿ ನೆರೆಯುತಕ್ಕ [illegible] ಶಿಕ್ಷಣ ವಿಷಯದ ಮಹಾಸಭೆಯ ಬಗ್ಗೆ ಈ ಸಭೆಯ ಚೇರ್ಮನ್ ಸೆಕ್ರೆಟರಿಗಳು ನಡಿಸುವ ಸಾಹಸದ ವೃತ್ತಾಂತವು ನಮ್ಮ ಪತ್ರದ ವಾಚಕರಿಗೆ ತಿಳಿದಿರುತ್ತದಷ್ಟೆ. ಆದರೆ ಪ್ರತಿ ವರ್ಷ ಮಹಾಸಭೆಯಲ್ಲಿ ನಡೆಯುವ ವಿಷಯಗಳನ್ನು ಯಾವತ್ತು ಪ್ರತಿನಿಧಿಗಳು ಬೇಕಾದ ಲಕ್ಷ್ಯಕೊಟ್ಟು ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರುವ ಆವಶ್ಯಕತೆಯನ್ನು ಕುರಿತು ನಾವು ಈ ವತ್ತಿನ ದಿವಸ ಕೆಲವು ವಿಷಯಗಳನ್ನು ಬರೆಯಬೇಕೆಂದು ಅಪೇಕ್ಷಿಸಿದ್ದೇವೆ. ಯಾಕೆ ಅಂದರೆ, ಕಳೆದ [illegible] ಹಗ್ಗ ಹೊಸೆದಂತೆ ನಾವು ಪ್ರತಿವರ್ಷ ಮಹಾಸಭೆ [illegible] ಸೇರಿಸಿ ಅದರಿಂದಾಗುವ ಲಾಭಗಳನ್ನು ಪಡೆಯತಕ್ಕದ್ದಿಲ್ಲವಾದರೆ, ನಮ್ಮ ಸಮಾಜ ಸುಧಾರಣೆಯು ಆಗಲಾರದೆಂಬುದು [illegible] ನಮ್ಮ ದೃಷ್ಟಿಗೆ [illegible] ಬಂದು ನಿಲ್ಲುತ್ತದೆ. ಪ್ರತಿಯೊಬ್ಬರೂ ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರತಕ್ಕದ್ದೆಂದು ಒಪ್ಪುತ್ತಾರೆ, ಆದರೆ ಕೃತಿಯು ಮಾತ್ರ ಬಹಳ ಸ್ವಲ್ಪವಾಗಿ [illegible] ಕಾಣುತ್ತದೆ. ಇದಕ್ಕಾಗಿ ಸಮಾಜ ನಿಬಂಧನೆಗಳು ಯಾವ ಪ್ರಕಾರದವು ಇರಬೇಕೆಂತಲೂ, ಮಹಾಸಭೆಯ ನಿರ್ಣಯಗಳನ್ನು ಉಲ್ಲಂಘಿಸುವವರಿಗೆ ಯಾವ ತರದ ಶಿಕ್ಷೆಯನ್ನು ಮಾಡಬೇಕೆಂತಲೂ [illegible] ಮಹಾಸಭೆಯು [illegible] ವಿಚಾರಮಾಡತಕ್ಕದ್ದು. ಮುಖ್ಯವಾಗಿ ಪ್ರತಿನಿಧಿಗಳು ಮುಖ್ಯವಾಗಿ ಮಹಾಸಭೆಯ [illegible] ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರಬೇಕೆಂದು ತಾವಾಗಿ ಮನಃಪೂರ್ವಕ ಪ್ರಯತ್ನಮಾಡಿದ್ದರೆ, ಅವರ ವ್ಯಾಖ್ಯಾನರೂಪದ ಉಪದೇಶವು ಬಹಳ ಪರಿಣಾಮಕಾರಿಯಾಗುವದು; [illegible] ಸುರಿದಂತೆ ಆಗುವದು (Example is better than precept) ಅಂದರೆ ಬಾಯಿಂದ ಉಪದೇಶ ಹೇಳುವದಕ್ಕಿಂತ ಸ್ವಂತವರ್ತನದಿಂದ ಉದಾಹರಣೆ ತೋರಿಸುವದು ಒಳ್ಳೇದು ಎಂದ ಇಂಗ್ಲೀಷ್ ಭಾಷೆಯಲ್ಲಿ ಒಂದು ಗಾದೆ ಇರುತ್ತದೆ. ಆದ್ದರಿಂದ ಪತ್ರಿಕೆಯ ಮುಖಾಂತರ ವ್ಯಾಖ್ಯಾನರೂಪ ಹೇಳುವದಕ್ಕಿಂತ, ನಮ್ಮ ಸಮಾಜದ ಮುಖಂಡರ ಮತ್ತು ಯಾವತ್ತು ಸುಶಿಕ್ಷಿತರ ಮಹಾಸಭೆಯ ನಿರ್ಣಯಗಳನ್ನು ಪ್ರಚಾರದಲ್ಲಿ ತರುವದು ಅವಶ್ಯವಿದೆ. ನಂತರ ಜಿಲ್ಲಾ ಕಮಿಟಿ, ತಾಲೂಕು ಕಮಿಟಿ, ಗ್ರಾಮ ಕಮಿಟಿ ಮುಂತಾದ ಕಮಿಟಿಗಳನ್ನು ಮಾಡಿ ಅವುಗಳ ಪ್ರೆಸಿಡೆಂಟರ [illegible] ಕಾಗದದ ಮೇಲೆ ಬರೆದು ಕೊಡುವುದಕ್ಕಿಂತ ಮಹಾಸಭೆಯ ನಿರ್ಣಯಗಳನ್ನು ನಮ್ಮ ಕೃತಿಯಿಂದ ತೋರಿಸಿ ಅವುಗಳಂತೆ ನಡೆಯುವದರಿಂದ ನಮ್ಮ ಸಮಾಜಕ್ಕೆ ಹಿತ ಆಗುವ ಸಂಭವವಿರುತ್ತದೆ. ಉದಾಹರಣೆಗಳು [illegible] ನಮ್ಮಲ್ಲಿ ಬಹಳ ಸುಲಭವಾದ ಸಂಗತಿಗಳನ್ನು ವಿವರಿಸುವೆನು. [illegible] ಲಗ್ನದಲ್ಲಿ ದುಂದುಗಾರಿಕೆಯಿಂದ [illegible] ಕಾಲುವ ಬೀಗರು, ತಂಪು ಮತ್ತು ವರದಕ್ಷಿಣೆಗಳನ್ನು ತೆಗೆದುಕೊಳ್ಳುವದು, ಗಂಡುಮಕ್ಕಳಿಗೆ, ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸದಿರುವದು, ಸನಾತನದಲ್ಲಿಯ ಯಾವತ್ತು [illegible] ಸ್ವಾರ್ಥಾದಿಗಳಿಂದ ನಡೆಯುತಕ್ಕದ್ದು ಇತ್ಯಾದಿ ಇತ್ಯಾದಿ ನಿರ್ಣಯಗಳು ಮಹಾಸಭೆಯಿಂದ ಈ ಮೊದಲೇ ಪಾಸಾಗಿದ್ದರೂ ರತ್ನವೇ ಜಿಲ್ಲಾ ಈ ನಿರ್ಣಯಗಳಿಗೆ ವಿರುದ್ಧವಾಗಿ ಮಹಾಸಭೆಯ ಪ್ರತಿನಿಧಿಗಳು ಅಥವಾ ಮಹಾಸಭೆಯ ಮುಖಂಡರು ತಮ್ಮ ಮನೆಯಲ್ಲಿ ಚಿಕ್ಕ ಚಿಕ್ಕ ಮಕ್ಕಳ ಮದುವೆ ಮಾಡಿದರೆ ಅಥವಾ ಮದುವೆಕಾಲಕ್ಕೆ ಮದ್ದು, ನಾಚು, ರಂಗು, ಮೆರವಣಿಗೆ, ಇಲ್ಲಿಯೋತ್ಸವ ಮುಂತಾದವುಗಳಲ್ಲಿ ದುಂದುಗಾರಿಕೆ ಮಾಡಿದರೆ, ಅಥವಾ ಹೆಣ್ಣುಮಕ್ಕಳನ್ನು ಶೆರವು ತೆಗೆದುಕೊಂಡು ಲಗ್ನಮಾಡಿಕೊಟ್ಟರೆ, ಅಥವಾ ತಮ್ಮ ಗಂಡುಮಕ್ಕಳ ಲಗ್ನದಲ್ಲಿ ವರದಕ್ಷಿಣೆಯರೂಪದಿಂದ ರಕಮು ಭಂಗಾರ, ಬೆಳ್ಳಿ ಮೊದಲಾದವುಗಳನ್ನು ಹೆಣ್ಣುಮಕ್ಕಳ ತಂದೆತಾಯಿಗಳ ಕಡೆಯಿಂದ ಒತ್ತಿ ತೆಗೆದುಕೊಂಡರೆ, ಅಥವಾ ತಮ್ಮ ಹೆಣ್ಣುಮಕ್ಕಳ ಸೊಸೆಯರು ಮೊದಲಾದವರಿಗೆ ವಿದ್ಯಾಭ್ಯಾಸ ಮಾಡಿಸದೆ ಮತ್ತು ಅವರಿಗೆ ತಕ್ಕಷ್ಟು ಮರ್ಯಾದೆಯು ಸ್ವಾತಂತ್ರ್ಯವೂ ಕೊಡದೆ ಅವರನ್ನು ಗುಲಾಮರಂತೆ ನಡಿಸಿಕೊಳ್ಳುತ್ತಿದ್ದರೆ, ಅಥವಾ ಸಮಾಜದ ಮುಖಂಡರು ಸ್ವಾರ್ಥಕ್ಕಾಗಿ ದ್ವೇಷದಿಂದ ಅಥವಾ ಅಸೂಯೆಯಿಂದ ಜಗಳ ಕಾದಿ ಸಮಾಜದಲ್ಲಿ ಒಡಕು ಹುಟ್ಟಿಸಿದರೆ, ಮಹಾಸಭೆಯ ಶ್ರೇಷ್ಠ ನಿರರ್ಥಕವಾದ ಖಂಡಿಗಳು ಶಿಕ್ಷೆಗಳು [illegible] ಅಂಜದೆ ಯಾವ ಇವರ [illegible] ಪ್ರತಿನಿಧಿಗಳೆ ಪತ್ರಿಕೆ ವಿಚಾರದ ಇವರ ನಿರ್ಣಯಗಳಿಗೆ ಸಂಬಂಧವಾದ ಮತ್ತು ಸ್ವಹಿತ ವಿಷಯಗಳನ್ನು ಅಕ್ಷರದಿಂದ ಮನಸ್ಸು ಕೊಟ್ಟು ಮಾಡಿದರೆ ಸಭೆಯ ಯಾವತ್ತು ನಿರ್ಣಯ [illegible] ಒಂದರಲ್ಲಿ ಒರುವವು [illegible]

ಅಡ್ವೋಕೇಟರ ಅರ್ಜಿಗಳು

ಕಳೆದವಾರದ ಸ್ಟಾರ್ ಪತ್ರದಲ್ಲಿ ಮಿ। ರಾ। ರಾ। ಎಚ್‍ರೆ ವೀರಬಸವಯ್ಯನವರು ಅಡ್ವೋಕೇಟ್ ಮಿ ಗಳೂರು ಇವರು ಮುಖ್ಯಾಧಿಕಾರಿಗಳಿಗೆ ಕಳುಹಿಸಿದ ಒಂದು ಅರ್ಜಿಯನ್ನು ಪ್ರಸಿದ್ಧಪಡಿಸಿರುತ್ತಾರೆ. ಅದರಲ್ಲಿ ಕೆಲವು ಮುಖ್ಯವಾದ ಅಂಶಗಳು ಇರುತ್ತವೆ. ಅವುಗಳನ್ನು ತಿಳಿದು [illegible] ಸ್ಟಾರ್ ಪತ್ರದ ವಾಚಕರ ಪಕ್ಷವು ತಿಳಿಯಲಿಕ್ಕಾಗಿ ವೃತ್ತಪತ್ರಿಕೆಯಲ್ಲಿ ಪ್ರಕಟಿಸಿದ್ದೇವೆ. ಸಮಾಜದ ಹಿತಕ್ಕಾಗಿ ಆ ವಿಷಯವನ್ನು ಅವರು [illegible] ಇವರ ಮತದಿಂದ [illegible] ಪ್ರತಿನಿಧಿಗಳಿಂದಲೂ ಪ್ರತಿನಿಧಿಗಳಿಂದಲೂ ಮತ್ತು ಲೆಜಿಸ್ಲೇಟಿವ್ ಕೌನ್ಸಿಲಿನ ಸಭಾಸದರಿಂದಲೂ ಮಾಡಿದ ರೀತಿಯು ಸರಿಯಾಗಿರುತ್ತದೆ, ಇದೊಂದು ಮಾರ್ಗದಿಂದ ಆಗುತ್ತದೆಂತಲೂ, ಇತರ ಅರ್ಜಿಗಳನ್ನು ಸ್ಟ್ಯಾಂಡಿಂಗ್ ಕಮಿಟಿಯವರು ತೆಗೆದುಕೊಂಡ ಆಧಾರದ ಮೇಲೆ ಬರೆದಿರುತ್ತಾರೆಂತಲೂ ಮಿ। ರಾ। ರಾ। ವೀರಬಸವಯ್ಯನವರು ಬರೆಯುತ್ತಾರೆ. ಮಹಾಸಭೆಯು ನೇಮಿಸಿದ [illegible] ಸ್ಟ್ಯಾಂಡಿಂಗ್ ಕಮಿಟಿಯು ನೇಮಕಗಳ ಬಗ್ಗೆ [illegible] ಮಹಾಸಭೆಯಲ್ಲಿ ಪ್ರಸ್ತಾವಿತ ವಿಷಯಗಳ ಆಧಾರದ ಮೇಲೆ, ಬೆಂಗಳೂರು, ಮೈಸೂರು ಮುಂತಾದ ಕಡೆಗಳಲ್ಲಿ ಪ್ರಾಂತಿಕ ಸಭೆಗಳು [illegible] ಸ್ಟ್ಯಾಂಡಿಂಗ್ ಕಮಿಟಿಗೆ ಯಾವ ತರದ ಅಧಿಕಾರವೂ ಇರಲಿಲ್ಲವು ಅದರ ಬಳ್ಳಾರಿ ಮುಂತಾದ [illegible] ಸ್ಟ್ಯಾಂಡಿಂಗ್ ಕಮಿಟಿಗೆ ಬರುತ್ತಿದ್ದು [illegible] ಸ್ಟ್ಯಾಂಡಿಂಗ್ ಕಮಿಟಿಯ ಸಭಾಸದರನ್ನು ತೆಗೆದುಕೊಂಡ ಅರ್ಜಿಯಿಂದ ಬಳ್ಳಾರಿಯವರಿಗೆ ಲೆಕ್ಕದ [illegible] ಹುಟ್ಟುತ್ತದೆ. ಪತ್ರ ಬರೆದ ಅದಕ್ಕೆ ಬಳ್ಳಾರಿಯವರು ಕೇವಲ ವಿವರ ತಿಳಿದಿರಲಿಲ್ಲವು, ಇದಕ್ಕೆ ತಕ್ಕ ಉತ್ತರ ಮೇಲೂ ಉಳಿದಿಲ್ಲವೆಂತಲೂ, ತಾವು ಬರೆದ ಅರ್ಜಿ ಸರಿಯಾದ ದಾರಿಯಲ್ಲಿ ತೆಗೆದುಕೊಂಡಿರಿ ಎಂಬುದು ಉತ್ತರವನ್ನು ಕೊಟ್ಟರು. ಇದರಲ್ಲಿ ಸ್ಟ್ಯಾಂಡಿಂಗ್ ಕಮಿಟಿಯವರ [illegible] ದೊರೆಯಲಿಲ್ಲ. ಸ್ಟ್ಯಾಂಡಿಂಗ್ ಕಮಿಟಿಯವರು ಮಹಾಸಭೆಯ ಆಗಬೇಕಾದ ಹಲವು ವಿಷಯಗಳ ಮೇಲೆ ವಿಚಾರ ಮಾಡಿ ನಿರ್ಣಯಿಸಬೇಕಾಗುವ ಪತ್ರವನ್ನು ಟಿಕೆಟ್ ಅರ್ಜಿಯನ್ನು ತೆರೆದುಕೊಂಡು ಕೊಟ್ಟರೆ, ಮಿ। ರಾ। ರಾ। ವೀರಬಸವಯ್ಯನವರು ಒಪ್ಪುತ್ತಾರೆ. ಈ ಸೂಚನೆಯು ಅನುಕೂಲವಾದದ್ದು ಸಮಾಜಕ್ಕೆ ಲಾಭಕರವಾದದ್ದು ಇರುತ್ತದೆ. ಇತರ ಸೂಚನೆಯು ಪ್ರಕಾರ ತಿಂದಿರುವವರಿಗೆ ಯಾವ ಸಂಸ್ಥೆಯಲ್ಲಿ ಮಾಡಿಸ್ಸು ವಿಷಯವು ತಕ್ಕವ ಮೇಲಿಂದ ಯಾವತ್ತು ಸುಧಾರಿಸಿದ ದೇಶಗಳಲ್ಲಿ ಲಕ್ಷ ಗಟ್ಟಲೆ ಮತ್ತು ಕೋಟಿಗಟ್ಟಲೆ ರೂಪಾಯಿಗಳ ವ್ಯವಹಾರವು ನಡೆಯುತ್ತದೆ. ಅಂದರೆ ಇದೇ ನಾವು ವೀರಶೈವರು ನಮ್ಮ ನಮ್ಮ ಸಮಾಜದ ಮುಖ್ಯ ದಶೆಯ ಮೇಲೆ ವಿವರಿಸಿಗಳು ನಡೆಸಿದ [illegible] ನಮ್ಮ ಪತ್ರಕ್ಕೆ ಕೇವಲ [illegible] ಬರಲಾರದು ಮತ್ತು ನಮ್ಮ ಮಹಾಸಭೆಯ [illegible] ತೆರೆಯುತ್ತಿದ್ದೇವೆಂತಲೂ ವ್ಯರ್ಥವಾದೀತು. ಸ್ಟ್ಯಾಂಡಿಂಗ್ ಕಮಿಟಿಯವರ [illegible] ಪಕ್ಷದವರನ್ನು ತೆಗೆದ [illegible] ಪ್ರತ್ಯಕ್ಷ ದೃಷ್ಟಿಯಿಂದ, ಹಿಂದಿನ ವಿಚಾರ ಮಾಡಿದ ಗಳ ಲೆಜಿಸ್ಲೇಟಿವ್‌ಗಳು ಪ್ರಸಿದ್ಧವಿರುವ ಕೌನ್ಸಿಲಿನಿಂತಲೂ [illegible] ಮತ್ತು [illegible] ಮಹಾಸಭೆಯು ಕೂಡಿದ್ದರಿಂದ ಮಿ। ರಾ। ರಾ। ವೀರಬಸವಯ್ಯನವರು ಅನುಕೂಲಕ್ಕೆ ಎಂದು ಹೇಳಿದರು. ಮಿ। ರಾ। ರಾ। ವೀರಬಸವಯ್ಯನವರು ಶಾಸನ [illegible] ಮಹಾಸಭೆಯ ಹೊರತಾಗಿ ಬಾಗಲಕೋಟಿ ಮತ್ತು ಬಳ್ಳಾರಿ ಮಹಾಸಭೆಗಳ ನಿರ್ಣಯಗಳು ಪ್ರಸಿದ್ಧವಾಗಿರುವದರ [illegible] ಇದ್ದವೆಂದು ಕಾಣುತ್ತದೆ. ಇದಲ್ಲದೆ ಗಣಿತದಲ್ಲಿ [illegible] ಪುರದವರಿಗೆ ಸ್ಥಳಗಳ ಹಾನಿಯಾದದ್ದರಿಂದಲೂ, [illegible] ಲ್ಲಿ ರಾಜಕೀಯ ಅಧಿಕಾರಿಗಳ ನಿಜ ಸಮಯಕ್ಕೆ ಬಾರದವರು, ಇವು ಮುಂದಿನ ವಿಷಯವನ್ನು ಕೂಡಿರಲಿಕ್ಕೆ ಅಷ್ಟವಿರುವವನ್ನು ಕೊಡುವದೆ [illegible] ದಲ್ಲಿ ಆ ವಿಷಯ ವರ್ಷದ ಮಹಾಸಭೆಯು [illegible] ಸ್ಟ್ಯಾಂಡಿಂಗ್ ಕಮಿಟಿಯ ಸಭಾಸದರ [illegible] ಸ್ಟ್ಯಾಂಡಿಂಗ್ ಕಮಿಟಿಗೆ ಕೊಟ್ಟಿದ್ದರು ನಮ್ಮ [illegible] ಮಹಾಸಭೆಯವರಿಗೆ ಸ್ಟ್ಯಾಂಡಿಂಗ್ ಕೊಡತಕ್ಕದ್ದು [illegible] ಈ ಅಡ್ವೋಕೇಟ್ ಮಹಾಸಭೆಯ ಪಕ್ಷ [illegible] ರವ ಲೋಕಮತವನ್ನು ಸ್ಟ್ಯಾಂಡಿಂಗ್ ಕಮಿಟಿಯವರು ಮೇಲೆ ತಂದುಕೊಡುವದನ್ನು ನೋಡಿದರೆ ಇವರ ಬಾಗಲಕೋಟೆ ಇಂದೇ ಇವರು ಬೆಂಗಳೂರಿನ ಪ್ರಾವಿನ್ಸಿಯಲ್ ಕಮಿಟಿಯು ಶೇರಿ ಒರೆಯುವದಿದ್ದ ಎಷ್ಟರಲ್ಲಿ ಇಂಥ ಮುಖ್ಯವಾದ ಸಂಗತಿಗಳು ಹೊತ್ತಿರಲಿ ಇಂಥವುಗಳು ಬಹಳ ಪ್ರಯೋಜನ ಕಾಣಿಸುವ ಸ್ಟ್ಯಾಂಡಿಂಗ್ ಕಮಿಟಿಯು ಕೆಲವು ಕಾರ್ಯಗಳ ಕಾಗದ ಬೇರೆ ಬೇರೆ ಮಹಾಸಭೆಗಳಿಗೆ ದೊರೆತು ಅವರ [illegible] ಸಮಾಚಾರಗಳಿಗೆ ಅಂತರಂಗದಲ್ಲಿ ಈ ಕಾರ್ಯಗಳನ್ನು [illegible] ರೆಂತಲೂ, ಇದರಿಂದ ಹಿಂದಿನ ಕೆಲಸ ಮಹಾಸಭೆಯು [illegible] ವಿಷಯ ಇವತ್ತು ತೀರ್ಮಾನಕ್ಕೆ [illegible] ಮೇಲೆ ವೀರಬಸವಯ್ಯನವರು ಒಪ್ಪಿದ [illegible] ಕೆಲಸಗಳು ಒಂದು ಗಡ ಕಮಿಟಿಯಲ್ಲಿ ನಿರ್ಣಯಿಸಿದ [illegible]

ಸುಬ್ಜೆಕ್ಟ್ ಕಮಿಟಿಗೆ ಸುಶಿಕ್ಷಿತರಾದ ಯಾವತ್ತು ಜನರು ಹಟತನವು ಮತ್ತು ಸಮಾಜದ ಅಭಿಮಾನವುಳ್ಳಂಥ ಜನರು ಮುಂಬರ ಆಗಿರುತ್ತಾರೆ. ಮಹಾಸಭೆಯ ಕೆಲಸವು ಒಬ್ಬರ ಮನೆಯ ಕೆಲಸವಲ್ಲ, ಎಲ್ಲರಿಗೂ ತಾವಾಗಿ ಬೇಕಾದ ದುರಸ್ತು ಮಾಡಿಕೊಳ್ಳುವ ನಿರಪೇಕ್ಷ ಬುದ್ಧಿಯಿಂದ ಕೇಳತಕ್ಕದ್ದು. [illegible] ಮತ್ತು ಕಾರ್ಯವೆಲ್ಲವನ್ನು [illegible] ಮುಂದಿನ ಮಹಾಸಭೆಯವರಿಗೆ ಕೊಡುವ ಬಗ್ಗೆ ಯಾವ ಕಾಗದವನ್ನು ಕೊಡಬೇಕೋ ತಿಳಿಯದು. ಇಲ್ಲದೆ ಹಿಂದಿನ [illegible] ವಿವರವು ಸ್ಟ್ಯಾಂಡಿಂಗ್ ಕಮಿಟಿಯು ಕಾರ್ಯಗಳ [illegible] ಅಪ್ಪಣೆಯಾಗುವದು [illegible] ರಲ್ಲಿ ದೊಡ್ಡಸ್ತನದ ಹೆಸರು ತಿಳಿಯದಿರಲಿ [illegible] ಎಂತಲೂ, ಆ ಕಾಲದಲ್ಲಿ ಕೆಲಸಗಳ [illegible] ಕಮಿಟಿಯು ಕಾರ್ಯಕರ್ತೃಗಳು [illegible] ಪರಿಶೀಲನೆ ಮಾಡಿದರೆಂತಲೂ [illegible] ಸಮಾಜದ ಜನರಿಗೆ [illegible] ಅಡ್ವೋಕೇಟರು [illegible] ಈ ಪ್ರಕಾರ ತೋರಿಸಿಕೊಡುವದನ್ನು ತೋರಿದ ಬಹಳ ಆಶ್ಚರ್ಯವಾಗುತ್ತದೆ. ಸಮಾಜದ [illegible] ತಮ್ಮ ತರು [illegible] ಅರ್ಜಿಗಳನ್ನು [illegible] ಮಿ। ರಾ। ರಾ। ವೀರಬಸವಯ್ಯನವರ [illegible] ಎಂಬ ಕೊರಾತವು ಮತ್ತು [illegible] ಸ್ಟ್ಯಾಂಡಿಂಗ್ ಕಮಿಟಿಯು ಮುಂಬರು.

ಪ್ರತಿಯೊಬ್ಬರಿಗೆ ವಸತಿಯಲ್ಲಿ ದೊರೆಯುವ ಗ್ರಂಥಗಳು.

ಶಿವಪೂಜಾವಿಧಿ	೦—೧೦—೦
[illegible]	೦—೪—೦
[illegible] ಚರಿತೆ	೦—೫—೦
ಶರಣಪ್ಪ ಕೆರೆ	೦—೮—೦
[illegible]	೦—೮—೦
[illegible]	೦—೦
[illegible]	೦—೭—೦
[illegible]	೦—೭—೦
[illegible]	೦—೭—೦
[illegible] (ಮೂರನೇ ಭಾಗ)	೬—೭—೦
[illegible]	೦—೧—೦

[illegible]

15 ಸುಭಾಷಿತ

(ಪತ್ರಸ್ವೀಕಾರರ [illegible] ಮಾಡಿದ [illegible] ರಿಂದ ಬರೆದುದು)

[illegible] — [illegible] ಬೇಕಾದ [illegible] ಮಾಡಿ ಕೊಡುವುದು [illegible] ಹೆಸರು ಕೇಳಿದ್ದರೆ ಪ್ರಯೋಜನವೇನೆಂದು [illegible] ಅಪ್ಪಣೆ ನಡೆದರೂ [illegible] ವಿದ್ಯಾವಂತರ [illegible] ಪಡೆದವ [illegible] ದೊಡ್ಡದಾಗಿ [illegible] ಪಾಪಗಳಿಗೆ ಈ ವಿಷಯವನ್ನು ನೋಡಿ [illegible] ತಿರುಗುತ್ತಾರೆ [illegible] ಇನಾಮು [illegible]

ಮೃತ್ಯುಂಜಯಶಾಸ್ತ್ರ — ಇದು [illegible] ಸ್ವಭಾವವುಳ್ಳ [illegible] ಕೆಲಸ ಮಾಡುವವರು [illegible] ಅಥವಾ [illegible] ಧಾತು ಒಂದ [illegible] ತನ್ನನ್ನು ಕಾಣದವನು [illegible] ಪ್ರತಿನಿಧಿಗಳು [illegible] ಒಂದು ಹಲ್ಲು [illegible] ಇದ್ದವೆಂಬುದು

ಮುದ್ರಣ — ಇದರಿಂದ [illegible] ಮಾಡುವುದು [illegible] ಇದ್ದಾರೆ [illegible]

(“ [illegible] ”)

[illegible] ಮಾಡುತ್ತದೆ. [illegible] ಆಗುತ್ತದೆ. [illegible]

ಶಿಂ ಕಥೆಗಳು ಸಚಿತ್ರ. ೩೨೦ ಪುಟಗಳು.

ಶಿವ ಸ್ಮೃತಿ ಕಥೆಗಳು.

29

ಧರ್ಮ, ಕರ್ಮ, ಸತ್ಯ, ಅಹಿಂಸೆ, ಕಾರ್ಯಾಕಾರ್ಯ ವಿವೇಚನೆ ಮುಂತಾದ ಲೌಕಿಕ ವ್ಯವಹಾರವನ್ನು, (೨) ಜ್ಞಾನ, ಧ್ಯಾನ, ಯೋಗ ಮುಂತಾದ ವೇದಾಂತ ರಹಸ್ಯಗಳನ್ನು, (೩) ಸ್ತ್ರೀ ಪಾತಿವ್ರತ್ಯಧರ್ಮ, ಪುರುಷ ಕರ್ತೃತ್ವಧರ್ಮ ಶಿವೋಪಾಸನೆ, ವಿವಿಧನೀತಿ ಮುಂತಾದುವನ್ನು ತಿಳಿಯುವುದರಿಂದ ಸಮಸ್ತ ಸ್ತ್ರೀಪುರುಷರೂ, ಬಾಲರೂ ಓದಲೇಬೇಕಾದ ಅವಶ್ಯಕವಾಗಿ ಓದಬೇಕಾದ ಗ್ರಂಥ. (೪) ವೇದಶಾಸ್ತ್ರ ಪ್ರತಿಪಾದಿತ ಸಕಲಅರ್ಥಗಳ ಸಂಗ್ರಹವಾಗಿ ಹೇಳಿದೆ (೫) ಮೃದುಮಧುರ ವಾಕ್ಯಬಂಧದಿಂದ ಸವರಸಾಲಂಕೃತವಾಗಿರುವುದು (೬) ಚಿತ್ರಕಥಾಚಮತ್ಕಾರ ಶೋಭಿತವಾಗಿ ಸಂದಿಗ್ಧವಿರುವವರಿಗೆ ಸುಲಭವಾಗಿ ತಿಳಿಯುವಂತೆ ರಚಿಸಿದೆ. (೭) ಯುಗದ ಲೋಕಸ್ವಭಾವಕ್ಕೆ ಅನುಸಾರವಾದ ಪ್ರಶ್ನೋತ್ತರಗಳಿವೆ (೮) ಕಥಾಸಂದರ್ಭಾನುಸಾರ ಭಾವವನ್ನೇ ಚಿತ್ರಗಳನ್ನು ಇಟ್ಟಿರುತ್ತದೆ ಪ್ರತಿ ಒಳ್ಳೆ ರೂ. ೧-೪-೦ ಅಂಚೆಯು ಬೇರೆ

ಪುಸ್ತಕಗಳು ಬಹುಚಿತ್ರ, ಗಂಧದಗಿಲ್ಲ ಪ್ಲೇಗ್ಗು, ಕಾಲರಾ ಮುಂತಾದ ವ್ಯಾಧಿಗಳಿಗೆ ಔಷಧಗಳು, ಚಿತ್ರ, ಮುದ್ರಾಪಟಗಳು, ದೊರೆಯುತ್ತವೆ (ಕಟ್ಟಿ)ಗ್ಯಾಟಲಾಗ್ಗೆ ಬರೆದರೆ ಉಚಿತ ಕಳುಹಿಸುತ್ತೇವೆ

ಎಸ್. ಕೆ—ವಿದ್ಯಾಸಿರಿ ಕಂಪನಿ,
ಬೆಂಗಳೂರು ಸಿಟಿ

ಸ್ವದೇಶಿ! (ಸ್ವಸ್ಥ್ಯ ಜೀವನಗಾತ್ರೆ) ಸ್ವದೇಶಿ!

76

ಗುಣವಾಗದಿದ್ದರೆ ಹಣವಾಪಸ

ಮದನೋದ್ಭವ ಗುಳಿಗೆ.

ಈ ಗುಳಿಗೆಗಳ ಸೇವನೆಯಿಂದ ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಸ್ತ್ರೀಗಾಜ, ಸ್ವಪ್ನಾವಸ್ಥೆ ಇವು ಗುಣವಾಗಿ ಶರೀರಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋತ್ಸಾಹಕ ಸಂಗೀತ ಗುಪ್ತ ಪ್ರಮೇಹದ ವೇಳೆ ಹುಟ್ಟಿರುವ ಎಲ್ಲಾ ಬಗೆಗಳು ಹುಣ್ಣುಗಳೂ, ಪಿತ್ತದ ಬಾಧೆಗಳು, ಕಟಿಶೂಲೆ, ಪಾಂಡುರೋಗ, ಮುಂತಾದವು ಅತಿ ಶೀಘ್ರಗುಣವುಂಟಾಗಿ, ಶರೀರಕ್ಕೆ ನಿರೋಗತ್ವವೂ, ಕಾಂತಿಯೂ, ರತಿಸುಖಕ್ಕೆ ಸಂಪೂರ್ಣಶಕ್ತಿಯೂ ಉಂಟಾಗುತ್ತದೆ. ಒಬ್ಬರಿಗೆ ೩೦ ಗುಳಿಗೆಗಳವರೆಗೆ ತೆಗೆದುಕೊಳ್ಳುವುದು ಶಿಷ್ಟತತ್ವ ೧೦ ಗುಳಿಗೆಗಳಿಗೆ ೧ ರೂ ಒಪ್ಪೆಗೆ ೩೦ ಗುಳಿಗೆಗಳನ್ನು ತರಿಸಿದರೆ ೩ ರೂ ಗಳಿಗೆ ಕೊಡುವೆವು ಟ ಪಿ ಚ ಅಂಚೆ ಬೇರೆ ಅನುಪಾನಪತ್ರಿಕೆಯನ್ನು ಔಷಧದ ಸಂಗಡಲೇ ಕಳುಹಿಸುವೆವು ಅರ್ಧಾಣೆ ಸ್ಟಾಂಪು ಕಳುಹಿಸಿದರೆ ಸರ್ವಸಾಮಾನ್ಯ ಕ್ಯಾಟಲಾಗ್ ಪ್ರಕಟ ರವಾನಿಸುವೆವು ವಿಳಾಸ

ವೈದ್ಯ ಪಿ ಎಸ್. ಜೋಶಿ ಮತ್ತು ಕಂಪನಿ,
ಧೋರ್ಸ್ಟ ಜವಳಿ
ಜಿಲ್ಲಾ ಉತ್ತರಕನ್ನಡ

ಪಂಡಿತ ಎಸ್. ಗಣೇಶಶಾಸ್ತ್ರಿ ಇವರ

ಓರಿಯಂಟಲ್ ಫಾರ್ಮಸಿ, ದೊಡ್ಡಗಡಿಯಾರದ ಬಳಿ
(1) ಮೈಸೂರು

ಗೊರೋಚನ ಮಾತ್ರೆ — ೧೦ ಮಾತ್ರೆಗಳನ್ನು ಶೀಘ್ರ, ಆಯಾಸವಿಲ್ಲದಂತೆ ಸುಖವಾಗಿ ಭೇದಿ ಮಾಡಿಸುತ್ತದೆ ೩೦-೪೦ ಮಾತ್ರೆಗಳುಳ್ಳ ಸೀಸೆ ೧ಕ್ಕೆ ಕ್ರಯ ೦—೮—೦

ಜ್ವರದಮಾತ್ರೆ — ಇದರ ಸೇವನೆಯಿಂದ ಎಲ್ಲಾ ಜ್ವರಗಳೂ ಬಂದಿ ತವಾಗಿ ಗುಣವಾಗುವುದಲ್ಲದೆ ಅಗ್ನಿವೃದ್ಧಿಯೂ ಆಗುವುದು ೧೦ ಮಾತ್ರೆ ಸೀಸೆ ೦—೪—೦, ೩೦ ಮಾತ್ರೆ ಸೀಸೆ ೦—೮—

ಆರೋಗ್ಯವ್ರಜಾಂತರ — ಈ ಔಷಧಿಯನ್ನು ಒಂದು ಮಂಡಲ ಸೇವಿಸಿದರೆ, ದೇಹದಲ್ಲಿ ಇರುವ ಅನೇಕಾನೇಕ ವ್ಯಾಧಿಗಳು ನಿವೃತ್ತಿಯಾಗಿ ಆರೋಗ್ಯವು ನೆಲಗೊಳ್ಳುವುದು ಇದು ಅನುಭವಸಿದ್ಧ ಸಮಂತ ೫೦ ಮಾತ್ರೆ ಸೀಸೆ ೧—೦—೦

ಬಾಲಸಂಜೀವಿನಿ — ಮಕ್ಕಳಿರುವ ಮನೆಯಲ್ಲಿ ಇದೊಂದು ಔಷಧವಿದ್ದರೆ, ಒಬ್ಬ ವೈದ್ಯನು ಸದಾ ಮನೆಯಲ್ಲಿ ಇದ್ದಂತೆಯೇ. ನೆ ನೂರು ೩೦ ಸಲಕ್ಕೆ ಆಗುವ ಔಷಧ ಡಬ್ಬಿ ೦—೮—೦ ತೊಲೆ ೧ಕ್ಕೆ ೧—೪—೦

ಪಟ್ಟೆಕರ್ಪೂರದಮಾತ್ರೆ — ಇದರಿಂದ ಗರ್ಭವೆಟ್ಟಿದ ಕಾರಕವೂ ಕಡಿಮೆಯಾಗಿ ಗೇಹಕ್ಕೆ ತವಾಗುತ್ತದೆ ೧೦ ಮಾತ್ರೆ ಸೀಸೆ ೦—೮—

ಅತಿಸಾರಹರ ರಸಾಯನ — ಮೂಲವ್ಯಾಧಿ ಚಿಕಿತ್ಸೆ ಇದು ಸಂಜೀವನ ಸೇರಿದ ಡಬ್ಬಿ ೧—೪—೦

ಶ್ರೀಖಂಡಲೇಹ್ಯ — ಮೇಹಪಾಕ್ಷಗಳಲ್ಲಿ ಬಹುಳ ಪಾರಿಣಾಮ ಔಷಧಿ. ರೋಗಿನ ಡಬ್ಬಿ ೪—೦—೦ ೧೦ ದಿನಕ್ಕೆ ಔಷಧ ೩—೦

ಶುಂಠೀಪಿ ಮಾತ್ರೆ — ೧೦ ಮಾತ್ರೆಗಳನ್ನು ಸೇವಿಸುವುದರಿಂದ ಶಿ೦ ಅಜೀರ್ಣ ನಿವಾರಣೆ ಉಂಟಾಗುತ್ತದೆ ೫೦ ಮಾತ್ರೆ ಸೀಸೆ ೦—೬—

ಮಲಶೋಧನ ವಟಿಕಾ — ರಾತ್ರಿ ಮಲಗುವಾಗ ೧ ಮಾತ್ರೆ ತೆಗೆದುಕೊಂಡರೆ ಬೆಳಗ್ಗೆ ಏಳುವಾಗ್ಗೆ ಒಂದೆರಡಾವರ್ತಿ ಮಲವಿಸರ್ಜನೆಯಾಗುತ್ತದೆ. ೩೦ ಮಾತ್ರೆ ಸೀಸೆ ೦—೪—

ಅಗಸ್ತ್ಯರಿಮಾತ್ರೆ — ತಾಂಬೂಲದೊಡನೆ ಉಪಯೋಗಿಸತಕ್ಕದ್ದು. ೩೦ ಮಾತ್ರೆ ಸೀಸೆ ೦—೮—೦.

ಪುರುಷ ಸಂಜೀವಿನಿ — ೩೦ ಮಾತ್ರೆ ಸೀಸೆ ೨—೦—೦

ಕಾಲರಾ ಮಾತ್ರೆ — ೩೦ ಮಾತ್ರೆ ಸೀಸೆ ೧—೦—೦

ಕೆಮ್ಮಿನಮಾತ್ರೆ — ೩೦ ಮಾತ್ರೆ ಸೀಸೆ ೦—೪—

ಅಜೀರ್ಣಹರಮಾತ್ರೆ — ೩೦ ಮಾತ್ರೆ ಸೀಸೆ ೦—೪—

ದಂತಶುದ್ಧಿ ಚೂರ್ಣ — ಡಬ್ಬಿ ಒಂದಕ್ಕೆ ೦—೨—

ನಮ್ಮಲ್ಲಿ ಈ ಮೇಲ್ಕಂಡ ಔಷಧಿಗಳೇ ಅಲ್ಲದೆ ಎಲ್ಲಾ ಆಯುರ್ವೇದ ಮತ್ತು ಇಂಗ್ಲೀಷು ಔಷಧಿಗಳು ವಿಶ್ವಾಸಯುಕ್ತ ದೊರೆಯುವುವು. ಔಷಧಿಗಳು ಬೇಕಾದವರು ಬರೆದುಕೊಳ್ಳಬೇಕು. ಇನ್ನು ವಿವರವಾದವರು ನೋಡುವ ವಿಳಾಸ ಬರೆಯಿರಿ

೧೯೨೩ನೆಯ ಇಸವಿ ಡಿಸೆಂಬರ್ ತಾ೦ ೨೫ ರಿಂದ ೩೧ರ ತಾ ಡಿಸೆಂಬರ್ ತಾ೦ ೩೧ ರವರೆಗೆ ಸಲ್ಲುವ ಪಂಚಾಂಗ ಶ್ರೀ ೧೮೪೫ ನೇಯ ವಿಶ್ವಾಮಿತ್ರನು ಸಂವತ್ಸರದ ಪುಷ್ಯ ಮಾಸ ಪಂಚಾಂಗ ಪುಸ್ತಕ ದಿ ಪಂಚಾಂಗದ ತಿಥಿ ಬಾಂಗ

ತಾ	ವಾರ	ತಿಥಿ	ಗಳಿಗೆ	ನಕ್ಷತ್ರ	ಗಳಿಗೆ
2,	[1] ಸೋಮ	ಷಂ	[illegible]	ಧನಿ	22 [illegible]
2[illegible]	[2] ಮಂಗಳ	[illegible]	38 38	ಶತ	[illegible]
27	ಬುಧ	ಸ	59-30	ಪೂರ್ವಾ.	44-[illegible]
28	ಗುರುವ	ಅ	[illegible] 47	ಉತ್ತರಾ	[illegible]
29	ಶುಕ್ರ	ನ	58-36	ರೇವತಿ	472
30	ಶನಿ	ದ,	54-56	ಅಶ್ವಿನಿ	162
31	[3] ಭಾನು	ಏ	52 2	ಭರಣಿ	14-36

(1) ಧನುರ್ಮಾಸದ ವ್ರತ. (2) ತಂಗಿಸುಸ್ತ್ರೀ ವ್ರತ ವರ್ತಮಾನ ಯೋಗ (3) ಮುಕ್ಕೋಟಿ ಏಕಾದಶಿ, ಕಲ್ಲಿ ಶ್ರೀ

ಡಾ. ಸೈ ವಿಚಾರಶಾಸ್ತ್ರದ್ವೇಷ
೧ ಡಿ ಸಿ ಜ ಕಲ್ಯಾಣಬೆಟ್ಟ

18

ಉತ್ತಮ ಗ್ರಂಥಗಳು

ಶಿವಸ್ತವರತ್ನ ೩೬ ಪೇಜು ಪಿ ಸಿ ೪ ಆಣೆ ಇದು ಉತ್ತಮವಾದ ಸಂಸ್ಕೃತವು ಕನ್ನಡಟಿಪ್ಪಣಿಯಿಂದ ಕೂಡಿದೆ ಶರಣರತ್ನಸ್ಸಾರ ಬೆಲೆ ಪಿ ಸಿ ೩ ಆಣೆ ಸ್ವಸ್ವರೂಪ ಪ್ರಕಾಶಿಕಾಸಹಿತವಾಗಿದೆ ನೋಡಲಿ ಲೇಖಕರು ರಾಧ್ಯ ವಿರಚಿತವಾದದ್ದು ಪೀಠಾಂತಿಗಳಿಗೂ, ವೀರಶೈವರಿಗೂ ಅತ್ಯಾವಶ್ಯಕವಾದದ್ದು

ಶಿವಪಂಚಕ್ಷರೀ — ಬೆಲೆ ಪಿ ಸಿ ೧-೮-೦ ಸಂಸ್ಕೃತ ವ್ಯಾಖ್ಯಾನದಿಂದಲೂ, ಕನ್ನಡ ಟಿಪ್ಪಣಿಯಿಂದಲೂ ಕೂಡಿದೆ ಸ್ವಲ್ಪ ಪ್ರತಿಗಳುಮಾತ್ರ ಉಳಿದಿರುತ್ತವೆ ವೀರಶೈವ ಸಂಸ್ಕೃತ ವಿದ್ಯಾರ್ಥಿಗಳಿಗೆ ಮಾತ್ರ ಅರ್ಧ ಬೆಲೆಗೆ ಕೊಡಲ್ಪಡುತ್ತದೆ. ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರಿಂದ ಪತ್ರವನ್ನು ಬರೆಯಬೇಕು

ವೀರಶೈವ ಚಿಂತಾಮಣಿಸಿದ್ಧಾಂತ — ಬೆಲೆ ಪಿ. ಸಿ ೪ ಆಣೆ. ಇದರಲ್ಲಿ ಅಷ್ಟಾವರಣ ಮಹಿಮೆ, ಪಂಚಾಚಾರವಿಚಾರ ಧರ್ಮಾಚಾರ ವಿಚಾರಗಳು ಪ್ರತಿಪಾದಿಸಲ್ಪಟ್ಟಿರುತ್ತವೆ.

ವೇದಸಂಜೀವಿನಿ — ಬೆಲೆ ಪಿ ಸಿ ೧೦ ಆಣೆ ಇದರಲ್ಲಿ ವೀರಶೈವ ಸಿದ್ಧಾಂತಾರ್ಥವು ಸ್ಪಷ್ಟವಾಗಿ ಹೇಳಲ್ಪಟ್ಟಿದೆ

ಪುರುಷಸೂಕ್ತ — ಬೆಲೆ ಪಿ. ಸಿ. ೪ ಆಣೆ ನಿರಾಬರ ಜಂಗಮಪರವಾದ ಕನ್ನಡ ಟೀಕಾ ಸಹಿತವಾಗಿದೆ

ಬಸವಲಿಂಗಸ್ವಾಮಿಗಳು, ಯೋಗಮಠ ಮೈಸೂರು.

ಪಾಶ್ಚಾತ್ಯದ ಪಂಕಟಾಚಲ ಪಂಡಿತರ ಸಿದ್ಧೌಷಧಗಳು.

36

ಲೋಕಾಪಕಾರ ಕಸ್ತೂರಿ ಮಾತ್ರೆ — ಈ ಮಾತ್ರೆಗಳನ್ನು ಬಹಳ ಬೆಲೆಯ, ಉತ್ತಮವಾದ ಕಸ್ತೂರಿ ಮೊದಲಾದ ಬೆಲೆಬಾಳುವ ಪದಾರ್ಥಗಳಿಂದ ತಯಾರಿಸಿದೆ ಧಳಿಜ್ವರ, ಜ್ವರ, ಜೊಡ್ಡೆರೋಗ, ಸಂದುಗಳ ನೋವು, ಪ್ರಸವಕಾಲದ ದೌರ್ಬಲ್ಯ, ಕೈಕಾಲು ಜೋಮು, ಅಗ್ನಿಮಾಂದ್ಯ, ಹೊಟ್ಟೆನೋವು, ಕೆಮ್ಮು, ನೆಗಡಿ, ನಿತ್ರಾಣ, ಅರೋಚಕ, ಇವುಗಳು ಅನೇಕ ರೋಗಗಳಿಗೆ ಕೊಟ್ಟರೆ ಬೇಗನೆ ಗುಣಪಡಿಸುತ್ತವೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಾಯಿ ಮೊದಲ್ಗೆ ಸುವಾಸನೆಯಾಗಿರುತ್ತದೆ, ಎಂಥ ಆಹಾರವನ್ನಾದರೂ ಜೀರ್ಣಿಸುವ ಶಕ್ತಿ ಕೊಡುತ್ತದೆ, ನೀರುಗಳ ಹವಾ ಬದಲಾವಣೆಯನ್ನು ಸಹಿಸಲು, ರಕ್ತವನ್ನು ಶುದ್ಧಿಮಾಡಿ ವೃದ್ಧಿ ಪಡಿಸುತ್ತದೆ. ಸ್ತ್ರೀಯರ ಋತು ದೋಷ, ಮುಟ್ಟಿನ ನೋವು, ಜ್ವರ, ಪಟ್ಟದ್ವರ, ಕೈಕಾಲುಗಳ ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಒಂದು ತಿಂಗಳಿನಲ್ಲಿ ಗುಣಕಾಣುವರು ಒಳ್ಳೆ ಶಕ್ತಿವರ್ಧಕವಾಗಿ ಜೊತೆಗೆ ೧೦ ಮಾತ್ರೆಗಳುಳ್ಳ ಸೀಸೆಗೆ ೬ ಆಣೆ, ೪ ಸೀಸೆಗೆ ೧ ರೂಪ್ಯ, ೧ ಡಜನ್ ೨೨ ರೂಪ್ಯ ಪಡೆಗೆ ಫ್ರೀಷೆ ಜು ೬ ಆಣೆ.



೬. ಪ್ಲೇಗು ಔಷಧ — ಪ್ಲೇಗಿಗೆ ಔಷಧವು ೧೦೦ರ ಪಾಲು ಅನುಭವಸಿದ್ಧ ಈ ಸಿದ್ಧೌಷಧವನ್ನು ಕೊಡಲಿ, ಸಂಪಾದಿಸಲಾಗಿದೆ ಜಾಗ್ರತೆಯಾಗಿಯೂ ಗೆಡ್ಡೆಗಳನ್ನು ದಿನಕ್ಕೆ ಜ್ವರಗಳನ್ನು ಗುಣಮಾಡುವ ಔಷಧವು ಇದೊಂದೇ ಸದ್ಯಕ್ಕಾಗಲ್ಲಿ ಗಾಜಿನಿಂದ ಹೊರಬಾರದು ಒಂದೇ ಒಂದು ಸೀಸೆಯನ್ನು ಮಾತ್ರ ನಿಮ್ಮಬಳಿಯಲ್ಲಿ. ಹೊರಗಿನ ಯಲ್ಲಿ. ತರಿಸಿ ನೋಡಿ, ಉಪಯೋಗಪತ್ರ ಔಷಧ ಸಂಗಡಲೇ ಬರುತ್ತೆ. ಜೊತೆ ಪ್ಲೇಗಿನ ಔಷಧ ಕಪ್ಪಿಗೆ ೧ಕ್ಕೆ ರೂ. ೧ ಗಿಷ್ಟ ಪೊಟ್ಟಣಗಳಿಗೆ ರವಾನೆ ಡಬ್ಬಿ ೧ಕ್ಕೆ ೬. ೪ ವಿರುದ್ಧದಿಂದ ಪೋಸ್ಟೇಜ್ ಖರ್ಚು ೪ ಆಣೆ ಹೊರತು.

ಯೋಗ್ಯತಾ ಪತ್ರಗಳು.

ನಿಮ್ಮ ಪ್ಲೇಗಿನ ಔಷಧವು ಅತ್ಯುತ್ತಮ ವಾದುದು. ಇದನ್ನು ಖಾಯಿಲೆಯುಳ್ಳವರಿಗೆ ಕೊಟ್ಟಿದ್ದರಿಂದ ಗುಣವಾಗಿದೆ ಎಂದು ತಿಳಿಸಲು ಬಹಳ ಸಂತೋಷವಾಗುತ್ತೇನೆ.

(ಸ್ವ) ರಾಜಮಾನ್ಯರಾಜಶ್ರೀ ಯವರು, ಸ್ಯಾನಿಟರಿ ಇನ್ಸ್‌ಪೆಕ್ಟರ್, ರಾಮಸ್ವಾಮಿ ನಾಯರ್,

ಪ್ಲೇಗು ರೋಗಕ್ಕೆ ಉತ್ತಮೌಷಧ
(ಸ)

ಬಸ್ಯಾರಿಂದ ಗುಣವಾಗಿರುತ್ತದೆ
ಪಿ. ಓವರ್ಸೀಯರ್, ಮೈಸೂ
ಡಿ. ಬಸವಾಪಟ್ಟಣ, ಮೈಸೂರು.